ವಿಶ್ವವಾಣಿ
ವಿಶ್ವಾಸವೇ ವಿಶ್ವ

ಗೂಗಲ್ ಗುರುವಿಗೆ ಕನ್ನಡ ಕಲಿಸಿ

ಗೂಗಲ್, ಕೃತಕ ಬುದ್ಧಿಮತ್ತೆಯಂಥ ಆಧುನಿಕ ಜಗದ್ಗುರುಗಳಿಗೆ ಕನ್ನಡದಲ್ಲಿ ಸರಿಯಾದ ಮಾಹಿತಿ ತುಂಬುವ ಕೆಲಸ ಆಗಬೇಕು. ಹೀಗಾದರೆ ಮುಂದಿನ ತಲೆಮಾರು ಕನ್ನಡದಲ್ಲೇ ಮಾಹಿತಿ ಪಡೆಯಲು ಸಾಧ್ಯ. ಈ ಆಧುನಿಕ ಗುರುಗಳು ಜ್ಞಾನದ ಪ್ರಸಾರ ಮಾಡುವುದು, ಪಾಠಗಳನ್ನು ಹೇಳಿಕೊಡುವುದು ಇಂಗ್ಲಿಷ್ ಭಾಷೆಯಲ್ಲೇ. ಕನ್ನಡ ಭಾಷೆಯ ಮೂಲಕವೂ ಲೋಕವನ್ನು ಅರಿಯಲು ಸಾಧ್ಯ, ಜ್ಞಾನವನ್ನು ಪಡೆಯಲು ಸಾಧ್ಯ ಎನ್ನುವುದನ್ನು ನಾವೀಗ ತೋರಿಸಿ ತಿಳಿಸದಿದ್ದರೆ, ಮುಂದಿನ ಪೀಳಿಗೆಯ ಮಕ್ಕಳು ಜ್ಞಾನ ಎಂದರೆ ಇಂಗ್ಲಿಷ್ ಎಂದು ನಂಬುವ ಅಪಾಯವಿದೆ ಎಂದು ಗೊ.ರು.ಚನ್ನಬಸಪ್ಪ ಅವರು ಆಧುನಿಕತೆಯ ಮಂತ್ರ ಪಠಿಸಿದರು.

ಪುಟ ತೆರೆದಂತೆ...

ಗೆದ್ದಾಗ 'EVM' ಬೇಕು ಸೋತಾಗ ಬೇಡ!
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
ಸಂ.ಪುಟ | 6

ಆಯುರ್ವೇದದಲ್ಲಿ ಕೂದಲಿನ ಆರೈಕೆ ಹೇಗೆ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
ಸಂ.ಗಮ | 7

ದಾರಿದೀಪೋಕ್ತಿ

ಮನಸ್ಸಿಗೆ ಬೇಸರ, ಕಿರಿಕಿರಿಯನ್ನುಂಟು ಮಾಡುವ ಸಂದರ್ಭಗಳು ಬರುತ್ತವೆ, ಬೇರೆಯವರೂ ನಿಮ್ಮ ಮನಸ್ಸಿನ ಸಂತೋಷವನ್ನು ಹಾಳು ಮಾಡುತ್ತಾರೆ. ಆದರೆ ಯಾವ ಕಾರಣಕ್ಕೂ ಮನಸ್ಸನ್ನು ಹಾಳು ಮಾಡಿಕೊಳ್ಳಬಾರದು. ಒಳ್ಳೆಯ ಸಮಯ ಯಾವತ್ತೂ ಒಳ್ಳೆಯ ನೆನಪನ್ನೇ ಬಿಟ್ಟು ಕೊಡುತ್ತದೆ.

ವಕ್ರತುಂಡೋಕ್ತಿ

ರಿಟೈರ್ ಆಗುವ ಒಂದು ಸಮಸ್ಯೆ ಅಂದ್ರೆ, ನಮ್ಮ ತಪ್ಪನ್ನು ಬೇರೆಯವರ ಮೇಲೆ ಹೊರಿಸಲು ಆಗದಿರುವುದು.

ಆಂಗ್ಲಮಾಧ್ಯಮ ಖಾಸಗಿ ಶಾಲೆಗಳಿಗೆ ಅನುಮತಿ ಬೇಡ, ಹಿಂದಿ ಹೇರಿಕೆ ತಡೆಯಿರಿ, ರಾಜ್ಯದ ತೆರಿಗೆ ಪಾಲು ಪಡೆಯಿರಿ

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷ ಗೊರುಚ ಹಕ್ಕೊತ್ತಾಯ, ಸಕ್ಕರೆಯ ಜಿಲ್ಲೆಯಲ್ಲಿ ನುಡಿಜಾತ್ರೆ

ಕನ್ನಡದ್ದೇ ಮಾತು, ಕನ್ನಡವೇ ಮಾಧ್ಯಮ

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಧಾನ ವೇದಿಕೆ, ಮಂಡ್ಯ: ಹತ್ತನೇ ತರಗತಿವರೆಗೆ ಕನ್ನಡ ಮಾಧ್ಯಮವೇ ಕಡ್ಡಾಯವಾಗಬೇಕು. ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ಸರಕಾರ ತೆರೆಯುವುದನ್ನಾಗಲಿ, ಖಾಸಗಿ ಶಾಲೆ ಗಳಿಗೆ ಅನುಮತಿ ಕೊಡುವುದನ್ನಾಗಲೀ ಕೂಡಲೇ ನಿಲ್ಲಿಸಬೇಕು. ತಂತ್ರ ಜ್ಞಾನದ ನೆರವು ಪಡೆದು ಕನ್ನಡವನ್ನು ಕಿರಿಯ ಪೀಳಿಗೆಯ ಎದೆಗೆ ಬೀಳುವ ಅಕ್ಷರವಾಗಿಸಬೇಕು ಎಂದು 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗೊ.ರು.ಚನ್ನಬಸಪ್ಪ ಅವರು ಹಕ್ಕೊತ್ತಾಯ ಮಂಡಿಸಿದರು.

ಅಗತ್ಯವೆನಿಸಿರುವ ಇಂಗ್ಲಿಷ್ ಕಲಿಕೆಗೆ ಪ್ರತ್ಯೇಕ ವ್ಯವಸ್ಥೆ ಮಾಡಿ, ಬೋಧನೆಗೆ ತರಬೇತಿ ಪಡೆದ ಶಿಕ್ಷಕರನ್ನು ನೇಮಿಸಬೇಕು ಮತ್ತು ಗ್ರಾಮೀಣ ಭಾಗದ ಕನ್ನಡ ಶಾಲೆಗಳನ್ನು, ಎಲ್ಲ ಸೌಲಭ್ಯಗಳಿಂದ ಪೂರ್ಣವಾಗಿ ಸಜ್ಜುಗೊಳಿಸಬೇಕು. ರಾಜ್ಯದ ಆಯವ್ಯಯದಲ್ಲಿ ಕನಿಷ್ಠ ಶೇ.15ರಷ್ಟನ್ನು ಶಿಕ್ಷಣಕ್ಕೆ ಮೀಸಲಿಡಬೇಕು.
- ಗೊ.ರು.ಚನ್ನಬಸಪ್ಪ

ಶುಕ್ರವಾರದಿಂದ ಆರಂಭವಾದ ಸಮ್ಮೇಳನದ ಉದ್ಘಾಟನೆ ಭಾಷಣ ಮಾಡಿದ ಅವರು, ತಮ್ಮ ಸುದೀರ್ಘ 48 ಪುಟಗಳ ಭಾಷಣದಲ್ಲಿ, ಭಾಷೆ ಎದುರಿಸುತ್ತಿರುವ ಬಿಕ್ಕಟ್ಟುಗಳು, ಅಂತಾ ರಾಜ್ಯ ಭಾಷಾ ವಿನಿಮಯ, ಹಿಂದಿ ಹೇರಿಕೆ, ತಂತ್ರಜ್ಞಾನದ ಅವಲಂಬನೆ, ಗಡಿನಾಡ ಕನ್ನಡಿಗರ ಬವಣೆ, ಪುಸ್ತಕ ಸಂಸ್ಕೃತಿಯ ಪೋಷಣೆ, ಮಹಿಳೆಯರಿಗೆ ದೊರಕದ ಸ್ಥಾನಮಾನ ಸೇರಿದಂತೆ 21 ಪ್ರಮುಖ ಅಂಶಗಳ ಹಕ್ಕೊತ್ತಾಯ ಮಂಡಿಸುವ ಮೂಲಕ ಸಮ್ಮೇಳನದಲ್ಲಿದ್ದ ಸರಕಾರದ ಪ್ರತಿನಿಧಿಗಳು ಮತ್ತು ಮತ್ತು ಸಾವಿರಾರು ಜನರ ಗಮನ ಸೆಳೆದರು.

ಅನೇಕ ದಶಕಗಳಿಂದ ನನೆಗುದಿಗೆ ಬಿದ್ದಿರುವ ಸರೋಜಿನ ಮಹಿಷಿ ವರದಿಯನ್ನು ಕೂಡಲೇ ಶಾಸನಬದ್ಧಗೊಳಿಸಿ ಅನುಷ್ಠಾನಗೊಳಿಸಬೇಕು. ಅನುಷ್ಠಾನದ ಮೇಲ್ವಿಚಾರಣೆಯ ಹೊಣೆಗಾರಿಕೆ ಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಬೇಕು. ಸಾರ್ವಜನಿಕವಿರಲಿ, ಖಾಸಗಿಯಿರಲಿ ಉದ್ಯೋಗಾವಕಾಶ ಗಳಲ್ಲಿ ವಿಶೇಷ ಅರ್ಹತೆಯ ಉನ್ನತ ಹುದ್ದೆಗಳ ಹೊರತಾಗಿ 'ಸಿ' ಮತ್ತು 'ಡಿ' ವರ್ಗದ ಹುದ್ದೆಗಳನ್ನು ಪೂರ್ಣವಾಗಿ ಕನ್ನಡಿಗರಿಗೇ ಮೀಸಲಿಡಬೇಕು. ಕಾಲಕಾಲಕ್ಕೆ ಉದ್ಯೋಗ ಮಾಹಿತಿ ದೊರೆಯುವಂತಾಗಬೇಕು ಎಂದು ಅಭಿಪ್ರಾಯಪಟ್ಟರು.

ನಾಡಿನ ವಿಶೇಷ ವ್ಯವಸ್ಥೆಗಳಾದ ಕನ್ನಡ ವಿಶ್ವವಿದ್ಯಾಲಯ ಮತ್ತು ಜಾನಪದ ವಿಶ್ವವಿದ್ಯಾಲಯಗಳು ಅನುಭವಿಸುತ್ತಿರುವ ಹಣಕಾಸು, ಬೋಧನಾ ಸಿಬ್ಬಂದಿ ಕೊರತೆಯನ್ನು ನಿವಾರಿಸಲು ಕೂಡಲೇ ಕ್ರಮಕೈಗೊಳ್ಳಬೇಕು. ಕನ್ನಡ ಶಾಸ್ತ್ರೀಯ ಭಾಷಾ ಕೇಂದ್ರವನ್ನು ಸ್ವತಂತ್ರ ಸ್ವಾಯತ್ತ ಕೇಂದ್ರವನ್ನಾಗಿ ಬೆಳೆಸಲು ಮತ್ತು ಕೇಂದ್ರದ ನೆರವು ಪಡೆಯಲು ಅಗತ್ಯ ವ್ಯವಸ್ಥೆ ಮಾಡಬೇಕು. ಅಪಾರ ಸಂಭಾವ್ಯ ಸಾಮರ್ಥ್ಯವಿರುವ ಪ್ರವಾಸೋದ್ಯಮವನ್ನು ಸಾಂಸ್ಕೃತಿಕ ಮತ್ತು ಶೈಕ್ಷಣಿಕ ದೃಷ್ಟಿಯಿಂದಷ್ಟೇ ಅಲ್ಲದೆ ಆದಾಯ, ಉದ್ಯೋಗಾವಕಾಶ ದೃಷ್ಟಿ ಯಿಂದಲೂ ಅದನ್ನು ವಿಸ್ತರಣೆಯ ವಲಯವನ್ನಾಗಿ ಅಭಿವೃದ್ಧಿ ಗೊಳಿಸಬೇಕು ಎಂದರು.

ಕೈಗಾರಿಕೋದ್ಯಮಗಳ ಸ್ಥಾಪನೆ ಎಲ್ಲ ಜಿಲ್ಲೆಗಳಿಗೂ ಹಂಚಿಕೆಯಾಗಬೇಕು. ಯಾವುದೇ ಉದ್ಯಮವಿರಲಿ, ಅಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶದ ಕಟ್ಟುನಿಟ್ಟಿನ ಷರತ್ತು ವಿಧಿಸಿ, ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು. ಸರಕಾರದ ಸಚಿವಾಲಯ ಕಚೇರಿಗಳ ಹೊರತಾಗಿ, ಉಳಿದ ಇಲಾಖೆಗಳ ನಿರ್ದೇಶನಾಲಯ ಕಚೇರಿಗಳನ್ನು ವಿವಿಧ ಜಿಲ್ಲಾ ಕೇಂದ್ರಗಳಿಗೆ ವರ್ಗಾಯಿಸಿ ಬೆಂಗಳೂರಿನ ಒತ್ತಡವನ್ನು ತಪ್ಪಿಸಬೇಕು ಎಂದು ಗಮನ ಸೆಳೆದರು.

ಸಕ್ಕರೆ ನಾಡಿನಲ್ಲಿ ಸಾಹಿತ್ಯ ಜಾತ್ರೆ



87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ, ನಿರ್ಮಲಾನಂದನಾಥ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿ ಮತ್ತಿತರರು ಇದ್ದರು.

ವಿಶೇಷ ರಥದಲ್ಲಿ ನಾಡೋಜನ ಮೆರವಣಿಗೆ

ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ಅವರನ್ನು ಅರಮನೆ ದರ್ಬಾರ್ ಸಿಂಹಾಸನ ಒಳಗೊಂಡ ವಿಶೇಷ ರಥದಲ್ಲಿ ಮೆರವಣಿಗೆ ಮಾಡಲಾಯಿತು. ನಿರ್ಮಲಾನಂದನಾಥ ಸ್ವಾಮೀಜಿ ಅವರು ಮೊದಲು ರಥ ಏರಿ ನಂತರ ಗೊರುಚ ಅವರಿಗೆ ಸಹಾಯ ಹಸ್ತ ಚಾಚಿ ರಥಕ್ಕೆ ಬರಮಾಡಿಕೊಂಡರು. ಗೊರುಚ ಅವರಿಗೆ ಸುಗಂಧ ರಾಜ ಹೂವು ಮತ್ತು ರೇಷ್ಮೆ ಹಾರ ಹಾಕಿ, ಮೈಸೂರು ಪೇಟ ತೊಡಿಸಿ, ಶಾಲು ಹೊದಿಸಿ ಸನ್ಮಾನಿಸಿದರು. ಹಿಮ್ಮೇಳ ದಲ್ಲಿ 'ಮರೆಯಬೇಡವೋ ಕನ್ನಡ ನಾಡ, ನೀ ತೊರೆಯಬೇಡವೂ ಕನ್ನಡ ನುಡಿಯ, ಎಚ್ಚರವಾಗು ಕನ್ನಡಿಗ' ಹಾಡು ಪ್ರತಿಧ್ವನಿಸಿತು.

ಮೆರವಣಿಗೆ ಒಂದೂವರೆ ಗಂಟೆ ತಡ: ಒಂದೂವರೆ ಗಂಟೆ ತಡವಾಗಿ ಆರಂಭವಾದ ಸಮ್ಮೇಳನಾಧ್ಯಕ್ಷರ ಮೆರ ವಣಿಗೆ ಆರಂಭವಾಯಿತು. ಮಂಡ್ಯ ನಗರದ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಮುಂಭಾಗದಿಂದ ಸ್ಯಾಂಜೋ ಆಸ್ಪತ್ರೆಯ ಹಿಂಭಾಗದ ಸಮ್ಮೇಳ ನದ ವೇದಿಕೆ ಸ್ಥಳಕ್ಕೆ ಆರು ಕಿಲೋಮೀಟರ್ ಅಂತರದ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಬೆಳಗ್ಗೆ ಏಳು ಗಂಟೆಗೆ ಆರಂಭವಾಗಬೇಕಿತ್ತು. ಆದರೆ ಬೆಳಗ್ಗೆ 8:25ಕ್ಕೆ ಆರಂಭಗೊಂಡಿತು. ಮೆರವಣಿಗೆಗೆ ಚಾಲನೆ ನೀಡಬೇಕಿದ್ದ ಮೈಸೂರು ಅರಮನೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಗೈರು ಹಾಜರಿಯಾದ ಕಾರಣ, ಮೆರವಣಿಗೆಗೆ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು.

- ಮನೆ-ಮನೆಗಳ ಮೇಲೆ ರಾರಾಜಿಸಿದ ಕನ್ನಡ ಬಾವುಟ
- 70 ಎಕರೆಯಲ್ಲಿ ಭವ್ಯ ವೇದಿಕೆ ನಿರ್ಮಾಣ
- ಸಾಹಿತ್ಯಾಸಕ್ತರಿಗೆ ಸ್ವಾಗತ ಕೋರಿದ ಸ್ವಾಗತ ಕಮಾನುಗಳು
- 450 ಮಳಿಗೆಗಳಲ್ಲಿ ಪುಸ್ತಕಗಳ ಪ್ರದರ್ಶನ, ಮಾರಾಟ

ವಿಶೇಷ ಪುಟಗಳು → 4,5

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿದ ಸಿದ್ದರಾಮಯ್ಯ

ಕರ್ನಾಟಕ ರಾಜ್ಯದಲ್ಲಿ ಕನ್ನಡವೇ ಸಾರ್ವಭೌಮ

- ಓದು-ಬರಹ, ಭಾಷೆ, ಬರವಣಿಗೆ ಎಲ್ಲವೂ ಪರಕೀಯವಾದರೆ ನಮ್ಮ ಮಾತೃಭಾಷೆಗೆ ಅಪಾಯ ತಪ್ಪಿದ್ದಲ್ಲ
- ಯಾವುದೇ ಭಾಷೆಯ ಅಳಿವು ಆ ಭಾಷೆ ಸಮುದಾಯದ ಅಳಿವೂ ಆಗಿರುತ್ತದೆ
- ಭಾಷೆ ಬೆಳೆಯುವುದು, ಉಳಿಯುವುದು ಅದನ್ನು ಬಳಸಿದಾಗ ಮಾತ್ರ
- ಬಳಸದೇ ಹೋದರೆ ಭಾಷೆಯ ಅಸ್ತಿತ್ವ ಹಾಗೂ ಬೆಳವಣಿಗೆ ಎರಡಕ್ಕೂ ಅಪಾಯ ತಪ್ಪಿದ್ದಲ್ಲ
- ಇಂಗ್ಲಿಷ್ ಸೇರಿ ಪ್ರಮುಖ ಭಾಷೆಗಳ ಕೃತಿಗಳು ಡಿಜಿಟಲೀಕರಣದಿಂದ ಜಗತ್ತಿನ ಎಲ್ಲೆಡೆ ಎಲ್ಲರಿಗೂ ಮುಕ್ತವಾಗಿ ದೊರೆಯುತ್ತದೆ
- ಕನ್ನಡದ ಸಮಗ್ರ, ಸಾರಸ್ವತ ಲೋಕದ ಡಿಜಿಟಲೀಕರಣ ಕಾರ್ಯ ಆರಂಭಿಸಲಾಗಿದೆ
- ಜಗತ್ತಿನಲ್ಲಿರುವ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿ ಜ್ಞಾನವನ್ನು ವೃದ್ಧಿಸುವ ಕೆಲಸವಾಗಬೇಕು

ಕನ್ನಡ ನೆಲದಲ್ಲಿ ಕನ್ನಡ ಭಾಷೆಯೇ ಸಾರ್ವಭೌಮ ಎಂಬುದನ್ನು ನೆನಪಿಟ್ಟುಕೊಳ್ಳಿ. ಅನ್ಯ ಭಾಷಿಕ ರೊಂದಿಗೆ ಅವರದೇ ಭಾಷೆಯಲ್ಲಿ ಮಾತನಾಡುವುದನ್ನು ಬಿಡಿ. ಅವರಿಗೆ ಕನ್ನಡ ಕಲಿಸಿ. ಕನ್ನಡ ಉಳಿಸಿ ಬೆಳೆಸಬೇಕಾಗಿದೆ. ಇದು ನಿನ್ನ ಭಾಷೆ, ದೇಶಭಾಷೆ, ಸಾವಿರಾರು ವರ್ಷ ಗಳ ಸುಪುಷ್ಟ ಸಾಹಿತ್ಯ ಭಾಷೆ. ಮಹಾಕವಿ ಗಳನ್ನೂ ಶಿಲ್ಪಿಗಳನ್ನೂ ರಾಜಾಧಿರಾಜರನ್ನೂ ವೀರಾಧಿವೀರ ರನ್ನೂ ರಸ ಋಷಿ ದಾರ್ಶನಿಕರನ್ನು ಹಡೆದಿರುವ ಭಾಷೆ ಎಂದು ಸಿಎಂ ಸಿದ್ದರಾಮಯ್ಯ ನುಡಿದರು. 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಕಾವೇರಿ ಕಣಿವೆಯಲ್ಲಿರುವ ಮಂಡ್ಯ ಜಿಲ್ಲೆಯಲ್ಲಿ ಕಾವೇರಿ, ಹೇಮಾವತಿ, ಶಿಂಷಾ, ಲೋಕಪಾವನಿ ಮುಂತಾದ ಜೀವನದಿಗಳು ಹರಿಯುತ್ತಿವೆ. ಕನ್ನಡ ಸಾಹಿತ್ಯ ಪರಂಪರೆಯನ್ನು ಸದಾ ಕಾಲಕ್ಕೂ ಮೆರೆಸಿರುವ ಮಂಡ್ಯ ಜಿಲ್ಲೆ, ಅಪ್ಪಟ ಕನ್ನಡದ ನೆಲ. ಭತ್ತದ ಕಣಜ, ಸಕ್ಕರೆ ನಾಡು ಎಂದೇ ಜನ ಜನಿತ. ಜಗತ್ತಿನ ಯಾವ ಮೂಲೆಯ ಭಾಷಿ ಕರೇ ಬಂದರೂ ಅವರಿಗೆ ಒಂದೇ ತಿಂಗಳಲ್ಲಿ ಕನ್ನಡವನ್ನು ಕಲಿಸುತ್ತೇವೆ ಎಂಬ ಭಾಷಾಭಿಮಾನ ಮತ್ತು ದಿಟ್ಟತನ ಮಂಡ್ಯದ ಜನರದ್ದು ಎಂದು ಹೇಳಿದರು.

ಪ್ರತಿಪಕ್ಷಗಳ ವಿರುದ್ಧ ಕಿಡಿ: ಮಂಡ್ಯದಲ್ಲಿ ಕೆಲವು ದ್ವೇಷವಾದಿ, ಹಿಂಸಾವಾದಿ ಶಕ್ತಿಗಳು ಸೇರಿಕೊಂಡು ಜನರ ಮನಸ್ಸಿನಲ್ಲಿ ವಿಷ ಬಿತ್ತಲು ನಿರಂತರವಾಗಿ ಪ್ರಯತ್ನಿಸಿದವು. ಆದರೆ ಸಕ್ಕರೆ ಮತ್ತು ಸಿಹಿ ಬೆಳೆಯುವ ಮಂಡ್ಯದ ಜನರು ವಿಷಹಾಕಲು ಬಂದವರನ್ನು ಒಳಗೆ ಬಿಟ್ಟುಕೊಳ್ಳಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪರೋಕ್ಷವಾಗಿ ಪ್ರತಿಪಕ್ಷಗಳ ವಿರುದ್ಧ ಕಿಡಿಕಾರಿದ್ದಾರೆ. ಇತಿಹಾಸದಲ್ಲಿ ಮತ್ತೊಮ್ಮೆ ತಾವು (ಮಂಡ್ಯದ ಜನತೆ) ಸಿಹಿ ನೀಡುವವರೇ ಹೊರತು, ವಿಷ ನೀಡುವವರಲ್ಲ ಎಂದು ಸಾಬೀತು ಮಾಡಿದ್ದಾರೆ. ಮಂಡ್ಯದ ಜನತೆ ಹಿಂಸಾವಾದಿಗಳನ್ನು ದೂರವಿಟ್ಟಿದ್ದಾರೆ. ಮಂಡ್ಯದ ಜನರನ್ನು ನಾಡಿನ ಜನರ ಪರವಾಗಿ ಅಭಿನಂದಿಸುತ್ತೇನೆ ಎಂದರು.

ಸಂಕ್ರಾಂತಿ ನಂತರ ಮಾರಾಟ

ರಾಜಸ್ಥಾನದಲ್ಲಿ ನಂದಿನಿ ಹಾಲು

ಬೆಂಗಳೂರು: ದೆಹಲಿಯಲ್ಲಿ ನಂದಿನಿ ಹಾಲಿನ ಮಾರಾಟವನ್ನು ಯಶಸ್ವಿಯಾಗಿ ಮುಂದುವರಿಸಿರುವ ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್), ಈಗ ಸಂಕ್ರಾಂತಿ ಹಬ್ಬದ ನಂತರ ರಾಜಸ್ಥಾನದಲ್ಲೂ ಹಾಲು ಮಾರಾಟವನ್ನು ವಿಸ್ತರಿಸಲು ಸಿದ್ಧತೆ ನಡೆಸಿದೆ. ಮೊದಲು ರಾಜಸ್ಥಾನದ ಜೈಪುರದಲ್ಲಿ ಹಾಲು ಮಾರಾಟ ಆರಂಭಿಸಲಾಗುತ್ತದೆ. ಸ್ಥಳೀಯವಾಗಿ ಪ್ಯಾಕಿಂಗ್ ಮಾಡಿಸಿ, ಗ್ರಾಹಕರಿಗೆ ಪೂರೈಸಲಾ ಗುವುದು ಎಂದು ಕೆಎಂಎಫ್ ಮೂಲಗಳು ತಿಳಿಸಿವೆ.

ಕೊಬ್ಬರಿ ಎಂಎಸ್‌ಪಿ 420 ರು. ಹೆಚ್ಚಳ

ದೆಹಲಿ: ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಶುಕ್ರವಾರ ನಡೆದ ಕೇಂದ್ರ ಸಚಿವ ಸಂಪುಟವು 2025ನೇ ಋತುವಿಗೆ ಕೊಬ್ಬರಿಯ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಹೆಚ್ಚಿಸಿದೆ. ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಂವಹನ ಸಚಿವ ಅಶ್ವಿನಿ ವೈಷ್ಣವ್, ಪ್ರತಿ ಕ್ವಿಂಟಲ್ ಉಂಡೆ ಕೊಬ್ಬರಿಗೆ ₹100 ಹಾಗೂ ಹೋಳಾದ (ಮಿಲ್ಲಿಂಗ್) ಕೊಬ್ಬರಿಗೆ 420 ರು. ಹೆಚ್ಚಿಸಲಾಗಿದೆ. ಕ್ವಿಂಟಲ್ ಉಂಡೆ ಕೊಬ್ಬರಿಗೆ 12,100 ಸಾವಿರ ರು. ಹಾಗೂ ಹೋಳಾದ ಕೊಬ್ಬರಿಗೆ 11,582 ರು. ಬೆಂಬಲ ಬೆಲೆ ನಿಗದಿಪಡಿಸಲಾಗಿದೆ ಎಂದು ವಿವರಿಸಿದರು.

ಬೆಂಗಳೂರಲ್ಲಿ ಅಮೆರಿಕ ರಾಯಭಾರ ಕಚೇರಿ

ಬೆಂಗಳೂರು: 2025ರ ಆರಂಭದಲ್ಲಿಯೇ ಬೆಂಗಳೂರಿನಲ್ಲಿ ಅಮೆರಿಕ ಕಾನ್ಸುಲೇಟ್ ಕಚೇರಿ ಆರಂಭವಾಗಲಿದ್ದು, ಇನ್ಮುಂದೆ ವೀಸಾ ಪ್ರಕ್ರಿಯೆ ಮತ್ತಷ್ಟು ಸುಲಭವಾಗಲಿದೆ. ಬೆಂಗಳೂರಿನಲ್ಲಿ ಕಾನ್ಸುಲೇಟ್ ಆರಂಭಿಸುವ ಕುರಿತು ಭಾರತದಲ್ಲಿರುವ ಅಮೆರಿಕ ರಾಯಭಾರಿ ಎರಿಕ್ ಗರ್ಸೆಟ್ಟಿ ಘೋಷಿಸಿದ್ದು, ಇದೊಂದು ಐತಿಹಾಸಿಕ ಹೆಜ್ಜೆಯಾಗಲಿದೆ ಎಂದು ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ತಿಳಿಸಿದರು.

ಮಂದಿರ-ಮಸೀದಿ ಕಿಚ್ಚು ಹಚ್ಚದಿರಿ

ಪುಣೆ: ಹೊಸದಾಗಿ ಮಂದಿರ-ಮಸೀದಿಗಳ ವಿವಾದ ಹುಟ್ಟುಹಾಕುತ್ತಿರುವುದಕ್ಕೆ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಕೆಲವು ವ್ಯಕ್ತಿಗಳು, ಅಯೋಧ್ಯೆಯ ರಾಮ ಮಂದಿರ ನಿರ್ಮಾಣದ ನಂತರ ಅಂತಹ ವಿವಾದಗಳನ್ನು ಕೆರಳಿಸುವ ಮೂಲಕ ಹಿಂದೂಗಳ ನಾಯಕರಾಗ ಬಹುದೆಂದು ಭಾವಿಸಿದ್ದಾರೆ. ಆದರೆ, ಅದು ಸ್ವೀಕಾರಾರ್ಹವಲ್ಲ ಎಂದು ಹರಿಹಾಯ್ದಿದ್ದಾರೆ.



ಹರಿಯಾಣ ಮಾಜಿ ಸಿಎಂ ಚೌಟಾಲಾ ನಿಧನ

ಚಂಡೀಗಢ: ಹರಿಯಾಣದ ಮಾಜಿ ಮುಖ್ಯಮಂತ್ರಿ, ಭಾರತೀಯ ರಾಷ್ಟ್ರೀಯ ಲೋಕದಳ (ಐಎನ್‌ಎಲ್‌ಡಿ) ಪಕ್ಷದ ಅಧ್ಯಕ್ಷ ಓಂ ಪ್ರಕಾಶ್ ಚೌಟಾಲಾ (89) ಹೃದಯ ಸ್ತಂಭನದಿಂದ ಶುಕ್ರವಾರ ಗುರುಗ್ರಾಮದ ಸ್ವಗೃಹದಲ್ಲಿ ನಿಧನರಾದರು. ಮಾಜಿ ಉಪ ಪ್ರಧಾನಿ ದೇವಿಲಾಲ್ ಅವರ ಪುತ್ರರಾಗಿರುವ ಓಂ ಪ್ರಕಾಶ್ ಚೌಟಾಲಾ, ಐದು ಬಾರಿ ಹರಿಯಾಣದ ಮುಖ್ಯಮಂತ್ರಿ ಯಾಗಿ ಸೇವೆ ಸಲ್ಲಿಸಿದ್ದರು.

ಸಂಸತ್ ಆವರಣದಲ್ಲಿ ತಳ್ಳಾಟ

ರಾಹುಲ್ ಗಾಂಧಿ ವಿಚಾರಣೆ ಸಾಧ್ಯತೆ

ದೆಹಲಿ: ಸಂಸತ್ ಆವರಣದಲ್ಲಿ ಗುರುವಾರ ನಡೆದ ತಳ್ಳಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಲೋಕ ಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಮತ್ತು ಗಾಯಗೊಂಡಿರುವ ಇಬ್ಬರು ಬಿಜೆಪಿ ಸಂಸದರ ಹೇಳಿಕೆಗಳನ್ನು ದಾಖಲಿಸುವ ಸಾಧ್ಯತೆಯಿದೆ. ಈ ಘಟನೆ ನಡೆದ ಪ್ರದೇಶದಲ್ಲಿನ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಒದಗಿಸುವಂತೆ ದೆಹಲಿ ಪೊಲೀಸರು ಸಂಸತ್ತಿನ ಕಾರ್ಯಾಲಯಕ್ಕೆ ಪತ್ರ ಬರೆಯಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಬೆಂಗಳೂರು ಪೊಲೀಸ್ ಇಲಾಖೆಗೆ ಎಐ ಅವತಾರ

ತಕ್ಷಣ ಬಿಡುಗಡೆಗೆ ಹೈಕೋರ್ಟ್ ಮಧ್ಯಂತರ ಆದೇಶ | ಇಂದು ವಿಚಾರಣೆ

ಸಿ.ಟಿ.ರವಿ ಬಿಡುಗಡೆ; ಡ್ರಾಮಾಕ್ಕೆ ಹೈ ತಡೆ

ಬೆಂಗಳೂರು: ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ಅಶ್ಲೀಲ ಪದ ಬಳಕೆ ಆರೋಪದಲ್ಲಿ ಪೊಲೀಸರಿಂದ ಬಂಧನಕ್ಕೊಳಗಾಗಿದ್ದ ಬಿಜೆಪಿ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಅವರಿಗೆ ಹೈಕೋರ್ಟ್ ಬಿಗ್ ರಿಲೀಫ್ ನೀಡಿದೆ. ಅವರನ್ನು ತಕ್ಷಣ ಬಿಡುಗಡೆ ಮಾಡುವಂತೆ ಉಚ್ಚ ನ್ಯಾಯಾಲಯ ಮಧ್ಯಂತರ ಆದೇಶ ನೀಡಿದೆ.

ಸುವರ್ಣಸೌಧದಲ್ಲಿ ವಿಧಾನ ಪರಿಷತ್ತಿನಲ್ಲಿ ನಡೆದಿದೆ ಎನ್ನಲಾದ ಘಟನೆ ರಾಜ್ಯದ ನಾಗರಿಕರಿಗೆ ಅತ್ಯಂತ ದುರದೃಷ್ಟಕರ ಎಂದು ಪರಿಗಣಿಸಿದ ನ್ಯಾಯಾಲಯ, ಅಗತ್ಯವಿರುವಾಗ ತನಿಖೆಗೆ ಸಹಕರಿಸುವಂತೆ ಷರತ್ತು ವಿಧಿಸಿ, ಸಿಟಿ ರವಿ ಅವರನ್ನು ಕೂಡಲೇ ಬಿಡುಗಡೆ ಮಾಡುವಂತೆ ಪೊಲೀಸರಿಗೆ ಸೂಚಿಸಿದೆ. ಪೊಲೀಸರು ಕಾನೂನು ಕ್ರಮ ಅನುಸರಿಸದೆ ಬಂಧಿಸಿರುವುದನ್ನು ಪ್ರಶ್ನಿಸಿ ಜಾಮೀನು ಅರ್ಜಿ ಸಲ್ಲಿಸಿದ್ದ ರವಿ ತಾನು ಬಿಡುಗಡೆಗೆ ಅರ್ಹ ಎಂದು ಹೇಳಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾ. ಎಂ.ಜಿ. ಉಮಾ ಅವರ ನ್ಯಾಯಪೀಠ ಮಧ್ಯಂತರ ಆದೇಶ ನೀಡಿತು.

ಅಧಿವೇಶನದ ಸಂದರ್ಭದಲ್ಲಿ ವಿಧಾನಪರಿಷತ್‌ನಲ್ಲಿ ತನ್ನ ವಿರುದ್ಧ ಸಿ.ಟಿ ರವಿ ಅವಹೇಳನಾಕಾರಿ ಪದ ಬಳಸಿದ್ದಾರೆ ಎಂದು ಆರೋಪಿಸಿ ಲಕ್ಷ್ಮಿ ಹೆಬ್ಬಾಳ್ಕರ್ ದೂರು ದಾಖಲಿ ಸಿದ್ದರು. ಹಿರೇಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಸಿಟಿ ರವಿ ವಿರುದ್ಧ ಬಿಎನ್‌ಎಸ್ ಕಾಯ್ದೆ 75 ಮತ್ತು 79ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. ಲೈಂಗಿಕ ಕಿರುಕುಳ, ಮಹಿಳೆ ಇಚ್ಛೆ ವಿರುದ್ಧ ಅಶ್ಲೀಲತೆ ತೋರುವುದು. ಮಹಿಳೆಯ ಗೌರವಕ್ಕೆ ಅವಮಾನಿಸುವ ಉದ್ದೇಶದಿಂದ ಸನ್ನೆ, ಪದ ಅಥವಾ ಕ್ರಿಯೆ, ಲೈಂಗಿಕ ವಾಂಛೆಯ ಟೀಕೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿತ್ತು. ಎಫ್ ಐಆರ್ ದಾಖಲಾದ ಬಳಿಕ ಸಿಟಿ ರವಿ ಅವರನ್ನು ಬಂಧಿಸಲಾಗಿತ್ತು.

→ 8

ದಾವಣಗೆರೆಯಲ್ಲಿ ಸುದ್ದಿ ಗೋಷ್ಠಿ ನಡೆಸಿದ ಸಿ.ಟಿ.ರವಿ, ಬಿ.ವೈ.ವಿಜಯೇಂದ್ರ, ಆರ್. ಅಶೋಕ ಮತ್ತಿತರರು.

ಸಿ.ಟಿ.ರವಿ ವಕೀಲರ ವಾದವೇನು?

- ರವಿ ಅವರನ್ನು ಪೊಲೀಸರು ಅಕ್ರಮವಾಗಿ ಬಂಧಿಸಿದ್ದಾರೆ
- ಪೊಲೀಸ್ ನೋಟಿಸ್ ನೀಡುವುದು ಅಥವಾ ಅವರ ಬಂಧನಕ್ಕೆ ಆಧಾರ ಒದಗಿಸಿಲ್ಲ
- ಅರ್ನಾಬ್ ಗೋಸ್ವಾಮಿ ಪ್ರಕರಣದ ಹಿನ್ನೆಲೆಯಲ್ಲಿ ತಕ್ಷಣ ಬಿಡುಗಡೆಗೆ ರವಿ ಅರ್ಹರಾಗಿದ್ದಾರೆ

ಸರಕಾರದ ವಾದವೇನು?

- ರವಿ ಅವರನ್ನು ಟ್ರಾನ್ಸಿಟ್ ರಿಮ್ಯಾಂಡ್ ಮೇಲೆ ಬೆಂಗಳೂರಿಗೆ ಕರೆತರಲಾಗುತ್ತಿದೆ
- ಜಾಮೀನು ಕೋರಿ ಅವರು ವಿಶೇಷ ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ಸಲ್ಲಿಸಿದ್ದಾರೆ
- ಆದ್ದರಿಂದ ಈ ಹಂತದಲ್ಲಿ ನ್ಯಾಯಾಲಯ ಹಸ್ತಕ್ಷೇಪ ಮಾಡಬಾರದು

ಇಡೀ ದಿನ ನಡೆದಿದ್ದೇನು?

- ಖಾನಾಪುರಕ್ಕೆ ಕರೆದೊಯ್ದ ಬಳಿಕ ರಾತ್ರಿಯಿಡಿ ವಿವಿಧ ಸ್ಥಳಗಳಿಗೆ ಪ್ರಯಾಣ
- ಪೊಲೀಸರ ನಡೆ ಖಂಡಿಸಿ ಮಾರ್ಗಮಧ್ಯೆಯೇ ಧರಣಿ ನಡೆಸಿದ ಸಿ.ಟಿ.ರವಿ
- ರವಿ ತಲೆಗೆ ಗಾಯಗೊಂಡರೂ, ಚಿಕಿತ್ಸೆ ಕೊಡಿಸಿಲ್ಲ ಎನ್ನುವ ಆರೋಪ
- ರಾತ್ರಿ ಊಟ ನೀಡಿಲ್ಲ, ಮಾನಸಿಕ, ದೈಹಿಕವಾಗಿ ಹಲ್ಲೆ ನಡೆಸಿದ್ದಾರೆಂಬ ಆರೋಪ
- ಜೆಎಂಎಫ್‌ಸಿ ನ್ಯಾಯಾಧೀಶೆಯ ಮುಂದೆ ಸರಣಿ ದೂರು ದಾಖಲಿಸಿದ ಸಿ.ಟಿ.ರವಿ
- ಬೆಳಗಾವಿಯಿಂದ ಬೆಂಗಳೂರಿಗೆ ಭಾರಿ ಭದ್ರತೆಯಲ್ಲಿ ಶಿಫ್ಟ್
- ಜಾಮೀನು ಸಿಕ್ಕ ಬೆನ್ನಲ್ಲೇ, ದಾವಣಗೆರೆಯಲ್ಲಿಯೇ ಬಿಡುಗಡೆ
- ಸಿ.ಟಿ.ರವಿ ಬಂಧನ ಖಂಡಿಸಿ ಬಿಜೆಪಿ ರಾಜ್ಯಾದ್ಯಂತ ಪ್ರತಿಭಟನೆ
- ಲಕ್ಷ್ಮೀ ಹೆಬ್ಬಾಳ್ಕರ್ ಬೆಂಬಲಿಸಿ, ಕಾಂಗ್ರೆಸಿಗರಿಂದ ಹಲವೆಡೆ ಧರಣಿ



ಸಮಾಚಾರ ಸಣ್ಣದಲ್ಲ

ಸರ್ವೇ ನೌಕರ ಲೋಕಾಯುಕ್ತ ಬಲೆಗೆ

ಔರಾದ್: ರೈತನ ಭೂಮಿ ಸರ್ವೇ ಮಾಡಿಕೊಡಲು ಹಣದ ಬೇಡಿಕೆ ಇಟ್ಟು ನಗದು ಹಣ ಪಡೆಯುತ್ತಿರುವ ವೇಳೆ ಭೂಮಾಪಕ ಸಂತೋಷ ಬೊಗಾರ ಅವರು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ತಾಲೂಕಿನ ವಡಗಾಂವ (ಡಿ) ಗ್ರಾಮದ ರೈತ ಮಹಮ್ಮದ್ ಶೌಕತ ಅಲಿ ಅವರು ತಮ್ಮ ಇಪ್ಪತ್ತು ಗುಂಟೆ ಭೂಮಿ ಸರ್ವೆ ಕೈಗೊಳ್ಳಲು ಔರಾದ ಎ.ಡಿ.ಎಲ್.ಆರ್. ಕಚೇರಿಯಲ್ಲಿ ಅರ್ಜಿ ಸಲ್ಲಿಸಿದ್ದರು. ಭೂಮಾಪಕ ಸಂತೋಷ ಅವರಿಗೆ ಖುದ್ದಾಗಿ ಭೇಟಿ ನೀಡಿ ಸರ್ವೆ ಮಾಡಲು ವಿನಂತಿಸಿಕೊಂಡಿದ್ದರು. ಆದರೆ ಭೂಮಾಪಕರು ಸರ್ವೆ ಮಾಡಲು ಖರ್ಚು ಬರುತ್ತದೆ ಎಂದು ತಿಳಿಸಿದರು. ಒಂದು ಲಕ್ಷ ಐವತ್ತು ಸಾವಿರ ರೂಪಾಯಿ ಬೇಡಿಕೆ ಇಟ್ಟು ಅದರಲ್ಲಿ ಅರ್ಧದಷ್ಟು ಹಣ ನೀಡಲು ಹೇಳಿದರು. ರೈತರಿಂದ ಔರಾದ ಪಟ್ಟಣದ ದತ್ತ ಮಂದಿರ ಹತ್ತಿರ ಲಂಚದ ರೂಪದಲ್ಲಿ ಎಪ್ಪತ್ತೈದು ಸಾವಿರ ರೂಪಾಯಿ ನಗದು ಪಡೆಯುತ್ತಿದ್ದಾಗ ಲೋಕಾಯುಕ್ತ ಅಧಿಕಾರಿಗಳು ನಗದು ಹಣ ಸೇರಿದಂತೆ ಭೂಮಾಪಕರನ್ನು ವಶಕ್ಕೆ ಪಡೆಯಲಾಗಿದೆ. ಬೀದರ ಲೋಕಾಯುಕ್ತ ಪೊಲೀಸ್ ಠಾಣೆಯ ಅಧಿಕಾರಿ ಹಾಗೂ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದರು.

ಶುಲ್ಕ ಮರುಪಾವತಿ ಅರ್ಜಿ ಅವಧಿ ವಿಸ್ತರಣೆ

ಯಾದಗಿರಿ: 2024-25ನೇ ಸಾಲಿನ ಮೆಟ್ರಿಕ್ ನಂತರದ ಕೋರ್ಸ್‌ಗಳು ಓದುತ್ತಿರುವ ವಿದ್ಯಾರ್ಥಿಗಳಿಂದ ಶುಲ್ಕ ಮರುಪಾವತಿ ಸೌಲಭ್ಯಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ಅವಧಿ ವಿಸ್ತರಿಸಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಸದಾಶಿವ.ಎಂ.ನಾರಾಯಣಕರ್ ಅವರು ತಿಳಿಸಿದ್ದಾರೆ. ಮೆಟ್ರಿಕ್ ನಂತರದ ಕೋರ್ಸ್ಗಳು ಓದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು, 2024-25ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ ''ಶುಲ್ಕ ಮರುಪಾವತಿ'' ಕಾರ್ಯಕ್ರಮದ ಸೌಲಭ್ಯಕ್ಕೆ ಆನ್‌ಲೈನ್‌ನಲ್ಲಿ ಮೂಲಕ ಅರ್ಜಿ ಅವಧಿ ಬರುವ ಫೆ. 15ರ ವರೆಗೆ ವಿಸ್ತರಿಸಿದ್ದು, ಕಾರ್ಯಕ್ರಮಗಳ ವಿವರ, ಅರ್ಹತೆ, ಅಗತ್ಯ ದಾಖಲಾತಿಗಳೊಂದಿಗೆ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರಕಾರಿ ಆದೇಶಗಳು ಬಗ್ಗೆ ಮಾಹಿತಿಗಾಗಿ ವೆಬ್‌ಸೈಟ್ ಭೇಟಿ ನೀಡಿ ಇಲ್ಲವೇ ಇಲಾಖಾ ಸಹಾಯವಾಣಿ ದೂ.ಸಂ.8050770005 ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನ ಸಂಪರ್ಕ ಸಭೆ ಇಂದು

ಬೀದರ್: ಕಾರ್ಯ ಮತ್ತು ಪಾಲನೆ ವಿಭಾಗ ವ್ಯಾಪ್ತಿಯ ಔರಾದ (ಬಿ), ಭಾಲ್ಕಿ, ಬೀದರ, ಕಮಠಾಣ ಉಪ ವಿಭಾಗದಲ್ಲಿ ಇಂದು ಜನ ಸಂಪರ್ಕ ಸಭೆಯನ್ನು ಕಾರ್ಯನಿರ್ವಾಹಕ ಇಂಜಿನಿಯರರು(ವಿ)/ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಗುವಿಸಕಂನಿ ಅವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿರುತ್ತದೆ. ಸಭೆಗಳ ವಿವರ: ಇಂದು ಬೆಳಗ್ಗೆ 11 ಗಂಟೆಗೆ ಔರಾದ (ಬಿ) ಉಪ ವಿಭಾಗ ಕಛೇರಿಯಲ್ಲಿ ಹಾಗೂ ಬೀದರ ಗ್ರಾಮೀಣ ಉಪ ವಿಭಾಗ ಕಛೇರಿಯಲ್ಲಿ ಹಾಗೂ ಮಧ್ಯಾಹ್ನ 3 ಗಂಟೆಗೆ ಭಾಲ್ಕಿ ಉಪ ವಿಭಾಗ ಕಛೇರಿಯಲ್ಲಿ, ಕಮಠಾಣ ಉಪ ವಿಭಾಗ ಕಛೇರಿಯಲ್ಲಿ, ಮತ್ತು ಬೀದರ ನಗರ ಉಪ ವಿಭಾಗ ಕಛೇರಿಯಲ್ಲಿ ಸಭೆಗಳು ನಡೆಯಲಿವೆ. ಸಾರ್ವಜನಿಕರು ಹಾಗೂ ಗುವಿಸಕಂನಿ ಗ್ರಾಹಕರು ಸಭೆಯಲ್ಲಿ ಉಪಸ್ಥಿತರಿದ್ದು ಕುಂದುಕೊರತೆಯ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದು ಬೀದರ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಲವೆಡೆ ವಿದ್ಯುತ್ ವ್ಯತ್ಯಯ ಇಂದು

ಬೀದರ: ಬೀದರ್ ಕಾರ್ಯ ಮತ್ತು ಪಾಲನೆ ವಿಭಾಗದ ವ್ಯಾಪ್ತಿಯಲ್ಲಿ ಔರಾದ(ಬಾ) ಉಪ ವಿಭಾಗದ ಸಂತಪೂರ ಉಪ ಕೇಂದ್ರದಲ್ಲಿ ತುರ್ತು ಕೆಲಸದ ಪ್ರಯುಕ್ತ ಇಂದು ಮಧ್ಯಾಹ್ನ 12 ರಿಂದ ಸಾಯಂಕಾಲ 6 ಗಂಟೆಯವರೆಗೆ 11ಕೆವಿ ಸಂತಪೂರ, 11ಕೆವಿ ಕೌಠಾ, 11ಕೆವಿ ಬಲ್ಲೂರ, 11ಕೆವಿ ಜಿ.ಎನ್.ವ್ಯಾ. ವಾಟರ ಸಪ್ಲೈ, 11ಕೆವಿ ಚಾಂದೂರಿ, 11ಕೆವಿ ಅರಬನ್ ವಾಟರ ಸಪ್ಲೈ, 11ಕೆವಿ ಹೆಡಗಾಪೂರ, 11ಕೆವಿ ಜೋನಿಕೇರಿ, 11ಕೆವಿ ಹಿಪ್ಪಳಗಾಂವ ಮತ್ತು 33ಕೆವಿ ವಡಗಾಂವ, 33ಕೆವಿ ಮುಧೋಳ ಫೀಡರಗಳ ಮೇಲೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಕಾರಣ ಗ್ರಾಹಕರು ಸಹಕರಿಸಬೇಕು ಎಂದು ಭಾಲ್ಕಿ 11ಕೆವಿ ವಿದ್ಯುತ್ ಉಪ ಕೇಂದ್ರದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆಪ್

{ಚೆಲುವ ನಾರಾಯಣಸ್ವಾಮಿ} ಸಚಿವ

ಮಂಡ್ಯ ಜಿಲ್ಲೆ ಅಪ್ಪಟ ಕನ್ನಡದ ನೆಲ. ಅತಿ ಹೆಚ್ಚು ಕನ್ನಡ ಮಾತನಾಡುವವರ ಜಿಲ್ಲೆ. ಕೃಷಿಯನ್ನೇ ಅವಲಂಬಿಸಿರುವ ಜಿಲ್ಲೆ. ಎಲ್ಲಿ ಕೃಷಿ ಸಂಸ್ಕೃತಿ ಗಟ್ಟಿಯಾಗಿರುತ್ತದೆಯೋ ಅಲ್ಲಿ ಜನಪದ ಶಕ್ತಿಶಾಲಿ. ಜನಪದ ನಮ್ಮೆಲ್ಲರ ಸಂಸ್ಕೃತಿಗಳ ತಾಯಿಬೇರು. ಈ ಜಿಲ್ಲೆಯಲ್ಲಿ ಕಲೆ, ಸಂಸ್ಕೃತಿ, ಸಾಹಿತ್ಯ, ಜಾನಪದ ಶ್ರೀಮಂತವಾಗಿದೆ.

ಅಂಬೇಡ್ಕರ್ ಅವರನ್ನು ನಮ್ಮ ಉಸಿರು ಇರುವರೆಗೂ ಸ್ಮರಿಸುತ್ತೇವೆ, ಪೂಜಿಸುತ್ತೇವೆ : ಡಾ.ಭೀಮಣ್ಣ ಮೇಟಿ

ಅಂಬೇಡ್ಕರ್ ಬಗ್ಗೆ ಶಾ ಹೇಳಿಕೆ ಕಾಂಗ್ರೆಸ್ ಖಂಡನೆ

ಯಾದಗಿರಿ: ಈ ದೇಶಕ್ಕೆ ಶ್ರೇಷ್ಠ ಸಂವಿಧಾನ ನೀಡಿದ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರಿಗೆ ಒಂದು ಜವಾಬ್ದಾರಿ ಹೊತ್ತಿರುವ ಕೇಂದ್ರದ ಗೃಹ ಮಂತ್ರಿ ಅಮಿತ್ ಶಾ ಅವಮಾನ ಮಾಡಿದ್ದು, ನಿಜಕ್ಕೂ ಖಂಡನೀಯವಾಗಿದ್ದು, ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಕಾಂಗ್ರೆಸ್ ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಡಾ.ಭೀಮಣ್ಣ ಮೇಟಿ ಒತ್ತಾಯಿಸಿದರು.

ಈ ಕುರಿತು ನಗರದಲ್ಲಿ ನಡೆದ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವೆಲ್ಲರೂ ಇವತ್ತಿನ ಕಾಲದಲ್ಲಿ ಬೆಳಗಾದರೆ ಅಂಬೇಡ್ಕರ್ ಅವರನ್ನು ಸ್ಮರಿಸುತ್ತೇವೆ, ಅವರನ್ನು ಪೂಜಿಸುತ್ತೇವೆ ನಮ್ಮ ಉಸಿರು ಇರುವರೆಗೂ ಮತ್ತು ಮುಂದಿನ ನಮ್ಮ ಪೀಳಿಗೆಯು ಕೂಡ ಅವರನ್ನು ಸ್ಮರಿಸುತ್ತಾರೆ ಆದರೆ ಅಮಿತ್ ಶಾ ಅವರಿಗೆ ಅರಿವಿಲ್ಲ ಎಂದರು.

ಇನ್ನೂ ಇತಂಹ ಹೇಳಿಕೆ ನೀಡಿರುವ ಅಮಿತ್ ಶಾ ತಕ್ಷಣವೇ ರಾಜೀನಾಮೆ ನೀಡಬೇಕು ಹಾಗೂ ಇವರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಅವರು ಆಗ್ರಹಿಸಿದರು. ಬೆಳಗಾವಿಯ ಸುವರ್ಣಸೌಧದಲ್ಲಿ ಕಾಂಗ್ರೆಸ್ ಶಾಸಕರು ಸದನದಲ್ಲಿ ಶಾ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದಾಗ ಬಿಜೆಪಿ ಎಂಎಲ್ಸಿ ಸಿ.ಟಿ ರವಿಯವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರಿಗೆ ಅವ್ಯಾಚ ಶಬ್ದವನ್ನು ಬಳಸಿದ್ದು ನೋಡಿದರೆ ಅವರ ಸಂಸ್ಕೃತಿ ಮತ್ತು ಭಾರತೀಯ ಜನತಾ ಪಾರ್ಟಿಯ ಚಾರಿತ್ರ್ಯ ಏನಂತ ಹೇಳುತ್ತದೆ. ಇದು ಸ್ಪಷ್ಟವಾಗಿ ಅವರ ಮನುವಾದದಲ್ಲಿ ಹಿಂದುಳಿದಿವರನ್ನು, ಅಲ್ಪಸಂಖ್ಯಾತರನ್ನು ದಲಿತರನ್ನು ಮಹಿಳೆಯರನ್ನು ಯಾವ ರೀತಿಯ ಶೋಷಣೆ ಮಾಡಬೇಕು ಅಂತ ಹೇಳಿದ್ದಾರೆ ಎಂದು ಕಿಡಿಕಾರಿದರು.

ಈ ರೀತಿಯ ಅಸಹ್ಯಕರ ಹೇಳಿಕೆ ನೀಡಿರುವುದನ್ನು ನೋಡಿದರೆ ಬಿಜೆಪಿ ಯವರು ಮಹಿಳೆಯರಿಗೆ ಯಾವ ತರಹದ ಸ್ಥಾನಮಾನ ಕೊಡುತ್ತಾರೆ ಏನುವುದು ಬಯಲಾಗಿದೆ ಎಂದು ವಾಗ್ದಾಳಿ ನಡೆಸಿದರು. ಈ ಸಂದರ್ಭದಲ್ಲಿ ಅಂಬರೀಷ್, ಶೇಖ್ ಇಮ್ರಾನ್, ಬೆಂಜಮಿನ್ ಇದ್ದರು.

> ತಾನು ಕೂಡ ಅಂಬೇಡ್ಕರ್ ಅವರು ರಚಿಸಿದ ಸಂವಿಧಾನ ಅಡಿಯಲ್ಲಿ ಗೃಹ ಮಂತ್ರಿಯಾಗಿ ಕಾರ್ಯನಿರ್ವಹಿಸುತ್ತಿದ್ದಿನಿ ಎನ್ನುವುದು ಪರಿಜ್ಞಾನ ಕೂಡ ಅವರಿಗಿಲ್ಲ. ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದವರಿಗೆ ಕಾನೂನಿನ ಶಿಕ್ಷೆಯಾಗದ ಹೋದರೆ ಯಾರು ಬದಲಾಗುವುದಿಲ್ಲ.
>
> - ಡಾ.ಭೀಮಣ್ಣ ಮೇಟಿ , ಕಾಂಗ್ರೆಸ್ ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸಂಪುಟದಿಂದ ವಜಾಗೊಳಿಸುವುಂತೆ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಹೋಬಳಿ ಶಾಖೆ ಒತ್ತಾಯಿಸಿದೆ.

ಅಮಿತ್ ಶಾ ರಾಜೀನಾಮೆಗೆ ಆಗ್ರಹ

ಸುರಪುರ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇತ್ತೀಚಿಗೆ ರಾಜ್ಯಸಭೆಯಲ್ಲಿ ಮಾತನಾಡುವ ವೇಳೆ ಅಂಬೇಡ್ಕರ್ ನೀಡಿದ ಹೇಳಿಕೆ ನಿಜಕ್ಕೂ ಖಂಡನೆ ಒಬ್ಬ ಜವಾಬ್ದಾರಿಯುತ ಸ್ಥಾನದಲ್ಲಿರುವರು ಈ ರೀತಿ ಮಾತನಾಡಿದ್ದು ಅವರಿಗೆ ಶೋಭೆ ತರುವುದಿಲ್ಲ ಎಂದು ಮಹರ್ಷಿ ವಾಲ್ಮೀಕಿ ನಾಯಕ ಸಂಘಟನೆ ತಾಲೂಕು ಘಟಕದ ಅಧ್ಯಕ್ಷ ಭೀಮನಗೌಡ ಕಿಡಿಕಾರಿದ್ದಾರೆ. ಈ ಕುರಿತು ಪತ್ರಿಕೆ ಹೇಳಿಕೆ ನೀಡಿರುವ ಅವರು, ಅಂಬೇಡ್ಕರ್ ಅವರು ಈ ದೇಶದ ಅಸ್ಮಿತೆಯಾಗಿದ್ದಾರೆ, ನಾವೂ ಬಾಬಾ ಸಾಹೇಬ ಅವರನ್ನು ಆರಾದಿಸುತ್ತೇವೆ. ದೇಶದ ಇತಿಹಾಸದಲ್ಲಿ ಅಂಬೇಡ್ಕರ್ ಅವರ ಹೆಸರು ಚಿರಸ್ತಾಯಿಯಾಗಿದೆ. ಪ್ರಜಾಪ್ರಭುತ್ವಕ್ಕೆ ಅಡಿಪಾಯವಾದ ಸಂವಿಧಾನವೆಂಬ ಶ್ರೇಷ್ಠ ಗ್ರಂಥ ನೀಡಿದ ಮಹಾನ್ ವ್ಯಕ್ತಿಯ ವಿರುದ್ಧ ಈ ರೀತಿಯಾದ ಹೇಳಿಕೆ ನೀಡುವ ಮೂಲಕ ಭಂಡ ಧೈರ್ಯ ಪ್ರದರ್ಶಿಸಿರುವ ಅಮಿತ್ ಶಾ ರವರು ಕೂಡಲೇ ದೇಶದ ಜನರ ಮುಂದೆ ಕ್ಷಮೆ ಕೇಳಬೇಕು ಮತ್ತು ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದ್ದಾರೆ.

ಗೃಹ ಸಚಿವ ಅಮಿತ್ ಶಾ ವಜಾಕ್ಕೆ ದಸಂಸ ಆಗ್ರಹ

ಕೆಂಭಾವಿ: ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸಂಪುಟದಿಂದ ವಜಾಗೊಳಿಸುವುಂತೆ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಕ್ರಾಂತಿಕಾರಿ) ಹೋಬಳಿ ಶಾಖೆ ಒತ್ತಾಯಿಸಿದೆ.

ಈ ಕುರಿತು ರಾಜ್ಯಪಾಲರಿಗೆ ಬರೆದ ಮನವಿಯನ್ನು ಉಪ ತಹಸೀಲ್ದಾರ್ ಮೂಲಕ ಸಲ್ಲಿಸಿದ್ದು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವಹೇಳನಕಾರಿ ಹೇಳಿಕೆ ನೀಡಿ, ಕೋಟ್ಯಂತರ ಅಂಬೇಡ್ಕರ್ ಅಭಿಮಾನಿಗಳ ಭಾವನೆಗಳಿಗೆ ಘಾಸಿ ಉಂಟು ಮಾಡಿರುತ್ತಾರೆ. ದೇಶಕ್ಕೆ ಸಂವಿಧಾನ ಸಮರ್ಪಣೆ ಮಾಡಿ 75 ವರ್ಷ ಪೂರೈಸುತ್ತಿರುವ ಈ ಸಂದರ್ಭದಲ್ಲಿ ಗೃಹ ಸಚಿವರು ತಮ್ಮ ಜವಾಬ್ದಾರಿಯುತ ಸ್ಥಾನವನ್ನು ಅರಿಯದೆ ದೇಶದ ದೇಗುಲವಾದ ಸಂಸತ್ ನಲ್ಲಿ ನಿಂತು ಉದ್ದಟತನದ ಮಾತನಾಡಿದ್ದಾರೆ.

ಇಡಿ ಜಗತ್ತು ಬಾಬಾ ಸಾಹೇಬರ ಜ್ಞಾನವನ್ನು ಜಪಿಸಿದರೆ ಸಂಘಪರಿವಾರದ ಕೆಲವರು ಅವರ ಸಮಾಜಮುಖಿ ಚಿಂತನೆಯನ್ನು ಅರಗಿಸಿಕೊಳ್ಳಲಾಗದೆ ಅಲಬುತ್ತಿವೆ ಎಂಬುದು ಇವರ ಹೇಳಿಕೆಯಲ್ಲಿ ವೇದ್ಯವಾಗುತ್ತದೆ.

ಕೋಟ್ಯಂತರ ಜನರ ಆರಾಧ್ಯ ದೈವವಾಗಿರುವ ಡಾ. ಅಂಬೇಡ್ಕರ್ ರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಅಮಿತ್ ಶಾ ಅವರು ದೇಶದ ಕ್ಷಮೆ ಕೋರಬೇಕು, ಪ್ರಧಾನಮಂತ್ರಿಯವರು ಅಮಿತ್ ಶಾ ರವರನ್ನು ಸಂಪುಟದಿಂದ ವಜಾ ಮಾಡಬೇಕೆಂದು ಆಗ್ರಹಸಿದರು.

ಈ ಸಂದರ್ಭದಲ್ಲಿ ಸಂಗಣ್ಣ ಚಿಂಚೋಳಿ, ಬಸವರಾಜ ಕಟ್ಟಿಮನಿ, ಲಾಲಪ್ಪ ಹೊಸ್ಮನಿ, ಮರೆಪ್ಪ ಮಾಳಹಳ್ಳಿ, ಆರ್.ಎಸ್. ಮಾಲಗತ್ತಿ, ಬಸವಣ್ಣೆಪ್ಪ ಮಾಳಳ್ಳಿಕರ್, ರಾಯಪ್ಪ ಯತ್ನಾಳ, ದೇವರಾಜ ದೊರೆ, ಮರೆಪ್ಪ ಕಟ್ಟಿಮನಿ, ಖಂಡಪ್ಪ ಯಾಳಗಿ, ಮಹೇಶ ಸಿ ಕಟ್ಟಿಮನಿ, ಪರಮಣ್ಣ ಎಸ್. ಬಡಿಗೇರ, ಚಂದ್ರು ಯಾಳಗಿ, ಮಲ್ಲು ಕಟ್ಟಿಮನಿ ಸೇರಿದಂತೆ ಇತರರಿದ್ದರು.

ದೈಹಿಕ ಆರೋಗ್ಯ ಸಮತೋಲನಕ್ಕೆ ಮ್ಯಾರಾಥಾನ್

ಭಾಲ್ಕಿ: ಡಾ. ಚನ್ನಬಸವ ಪಟ್ಟದ್ದೇವರ 135ನೇ ಜಯಂತಿ ಮಹೋತ್ಸವ ನಿಮಿತ್ಯ, ಎಲ್ಲರೂ ಆರೋಗ್ಯವಂತರಾಗಿರಬೇಕು ಎನ್ನುವ ದೃಷ್ಟಿಕೋನದಿಂದ ಮ್ಯಾರಾಥಾನ್ ಓಟ ಆಯೋಜಿಸಲಾಗಿದೆ ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದ್ದೇವರು ಹೇಳಿದರು.

ಪಟ್ಟಣದ ಚನ್ನಬಸವಾಶ್ರಮದ ಹತ್ತಿರ ಶುಕ್ರವಾರ ನಡೆದ ಚನ್ನಬಸವ ಮ್ಯಾರಾಥಾನ್ ಓಟದ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ಪಟ್ಟದ್ದೇವರ ಜಯಂತಿ ಮಹೋತ್ಸವ ಅರ್ಥಪೂರ್ಣವಾಗಿ ಆಚರಿಸುವ ನಿಟ್ಟಿನಲ್ಲಿ, ಮ್ಯಾರಾಥಾನ್ ಓಟ, ಜ್ಞಾನ ವಿಜ್ಞಾನ ಮೇಳೆ, ಭಾಷಣ ಸ್ಪರ್ಧೆ, ನಿಬಂಭಧ ಸ್ಪರ್ಧೆ, ವೇಷಭೂಷಣ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು. ಪ್ರಾರಂಭಿಕವಾಗಿ ಇಂದು ಮ್ಯಾರಾಥಾನ್ ಓಟದ ಸ್ಪರ್ಧೆ ನಡೆದಿದೆ ಎಂದು ಹೇಳಿದರು.

ಡಿ.ವಾಯ್.ಎಸ್.ಪಿ ಶಿವಾನಂದ್ ಪವಾಡಶೆಟ್ಟಿ ಮ್ಯಾರಾಥಾನ್ ಓಟಕ್ಕೆ ಚಾಲನೆ ನೀಡಿ ಮಾತನಾಡಿದರು. ನಂತರ ಓಟಗಾರರ ಯೋಗಕ್ಷೇಮ ವಿಚಾರಿಸುತ್ತಾ, ಓಟದ ದಾರಿಯುದ್ದಕ್ಕೂ ಬೈಸಿಕಲ್ ಮೇಲೆ ಸಂಚರಿಸಿ, ಓಟಗಾರರಿಗೆ ಹುರಿದುಂಬಿಸಿದರು. ಮ್ಯಾರಾಥಾನ್ ಓಟದ ಸಮಿತಿಯ ಅಧ್ಯಕ್ಷ ರವೀಂದ್ರ ಚಿಡಗುಪ್ಪೆ ಅಧ್ಯಕ್ಷತೆ ವಹಿಸಿದ್ದರು.

ದೇಶಕ್ಕಾಗಿ ಓಟ, ಆರೋಗ್ಯಕ್ಕಾಗಿ ಓಟ, ಪ್ರಕೃತಿಗಾಗಿ ಓಟ ಎನ್ನುವ ಧ್ಯೇಯ ವಾಕ್ಯದೊಂದಿಗೆ ಪ್ರಾರಂಭವಾದ ಮ್ಯಾರಾಥಾನ್ ಓಟವು ಪಟ್ಟಣದ ಚನ್ನಬಸವಾಶ್ರಮದಿಂದ ಬಿಟ್ಟು ಬಸವೇಶ್ವರ ವೃತ್ತ, ಗಾಂಧಿ ವೃತ್ತ, ಉಪನ್ಯಾಸಕರ ಬಡಾವಣೆ, ಚನ್ನಬಸವೇಶ್ವರ ಕಾಲೇಜು, ಬೊಮ್ಮಗೊಂಡೇಶ್ವರ ವೃತ್ತ, ಬಸ್ ನಿಲ್ದಾಣ, ಅಂಬೇಡ್ಕರ್ ವೃತ್ತದ ಮೂಲಕ ಸುಮಾರು 6 ಕಿ.ಮೀ ಉದ್ದ ಸಾಗಿಬಂದು ಮತ್ತೆ ಚನ್ನಬವಾಶ್ರಮದಲ್ಲಿ ಸಮಾವೇಶ ಗೊಂಡಿತು.

ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಗಳಿಸಿದ ಸ್ಪರ್ಧಾಳುಗಳಿಗೆ ಸಮಿತಿಯ ಅಧ್ಯಕ್ಷರಿಂದ ಕ್ರಮವಾಗಿ 11000, 5000, 3000 ರೂ. ಬಹುಮಾನ ವಿತರಿಸಲಾಯಿತು. ಭಾಗವಹಿಸಿದ ಎಲ್ಲಾ ಸ್ಪರ್ಧಾಳುಗಳಿಗೆ ಸಮಿತಿಯ ವತಿಯಿಂದ ಟಿ ಶರ್ಟ್ ಕೊಡುಗೆಯಾಗಿ ನೀಡಲಾಯಿತು. ಬೆಳಗ್ಗೆ 6.30 ಗಂಟೆಗೆ ಪ್ರಾರಂಭವಾದ ಓಟ 7.30 ಗಂಟೆಯ ಹೊತ್ತಿಗೆ ಸಮಾಪ್ತಿಯಾಯಿತು. ಮಕ್ಕಳು, ವೃದ್ಧರು, ಶಾಲಾ ವಿದ್ಯಾರ್ಥಿಗಳು, ಮಹಿಳೆಯರು ಸೇರಿದಂತೆ ಸುಮಾರು ಒಂದು ಸಾವಿರಕ್ಕೂ ಅಧಿಕ ಸ್ಪರ್ಧಾಳುಗಳು ಓಟದಲ್ಲಿ ಭಾಗವಹಿಸಿದರು.

ಈ ಸಂದರ್ಭದಲ್ಲಿ ಹಿರೇಮಠದ ಶ್ರೀ ಮಹಾಲಿಂಗ ಸ್ವಾಮೀಜಿ, ಬಸವಕಲ್ಯಾಣ ಅನುಭವ ಮಂಟಪದ ಸಂಚಾಲಕ ಶಿವಾನಂದ ಸ್ವಾಮಿ, ಸಮಿತಿಯ ಅಧ್ಯಕ್ಷ ರವೀಂದ್ರ ಚಿಡಗುಪ್ಪೆ, ಪುರಸಭೆ ಉಪಾಧ್ಯಕ್ಷ ವಿಜಯಕುಮಾರ ರಾಜಭವನ, ಯೋಗ ಶಿಕ್ಷಕ ಓಂ ಬಿಜಿಪಾಟೀಲ, ಗಣಪತಿ ಬಾವುಗೆ, ನಿವೃತ್ತ ನೌಕರರ ಸಂಘದ ಅಧ್ಯಕ್ಷ ಬಸವರಾಜ ಮರೆ ಮತ್ತಿತರರು ಇದ್ದರು.

ಪಟ್ಟಣದ ಚನ್ನಬಸವಾಶ್ರಮದ ಹತ್ತಿರ ನಡೆದ ಚನ್ನಬಸವ ಮ್ಯಾರಾಥಾನ್ ಓಟ ಹಮ್ಮಿಕೊಳ್ಳಲಾಯಿತು.

ಮ್ಯಾರಾಥಾನ್ ಓಟ ಸ್ಪರ್ಧೆಯ ಫಲಿತಾಂಶ

ಗುರುನಾನಕ ಕಾಲೇಜ ಅಟ್ಟರಗಾದ ಬಜರಂಗ ಉತ್ತಮರಾವ ಚೆಸ್ಟ್ ಸಂಖೆ 320 ಪ್ರಥಮ ಸ್ಥಾನ, ಕದಿರಾಬಾದ ವಾಡಿಯ ಮನೋಹ ತುಕಾರಾಮ ಚೆಸ್ಟ್ ಸಂಖೆ 017 ದ್ವಿತೀಯ, ಬೀದರಿನ ಆದಿತ್ಯ ಅವಿನಾಶ ತೃತೀಯ ಸ್ಥಾನ ಪಡೆದರು. ನಂತರ ಸೊರಳ್ಳಿಯ ಭೈರವನಾಥ, ಅನಭವ ಮಂಟಪ ಬಸವಕಲ್ಯಾಣದ ಬೊಮ್ಮಣ್ಣ ಮಲ್ಲಿಕಾರ್ಜುನ್, ಬೀರಿ(ಬಿ) ತಾಂಡಾದ ಸಚೀನ ಸಂತೋಷ, ಸಂತೋಷ್ ದೇವಿದಾಸ, ಕಲವಾಡಿಯ ಬಸವರಾಜ ಶಿವರಾಜ, ಖಟಕ ಚಿಂಚೋಳಿಯ ಹಣಮಂತ ಕಾಮಣ್ಣ, ಸಾಯಿಗಾಂವನ ಆದಿನಾಥ ಧೋಂಡಿಬಾ ರವರು ನಂತರ ಹತ್ತು ಸ್ಥಾನಗಳಲ್ಲಿ ಬಂದಿದ್ದಕ್ಕೆ ಅವರಿಗೆ ಸಮಾಧಾನಕರ ಬಹುಮಾನ ನೀಡಲಾಯಿತು.

ಅಂಬೇಡ್ಕರ್ ದ್ರೋಹಿಗಳು

ಶಹಾಪುರ: ಬಿಜೆಪಿ ಮತ್ತು ಕಾಂಗ್ರೆಸ್ ಇಬ್ಬರು ಅಂಬೇಡ್ಕರ್ ದ್ರೋಹಿಗಳು. ಪಾರ್ಲಿಮೆಂಟ್ ನಲ್ಲಿ ಬಿಜೆಪಿ ಪ್ರಮುಖ ನಾಯಕ ಅಮಿತ್ ಶಾ ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರ ಬಗ್ಗೆ ಆಡಿರುವ ಅಸಹನೆಯ ಮಾತು ನಿಜಕ್ಕೂ ರಾಷ್ಟ್ರೀಯ ಅವಮಾನ ಎಂದು ಬೌದ್ಧ ಸಾಹಿತಿ ಬುದ್ಧಘೋಷ ದೇವೇಂದ್ರ ಹೆಗ್ಗಡೆ ಖಂಡಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು ಈ ಅಸಹನೆಯ ಮಾತಿನ ಬಗ್ಗೆ ರಾಷ್ಟ್ರ ವ್ಯಾಪಿ ಆರೋಗ್ಯಕರ ಚರ್ಚೆ, ಸಮಾಜಾಯಿಷಿ , ಪ್ರತಿಕ್ರಿಯೆ, ಪ್ರತಿಭಟನೆ ಕ್ಷಮೆ ಮತ್ತು ಶಿಕ್ಷೆ ಈ ನೆಲದ ಕಾನೂನು ಪ್ರಕಾರ ನಡೆಯಬೇಕಾದ ಪ್ರಕ್ರಿಯೆ ಇದನ್ನು ಯಾರು ಮುಚ್ಚಿ ಹಾಕಲು ಸಾಧ್ಯವಿಲ್ಲ. ಆದರೆ ಅಂಬೇಡ್ಕರ್‌ಗೆ ಮಾಡಲಾದ ಅಪಮಾನದ ಪ್ರಕರಣವನ್ನು ದಿಕ್ಕು ತಪ್ಪಿಸುವ ಉದ್ದೇಶದಿಂದ ಪಾರ್ಲಿಮೆಂಟ್ ಆವರಣದಲ್ಲಿ ಆದ ನೂಕು ನುಗ್ಗಲು ಗಲಭೆ ಪ್ರಕರಣ ಹೆಣೆದಂತೆ ಕಾಣುತ್ತದೆ. ರಾಹುಲ್ ಗಾಂಧಿ ಗೂಂಡಾಗಿರಿ ಮಾಡಿ ಬಿಜೆಪಿ ಸಂಸದರ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಹಲ್ಲೆಗೊಳಗಾದ ಸಂಸದರು ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಆರೋಪಿಸಲಾಗಿದೆ. ರಾಹುಲ್ ಗಾಂಧಿ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಬಿಜೆಪಿ ಮಹಿಳಾ ಸಂಸದರೊಬ್ಬರು ದೂರಿದ್ದಾರೆ.

ಇನ್ನೂ ರಾಜ್ಯದ ವಿಧಾನಸಭೆಯಲ್ಲಿ ಅಮಿತ್ ಶಾ ಮಾಡಿದ ಅಂಬೇಡ್ಕರ್ ಅಪಮಾನದ ಚರ್ಚೆ ಸಂದರ್ಭದಲ್ಲಿ ಅನಗತ್ಯವಾಗಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಚಾರಿತ್ರ್ಯ ವಧೆಯ ಪ್ರಕರಣ ಮುನ್ನಲೆಗೆ ಬಂದು ಶಾಸಕ ಸಿಟಿ ರವಿ ಅರೆಸ್ಟ್ ಆಗಿದ್ದಾರೆ. ಪ್ರಕರಣ ರಣ ರೋಚಕ ತಿರುವು ಪಡೆಯುತ್ತಿದೆ.

ದಲಿತ ಸಮುದಾಯ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಕುತಂತ್ರವನ್ನು ಖಂಡಿಸಿ, ಪಾರ್ಲಿಮೆಂಟ್ ನಲ್ಲಿ ಜರುಗಿದ ಅಂಬೇಡ್ಕರ್ ಅಪಮಾನ ಪ್ರಕರಣ ವಿರುದ್ಧ ಹೋರಾಟ ಮಾಡಬೇಕಾದ ಅನಿವಾರ್ಯತೆ ಇದೆ. ಆದ್ದರಿಂದ ಎಲ್ಲಾ ದಲಿತ ಸಂಘಟನೆಗಳು ಈ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಿ ಹೋರಾಟ ರೂಪಿಸಬೇಕು ಎಂದು ತಿಳಿಸಿದ್ದಾರೆ.

ಬಿಜೆಪಿ, ಕಾಂಗ್ರೆಸ್ ಹೊಸ ನಾಟಕ ಪ್ರಾರಂಭ

ಹೆಣ್ಣು ಮಕ್ಕಳ ಮಾನ ಮರ್ಯಾದೆಯ ಭಾವನಾತ್ಮಕ ವಿಷಯ ಮುನ್ನಲೆಗೆ ತಂದು ಮೂಲ ಪ್ರಕರಣ ದಿಕ್ಕು ತಪ್ಪಿಸಿದ್ದಾರೆ. ಮಹಿಳಾ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವಮಾನ ಎಂದು ಕಾಂಗ್ರೆಸ್, ಸಿ.ಟಿ ರವಿ ಮೇಲೆ ಗೂಂಡಾಗಿರಿ ಎಂದು ಬಿಜೆಪಿ ಹೊಸ ಹೋರಾಟ ಪ್ರಾರಂಭಿಸಿವೆ. ಈ ಎರಡು ಪ್ರಕರಣಗಳು ಅಂಬೇಡ್ಕರ್ ಅಪಮಾನದ ಪ್ರಕರಣವನ್ನು ಮುಚ್ಚಿ ಹಾಕಿ ದಿಕ್ಕು ತಪ್ಪಿಸುವ ಉದ್ದೇಶದಿಂದ ಸೃಷ್ಠಿಸಲಾಗಿದೆ. ಬಿಜೆಪಿ, ಕಾಂಗ್ರೆಸ್ ಹೊಸ ನಾಟಕ ಪ್ರಾರಂಭಿಸಿದೆ. ಇದನ್ನು ಅಂಬೇಡ್ಕರ್ ಅನುಯಾಯಿಗಳು ಉಗ್ರವಾಗಿ ಖಂಡಿಸುತ್ತೇವೆ.

ಶಿವ ದೇಗುಲಕ್ಕೆ ಪುರಾತತ್ವ ಅಧಿಕಾರಿಗಳು ಭೇಟಿ

ಬಸವಕಲ್ಯಾಣ: ಬಸವಕಲ್ಯಾಣ ತಾಲೂಕಿನ ನಾರಾಯಣಪೂರ ಗ್ರಾಮದ ಐತಿಹಾಸಿಕ ಶಿವ ದೇವಾಲಯಕ್ಕೆ ಪುರಾತತ್ವ ಇಲಾಖೆ ಅಧಿಕಾರಿಗಳು ಶುಕ್ರವಾರ ಭೇಟಿ ನೀಡಿ ದೇಗುಲದ ಪರಿಶೀಲನೆ ನಡೆಸಿದರು. ಅಳಿವಿನ ಅಂಚಿನಲ್ಲಿರುವ ಶಿವ ದೇವಾಲಯ ಸಂರಕ್ಷಣೆಗೆ ಸರಕಾರ ಮುಂದಾಗಬೇಕು ಎಂದು ಸ್ಥಳೀಯ ನಿವಾಸಿಗಳು ಒತ್ತಾಯಿಸಿದರು.

ಜನರ ಮನವಿಗೆ ಸ್ಪಂದಿಸುವ ಮೂಲಕ ಸರಕಾರದ ಗಮನ ಸೆಳೆಯಲು ವಿಶ್ವವಾಣಿ ಪತ್ರಿಕೆಯಲ್ಲಿ ಡಿ. 15 ರಂದು ಶಿವ ದೇವಾಲಯ ಸಂರಕ್ಷಣೆಗೆ ಸರಕಾರಕ್ಕೆ ಒತ್ತಾಯ ಶೀರ್ಷಿಕೆಯಡಿ ವರದಿ ಪ್ರಕಟಿಸಲಾಗಿತ್ತು. ವರದಿಗೆ ಎಚ್ಚೆತ್ತೊಂಡ ಪುರಾತತ್ವ ಇಲಾಖೆಯ ಅಧಿಕಾರಿಗಳು ಕಲ್ಬುರ್ಗಿ ವಿಭಾಗದ ಪುರಾತತ್ವ ಇಲಾಖೆಯ ಉಪನಿರ್ದೇಶಕರು ಡಾ. ಮಂಜುಳಾ ಸಿ.ಎನ್.

ಹಾಗೂ ಪುರಾತತ್ವ ಸಂರಕ್ಷಣಾಧಿಕಾರಿ ಪ್ರೇಮಲಾ ಅವರು ಶಿವ ದೇಗುಲಕ್ಕೆ ಭೇಟಿ ನೀಡಿದ್ದಾರೆ, ಮಾತ್ರವಲ್ಲದೆ ಇಡೀ ಗ್ರಾಮದ ತುಂಬೆಲ್ಲಾ ಸುತ್ತಾಡಿ ಗ್ರಾಮದಲ್ಲಿರುವ ಪುರಾತನ ಶಿಲ್ಪಕಲಾಕೃತಿಗಳ ಮಾಹಿತಿ ಸಂಗ್ರಹಿಸಿದ್ದಾರೆ. ಬಿರುಕು ಬಿಟ್ಟ ಶಿವ ದೇಗುಲದ ಕಂಬಗಳು, ದೇಗುಲದ ಪಕ್ಕದಲ್ಲಿರುವ ಪುರಾತನ ಮಂಟಪ, ಅಳಿವಿನ ಅಂಚಿನಲ್ಲಿರುವ ಶಿವ ದೇವಾಲಯದ ಬಲ ಭಾಗ ಹಾಗೂ ಹಿಂಭಾಗದ ಗೋಡೆ, ಗ್ರಾಮದ ಕೆರೆಯ ಪಕ್ಕದಲ್ಲಿ ಅನಾಥವಾಗಿ ಬಿದ್ದಿರುವ ಶಿಲ್ಪಕಲಾಕೃತಿಗಳನ್ನು ಕಂಡು ಒಂದು ಕ್ಷಣ ಅಧಿಕಾರಿಗಳೇ ಶಾಕ್ ಆಗಿದ್ದಾರೆ.

ಶೀಘ್ರವೇ ಈ ಕುರಿತು ಸರಕಾರಕ್ಕೆ ವರದಿ ಸಲ್ಲಿಸಿ, ದೇಗುಲ ಸಂರಕ್ಷಣೆ ಹಾಗೂ ಅಭಿವೃದ್ಧಿ ಕೈಗೊಳ್ಳಲಾಗುವುದು ಎಂದು ಅವರು ಮಾಹಿತಿ ನೀಡಿದರು, ಇದು ಅತ್ಯಂತ ಪುರಾತನ ದೇಗುಲವಾಗಿದೆ ಈ ಭಾಗದಲ್ಲಿ ಇಂತಹ ದೇಗುಲ ನಾನು ಕಂಡಿಲ್ಲ ತುರ್ತಾಗಿ ದೇಗುಲದ ರಕ್ಷಣೆ ಹಾಗೂ ಅಭಿವೃದ್ಧಿ ಅಗತ್ಯವಾಗಿದೆ ಈ ಕುರಿತು ವರದಿ ಸಿದ್ಧಪಡಿಸಿ ಸರಕಾರಕ್ಕೆ ಸಲ್ಲಿಸಲಾಗುವುದು, ಶೀಘ್ರವೇ ದೇಗುಲ ಸಂರಕ್ಷಣೆ ಕಾರ್ಯ ಮಾಡಲಾಗುವುದು ಎಂದು ಪುರಾತತ್ವ ಇಲಾಖೆಯ ಕಲಬುರಗಿ ವಿಭಾಗದ ಉಪ ನಿರ್ದೇಶಕರಾಗಿರುವ ಡಾ. ಮಂಜುಳಾ ಸಿ.ಎನ್ ಅವರು ಮಾಹಿತಿ ನೀಡಿದರು.

ಬಸವಕಲ್ಯಾಣ ತಾಲೂಕಿನ ನಾರಾಯಣಪೂರ ಗ್ರಾಮದ ಐತಿಹಾಸಿಕ ಶಿವ ದೇವಾಲಯಕ್ಕೆ ಪುರಾತತ್ವ ಇಲಾಖೆ ಅಧಿಕಾರಿಗಳು ಶುಕ್ರವಾರ ಭೇಟಿ ನೀಡಿ ದೇಗುಲದ ಪರಿಶೀಲನೆ ನಡೆಸಿದರು.

ಶಹಾಪುರ ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಅವರ ಕುರಿತು ಗೃಹ ಸಚಿವ ಅಮಿತ್ ಶಾ ಅವರ ಅವಹೇಳನಕಾರಿ ಹೇಳಿಕೆ ಖಂಡಿಸಿ ರಾಜ್ಯ ದಲಿತ ಸಂಘರ್ಷ ಸಮಿತಿ ವತಿಯಿಂದ ತಹಸೀಲ್ದಾರ್ ಕಚೇರಿ ಎದುರು ಪ್ರತಿಭಟನೆ ನಡೆಯಿತು. ಈ ಕುರಿತು ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು. ತಹಸೀಲ್ದಾರ್ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಚಂದಪ್ಪ ಮುನಿಯಪ್ಪನೂರ್, ಮಹಾದೇವ ದಿಗ್ಗಿ, ಶರಣು ದೋರನಹಳ್ಳಿ, ತಾಯಪ್ಪ ಭಂಡಾರಿ, ಮರಿಯಪ್ಪ ಕ್ರಾಂತಿ, ಮಲ್ಲಿಕಾರ್ಜುನ ಹೊಸಮನಿ, ಬಲಭೀಮ್ ಬೇವಿನಹಳ್ಳಿ ಶರಬಣ್ಣ ದೋರನಹಳ್ಳಿ, ವಾಸು ಕೋಗಿಲ್‌ಕರ್, ನಾಗರಾಜ ಕೊಡಮನಹಳ್ಳಿ, ಶ್ರೀಮಂತ ಸಿಂಗನಹಳ್ಳಿ, ಶರಣಪ್ಪ ಕಟ್ಟಿಮನಿ, ಅನ್ನೂರ ಭೀಮಾಶಂಕರ , ಪುರುಷೋತ್ತಮ ಬಬಲಾದ, ಚೆನ್ನಬಸವ, ಸಿದ್ದಪ್ಪ ಕೋಡಮನಹಳ್ಳಿ, ನಾಗಪ್ಪ ಹಳಿಸಗರ, ಜೈಭೀಮ ಸಿಂಗನಹಳ್ಳಿ ಸೇರಿದಂತೆ ಇತರರು ಇದ್ದರು.

ಬಾಣಂತಿ ಸಾವು ಕ್ರಮಕ್ಕೆ ಒತ್ತಾಯ

ಬೀದರ್: ಕಲ್ಯಾಣ ಕರ್ನಾಟಕ ಭಾಗದ ಬಹುತೇಕ ಜಿಲ್ಲೆಗಳಲ್ಲಿ ಬಾಣಂತಿಯರ ಹಾಗೂ ನವಜಾತ ಶಿಶುಗಳ ಸಾವಿನ ಪ್ರಮಾಣ ಗಣನೀಯ ಹೆಚ್ಚುತ್ತಿರುವುದು ಆತಂಕಕಾರಿ ಸಂಗತಿ. ಸರಕಾರ ಈ ವಿಷಯ ಗಂಭೀರವಾಗಿ ಪರಿಗಣಿಸಿ ಅಮಾಯಕರ ಜೀವ ರಕ್ಷಣೆಗೆ ಕ್ರಮ ಕೈಗೊಳ್ಳಬೇಕೆಂದು ಬೀದರ್ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಒತ್ತಾಯಿಸಿದ್ದಾರೆ. ಬೆಳಗಾವಿ ಅಧಿವೇಶನದ ಕೊನೆಯ ದಿನವಾದ ಗುರುವಾರ ಈ ವಿಷಯ ಪ್ರಸ್ತಾಪಿಸಿ, ಕಳೆದ ಎರಡು ವರ್ಷಗಳಲ್ಲಿ ಬೀದರ್, ಕಲಬುರಗಿ, ಯಾದಗಿರಿ, ಬಳ್ಳಾರಿ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದಲ್ಲಿಯೇ ಸುಮಾರು 300 ಬಾಣಂತಿಯರು, 4 ಸಾವಿರ ನವಜಾತ ಶಿಶುಗಳು ಸಾವನ್ನಪ್ಪಿದ ಮಾಹಿತಿ ಇದೆ. ಈ ಅಂಕಿ-ಅಂಶ ನಿಜಕ್ಕೂ ಭಯಪಡಿಸುತ್ತಿದೆ. ಹೀಗಾಗಿ ಇನ್ನಾದರೂ ಎಚ್ಚೆತ್ತುಕೊಂಡು ತುರ್ತು ಕ್ರಮ ಕೈಗೊಳ್ಳಬೇಕು ಎಂದು ಸರಕಾರದ ಗಮನ ಸೆಳೆದರು. ಬಾಣಂತಿಯರ ಸಾವಿಗೆ ಕಳಪೆ ಔಷಧ(ಡ್ರಗ್ಸ್) ಬಳಕೆ ಕಾರಣ ಎಂಬ ವರದಿ ಬರುತ್ತಿವೆ. ರಾಜ್ಯ ಡ್ರಗ್ ಕಂಟ್ರೋಲರ್, ಹಿರಿಯ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಔಷಧದ ಗುಣಮಟ್ಟ ನೋಡದೆ ಜನರಿಗೆ ತಲುಪಿಸಿದರೆ ಅಮಾಯಕರು ಬಲಿಯಾಗುವುದಿಲ್ಲವೇ? ಇದಕ್ಕೆ ಯಾರು ಹೊಣೆ? ಕೂಡಲೇ ಕಳಪೆ ಔಷಧ ಸರಬರಾಜು ಮಾಡಿದ ಕಂಪನಿಗಳನ್ನು ಕಪ್ಪುಪಟ್ಟಿಗೆ ಸೇರಿಸಿ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬೇಕು. ನಿರ್ಲಕ್ಷ್ಯಕ್ಕೆ ಬಲಿಯಾದ ಕುಟುಂಬಗಳಿಗೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಸುವರ್ಣಸೌಧದಲ್ಲೇ ಶಾಸಕರ ಮೇಲೆ ಹಲ್ಲೆ

ಯಾದಗಿರಿ: ಪ್ರಜಾಪ್ರಭುತ್ವದಲ್ಲಿ ಸಂವಿಧಾನವೆಂದು ಹುಸಿ ನಾಟಕವಾಡುವ ಕಾಂಗ್ರೆಸ್ ನವರು ಒಬ್ಬ ಶಾಸಕರನ್ನು ನಿಯಮಗಳನ್ನು ಮೀರಿ ಬಂಧಿಸುವುದು, ರೌಡಿಗಳಂತೆ ಹಲ್ಲೆ ನಡೆಸುವುದು ನೋಡಿದರೆ ರಾಜ್ಯದಲ್ಲಿ ದಬ್ಬಾಳಿಕೆ ಹೆಚ್ಚಾಗಿದೆ ಎಂದು ಬಿಜೆಪಿ ಮುಖಂಡ ರಾಚನಗೌಡ ಮುದ್ನಾಳ ಆರೋಪಿಸಿದ್ದಾರೆ.

ವಿಧಾನಪರಿಷತ್ ಸದಸ್ಯರಾದ ಸಿ.ಟಿ. ರವಿ ಅವರ ಮೇಲೆ ಹಲ್ಲೆ ಮಾಡಿರುವುದನ್ನು ಖಂಡಿಸಿ ಬಿಜೆಪಿ ಜಿಲ್ಲಾ ಘಟಕದಿಂದ ನಗರದ ಸುಭಾಷ್ ಚಂದ್ರಬೋಸ್ ವೃತ್ತದಲ್ಲಿ ಬೃಹತ್ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಒಬ್ಬ ಶಾಸಕನನ್ನು ಈ ರೀತಿಯಾಗಿ ನಡೆಸಿಕೊಳ್ಳುವುದು ತೀರಾ ನಾಚಿಕೆಗೇಡಿನ ವಿಷಯವಾಗಿದೆ ಎಂದು ಕಾಂಗ್ರೆಸ್ ಸರಕಾರ ವಿರುದ್ಧ ವಾಗ್ದಾಳಿ ನಡೆಸಿದರು.

ಅಲೆಮಾರಿ ನಿಗಮದ ಮಾಜಿ ಅಧ್ಯಕ್ಷ ದೇವೇಂದ್ರನಾಥ್ ನಾದ್ ಮಾತನಾಡಿ, ಕಾಂಗ್ರೆಸ್ ಪಕ್ಷ ಗೂಂಡಾಗಿರಿ ಮಾಡುತ್ತಿರುವುದಕ್ಕೆ ಬೆಳಗಾವಿ ಅಧಿವೇಶನದಲ್ಲಿ ಸಿಟಿ ರವಿ ಅವರ ಮೇಲೆ ಹಲ್ಲೆ ಮಾಡಿರುವುದೇ ಸಾಕ್ಷಿಯಾಗಿದೆ ಇಂತಹ ಕೃತ್ಯಗಳಿಂದ ದಬ್ಬಾಳಿಕೆ ನಡೆಸುವುದು ಬಹಳ ದಿನ ನಡೆಯಲಾರದು ಎಂದು ಎಂದು ಆಕ್ರೋಶ ಹೊರಹಾಕಿದರು.

ಯುವ ಮುಖಂಡ ಮಹೇಶ್‌ರೆಡ್ಡಿ ಮುದ್ನಾಳ ಮಾತನಾಡಿ, ಕಾಂಗ್ರೆಸ್ ಸರಕಾರ ಅಧಿಕಾರ ದುರುಪಯೋಗ ಮಾಡಿಕೊಂಡು ದಬ್ಬಾಳಿಕೆ ನಡೆಸುತ್ತಿದ್ದು, ಸಿ.ಟಿ ರವಿ ಅವರ ವಿರುದ್ಧ ನಡೆದುಕೊಂಡ ರೀತಿ ಪ್ರಜ್ಞಾವಂತರು ನಾಚಿಕೆಯಿಂದ ತಲೆ ತಗ್ಗಿಸುವಂತಾಗಿದೆ. ಕೂಡಲೇ ಸಿ.ಟಿ.ರವಿ ಅವರನ್ನು ಬಿಡುಗಡೆ ಮಾಡಬೇಕು ಇಲ್ಲವಾದರೆ ಯಾದಗಿರಿ ಜಿಲ್ಲೆಯನ್ನು ಬಂದ್ ಮಾಡಿ ಉಗ್ರ ಹೋರಾಟ ಕೈಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಗುರು ಕಾಮಾ, ಪರಶುರಾಮ್ ಕುರಕುಂದಿ, ಜಿಲ್ಲಾ ವಕ್ತಾರರಾದ ಹಣಮಂತ ಇಟಗಿ , ನಗರಾಧ್ಯಕ್ಷರಾದ ಲಿಂಗಪ್ಪ ಹತ್ತಿಮನಿ ಗ್ರಾಮೀಣ ಮಂಡಲ್ ಅಧ್ಯಕ್ಷರಾದ ರಾಜಶೇಖರ್ ಕಾಡಮನೋರ್ ಮಾಜಿ ಜಿಲ್ಲಾ ಪ್ರದಾನ ಕಾರ್ಯದರ್ಶಿಗಳು ವೆಂಕಟರೆಡ್ಡಿ ಅಬ್ಬೆ ತುಮಕೂರ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷರಾದ ಸುನೀತಾ ಚೌಹಾಣ, ನಗರ ಸಭೆ ಸದಸ್ಯರಾದ ಪ್ರಭಾವತಿ ಕಲಾಲ, ವಿಜಯಲಕ್ಷ್ಮಿ, ಬೀಮಬಾಯಿ ಸೇರಿದಂತೆ ಜಿಲ್ಲಾ ಪದಾಧಿಕಾರಿಗಳು, ಮಂಡಲ ಪದಾಧಿಕಾರಿಗಳು, ಮಾಜಿ ಸಂಸದರು, ಮಾಜಿ ಶಾಸಕರು, ಹಾಲಿ ಮತ್ತು ಮಾಜಿ ನಗರಸಭೆ ಸದಸ್ಯರು, ಎಲ್ಲಾ ಮೋರ್ಚಾದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು , ಸಾರ್ವಜನಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡರು.



ವಿಧಾನಪರಿಷತ್ ಸದಸ್ಯರಾದ ಸಿ.ಟಿ. ರವಿ ಅವರ ಮೇಲೆ ಹಲ್ಲೆ ಮಾಡಿರುವುದನ್ನು ಖಂಡಿಸಿ ಬಿಜೆಪಿ ಜಿಲ್ಲಾ ಘಟಕದಿಂದ ನಗರದ ಸುಭಾಷ್ ಚಂದ್ರಬೋಸ್ ವೃತ್ತದಲ್ಲಿ ಬೃಹತ್ ನಡೆದ ಪ್ರತಿಭಟನೆ ನಡೆಸಿದರು.

ಸಿ.ಟಿ.ರವಿ ಮೇಲೆ ಹಲ್ಲೆ ಯತ್ನ : ಬಿಜೆಪಿ ಖಂಡನೆ

ಯಾದಗಿರಿ: ಸುವರ್ಣ ಸೌಧದಲ್ಲಿ ಬಿಜೆಪಿ ಮುಖಂಡ ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಿಟಿ ರವಿ ಅವರ ಮೇಲೆ ಕಾಂಗ್ರೆಸ್ ಗೂಂಡಾಗಳು ಹಲ್ಲೆಗೆ ಯತ್ನ ನಡೆಸಿ ಕೊಲೆ ಬೆದರಿಕೆ ಹಾಕಿ ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದು, ಇದು ಹೇಡಿಗಳ ಕೆಲಸವೆಂದು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಅಮೀನರಡ್ಡಿ ಯಾಳಗಿ ತೀವ್ರವಾಗಿ ದೂರಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಲಕ್ಷ್ಮಿ ಹೆಬ್ಬಾಳ್ಕರ್ ಬೆಂಬಲಿಗರ ಗೂಂಡಾ ವರ್ತನೆ ಬಿಜೆಪಿ ಪಕ್ಷ ಸಹಿಸಲ್ಲ. ಅಂಥವರನ್ನ ಒದ್ದು ಒಳಗೆ ಹಾಕಿ ಕಾನೂನು ಪ್ರಕಾರ ಕ್ರಮ ಪ್ರಕರಣವನ್ನು ದಾಖಲಿಸಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ.ರಾಜ್ಯದಲ್ಲಿ ಕಾನೂನು ಸಂಪೂರ್ಣ ಹದಗೆಟ್ಟು ಹೋಗಿದೆ ಜನಪ್ರತಿನಿಧಿಗಳಿಗೆ ರಕ್ಷಣೆ ಇಲ್ಲದ ಮೇಲೆ ಸಾರ್ವಜನಿಕರಿಗೆ ಎಲ್ಲಿ ರಕ್ಷಣೆ ಈ ಸರಕಾರ ನೀಡುತ್ತದೆ ಎಂದು ಖಾರಂಗಿ ಪ್ರತಿಕ್ರಿಯಿಸಿದ್ದಾರೆ. ಇನ್ನೂ ಗುರವಾರ ರಾತ್ರಿ ಬಂಧಿಸಿ ಖಾನಾಪುರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ನ್ಯಾಯಾಧೀಶರ ಮುಂದೆ ಹಾಜರುಪಡಿಸುವುದನ್ನು ಬಿಟ್ಟು, ಬೆಂಗಳೂರಿಗೆ ಕರೆದುಕೊ0ಡು ಹೋಗುವುದಾಗಿ ಹೇಳಿದ ಪೊಲೀಸರು ಸಿಟಿ ರವಿಯವರನ್ನು , ಮೂರ್ನಾಲ್ಕು ಜಿಲ್ಲೆಗಳ ಠಾಣೆಗಳನ್ನು ರಾತ್ರಿ ಇಡಿ ಸುತ್ತಾಡಿಸಿ ಪೊಲೀಸರು ಮಾನಸಿಕ ಹಿಂಸೆ ನೀಡಿ ಹಲ್ಲೆ ಮಾಡಿದ್ದು ಅಕ್ಷಮ್ಯ ಅಪರಾಧ ಎನ್ನುವಂತೆ ಪೊಲೀಸರು ವರ್ತಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಬೆಂಗಳೂರಲ್ಲಿ ಅಮೇರಿಕಾ ಕಾನ್ಸುಲೇಟ್ ಕಚೇರಿ

ಕಲಬುರಗಿ: ಬೆಂಗಳೂರಿನಲ್ಲಿ ಅಮೇರಿಕಾ ಕಾನ್ಸುಲೇಟ್ ಕಚೇರಿ ಆರಂಭಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಹರ್ಷ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿರುವ ಅವರು, ಇದೇ ಜನವರಿಯಲ್ಲಿ ಬೆಂಗಳೂರಿನಲ್ಲಿ ಅಮೇರಿಕಾ ಕಾನ್ಸುಲೇಟ್ ತನ್ನ ಕಚೇರಿಯನ್ನು ತೆರೆಯುತ್ತಿದೆ. ಇದು ಕರ್ನಾಟಕದ ಪ್ರಗತಿಗೆ ಬಹುದೊಡ್ಡ ಕೊಡುಗೆ ನೀಡಲಿದ್ದು ರಾಜ್ಯದ ಆರ್ಥಿಕತೆಗೆ ಇನ್ನಷ್ಟು ಶಕ್ತಿ ತುಂಬಲಿದೆ. ಇದು ಭಾರತ ಮತ್ತು ಅಮೆರಿಕ ನಡುವಿನ ಸಂಬಂಧವನ್ನು ಬಲಪಡಿಸಲು ಸಹಾಯ ಮಾಡುತ್ತದೆ. ಜತೆಗೆ ರಾಜತಾಂತ್ರಿಕ, ತಾಂತ್ರಿಕ ಮತ್ತು ಆರ್ಥಿಕ ಸಹಯೋಗವನ್ನು ಉತ್ತೇಜಿಸುತ್ತದೆ ಎಂದು ಹೇಳಿದ್ದಾರೆ. ಮುಂದಿನ ತಿಂಗಳು ಬೆಂಗಳೂರಿನಲ್ಲಿ ಅಮೇರಿಕ ಕಾನ್ಸುಲೇಟ್ ಕಚೇರಿ ತೆರೆಯುವ ನಿರೀಕ್ಷೆಯಿದೆ ಎಂದು ಅಮೇರಿಕಾ ರಾಯಭಾರಿಗಳು ತಿಳಿಸಿದ್ದಾರೆ ಎಂದು ಪ್ರಿಯಾಂಕ್ ಪೋಸ್ಟ್ ಮಾಡಿದ್ದಾರೆ.

ಯೋಗ ತರಬೇತಿ ಹುದ್ದೆಗೆ ಅರ್ಜಿ

ಕಲಬುರಗಿ: ಜಿಲ್ಲಾ ಆಯುಷ್ ಕಛೇರಿ ಕಲಬುರಗಿ ಅಧೀನದಲ್ಲಿ ಬರುವ ಆಯುಷ್ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಲು ತಾತ್ಕಾಲಿಕವಾಗಿ ಅರೆಕಾಲಿಕ ಯೋಗ ತರಬೇತಿದಾರರ ಸೇವೆಯನ್ನು ಪಡೆಯಲು 11 ತಿಂಗಳ ಅವಧಿಗಾಗಿ ಡಿಸೆಂಬರ್ 31 ರ ಒಳಗಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಜಿಲ್ಲಾ ಆಯುಷ್ ಕಚೇರಿ ಅಧಿಕಾರಿಗಳು ತಿಳಿಸಿದ್ದಾರೆ.ಹುದ್ದೆಯ ಹೆಸರು, ಅರೆಕಾಲಿಕ ಯೋಗ ತರಬೇತುದಾರರ 01, ಅರೆ ಕಾಲಿಕಾ ಸೇವೆ ಸಲ್ಲಿಸುವ ಸ್ಥಳಗಳು : ಆಯುಷ್ಮಾನ್ ಆರೋಗ್ಯ ಮಂದಿರ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಕಲಬುರಗಿ ಜಿಲ್ಲೆಯ ರಾಜಾಪೂರ, (ಜಯನಗರ) ಅಫಜಲಪೂರ ತಾಲೂಕ ಬಳೂರ್ಗಿ ಗ್ರಾಮ, ಕಲಬುರಗಿ ಜಿಲ್ಲೆ ಸಣ್ಣೂರ, ಚಿಂಚೋಳಿ ತಾಲೂಕ ಸಲಗರಬಸಂತಪೂರ, ಆಳಂದ ತಾಲೂಕ ಮಾಡಿಯಾಳ, ಗ್ರಾಮಗಳಲ್ಲಿ ಆರೋಗ್ಯ ತರಬೇತಿ ಸೇವೆ ಕೇಂದ್ರಗಳು ಆರಂಭವಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆಯುಷ್ ಕಚೇರಿ ಹತ್ತಿರ ಕಂಪೌಂಡ್ ಗಾಜಿಪೂರ ಕಲಬುರಗಿ ದೂರವಾಣಿ ಸಂಖ್ಯೆ 08472-224314 ಕಛೇರಿ ಜಿಲ್ಲಾ ಆಯುಷ್ ಅಧಿಕಾರಿಗಳು, ಜಿಲ್ಲಾ ಆಯುಷ್ ಕಚೇರಿ ಕಲಬುರಗಿ ಜಿಲ್ಲಾ ಆಯುಷ್ ಕಚೇರಿ ಸಮಯದಲ್ಲಿ ಸಂಪರ್ಕಿಸಲು ಕೋರಿದ್ದಾರೆ.

ತಾಪಂ ಸಾಮಾನ್ಯ ಸಭೆ ಇಂದು

ಕಲಬುರಗಿ: ಜೇವರ್ಗಿ ತಾಲೂಕಾ ಪಂಚಾಯತ್ ಆಡಳಿತಾಧಿಕಾರಿಗಳ ಅವರ ಅಧ್ಯಕ್ಷತೆಯಲ್ಲಿಇದೇ ಡಿಸೆಂಬರ್ 21 ರಂದು ಬೆಳಿಗ್ಗೆ 11-30 ಗಂಟೆಗೆ ತಾಲೂಕಾ ಪಂಚಾಯತ್ ಕಾರ್ಯಾಲಯ ಮಿನಿ ವಿಧಾನ ಸೌಧ, ಜೇವರ್ಗಿಯಲ್ಲಿ ಸಾಮಾನ್ಯ ಸಭೆಯನ್ನು ಕರೆಯಲಾಗಿದೆ ಎಂದು ತಾಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ. ಜೇವರ್ಗಿ ತಾಲೂಕಿನ ಎಲ್ಲಾ ಅನುಷ್ಠಾನಾಧಿಕಾರಿಗಳು ತಮ್ಮ ಇಲಾಖೆಯ ಪ್ರಗತಿ ವರದಿಯೊಂದಿಗೆ (5 ಪ್ರತಿಗಳು) ಲೀಗಲ್ ಸೈಜಿನಲ್ಲಿ ಡಿಸೆಂಬರ್ ರೊಳಗಾಗಿ ಗಣಕೀಕೃತಗೊಳಿಸಿ ಕಾಯಾಲಯಕ್ಕೆ ಸಲ್ಲಿಸಲು ತಿಳಿಸಿದ್ದಾರೆ.

ನಾಳೆ ಬಿಜೆಪಿ ಒಬಿಸಿ ಮೋರ್ಚಾ ಪ್ರತಿಭಟನೆ

ಕಲಬುರಗಿ: ಹಿಂದುಳಿದ ವರ್ಗಗಳ ನಿಗಮಗಳಿಗೆ ಹಣ ನೀಡಿ ಎಂದು ಒತ್ತಾಯಿಸಿ ಹಾಗೂ ಒಣಗಿದ ತೊಗರಿ ಬೆಳೆಗೆ ಪರಿಹಾರ ನೀಡುವಂತೆ ಆಗ್ರಹಿಸಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ಜಿಲ್ಲಾ ಘಟಕದಿಂದ ನಗರಕ್ಕೆ ಮುಖ್ಯಮಂತ್ರಿ ಆಗಮಿಸುವ ದಿನವಾದ ಡಿ.22ರಂದು ಪ್ರತಿಭಟನೆ ನಡೆಸಲಾಗುವುದು ಎಂದು ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಅವಣ್ಣ ಮ್ಯಾಕೇರಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಇಲ್ಲಿವರೆಗೆ ಹಿಂದುಳಿದ ವರ್ಗಗಳ ಅಭಿವೃಗಾಗಿ ಸ್ಥಾಪಿಸಿರುವ ನಿಗಮಗಳಿಗೆ ಅನುದಾನ ನೀಡುತ್ತಿಲ್ಲ. ಕಳೆದ ಬಜೆಟ್ ನಲ್ಲಿ ಸಿಎಂ ಸಿದ್ದರಾಮಯ್ಯ 1500 ಕೋಟಿ ರು.ಗಳನ್ನು ಘೋಷಿಸಿದ್ದಾರೆ. ಇಲ್ಲಿವರೆಗೆ ಕೇವಲ 57.04 ಕೋಟಿ ರು. ಮಾತ್ರ ಬಿಡುಗಡೆ ಮಾಡಿದ್ದಾರೆ. ಈ ಮೂಲಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಂತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಸರಕಾರ ಇದ್ದಾಗ 1000 ಕೋಟಿ ರು. ಅನುದಾನ ಒದಗಿಸಲಾಗಿತ್ತು. ಆದರೆ, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಎಲ್ಲ ನಿಗಮಗಳು ಹಣವಿಲ್ಲದಂತಾಗಿದೆ ಎಂದು ಹೇಳಿದರು. ಜಿಲ್ಲೆಯಲ್ಲಿ ಈ ಬಾರಿ 1.82 ಲಕ್ಷ ಹೆಕ್ಟೇರ್ ತೊಗರಿ ಬೆಳೆ ಒಣಗಿ ಹಾಳಾಗಿದೆ. ರೈತರಿಗೆ ಎಕರೆಗೆ 25000 ರೂ. ಪರಿಹಾರ ನೀಡಬೇಕು. ಬೆಳಗಾವಿ ಅಧಿವೇಶನದಲ್ಲಿ ಯಾವುದೇ ರೀತಿಯ ಚರ್ಚೆ ನಡೆಸಿಲ್ಲ. ಈ ಭಾಗದ ರೈತರ ಬಗ್ಗೆ ಯಾರಿಗೂ ಕೂಡ ಕಾಳಜಿ ಇಲ್ಲ ಎಂದು ವಾಗ್ದಾಳಿ ನಡೆಸಿದರು.

{ಪ್ರದೀಪ್ ಈಶ್ವರ್} ಶಾಸಕ

‘ನಮ್ಮೂರಿಗೆ ನಮ್ಮ ಶಾಸಕ’ ಕಾರ್ಯಕ್ರಮದ ಬಗ್ಗೆ ಮಾಧ್ಯಮಗಳಲ್ಲಿ ಸುದ್ದಿ ನೋಡಿದ ಮುಖ್ಯಮಂತ್ರಿಗಳು ಈ ಬಗ್ಗೆ ನನ್ನ ಬಳಿ ಕೇಳಿದಾಗ ನನ್ನ ಕಾರ್ಯವೈಖರಿ ಬಗ್ಗೆ ತಿಳಿಸಿದ್ದೆ. ಇದನ್ನು ತಮ್ಮ ಟ್ವೀಟ್‌ನಲ್ಲಿ ಉಲ್ಲೇಖಿಸಿ ಮೆಚ್ಚುಗೆ ವ್ಯಕ್ತಪಡಿಸಿರುವುದು ನನ್ನ ಸೌಭಾಗ್ಯ. ಇದೊಂದು ವಿಶೇಷ ಕಾರ್ಯಕ್ರಮವಾಗಿದ್ದು ಮುಂದುವರೆಸು ಎಂದು ಬೆನ್ನುತಟ್ಟಿದ್ದಾರೆ.

ಕಾರ್ಪೊರೇಟ್ ಆಸ್ಪತ್ರೆಗೂ ಮೀರಿದ ಸೌಲಭ್ಯ

ಜಯದೇವ ಹೃದ್ರೋಗ ಆಸ್ಪತ್ರೆ ಮುಖ್ಯಮಂತ್ರಿಯಿಂದ ನಾಳೆ ಲೋಕಾರ್ಪಣೆ | ಎಐಸಿಸಿ ಅಧ್ಯಕ್ಷರು, ಡಿಸಿಎಂ, ಕಲ್ಯಾಣ ಕರ್ನಾಟಕದ ಜನಪ್ರತಿನಿದಿನಗಳು ಭಾಗಿ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ತೊಗರಿ ಕಣಜ, ಶರಣರ ನಾಡು ಎಂದೇ ಖ್ಯಾತಿಯಾಗಿರುವ ಕಲ್ಯಾಣ ಕರ್ನಾಟಕದ ಹೆಬ್ಬಾಗಿಲು ಕಲಬುರಗಿಯಲ್ಲಿ ನಿರ್ಮಾಣವಾಗಿರುವ 371 ಹಾಸಿಗೆಯುಳ್ಳ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಹಾಗೂ ಸಂಶೋಧನಾ ಸಂಸ್ಥೆಯ ಆಸ್ಪತ್ರೆ ಇದೆ ಡಿಸೆಂಬರ್ 22ರಂದು ಲೋಕಾರ್ಪಣೆಗೊಳ್ಳಲಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಶುಕ್ರವಾರ ಉದ್ಘಾಟನೆಗೆ ಸಿದ್ದಗೊಂಡಿರುವ ಇಲ್ಲಿನ ಜಯದೇವ ಆಸ್ಪತ್ರೆಯಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈ ಹಿಂದೆ 20132018ರ ಸಿದ್ದರಾಮಯ್ಯ ನೇತೃತ್ವದ ಸರಕಾರದ ಆಡಳಿತಾವಧಿಯಲ್ಲಿ ಜಯದೇವ ಸಂಸ್ಥೆಯ ಸ್ಥಾಪನೆಗೆ ಮುನ್ನುಡಿ ಬರೆಯಲಾಗಿತ್ತು. ಬೃಹತ್ ಆಸ್ಪತ್ರೆ ನಿರ್ಮಾಣ ಮಾಡಲು ಹಿಂದಿನ ಸರಕಾರ ನಿರ್ಲಕ್ಷ್ಯ ತೋರಿದ್ದರಿಂದ ಯೋಜನೆ ನನೆಗುದಿಗೆ ಬಿದ್ದಿತ್ತು. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ನಿರಂತರ ಪರಿಶೀಲನೆ ಹಾಗೂ ಯೋಜನೆಯನ್ನು ಅನುಷ್ಠಾನ ಮಾಡಲೇಬೇಕೆಂಬ ಸಂಕಲ್ಪ ತೊಟ್ಟಿದ್ದರಿಂದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನದ ನೇರವಿಂದ ಇಂದು ಜಯದೇವ ಹೃದ್ರೋಗ ಸಂಸ್ಥೆಯ ಭವ್ಯ ಕಟ್ಟಡ ತಲೆ ಎತ್ತಿ ನಿಂತಿದೆ. ಇದೀಗ, ಈ ಕನಸಿನ ಯೋಜನೆಗೆ ಮುಹೂರ್ತ ನಿಗದಿಯಾಗಿದೆ ಎಂದು ಸಂತಸ ಹಂಚಿಕೊಂಡರು.

ಬೃಹತ್ ಪ್ರದೇಶದಲ್ಲಿ ನಿರ್ಮಾಣವಾಗಿರುವ ಜಯದೇವ ಹೃದ್ರೋಗ ಸಂಸ್ಥೆಯ ಕಟ್ಟಡ ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಆರೋಗ್ಯ ಸೇವೆ ನೀಡಲು ಸಜ್ಜಾಗಿದೆ. ಇದರಿಂದ ಕಲ್ಯಾಣ ಕರ್ನಾಟ ಭಾಗದ ಕಲಬುರಗಿ, ಕೊಪ್ಪಳ, ಬೀದರ್, ಯಾದಗಿರಿ, ಬಳ್ಳಾರಿ, ರಾಯಚೂರು ಜಿಲ್ಲೆಯ ನಾಗರಿಕರಿಗೆ ಸಾಕಷ್ಟು ಅನುಕೂಲವಾಗಲಿದೆ. ಅತ್ಯಾಧುನಿಕ ಹಾಗೂ ಗುಣಮಟ್ಟದ ಸೌಲಭ್ಯಗಳನ್ನು ಒಳಗೊಂಡಿರುವ 371 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಜಯದೇವ ಹೃದ್ರೋಗ ಸಂಸ್ಥೆಯ ದಕ್ಷಿಣ ಏಷ್ಯಾದ ಅತ್ಯಂತ ಬೃಹತ್ ಹೃದ್ರೋಗ ಚಿಕಿತ್ಸಾಸಂಸ್ಥೆ ಎಂಬ ಕೀರ್ತಿಗೂ ಪಾತ್ರವಾಗಿದೆ ಎಂದರು.

ಡಿಸೆಂಬರ್ 22ರಂದು ಕಲಬುರಗಿ ನಗರದ ಡಾ. ಎಸ್.ಎಂ ಪಂಡಿತ್ ರಂಗ ಮಂದಿರ್ ಬಳಿ ಇರುವ ಜಯದೇವ ಆಸ್ಪತ್ರೆಯ ಆವರಣದಲ್ಲೇ ಕಾರ್ಯಕ್ರಮ ನಡೆಯಲಿದ್ದು, ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭಾ ವಿರೋಧ ಪಕ್ಷದ ನಾಯಕ ಡಾ. ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ ಶಿವಕುಮಾರ್, ಜಿಲ್ಲಾ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಸೇರಿ ಕಲ್ಯಾಣ ಕರ್ನಾಟಕ ಭಾಗದ ಎಲ್ಲಾ ಸಚಿವರು ಹಾಗೂ ಶಾಸಕರು ಭಾಗವಹಿಸಲಿದ್ದಾರೆ. ಕಾರ್ಯಕ್ರಮಕ್ಕೆ ಕಲಬುರಗಿ ಸೇರಿ ಕಲ್ಯಾಣ ಕರ್ನಾಟಕ ಭಾಗದ ಜನರು ಅತಿಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕಕು ಎಂದು ಮನವಿ ಮಾಡಿದರು.



ಜಯದೇವ ಸಂಸ್ಥೆ ಎಂದರೆ ಟ್ರೀಟ್‌ಮೆಂಟ್ ಫಸ್ಟ್-ಪೇಮೆಂಟ್ ನೆಕ್ಸ್ಟ್ ಎಂಬ ಮುಖ್ಯ ಧ್ಯೇಯ ಹೊಂದಿದೆ. ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಹಲವಾರು ಆರೋಗ್ಯಕರ ಯೋಜನೆಗಳು ಜಿಲ್ಲೆಗೆ ಲಭಿಸಿವೆ. ಈ ಯೋಜನೆಗಳು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಆರೋಗ್ಯ ಮೂಲಸೌಕರ್ಯವನ್ನು ಹೆಚ್ಚಿಸುವ ಸರ್ಕಾರದ ಬದ್ಧತೆಗೆ ಸಾಕ್ಷಿಯಾಗಿವೆ. ಈಗ ಕಲಬುರಗಿಯಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ಬೃಹತ್ ಕಟ್ಟಡ ಲೋಕಾರ್ಪಣೆ ಸಿದ್ದವಾಗಿದೆ. ಈ ಭಾಗದಲ್ಲಿ ಅಭಿವೃದ್ಧಿಯಕಲ್ಯಾಣವಾಗಲಿ ಎಂಬ ಜನರು ಕನಸು ನನಸಾಗುತ್ತಿದೆ.

– ಡಾ.ಶರಣಪ್ರಕಾಶ್ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವ

ಸಂವಿಧಾನದ ಕಲಂ 371 (ಜೆ) ಜಾರಿಗೆ ಬಂದ ನಂತರ ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಗಣನೀಯ ಅಭಿವೃದ್ಧಿಯಾಗಿದೆ. ಲಕ್ಷಾಂತರ ಜನ ನಿರುದ್ಯೋಗಿ ಯುವಕರಿಗೆ ಉದ್ಯೋಗ ಸಿಕ್ಕಿವೆ. ಕಲಬುರಗಿ ಮೆಡಿಕಲ್ ಹಬ್ ಆಗಿ ಅಭಿವೃದ್ಧಿ ಹೊಂದಿದೆ. 2016 ರಲ್ಲಿ ಜಯದೇವ ಆಸ್ಪತ್ರೆ ಸ್ಥಾಪನೆಯಾದ ನಂತರ ಇಲ್ಲಿಯವರೆಗೆ ಸುಮಾರು 15 ಲಕ್ಷ ಜನರು ಆಸ್ಪತ್ರೆಯ ವಿವಿಧ ವಿಭಾಗಗಳಲ್ಲಿ ಆರೋಗ್ಯ ಸೇವೆ ಪಡೆದುಕೊಂಡಿದ್ದಾರೆ. ಇದು ಹೆಮ್ಮೆಯ ವಿಷಯವಾಗಿದೆ.

– ಪ್ರಿಯಾಂಕ್ ಖರ್ಗೆ, ಜಿಲ್ಲಾ ಉಸ್ತುವಾರಿ ಸಚಿವ

3 ತಿಂಗಳಲ್ಲಿ ಸೂಪರ್ ಸ್ಪೆಷಾಲಿಟ್ಟಿ ಆಸ್ಪತ್ರೆ ಲಭ್ಯ:

ಜಯದೇವ ಆಸ್ಪತ್ರೆ ಉದ್ಘಾಟನೆ ನಂತರ ಮುಂದಿನ ಮೂರು ತಿಂಗಳಲ್ಲಿ ಜಿಮ್ಸ್ ಆಸ್ಪತ್ರೆಯಲ್ಲಿ ನಿರ್ಮಾಣವಾಗುತ್ತಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟಿಸಿ ಸಾರ್ವಜನಿಕರ ಸೇವೆಗೆ ಲಭ್ಯಗೊಳಿಸುವುದು ತಮ್ಮ ಮುಂದಿನ ಗುರಿ ಎಂದ ಅವರು, ಹಳೇ ಜಿಲ್ಲಾ ಆಸ್ಪತ್ರೆ ಕಡೆವಿ ಅಲ್ಲಿ 100 ಹಾಸಿಗೆಯ ತಾಯಿ-ಮಕ್ಕಳ ಆಸ್ಪತ್ರೆ ನಿರ್ಮಸಲಾಗುವುದು. ಜಿಮ್ಸ್ ಆವರಣದಲ್ಲಿಯೇ 50 ಹಾಸಿಗೆಯ ಕ್ರಿಟಿಕಲ್ ಕೇರ್ ಯೂನಿಟ್, ಸುಟ್ಟು ಗಾಯಗಳ ಘಟಕ ಸ್ಥಾಪಿಸಲಾಗುತ್ತಿದೆ. ಇದಲ್ಲದೆ ಗುಲಬರ್ಗಾ ವಿ.ವಿ.ಯಲ್ಲಿ 10 ಎಕರೆ ಜಮೀನಿನಲ್ಲಿ ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯನ್ನು ನಿರ್ಮಿಸಲಾಗುವುದು ಎಂದು ಡಾ.ಶರಣಪ್ರಕಾಶ ಪಾಟೀಲ ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶಾಸಕ ಎಂ.ವೈ.ಪಾಟೀಲ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜರ್ ಆಲಂ ಖಾನ್, ಡಿ.ಸಿ. ಬಿ.ಫೌಜಿಯಾ ತರನ್ನುಮ್, ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ, ಎಸ್.ಪಿ.ಅಡ್ಡೂರು ಶ್ರೀನಿವಾಸಲು, ಜಿಲ್ಲಾ ಪಂಚಾಯತ ಸಿ.ಇ.ಓ ಭಂವರ್ ಸಿಂಗ್ ಮೀನಾ, ಡಿ.ಸಿ.ಎಫ್ ಸುಮಿತ್ ಪಾಟೀಲ, ಸಹಾಯಕ ಆಯುಕ್ತೆ ಸಾಹಿತ್ಯ, ಮಹಾನಗರ ಪಾಲಿಕೆ ಪ್ರಭಾರಿ ಆಯುಕ್ತ ಅವಿನಾಶ ಶಿಂಧೆ, ಕೆ.ಕೆ.ಆರ್.ಟಿ.ಸಿ ಎಂ.ಡಿ. ಎಂ.ರಾಚಪ್ಪ, ಕಲಬುರಗಿಯ ಜಯದೇವ ಶಾಖಾ ಆಸ್ಪತ್ರೆಯ ಪ್ರಭಾರಿ ಅಧೀಕ್ಷಕ ಡಾ.ವಿರೇಶ ಪಾಟೀಲ, ಸಮನ್ವಯಾಧಿಕಾರಿ ಸಂತೋಷ್ ಇದ್ದರು.

ಜಯದೇವ ನೂತನ ಶಾಖೆ ವಿಶೇಷತೆಗಳು

- 262.20 ಕೋಟಿ ರು.ವೆಚ್ಚದಲ್ಲಿ ನಿರ್ಮಾಣವಾಗಿರುವ 371 ಹಾಸಿಗೆಸಾಮರ್ಥ್ಯದ ಕಟ್ಟಡ
- 3 ಕ್ಯಾಥ್‌ಲ್ಯಾಬ್‌ಗಳು
- 3 ಆಪರೇಷನ್ ಥಿಯೇಟರ್‌ಗಳು
- 1 ಹೈಬ್ರಿಡ್ OT
- 105 ICCU ಹಾಸಿಗೆಗಳು
- 120 ಸಾಮಾನ್ಯ ವಾರ್ಡ್ ಬೆಡ್
- ಅರೆ-ವಿಶೇಷ, ವಿಶೇಷ ಮತ್ತು ಡೀಲಕ್ಸ್ ವಾರ್ಡ್ ಹಾಸಿಗೆಗಳು, 12 ರಿಕವರಿ ಮತ್ತು 12 ಪೋಸ್ಟ್ ಆಪರೇಟಿವ್ ಹಾಸಿಗೆಗಳು
- ಕಾರ್ಡಿಯಾಲಜಿ, ಕಾರ್ಡಿಯೋಥೊರಾಸಿಕ್ ಸರ್ಜರಿ, ವ್ಯಾಸ್ಕುಲಾರ್‌ಶಸ್ತ್ರಚಿಕಿತ್ಸೆ, ಪೀಡಿಯಾಟ್ರಿಕ್ ಕಾರ್ಡಿಯಾಲಜಿ, ರೇಡಿಯಾಲಜಿ, 128 ಸ್ಲೈಸ್ ಅಖಿ ಸ್ಕ್ಯಾನ್, 1.5ಖಿ ಒಖಐ, ಅಲ್ಟ್ರಾಸೋನೋಗ್ರಫಿ, ಹೈಟೆಕ್ಪ್ಯಾಥಾಲಜಿ ಮತ್ತು ರಕ್ತ ಬ್ಯಾಂಕ್ ಸೇವೆ

ಕಟ್ಟಡ ನಿರ್ಮಾಣಕ್ಕೆ ತಗುಲಿದ ವೆಚ್ಚ

ಹೊಸ ಆಸ್ಪತ್ರೆಯ ಒಟ್ಟು ಯೋಜನಾ ವೆಚ್ಚ 377.17 ಕೋಟಿ ರು ಆಗಿದ್ದು, ಅದರಲ್ಲಿ 262.20 ಕೋಟಿ ರು. ಕಟ್ಟಡ ನಿರ್ಮಾಣಕ್ಕೆ ತಗುಲಿದೆ. 56 ಕೋಟಿ ಆಧುನಿಕ ಉಪಕರಣಗಳ ಖರೀದಿಗೆ ತಗುಲಿದೆ. 9 ಕೋಟಿ ರು. ಆಸನ ವ್ಯವಸ್ಥೆಗೆ ತಗುಲಿದೆ. ಇದರಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ 262 ಹಾಗೂ ಹೆಚ್ಚುವರಿಯಾಗಿ 40 ಕೋಟಿ ರು. ಸೇರಿ ಒಟ್ಟು 302 ಕೋಟಿ ರು.ಗಳ ಅನುದಾನ ನೀಡಿದೆ. ಇನ್ನುಳಿದ 75 ಹಣ ಸಂಸ್ಥೆ ವತಿಯಿಂದ ನೀಡಲಾಗಿದೆ ಎಂದು ಡಾ. ಶರಣಪ್ರಕಾಶ್ ಪಾಟೀಲ್ ಮಾಹಿತಿ ನೀಡಿದರು.

ಜಯದೇವ ಆಸ್ಪತ್ರೆಯಿಂದ 5.75 ಲಕ್ಷ ಒಪಿಡಿ. ಸೇವೆ

ಹಿಂದೆ 2016ರಲ್ಲಿ ನಮ್ಮ ಸರ್ಕಾರದ ಅವಧಿಯಲ್ಲಿಯೇ ಇಲ್ಲಿನ ಜಿಮ್ಸ್ ಆಸ್ಪತ್ರೆಯಲ್ಲಿ ಜಯದೇವ ಆಸ್ಪತ್ರೆ ತಾತ್ಕಲಿಕ ಆರಂಭಿಸಲಾಗಿತ್ತು. ಕಳೆದ 8 ವರ್ಷಗಳ ಅವಧಿಯಲ್ಲಿ ಈ ಆಸ್ಪತ್ರೆಯಿಂದ 5.75 ಲಕ್ಷ ಜನ ಮತ್ತು 18,550 ಮಕ್ಕಳು ಒಪಿಡಿ ಸೇವೆ ಪಡೆದಿದ್ದಾರೆ. 47,500 ಜನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದು, 39,462 ಜನ ಕ್ಯಾತ್‌ಲ್ಯಾಬ್ ಸೇವೆಗೆ ಒಳಗಾಗಿದ್ದಾರೆ. 25,000 ಜನ ಎನ್ಜಿಯೋಗ್ರಾಮ್ ಮಾಡಿಸಿದ್ದು, 13,000 ಎನ್ಜಿಯೋಪ್ಲಾಸ್ಟಿಸ್, 300 ಜನ ಪೇಸ್ ಮೇಕರ್ ಹಾಕಿಕೊಂಡಿದ್ದು, 1,300 ಜನ ಓಪನ್ ಹಾರ್ಟ್ ಸರ್ಜರಿಗೆ ಒಳಗಾಗಿದ್ದಾರೆ. 3.92 ಲಕ್ಷ ಜನ ಇಸಿಜಿ, 2.14 ಲಕ್ಷ ಜನ ಎಕೊಓ ಟೆಸ್ಟ್ ಮಾಡಿಸಿದ್ದು, 53,399 ಜನ ಎಕ್ಸ್ರೇ ಮಾಡಿಸಿಕೊಂಡಿದ್ದಾರೆ ಎಂದ ಅವರು, ಆಸ್ಪತ್ರೆ ಸ್ಥಾಪನೆಯಿಂದ ಇಲ್ಲಿನ ಜನರು ದೂರದ ಬೆಂಗಳೂರು, ಸೋಲಾಪೂರ ಹೋಗುವುದು ತಪ್ಪಿದೆ ಎಂದರು.

ಶಾ ವಿರುದ್ಧ ಜೇವರ್ಗಿ ಬಂದ್ ಪ್ರತಿಭಟನೆ

ಜೇವರ್ಗಿ: ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಯನ್ನು ಖಂಡಿಸಿ, ಜಿಲ್ಲೆಯ ವಿವಿಧ ದಲಿತ ಪರ ಸಂಘಟನೆಗಳು ಜೇವರ್ಗಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಿ, ಬಂದ್ ಆಚರಿಸಿದರು.

ಶುಕ್ರವಾರ ಬೆಳಗ್ಗೆಯಿಂದಲೇ ರಸ್ತೆಗಳು ಬಂದ್ ಮಾಡಿ, ಪಟ್ಟಣದಲ್ಲಿನ ಅಂಗಡಿ ಮುಂಗಟ್ಟುಗಳು ಬಂದ್ ಮಾಡಿದರು. ರಿಲಯನ್ಸ್ ಪೆಟ್ರೋಲ್ ಬಂಕ್ ನಿಂದ ಬಸವೇಶ್ವರ ವೃತ್ತದ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ಕೇಂದ್ರ ಸರಕಾರದ ವಿರುದ್ಧ ಘೋಷಣೆ ಕೂಗಿ ಟೈಯರ್ ಗೆ ಬೆಂಕಿ ಹಚ್ಚಿ ಸುಮಾರು 5 ಗಂಟೆಗಳ ಕಾಲ ಜೇವರ್ಗಿ ಬಂದ್ ಮಾಡಿ, ಅಮಿತ್ ಶಾ ರಾಜೀನಾಮೆಗೆ ಅಗ್ರಹಿಸಿದರು.

ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಬರೆದ ಸಂವಿಧಾನದ ಮೇಲೆ ಪ್ರಮಾಣ ಮಾಡಿ ಜನಪ್ರತಿನಿಧಿಯಾಗಿರುವ ಗೃಹ ಸಚಿವ ಅಮಿತ್ ಶಾ ಅವರು ಅಂಬೇಡ್ಕರ್ ಅವರ ಬಗ್ಗೆ ವ್ಯಂಗ್ಯವಾಡಿರುವುದು ಅಕ್ಷಮ್ಯ ಅಪರಾಧ ಎಂದು ಪ್ರತಿಭಟನಾಕಾರರು ಸಚಿವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಚಂದ್ರಶೇಖರ್ ಹರನಾಳ, ಶಾಂತಪ್ಪ ಕೊಡಲಗಿ, ಸುರೇಶ್ ಚೆಂಗನರ್, ರವಿಚಂದ್ರ ಗುತ್ತೇದಾರ್, ಚಂದ್ರಶೇಖರ್ ನೇರಡಗಿ, ನಿಜಲಿಂಗ್ ದೊಡಮನಿ, ಬಸಣ್ಣ ಸರ್ಕಾರ್, ಸಿದ್ದರಾಮಕಟ್ಟಿ, ಕಾಸಿಮ್ ಪಟೇಲ್ ಮುದವಾಳ, ಶ್ರೀಹರಿ ಕರ್ಕಳ್ಳಿ, ಪುಂಡಲಿಕ್ ಗಾಯಕ್ವಾಡ್, ಶ್ರೀಮಂತ ಧನಕರ್, ರಾಜಶೇಖರ್ ಮುತ್ತೂಕೋಡ್, ವಿ.ಟಿ ನಾಗರಾಜ್, ದೌಲಪ್ಪ ಮದನ್, ಅಮಿನಪ್ಪ ಹೊಸ್ಮನಿ, ಮಲ್ಲಿಕಾರ್ಜುನ ದಿನ್ನಿ, ಭೀಮರಾಯ ನಗ್ನೂರ್, ಸುಭಾಷ್ ಚನ್ನೂರ್, ಮಲ್ಲಣ್ಣ ಕೊಡ್ಚಿ,ಸೇರಿ ತಾಲೂಕಿನ ವಿವಿಧ ಸಂಘಟನೆ ಮುಖಂಡರು ಉಪಸ್ಥಿತರಿದ್ದರು.

ಅಮಿತ್ ಶಾ ಕ್ಷಮೆಯಾಚನೆಗೆ ಗುವಿವಿ ಎಸ್‌ಸಿ,ಎಸ್‌ಟಿ ನೌಕರರ ಸಂಘ ಒತ್ತಾಯ

ಗುವಿವಿ ಎಸ್‌ಸಿ/ಎಸ್‌ಟಿ ನೌಕರರ ಸಂಘ ಒತ್ತಾಯ ಕಾರ್ಯಸೌಧದ ಮುಂದೆ ಪ್ರತಿಭಟನೆ ನಡೆಸಿದರು.

ಕಲಬುರಗಿ: ಕೇಂದ್ರ ಸಚಿವ ಅಮಿತ್ ಶಾ ಅವರು ಸಂಸತ್ತಿನಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಕುರಿತು ''ಇಂದು ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್ ಎನ್ನುವುದು ವ್ಯಸನವಾಗಿದೆ'' ಎಂಬ ಅಪ್ರಬುದ್ಧ ಹಾಗೂ ನಿಂದನ ಪೂರ್ವಕ ಅವಹೇಳನಕಾರಿ ಹೇಳಿಕೆಯನ್ನು ಗುಲಬರ್ಗಾ ವಿಶ್ವವಿದ್ಯಾಲಯದ ಎಸ್‌ಸಿ/ಎಸ್‌ಟಿ ನೌಕರರ ಸಂಘದ ಪದಾಧಿಕಾರಿಗಳು ತೀವ್ರವಾಗಿ ಖಂಡಿಸಿ ಗುಲಬರ್ಗಾ ವಿಶ್ವವಿದ್ಯಾಲಯದ ಕಾರ್ಯಸೌಧದ ಮುಂದೆ ಪ್ರತಿಭಟನೆ ನಡೆಸಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ಕಾರ್ಯಸೌಧದ ಎದುರು ಕೇಂದ್ರ ಗೃಹ ಮಂತ್ರಿ ಹೇಳಿಕೆ ವಿರುದ್ಧ ಘೋಷಣೆ ಕೂಗುವ ಮೂಲಕ ಗೃಹ ಮಂತ್ರಿಯಯವರು ದೇಶದ ಜನರ ಮುಂದೆ ಕ್ಷಮೆಯಾಚಿಸಿ ತಮ್ಮ ಹೇಳಿಕೆಯನ್ನು ಹಿಂಪಡೆಯಬೇಕೆಂದು ಗುಲಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಅತಿಥಿ ಉಪನ್ಯಾಸಕರ ಸಂಘ, ಸಂಶೋಧನಾ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿ ಸಂಘಗಳ ಜೊತೆಗೆ ವಿದ್ಯಾರ್ಥಿಗಳು ಸಲ್ಲಿಸಿ ಕೇಂದ್ರ ಮಂತ್ರಿ ಅಮಿತ್ ಶಾ ಅವರು ಕ್ಷಮೆಯಾಚಿಸುವಂತೆ ಒತ್ತಾಯಿಸಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರ ಹಿಡಿದು ಗ್ರಂಥಾಲಯದಿಂದ ವಿಶ್ವವಿದ್ಯಾಲಯದ ಕಾರ್ಯಸೌಧದವರೆಗೆ ಮೆರವಣಿಗೆ ನಡೆಸಿ ಕುಲಪತಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಹಾಗೂ ಸಾಹಿತಿ ಪ್ರೊ. ಎಚ್. ಟಿ. ಪೋತೆ ಮಾತನಾಡಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಪ್ರೊ. ಜಿ.ಎಂ. ವಿದ್ಯಾಸಾಗರ್, ಸಮಾಜ ವಿಜ್ಞಾನ ನಿಕಾಯದ ಡೀನ್ ಪ್ರೊ. ಶ್ರೀರಾಮುಲು, ಪ್ರೊ. ದಶರಥ ನಾಯಕ, ಪ್ರೊ. ಎಸ್.ಎನ್. ಗಾಯಕವಾಡ, ಪ್ರೊ. ಆನಂದ ನಾಯಕ್, ಪ್ರೊ. ಆನಂದ ಸಾವದಾನೆ, ಎಸ್‌ಸಿ/ಎಸ್‌ಟಿ ನೌಕರರ ಸಂಘದ ಕಾರ್ಯದರ್ಶಿ ಬಸವರಾಜ ಕಪೂರ, ಬೋಧಕೇತರ ಸಿಬ್ಬಂದಿ ಪ್ರಕಾಶ್ ಹದನೂರು, ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಅತಿಥಿ ಉಪನ್ಯಾಸಕರ ಸಂಘ, ಸಂಶೋಧನಾ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ಸಂಘಗಳು ಬೃಹತ್ ಪ್ರತಿಭಟನೆ ನಡೆಸಿದರು.

ಕೇಂದ್ರ ಗೃಹ ಮಂತ್ರಿಗಳು ತಮ್ಮ ಈ ಅಸಂವಿಧಾನಿಕ ಹೇಳಿಕೆಯನ್ನು ಹಿಂಪಡೆದು ದೇಶದ ಜನರ ಮುಂದೆ ಬೇಸರತ್ತಾಗಿ ಬಹಿರಂಗವಾಗಿ ಕ್ಷಮೆಯಾಚಿಸಬೇಕು. ದೇಶದ ಪ್ರಜ್ಞಾವಂತರಾದ ನಮಗೆ ತುಂಬಲಾರದ ನೋವಾಗಿದೆ. ಭವ್ಯ ಭಾರತದ ನೊಂದಿರುವ ವಿವಿಧ ಸಮುದಾಯಗಳನ್ನು ಅವಮಾನಿಸಿದ್ದಾರೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನವನ್ನು ಸ್ಮರಿಸಿ ಅಧಿಕಾರ ಅನುಭವಿಸುತ್ತಿರುವ ಪ್ರಜ್ಞಾವಂತ ಸಚಿವರೊಬ್ಬರು ಈ ರೀತಿಯ ಹೇಳಿಕೆ ನೀಡಿರುವುದು ದುರಾದೃಷ್ಟಕರ ಎಂದು ಖಂಡಿಸಿದರು.

-ಪ್ರೊ. ಚಂದ್ರಕಾಂತ ಯಾತನೂರು, ಪ್ರಾಧ್ಯಾಪಕ

ಮಾದನ ಹಿಪ್ಪರಗಾದಿಂದ ಡಿ. 26ರಂದು ಪಾದಯಾತ್ರೆ, ಡಿ.27 ರಂದು ಪ್ರತಿಭಟನೆ

ಶಾಸಕ ಪಾಟೀಲ್ ದ್ವೇಷ ರಾಜಕಾರಣದ ನೀತಿ ಖಂಡನೆ

ಆಳಂದ: ಜನ ವಿರೋಧಿ ಶಾಸಕ ಬಿ.ಆರ್.ಪಾಟೀಲ್ ಮಾಡುತ್ತಿರುವ ಭ್ರಷ್ಟಾಚಾರ ದ್ವೇಷ ರಾಜಕಾರಣ ಅಧಿಕಾರ ದುರುಪಯೋಗ ಹಾಗೂ ಕಾಂಗ್ರೆಸ ಸರಕಾರದ ಜನ ಆಕ್ರೋಶ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಜಿ.ಪಂ ಮಾಜಿ ಸದಸ್ಯ ಹರ್ಷಾನಂದ ಗುತ್ತೇದಾರ ಅವರು ತಿಳಿಸಿದರು.

ಶುಕ್ರವಾರ ಪಟ್ಟಣದ ಬಿಜೆಪಿ ಸಂಪರ್ಕ ಕಾರ್ಯಾಲಯದಲ್ಲಿ ಸುದ್ದಿ ಗೋಷ್ಠಿ ಮಾತನಾಡಿದ ಅವರು, ತಾಲೂಕಿನಲ್ಲಿ ಸಾಮಾನ್ಯ ಜನರ ಸಮಸ್ಯೆಗಳು ಹೆಚ್ಚಾಗುತ್ತಿವೆ, ಶಾಸಕ ಪಾಟೀಲರು ಅಧಿಕಾರಕ್ಕೆ ಬಂದ ದಿನದಿಂದ ಕ್ಷೇತ್ರದಲ್ಲಿ ಬಡವರ ಪಡಿತರ ಚೀಟಿ ರದ್ದು ಮಾಡಿಸಿದ್ದಾರೆ, ನಗರ ಸೇರಿ ಗ್ರಾಮೀಣ ಭಾಗದ ಮಠ, ಮಂದಿರಗಳ ಆಸ್ತಿಗಳನ್ನು ವಕ್ಫ ಎಂದು ನಮೂದಿಸಿ ರೈತರಿಗೆ ಹಾಗೂ ಜನ ಸಾಮಾನ್ಯರಿಗೆ ತೊಂದರೆ ನೀಡುತ್ತಿದ್ದಾರೆ. ನೆಟೆ ರೋಗದಿಂದ ತೋಗರಿ ಬೆಳೆ ಒಣಗಿ ನಿಂತು ಹಾಳಾಗಿದ್ದು, ರೈತರು ಸಂಕಷ್ಟದಲ್ಲಿ ಇದ್ದಾರೆ, ಸರಿಯಾದ ಸಮಸ್ಯೆಯದಲ್ಲಿ ಟಿಸಿ ಸೇರಿ ವಿದ್ಯುತ್ ಸರಬರಾಜು ಮಾಡುತ್ತಿಲ್ಲಾ, ಗೋಧಿ, ಜೋಳ ತೋಗರಿ ಬೆಳೆಗಳು ನೆಲಕಚ್ಚಿವೆ, ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ಬಸ್ಸು ಓಡುತ್ತಿಲ್ಲಾ, ರಸ್ತೆಗಳು ಗುಂಡಿಬಿದ್ದಿವೆ, ರಿಪೇರಿಗಳು ಆಗುತ್ತಿಲ್ಲಾ, ಭ್ರಷ್ಟಾಚಾರ ತೇಲಾಡುತ್ತಿದೆ, ಇವುಗಳನ್ನು ಖಂಡಿಸಿ ಡಿ.26 ರಂದು ಮಾದನ ಹಿಪ್ಪರಗಾದಿಂದ ಆಳಂದ ವರೆಗೆ ಬಿಜೆಪಿ ಮಂಡಲ ವತಿಯಿಂದ ಬೃಹತ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ.

ಸ್ಪಿಂಕ್ಲರ್ ಪೈಪಗಳು, ರೇಷ್ಮೆ ಇಲಾಖೆ ಯೋಜನೆಗಳು ಅಲ್ಲದೇ ಭೂಸನೂರ ಸಕ್ಕರೆ ಕಾರ್ಖಾನೆಯ ಸಿಎಸ್‌ಆರ್‌ಫಂಡನಲ್ಲಿ ಅವ್ಯವಹಾರವಾಗಿದ್ದು, ಕಳಪೆ ಕಾಮಗಾರಿ ಬಿಲ್ಲು ಎತ್ತು ಹಾಕಲಾಗಿದೆ. ಅಲ್ಲದೇ ಕೆಎಂಎಫ್‌ನಲ್ಲಿ ನಡೆದ ನೇಮಕಾತಿ ಹಗರಣ ಲೋಕಾಯುಕ್ತಕ್ಕೆ ದೂರು ನೀಡಲಾಗಿದೆ. ಗ್ರಾಮ ಪಂಚಾಯತನಲ್ಲಿ ಇವರ ಹಸ್ತಕ್ಷೇಪ ನಿಲ್ಲಬೇಕು, ಅಂಗನವಾಡಿ ಕೇಂದ್ರಗಳಲ್ಲಿ ಸರಿಯಾದ ರೀತಿಯಲ್ಲಿ ಆಹಾರ ಧಾನ್ಯ ವಿತರಣೆ ಮಾಡಬೇಕು, ಪಡಿತರ ಚೀಟಿ ಆಹಾರ ಧ್ಯಾನಗಳು ಬಡ ಜನರಿಗೆ ವಿತರಿಸಬೇಕು, ಶಾಸಕರ ಕೈಗೊಂಬೆಯಂತೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳನ್ನು ಕೂಡಲೇ ಅಮಾನತು ಮಾಡಬೇಕು ಎಂದು ಆಗ್ರಹಿಸಿ ಡಿ.27 ರಂದು ಆಳಂದ ಬಸ್ ನಿಲ್ದಾಣ ಎದುರುಗಡೆ ಬೃಹತ ಪ್ರತಿಭಟನೆ ನಡೆಸಲಾಗುತ್ತಿದೆ, ಸು. 10 ಸಾವಿರಕ್ಕೂ ಹೆಚ್ಚು ರೈತರು, ಜನರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಿದ್ದಾರೆ ಅವರು ಹೇಳಿದ್ದಾರೆ.

ಸುದ್ದಿ ಗೋಷ್ಠಿಯಲ್ಲಿ ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ ಕಂದಗೂಳೆ ಮತ್ತು ಬಾಬಾಸಾಬ ಪಾಟೀಲ,ಸುನೀಲ ಹಿರೋಳ್ಳಿಕರ, ಪ್ರಕಾಶ ಮಾನೆ ಉಪಸ್ಥಿತರಿದ್ದರು.

ಸಂಗೀತೋತ್ಸವ ಕಾರ್ಯಕ್ರಮ ನಾಳೆ

ಕಲಬುರಗಿ: ನಗರದ ಕನ್ನಡ ಸಾಹಿತ್ಯ ಪರಿಷತ್ತು ಆವರಣದ ಸುವರ್ಣ ಸಭಾ ಭವನದಲ್ಲಿ ರವಿವಾರ ಡಿ.22 ರಂದು ಬೆಳಗ್ಗೆ 11-00 ಗಂಟೆಗೆ ಗಡಿನಾಡ ಸಂಗೀತ ಸೇವಾ ಸಂಸ್ಥೆ (ರಿ) ಕಲಬುರಗಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ನಡೆಯುವ ಕಲಬುರಗಿ ಸಂಗೀತೋತ್ಸವ ಸಾಂಸ್ಕೃತಿಕ ಕಾರ್ಯಕ್ರಮದ ದಿವ್ಯಸಾನಿಧ್ಯ ತೆಂಗಳಿ-ಮಂಗಲಗಿ ಸಂಸ್ಥಾನ ಹಿರೇಮಠದ ಶ್ರೀ ಷ.ಬ್ರ. ಡಾ.ಶಾಂತಸೋಮನಾಥ ಶಿವಾಚಾರ್ಯರು ವಹಿಸಲಿದ್ದಾರೆ. ಕಲಬುರಗಿ ದಕ್ಷಿಣ ಮತಕ್ಷೇತ್ರದ ಶಾಸಕರಾದ ಅಲ್ಲಮಪ್ರಭು ಪಾಟೀಲ ಅವರು ಉದ್ಘಾಟಿಸಲಿದ್ದಾರೆ. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ದತ್ತಪ್ಪ ಸಾಗನೂರ. ಹಿರಿಯ ಮುಖಂಡರಾದ ಅಣ್ಣಾರಾವ ಧುತ್ತರಗಾಂವ, ರಾಜುಗೌಡ ಪಾಟೀಲ ಜವಳಿ (ಡಿ), ಶರಣಬಸವೇಶ್ವರ ದೇವಸ್ಥಾನ ಆವರಣದ ಶಾಲಾ ಕಾಲೇಜುಗಳ ನಿರ್ದೇಶಕರಾದ ಡಾ. ನೀಲಾಂಬಿಕಾ ಪೋಲಿಸ ಪಾಟೀಲ, ಕಲಬುರಗಿ ಜಿಲ್ಲಾ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ವೀರಣ್ಣ ಹೊನಶೆಟ್ಟಿ ಧುತ್ತರಗಾಂವ, ಶಂಭುಲಿಂಗಯ್ಯ ಸ್ವಾಮಿ ತಾವರಗೇರಾ ಭಾಗವಹಿಸಲಿದ್ದಾರೆ.

ಸಂಘಟನೆಗಳಿಂದ 24ಕ್ಕೆ ಕಲಬುರಗಿ ಬಂದ್‌ಗೆ ಕರೆ

ಕಲಬುರಗಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜ್ಯಸಭೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಕುರಿತು ನೀಡಿರುವ ಅಗೌರವ ಹೇಳಿಕೆ ಖಂಡಿಸಿ ಸಂವಿಧಾನ ರಕ್ಷಣಾ ಹೋರಾಟ ಸಮಿತಿಯಿಂದ ಡಿ.24ರಂದು ಕಲಬುರಗಿ ಜಿಲ್ಲೆ ಸಂಪೂರ್ಣ ಬಂದ್‌ಗೆ ನಿರ್ಧಾರ ಮಾಡಲಾಗಿದೆ ಎಂದು ಸಮಿತಿ ಮುಖಂಡರು ಹೇಳಿದರು.

ನಗರದ ಪತ್ರಿಕಾಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಸಮಿತಿ ಮುಖಂಡರಾದ ವಿಠಲ ದೊಡ್ಡಮನಿ ಮಾತನಾಡಿ, ಜಿಲ್ಲೆಯ ಎಲ್ಲ ಎಲ್ಲ ಸಂಘಟನೆಗಳ ಮುಖಂಡರು, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ನೀಡುವ ಮೂಲಕ ಸಮಾಜಕ್ಕೆ ಅತ್ಯುತ್ತಮ ಕೊಡಿಗೆ ನೀಡಿದ್ದಾರೆ. ಇದೀಗ ಅಂಬೇಡ್ಕರ್ ವಿರುದ್ಧ ಅಗೌರವದ ಮಾತನಾಡಿದ ಅಮಿತ ಶಾಗೆ ಅಂಬೇಡ್ಕರ್ ಅವರ ಅಭಿಮಾನಿಗಳಿಂದ ಸಂದೇಶ ಹೋಗಬೇಕಾಗಿದೆ. ಈ ಕುರಿತು ಹಿಂದುಳಿದ ಹಾಗೂ ಇತರೆ ಸಮುದಾಯಗಳ ಮುಖಂಡರು ಸಭೆ ನಡೆಸಲಾಗಿದೆ. ಅಲ್ಲಿನ ನಿರ್ಧಾರದಂತೆ ಡಿ.24ರಂದು ಕಲಬುರಗಿ ಬಂದ್ ನಿರ್ಧಾರ ಮಾಡಲಾಗುವುದು. ಅಂದು ನಗರೇಶ್ವರ ಶಾಲೆಯಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು ಎಂದು ಹೇಳಿದರು.

ಮುಖಂಡ ಸುಭಾಷ ರಾಠೋಡ ಮಾತನಾಡಿ, ಇಂದು ನಮ್ಮ ದೇಶ ಸಂವಿಧಾನದಿಂದ ನಡೆಯುತ್ತಿದೆ. ಅಂತಹ ಸಂವಿಧಾನ ನೀಡುವ ಮೂಲಕ ಅಂಬೇಡ್ಕರ್ ಸಮಾನತೆಯ ಮೂರ್ತಿಯಾಗಿದ್ದಾರೆ. ಕೇವಲ ದೇವರ ನಾಮ ಹೇಳಿದರೆ ಸ್ವರ್ಗಕ್ಕೆ ಹೋಗುತ್ತೀರಿ ಎಂದು ಹೇಳುವ ಮೂಲಕ ಅಂಬೇಡ್ಕರ್ ಅವರಿಗೆ ಅಗೌರವ ತೋರಲಾಗಿದೆ. ಇದು ಮನುಸ್ಮೃತಿಯ ಹಾಗೂ ಆರ್‌ಎಸ್‌ಎಸ್ ಅಜೆಂಡಾದ ಭಾಗವಾಗಿದೆ. ಆದ್ದರಿಂದ ಈ ನೆಲದಿಂದ ಬೃಹತ್ ಹೋರಾಟದ ಮೂಲಕ ಕ್ಷಮೆ ಆಗ್ರಹಿಸಲಾಗುವುದು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಮುಖಂಡ ವಿಠಲ ದೊಡ್ಡಮನಿ ಮಾತನಾಡಿದರು.

ಮುಖಂಡರಾದ ಲಚಪ್ಪ ಜಮಾದಾರ, ಅರ್ಜುನ ಭದ್ರೆ, ಗುರುನಾಥ್ ಪೂಜಾರಿ, ವಾಹಜ್ ಬಾಬಾ ಜುನೈದಿ ಮಾತನಾಡಿದರು.

ಈ ಸಂದರ್ಭದಲ್ಲಿ ಕುಡಾ ಅಧ್ಯಕ್ಷ ಮಜರ್ ಆಲಂ ಖಾನ್, ತಿಪ್ಪಣ್ಣ ಒಡೆಯರ, ಹಣಮಂತ ಬೋಧನಕರ, ಶರಣಬಸಪ್ಪ ಸೂರ್ಯವಂಶಿ, ಚಂದು ಜಾಧವ, ಸುರೇಶ್ ಹಾದಿಮನಿ, ದೇವಿಂದ್ರ ಸಿನ್ನೂರು, ಸೂರ್ಯಕಾಂತ ನಿಂಬಾಳ್ಕರ್, ರಾಜಕುಮಾರ ಕಪನೂರು, ಸಚಿನ್ ಶಿರವಾಳ, ಮಲ್ಲಪ್ಪ ಹೊಸಮನಿ, ಪ್ರಕಾಶ್ ಮೂಲಭಾರತಿ, ರಘುವೀರ ತಾವಡೆ, ಸುನೀಲ ಮಾರುತಿ ಮಾನಪಡೆ, ದಿನೇಶ್ ದೊಡ್ಡಮನಿ, ಸುನೀಲ ದೊಡ್ಡಮನಿ, ಶಾಮ್ ಮುಲಭಾರತಿ, ರಾಜಕುಮಾರ ಕೋರಹಳ್ಳಿ ಇತರರಿದ್ದರು.

ಅಪರಾಧ ತಡೆ ಮಾಸಾಚರಣೆ

ಆಳಂದ: ಅಪರಾಧ ತಡೆ ಮಾಸಾಚರಣೆ ಅಂಗವಾಗಿ ಮಾದನಹಿಪ್ಪರಗಿ ಪೋಲಿಸರು ಸ್ಥಳೀಯ ಬಸ್ ನಿಲ್ದಾಣದಲ್ಲಿ ಸಾರ್ವಜನಿಕರಿಗೆ ಅಪರಾಧ ಪ್ರಕರಣಗಳ ಬಗ್ಗೆ ಮಾಹಿತಿ ನೀಡಿದರು.

ಪಿಎಸ್‌ಐ ಸವಿತಾ ಕಲ್ಲೂರ ಮಾತನಾಡಿ ದಿನನಿತ್ಯದ ಬದುಕಿನಲ್ಲಿ ಕಾನೂನು ನಿಯಮಗಳನ್ನು ಅಳವಡಿಸಿಕೊಂಡು ಸಾಗಬೇಕಾದ ಅನಿವಾರ್ಯತೆ ಇದೆ. ಸಾರ್ವಜನಿಕ ಸ್ಥಳಗಳಲ್ಲಿ ನಡೆಯುವಂತಹ ಅಪರಾಧಗಳು ಕಣ್ಣಿಗೆ ಬಿದ್ದರೆ ಹತ್ತಿರದ ಪೋಲಿಸ ಠಾಣೆಗೆ ಮಾಹಿತಿ ನೀಡಬೇಕಾಗಿರುವುದು ನಾಗರೀಕರ ಕರ್ತವ್ಯವಾಗಿದೆ ಎಂದರು.

ಅಪರಾಧಗಳನ್ನು ಸಹಿಸುವುದು ತಪ್ಪು. ವಿಶೇಷವಾಗಿ ಹೆಣ್ಣು ಮಕ್ಕಳು ಬಸ್ಸುಗಳಲ್ಲಿ ಓಡಾಡುವಾಗ ಲೈಂಗಿಕ ಕಿರುಕುಳ ನೀಡುತ್ತಿರುವ ವ್ಯಕ್ತಿಗಳ ಬಗ್ಗೆ ನಿರ್ಭಯವಾಗಿ ಪೋಲಿಸರಿಗೆ ಮಾಹಿತಿ ನೀಡಿ. ಪಾಲಕರು ಮನೆಯಲ್ಲಿ ತಮ್ಮ ಮಕ್ಕಳ ಚಲನವಲನದ ಬಗ್ಗೆ ಗಮನ ನೀಡಿ. ದುಶ್ಚಟಗಳಿಂದ ದೂರವಿರಲು ಪಾಲಕರು ಜಾಗೃತೆ ವಹಿಸಿರಿ. ಅಪ್ರಾಪ್ತರಿಗೆ ಬೈಕ ಓಡಿಸಲು ಕೊಡಬೇಡಿ. ಸಂಚಾರಿ ನಿಯಮಗಳನ್ನು ಪಾಳನೆ ಮಾಡದೆ ಅಫಘಾತ ಸಂಭವಿಸಿದರೆ ಪಾಲಕರೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಪೋಲಿಸ ಇಲಾಖೆ ಎಲ್ಲವೂ ಮಾಡಲೂ ಸಾಧ್ಯವಿಲ್ಲ. ಸಾರ್ವಜನಿಕರ ಸಹಕಾರದಿಂದ ಅಪರಾಧಗಳನ್ನು ತಡೆಗಟ್ಟಬಹುದು ಎಂದರು. ಸಿಬ್ಬಂಧಿಗಳಾದ ಇರ್ಫಾನ್, ಅರುಣ, ಬಸವರಾಜ ಇದ್ದರು. ದಲಿತ ಸೇನೆಯ ಶಿವಲಿಂಗಪ್ಪ ಚೆನ್ನಗುಂಡ, ಸೋಮನಾಥ ಝುಳಕಿ, ಬೀಮಾ ದೋತ್ರೆ ಅಲ್ಲದೆ ನೂರಾರು ಜನ ಮಹಿಳಾ ಪ್ರಯಾಣಿಕರು ಸೇರಿದ್ದರು.

ಕಂಡಿದ್ದು, ಕೇಳಿದ್ದು

ರಂಗಸ್ವಾಮಿ ಮೂಕನಹಳ್ಳಿ
ಫೇಸ್‌ಬುಕ್ ಬರಹ

ಭಾರತಕ್ಕೆ ಬಂದ ಹೊಸತರಲ್ಲಿ ಟ್ರಾಫಿಕ್ ಸಾಗರದಲ್ಲಿ ಹಾರ್ನ್ ಸದ್ದು ಕೇಳಿದಾಗೆಲ್ಲ ಒಂದು ಡೌಟ್ ಶುರುವಾಗುತ್ತಿತ್ತು. ಇವತ್ತಿಗೂ ಅದು ಪರಿಹಾರವಾಗಿಲ್ಲ. ಯಾರು ಯಾರಿಗೆ ಮತ್ತು ಯಾವ ಕಾರಣಕ್ಕೆ ಹಾರ್ನ್ ಸದ್ದು ಮಾಡುತ್ತಿದ್ದಾರೆ ಎನ್ನುವುದು ಆ ಡೌಟ್. ಇವತ್ತು ಜೀವನದಲ್ಲಿ ಪ್ರಥಮ ಬಾರಿಗೆ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅಟೆಂಡ್ ಮಾಡಿದೆ. ಅಲ್ಲಿನ ಅಪಾರ ಜನ ಸಾಗರವನ್ನು ಕಂಡು ಅಯೋಮಯವಾಯ್ತು. ಎಲ್ಲವೂ ನಡೆಯುತ್ತಿದೆ ಆದರೆ ಏನೂ ಅರ್ಥವಾಗುತ್ತಿಲ್ಲ ಯಾರಿಗಾಗಿ, ಏತಕ್ಕಾಗಿ ಎನ್ನುವ ಪ್ರಶ್ನೆಗಳು ಉದ್ಭವವಾದವು. ಇಲ್ಲಿ ನೀವು ಒಮ್ಮೆ ಹೊಕ್ಕರೆ ಮುಗಿಯಿತು. ಚಕ್ರವ್ಯೂಹವನ್ನು ಭೇದಿಸ ಬಹುದು ಇಲ್ಲಿಂದ ಹೊರಬರುವುದು ಸುಲಭದ ಮಾತಲ್ಲ. ಈ ಮಧ್ಯ ನಿಮಗೆ ನೇಚರ್ ಕಾಲ್ ಬಂದು ಬಿಟ್ಟರೆ ಅಲ್ಲಿಗೆ ಮುಕ್ತಾಯ. ಬಯಲು ರಂಗಮಂದಿರ ಕೇಳಿದ್ದೆ ಬಯಲು ಶೌಚ ನೋಡಿದೆ ಅದನ್ನು ತಲುಪಲು ಕೂಡ ಬರೋಬ್ಬರಿ ಅರ್ಧಗಂಟೆ ಬೇಕು. ಇದು ಪುರುಷರ ಕಥೆ. ನಾರಿಯನ್ನು ದೈವಪಟ್ಟದಲ್ಲಿ ಕೂರಿಸುವ ಸಮಾಜ ಅವರ ಬಗ್ಗೆ ಕಿಂಚಿತ್ತೂ ಯೋಚಿಸುವುದಿಲ್ಲ. ಇನ್ನು ಊಟ ತಿಂಡಿ ವ್ಯವಸ್ಥೆ ಬಗ್ಗೆ ಹೇಳದಿರುವುದು ವಾಸಿ. ಸ್ಟಾಲ್‌ಗಳಲ್ಲಿ ಅದೆಷ್ಟು ಸೆಕೆ ಎಂದರೆ ಎಲ್ಲರೂ ತೊಯ್ದು ತೊಪ್ಪೆಯಾಗಿದ್ದರು. ವಿವಿಐಪಿಗಳು ಬಂದಿದ್ದಾರೆ ಅಂತ ನೆಟ್‌ವರ್ಕ್ ಜಾಮರ್ ಹಾಕಿದ್ದರು. ಕರೆ ಮಾಡಲು, ಹಣ ಪಾವತಿಸಲು ಪರದಾಟ. ಪಟ್ಟಿ ದೊಡ್ಡದು. ಬೆಳಗ್ಗೆ ನೂರೆಂಟು ಕನಸು ಹೊತ್ತು ಹೊರಟ್ಟಿದ್ದೆ ಸಿಡಿಯುವ ತಲೆ ಹೊತ್ತು ಮನೆಗೆ ಬಂದೆ. ಮೂರನೇ ದರ್ಜೆಗಿಂತ ಬೇರೆ ದರ್ಜೆ ಇದ್ದರೆ ಅದಿರು ವುದು ನಮ್ಮ ದೇಶದಲ್ಲಿ ಮಾತ್ರ. ಮೂಲಭೂತ ಅಂಶಗಳಿಗೆ ಅದೇಕಿಷ್ಟು ಅಸಡ್ಡೆ ?. ಸಮಾಜವಾಗಿ ನಾವೆಂದೂ ಉದ್ಧಾರವಾಗುವುದಿಲ್ಲ. ಒಟ್ಟಾರೆ ವಯಸ್ಸಾದವರು ಹೆಂಗಸರು ಮತ್ತು ಮಕ್ಕಳಿಗೆ ಇದು ಅಲ್ಲವೇ ಅಲ್ಲ.

ಶಶಾಂಕ್ ಪರಾಶರ

ಓ ಇದು ಮೊದಲ ಅನುಭವ ನಿಮಗೆ. ಅದಕ್ಕೆ ಹೀಗೇ . ಹೋಗ್ತಾ ಹೋಗ್ತಾ ನೀವೇ ಅಡ್ಜಸ್ಟ್ ಆಗ್ತೀರಾ. III

ಜಯಗೌರಿ ಭಟ್

ಮೊನ್ನೆ ಪುಸ್ತಕ ಸಂತೆಯಲ್ಲೂ ಇದೊಂದು ವ್ಯವಸ್ಥೆ / ಅನುಕೂಲ ಇರ್ಲಿಲ್ಲ.. ವಾಪಸು ಹೊರಗೆ ಬಂದು ನಿರ್ಮಲ ಶೌಚಾಲಯ ಹುಡುಕಿ ಹೋಗ್ಬೇಕಾಯ್ತು.
ಮೂಲಭೂತ ಸೌಕರ್ಯವೊಂದು ಎಷ್ಟು ನಿರ್ಲಕ್ಷಿಸಲ್ಪಡುತ್ತದೆ ನಮ್ಮ ಊರು, ದೇಶದಲ್ಲಿ..!!
ನಮ್ಮ ಜನರ ಚಿಂತನೆ ಹೇಗಿದೆ ಅಂದ್ರೆ ಮಲಮೂತ್ರಗಳು ಹೇಗಿದ್ರೂ ಅಸಹ್ಯ ತಾನೇ, ಅವನ್ನು ವಿಸರ್ಜಿಸಲು ಯಾವುದೊ ಒಂದು ಸಣ್ಣಮರೆ ಸಿಕ್ಕಿದ್ರೆ ಸಾಕು, ಆ ಜಾಗ ಮಲಿನವಾಗಿದ್ರು, ಕೊಳೆ, ಗಲೀಜು ತುಂಬಿದರೂ ಅದೇ ಸರಿ ಅಂತ ನಂಬಿದ್ದಾರೆ ಅನ್ಸುತ್ತೆ.
ಸಾರ್ವಜನಿಕ ಶೌಚಾಲಯಗಳು ಎಷ್ಟು ಗಲೀಜಾಗಿರುತ್ತವೆ, ಒಂದೋ ನೀರೇ ಇಲ್ಲಾ / ನೀರು ಸೋರೋದು, ಬಕೆಟ್ - ಮಗ್ ಇಲ್ಲಾ, ಬಾಗಿಲಿಗೆ ಚಿಲುಕ ಇಲ್ಲ...
ಸ್ಟಾರ್ ಹೋಟೆಲ್ ಗಳಾದ್ರೆ ಮಾತ್ರ ಈ ಎಲ್ಲ ವ್ಯವಸ್ಥೆ ನಿರೀಕ್ಷೆ ಮಾಡಬಹುದು ಅಷ್ಟೇ..
ಇತರ ಕಡೆ ಇದ್ದರೂನು ಹೆಣ್ಣುಮಕ್ಕಳಿಗೆ ತಮ್ಮ ಬಟ್ಟೆಗೆ ಗಲೀಜು ತಾಗದಂತೆ ನೋಡ್ಕೊಳ್ಳುವುದು ದೊಡ್ಡ ಸಾಹಸವಾಗುತ್ತದೆ...

ಸಮ್ಮೇಳನ ಸ್ವಾರಸ್ಯ

ಪ್ರಮೋದಾದೇವಿ ಗೈರುಹಾಜರಿ

ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಚಾಲನೆ ನೀಡ ಬೇಕಾಗಿತ್ತು. ಆದರೆ ಅವರು ಗೈರು ಹಾಜರಾಗಿದ್ದರು. ಅವರ ಅನುಪಸ್ಥಿತಿಯಲ್ಲಿ ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಚಾಲನೆ ನೀಡಿದರು. ಪ್ರಮೋದಾದೇವಿ ಅವರನ್ನು ಶ್ರೀಮನ್ನ ಹಾರಾಣೆ, ಮೈಸೂರು ಅರಮನೆ ಎಂದು ಸಮ್ಮೇಳನದ ಆಹ್ವಾನಪತ್ರಿಕೆ ಯಲ್ಲಿ ಉಲ್ಲೇಖಿಸಲಾಗಿತ್ತು. ಇದು ಪ್ರಜಾ ತಂತ್ರದ ಉಲ್ಲಂಘನೆ ಎಂದು ಕೆಲವರು ಕೋರ್ಟ್‌ಗೆ ಹೋಗಿದ್ದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಸ್ಥಾನದಿಂದ ನಾಡೋಜನ ಕಳಕಳಿ

ಅನ್ಯಭಾಷಿಕರ ದುರಹಂಕಾರಕ್ಕೆ ತಡೆಹಾಕಿ:ಗೊರುಚ ಗುಡುಗು

ಹರೀಶ್ ಕೇರ

ರಾಜಮಾತೆ ಕೆಂಪನಂಜಮ್ಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಧಾನ ವೇದಿಕೆ, ಸರ್ ಎಂ ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ಮಹಾಮಂಟಪ, ಮಂಡ್ಯ: ಒಕ್ಕೂಟ ಸರಕಾರದಿಂದ ತೆರಿಗೆ ಪಾಲಿನ ಸಲ್ಲಿಕೆಯಲ್ಲಿ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯ, ರಾಜ್ಯದಲ್ಲಿ ಅನ್ಯಭಾಷಿಕರ ಅಪಾರ ವಲಸೆಯಿಂದ ನಾಡು ನುಡಿಯ ಮೇಲೆ ಆಗುತ್ತಿರುವ ದುಷ್ಪರಿಣಾಮ, ಆಂಗ್ಲ ಮಾಧ್ಯಮದಲ್ಲಿ ಸರಕಾರಿ ಪ್ರಾಥಮಿಕ ಶಾಲೆಗಳು ಹಾಗೂ ಖಾಸಗಿ ಶಾಲೆಗಳ ತೆರೆಯುವಿಕೆ, ಕನ್ನಡದಲ್ಲಿ ಯಾಂತ್ರಿಕ ಬುದ್ಧಿಮತ್ತೆಯ ಬೆಳವಣಿಗೆ, ಹಿಂದಿಯ ಹೇರಿಕೆ ತಡೆಯುವಿಕೆ ಹಾಗೂ ಬಹುತ್ವಕ್ಕೆ ಮನ್ನಣೆ, ಕನ್ನಡದ ವಿಶ್ವವಿದ್ಯಾಲಯಗಳಿಗೆ ಅನುದಾನದ ಕೊರತೆ- ಇವೆಲ್ಲವೂ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಗೊ.ರು. ಚನ್ನಬಸಪ್ಪ ಅವರ ಭಾಷಣದಲ್ಲಿ ಸ್ಥಾನ ಪಡೆದುಕೊಂಡವು. ಕನ್ನಡದ ಹಿರಿತನದ ಜತೆಗೆ ಕನ್ನಡ ಮತ್ತು ಕನ್ನಡಿಗರು ಎದುರಿಸುತ್ತಿರುವ ಸವಾಲುಗಳ ಮೇಲೂ ಅವರು ತಮ್ಮ ಸುದೀರ್ಘ ಭಾಷಣದಲ್ಲಿ ಬೆಳಕು ಚೆಲ್ಲಿದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಿದರು. ಆದಿಚುಂಚನಗಿರಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ದಿವ್ಯಸಾನಿಧ್ಯ ವಹಿಸಿದ್ದರು. ಸಮ್ಮೇಳನಾಧ್ಯಕ್ಷರಾದ ನಾಡೋಜ ಡಾ.ಗೊ.ರು.ಚನ್ನಬಸಪ್ಪ, ಹಿರಿಯ ಸಾಹಿತಿಗಳಾದ ಡಾ.ದೊಡ್ಡರಂಗೇಗೌಡ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ ಚಂದ್ರ ಶೇಖರ ಕಂಬಾರ, ವೇದಿಕೆಯ ಮೇಲೆ ಇದ್ದರು.

ತಂತ್ರಜ್ಞಾನಕ್ಕೆ ಒತ್ತು

ಕನ್ನಡವು ಇಂದು ಕಾವ್ಯ, ಕವನ, ನಾಟಕ, ಕಾದಂಬರಿ, ವ್ಯಾಕರಣ ಮುಂತಾದ ಪರಂಪರೆಯ ಸಾಹಿತ್ಯಕ್ಕೆ ಸೀಮಿತವಾಗಿ ಉಳಿದಿಲ್ಲ. ವಿಜ್ಞಾನ, ತಂತ್ರಜ್ಞಾನ, ಕಾನೂನು, ವೈದ್ಯಕೀಯ ಸೇರಿದಂತೆ ಮುಂತಾದ ಕ್ಷೇತ್ರ ಗಳಲ್ಲಿ ಕನ್ನಡ ಬೆಳೆಯುತ್ತಿದೆ. ಕನ್ನಡ ಭಾಷೆಯ ಬೆಳವಣಿಗೆಗೆ ತಂತ್ರಜ್ಞಾನದ ಪೋಷಣೆ ಅತ್ಯಗತ್ಯ. ಗೂಗಲ್, ಯಾಂತ್ರಿಕ ಬುದ್ಧಿಮತ್ತೆಗೂ ಶುದ್ಧ ಕನ್ನಡ ಪ್ರೇಮ ಬರುವಂತಾಗಲಿ ಎಂದರು. ಜ್ಞಾನ ಪಡೆಯುವ ತಂತ್ರಜ್ಞಾನಕ್ಕೆ ಕನ್ನಡವನ್ನು ಹೊಂದಿಸಿದರೆ ಕನ್ನಡವು ಜ್ಞಾನದ ಭಾಷೆಯಾಗುತ್ತದೆ. ಇತ್ತೀಚಿನ ದಿನ ಗಳಲ್ಲಿ ಜನಪ್ರತಿನಿಧಿಗಳು, ಉನ್ನತ ಅಧಿಕಾರಿ ಗಳಲ್ಲಿ ಕನ್ನಡ ಭಾಷಾ ಪ್ರೇಮದ ಕೊರತೆ ಇರುವಂತೆ ಕಾಣುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ ಬೇರೆ ಬೇರೆ ಭಾಷೆಗಳ ಜೊತೆಯಲ್ಲಿ ವಿನಿಮಯ ಕಾರ್ಯಕ್ರಮಗಳನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳಬೇಕು. ಕಲೆ, ನಾಟಕ, ಸಂಗೀತ ಮುಂತಾದ ವುಗಳನ್ನು ಉತ್ತರ ಭಾರತದ ರಾಜ್ಯಗಳಿಗೆ ಪರಿಚಯಿಸಿ ಕೊಡುವ ಕೆಲಸ ಆದ್ಯತೆಯ ಮೇಲೆ ಮಾಡ ಬೇಕು ಎಂದವರು ಅಭಿಪ್ರಾಯಪಟ್ಟರು.

ಪ್ರಾಥಮಿಕ ಒಂದನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೆ ಬೋಧನೆಯಲ್ಲಿ ಕನ್ನಡ ಮಾಧ್ಯಮವೇ ಕಡ್ಡಾಯವಾಗಬೇಕು. ಯಾವ ಕಾರಣದಿಂದಲೂ ಬೇರಾವ ಭಾಷೆಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಹೇರಕೂಡದು. ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ಸರಕಾರ ತೆರೆಯುವುದನ್ನಾಗಲಿ, ಖಾಸಗಿ ಶಾಲೆಗಳಿಗೆ ಅನುಮತಿ ಕೊಡುವುದನ್ನಾಗಲೀ ಕೂಡಲೇ ನಿಲ್ಲಿಸಬೇಕು ಎಂದು ಸಮ್ಮೇಳನಾಧ್ಯಕ್ಷರು ಎಚ್ಚರಿಸಿದರು. ಸರಕಾರಿ ಶಾಲೆಗಳನ್ನು ಉಳಿಸಿ ಬೆಳೆಸುವ ಕೈಂಕರ್ಯದಲ್ಲಿ ಖಾಸಗಿ ಉದ್ಯಮಿಗಳು, ಶ್ರೀಮಂತ ವ್ಯಾಪಾರಿಗಳು, ವಿದೇಶಗಳಲ್ಲಿರುವ ಕನ್ನಡಿಗರು ಮತ್ತು ಸ್ವಯಂ ಸೇವಾ ಸಂಸ್ಥೆಗಳು ಹೆಚ್ಚು ಹೆಚ್ಚಾಗಿ ನೆರವು ನೀಡಿ ಕೈಜೋಡಿಸಬೇಕು. ಗ್ರಾಮಾಂತರ ಪ್ರದೇಶದ ಶಾಲೆಗಳನ್ನು ಉನ್ನತೀಕರಿಸಲು ಅವರ ಸಹಕಾರ ಅತ್ಯಗತ್ಯ. ಸರ್ಕಾರ ಇಂಥ ಸಹಕಾರದ ಹುಡುಕಾಟಕ್ಕೆ ಹಿರಿಯರ ಸಮಿತಿಯನ್ನು ರಚಿಸುವುದು ಸೂಕ್ತ ಎಂದು ಅನ್ನಿಸುತ್ತದೆ. ಕನ್ನಡ ಭಾಷೆಯನ್ನು ಶಿಕ್ಷಣದ ಮಾಧ್ಯಮವಾಗಿ ಬೆಳೆಸುವುದಿರಲಿ, ಸದ್ಯ ಸಂವಹನ ಭಾಷೆಯಾಗಿ ಉಳಿಸಿಕೊಳ್ಳುವುದೇ ಕಷ್ಟವಾಗಿರುವಾಗ, ಮಕ್ಕಳನ್ನು ಸರಕಾರಿ ಶಾಲೆಗಳಿಗೆ ಸೇರಿಸುವಂತೆ ಹೆತ್ತವರನ್ನು ಪ್ರೇರೇಪಿಸಲು ಶಾಲೆಗಿರುವ ಬಲ-ಬೆಂಬಲಗಳೂ ಮುಖ್ಯ ಎಂದರು.

ಬಹುಭಾಷಾ ಸಂಸ್ಕೃತಿ ಪಾಲಿಸಿ: ಬಹುಭಾಷಾ ಸಂಸ್ಕೃತಿ ನೀತಿಯನ್ನು ಸಂವಿಧಾನಾತ್ಮಕವಾಗಿ ಕೇಂದ್ರ ಸರ್ಕಾರವು ಪಾಲಿಸಬೇಕು. ಅಖಿಲ ಭಾರತ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ, ಬ್ಯಾಂಕು ವ್ಯವಹಾರಗಳಲ್ಲಿ, ಅಂಚೆ ಕಚೇರಿಗಳಲ್ಲಿ, ರಾಜ್ಯಭಾಷೆಗಳನ್ನು ನಿರ್ಲಕ್ಷಿಸಿ ಹಿಂದಿಯನ್ನು ಹೇರುವ ಪ್ರಯತ್ನ ದೊಡ್ಡಮಟ್ಟದಲ್ಲಿ ನಡೆಯುತ್ತಿದೆ. ಬ್ಯಾಂಕು, ಅಂಚೆಕಚೇರಿಗಳಲ್ಲಿ ಸರಳ ವ್ಯವಹಾರಗಳಿಗೂ ಹಿಂದಿ ಭಾಷೆ ಬಳಸಬೇಕು ಎನ್ನುವುದು ಬಹುಪಾಲು ಜನರಿಗೆ ಎಟುಕುವ ಸಂಗತಿಯಲ್ಲ. ಅನೇಕ ಬ್ಯಾಂಕ್‌ಗಳ ಚಲನ್‌ಗಳಲ್ಲಿ ಇಂಗ್ಲಿಷ್ ಅಥವಾ ಹಿಂದಿ ಭಾಷೆಯಲ್ಲಿ ಮಾತ್ರ ವಿವರಗಳನ್ನು ತುಂಬುವ ಅವಕಾಶವಿರುವುದು ಗ್ರಾಹಕರಿಗೆ ಸದ್ದಿಲ್ಲದೆ ನೀಡುವ ಕಿರುಕುಳವಷ್ಟೆ. ಇನ್ನು ಬೇರೆ ಕ್ಲಿಷ್ಟ ವ್ಯವಹಾರಗಳ ಸಂವಹನವನ್ನು ಹಿಂದಿಯಲ್ಲಿ ನಿರ್ವಹಿಸುವ ಕಷ್ಟವನ್ನು ಯಾರಾದರೂ ಊಹಿಸಬಹುದು.

ಸಂವಿಧಾನದ 351ನೇ ವಿಧಿಯ ಅನ್ವಯ ಹಿಂದಿ ಭಾಷೆಗೆ ಆದ್ಯತೆ ನೀಡುವ ಅವಕಾಶವಿದ್ದರೂ ಅದು ಹೇರಿಕೆ ಮತ್ತು ದಬ್ಬಾಳಿಕೆ ರೂಪ ದಲ್ಲಿ ಜಾರಿಗೆ ಬರಬಾರದು. ಕನ್ನಡನಾಡಿನಲ್ಲಿ ಕನ್ನಡವೇ ಸಾರ್ವಭೌಮ ಭಾಷೆ ಎನ್ನುವುದು ನಿರ್ವಿವಾದ. ಇದನ್ನು ನಮ್ಮ ರಾಜ್ಯ ಸರ್ಕಾರ ಸರ್ವರೀತಿಯಲ್ಲೂ ಕೇಂದ್ರ ಸರ್ಕಾರಕ್ಕೆ ಮನಗಾಣಿಸಬೇಕು ಎಂದರು.

ಅನ್ಯಭಾಷಿಕರ ದುರಹಂಕಾರಕ್ಕೆ ತಡೆ ಹಾಕಿ: ಬೆಂಗಳೂರು ಐಟಿ-ಬಿಟಿ ಸಿಟಿ ಎಂದು ಪ್ರಖ್ಯಾತವಾಗಿದೆ. ಯಾವ ರಾಜ್ಯದ, ಯಾವ ಭಾಷೆಯ ಜನರಾದರೂ ದೇಶದಲ್ಲಿ ಎಲ್ಲೂ ಬೇಕಾದರೂ ನೆಲೆಸಬಹುದು. ಆದರೆ ನೆಲೆಯೂರುವ ನೆಲದ ಬಗ್ಗೆ ಗೌರವ ಹೊಂದಿರಬೇಕು. ಇತ್ತೀಚೆಗೆ ಕನ್ನಡೇತರರ ದುರಹಂಕಾರದ ಪ್ರದರ್ಶನ ಅಲ್ಲಲ್ಲಿ ವ್ಯಕ್ತವಾಗಿದ್ದು, ಇದನ್ನು ಸರಕಾರ ಮತ್ತು ಕನ್ನಡಿಗರು ನಿಯಂತ್ರಿಸಬೇಕು. ಕನ್ನಡ ನಾಡಿನಲ್ಲಿ ಔದ್ಯಮಿಕವಾಗಿ ನೆಲೆಯೂರುವ ಉದ್ಯಮಗಳು ಕನ್ನಡಿಗರಾದ ವಿದ್ಯಾವಂತ ಅಭ್ಯರ್ಥಿಗಳಿಗೆ ನಿರ್ದಿಷ್ಟ ಪ್ರಮಾಣದ ಉದ್ಯೋಗ ನೀಡುವುದು ಅವರ ಋಣ ಸಂದಾಯದ ಮಾರ್ಗವೆಂದು ಭಾವಿಸಬೇಕು. ಆದರೆ ಇದನ್ನು ತಪ್ಪಿಸಲು ಹಲವಾರು ದಾರಿಗಳನ್ನು ಹುಡುಕುವ ಉದ್ಯಮಗಳನ್ನು ಸರ್ಕಾರ ತನ್ನ ಷರತ್ತು, ನಿಯಮಗಳಿಂದ ನಿರ್ಬಂಧಿಸಬೇಕು.ಸರಕಾರ ಸರೋಜಿನಿ ಮಹಿಷಿ ಸಮಿತಿ ವರದಿಯನ್ನು ಕೂಡಲೇ ಅನುಷ್ಠಾನಗೊಳಿಸಬೇಕು ಎಂದವರು ಸಲಹೆ ನೀಡಿದರು.

ಕೇಂದ್ರ ತಾರತಮ್ಯದ ವಿರುದ್ಧ ಕಿಡಿ

ಒಕ್ಕೂಟ ಸರ್ಕಾರವು ಹಣಕಾಸು ಆಯೋಗಗಳ ಶಿಫಾರಸ್ಸುಗಳಿಗೆ ಅನುಗುಣವಾಗಿ ಕರ್ನಾಟಕಕ್ಕೆ ಬರಬೇಕಾದ ತೆರಿಗೆ ಪಾಲನ್ನು ವರ್ಗಾಯಿಸುತ್ತಿಲ್ಲ. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಈ ತೆರಿಗೆ ಪಾಲಿನ ಬಗೆಗೆ ಕೇಂದ್ರ ಸರ್ಕಾರವು ರಾಜ್ಯಕ್ಕೆ ಅನ್ಯಾಯಮಾಡುತ್ತಿದೆ ಎಂದು ಹೇಳುವುದರಲ್ಲಿ ಸತ್ಯಾಂಶವಿದೆ. ನಬಾರ್ಡ್ (ನ್ಯಾಷನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರ್ ಆಂಡ್ ರೂರಲ್ ಡೆವಲಪ್‌ಮೆಂಟ್) ವಾರ್ಷಿಕವಾಗಿ ಕರ್ನಾಟಕಕ್ಕೆ ನೀಡುತ್ತಿದ್ದ ಮರುಹಣಕಾಸು ಸಾಲವನ್ನು 2024-25ರಲ್ಲಿ ಶೇ. 58ರಷ್ಟು ಕಡಿತಮಾಡಿದೆ. ಈ ಮಾತುಗಳನ್ನು ರಾಜಕೀಯ ಬಣ್ಣದ ಮೂಲಕ ನೋಡುವುದು ಸಲ್ಲ. ಇದು ಕರ್ನಾಟಕಸ್ಥರ ಬದುಕು ಮತ್ತು ಭವಿಷ್ಯದ ಪ್ರಶ್ನೆ, ರಾಜ್ಯಗಳು ಆರ್ಥಿಕವಾಗಿ ಬೆಳೆದರೆ ಮಾತ್ರ ಭಾರತ ಬೆಳೆಯಲು ಸಾಧ್ಯ. ಈ ಹಿನ್ನೆಲೆಯಲ್ಲಿ ಕೇಂದ್ರ-ರಾಜ್ಯಗಳ ನಡುವಣ ಸಂಬಂಧದ ಬಗ್ಗೆ, ಮುಖ್ಯವಾಗಿ ಹಣಕಾಸು ಸಂಬಂಧವನ್ನು ಕುರಿತಂತೆ ರಾಷ್ಟ್ರಮಟ್ಟದಲ್ಲಿ ಚರ್ಚೆಯಾಗಬೇಕು ಮತ್ತು ಈ ಬಗ್ಗೆ ಕೇಂದ್ರ ಸರ್ಕಾರವು ಸಂವಿಧಾನ ಮತ್ತು ಹಣಕಾಸು ತಜ್ಞರ ಒಂದು ವಿಶೇಷ ಆಯೋಗವನ್ನು ರಚಿಸಬೇಕು ಎಂದು ನಾನು ಈ ವೇದಿಕೆಯ ಮೂಲಕ ಒತ್ತಾಯಿಸುತ್ತೇನೆ. ರಾಜ್ಯಗಳ ಹಣಕಾಸು ಸ್ವಾಯತ್ತತೆಯನ್ನು ಸಂರಕ್ಷಿಸುವ ಕಾರ್ಯವನ್ನು ಒಕ್ಕೂಟ ಸರ್ಕಾರ ಮಾಡಬೇಕು ಎಂದು ಗೊರುಚ ನುಡಿದರು.

ಸಾಹಿತ್ಯ ಪ್ರೇಮಿಗಳಿಗೆ ಭರ್ಜರಿ ಭೋಜನ

ಸಕ್ಕರೆ ನಗರಿಯಲ್ಲಿ ಆರಂಭವಾಗಿರುವ 87ನೇ ಅಖಿಲ ಭಾರತ ಮೊದಲನೇ ದಿನ ಸಾಹಿತ್ಯ ಪ್ರೇಮಿಗಳಿಗೆ ಭರ್ಜರಿ ಭೋಜನವನ್ನು ನೀಡಿ ಉಪಚರಿಸಲಾಯಿತು. ಮೂರು ಸ್ಥಳಗಳಲ್ಲಿ ಊಟದ ವ್ಯವಸ್ಥೆಯನ್ನು ಆಯೋಜಿಸಲಾಗಿದ್ದು, ಗಣ್ಯರು ಹಾಗೂ ಸಾರ್ವಜನಿಕರು ಸರತಿ ಸಾಲಿನಲ್ಲಿ ನಿಂತು ಭೋಜನ ಸ್ವೀಕರಿಸಿದರು. ಮಂಡ್ಯದ ಹೊರ ವಲಯದ 64 ಎಕರೆ ವಿಸ್ತರವಾದ ಪ್ರದೇಶದಲ್ಲಿ ಜನಸಾಮಾನ್ಯರಿಗಾಗಿ 100 ಊಟದ ಕೌಂಟರ್, ನೋಂದಾಯಿತ ಪ್ರತಿನಿಧಿಗಳಿಗೆ 40 ಕೌಂಟರ್‌ಗಳನ್ನು ತೆರೆಯಲಾಗಿತ್ತು. ಗಣ್ಯರು, ಅತಿಮುಖ್ಯ ಗಣ್ಯರಿಗೆ ಪ್ರತ್ಯೇಕವಾಗಿ ಊಟ ವಿತರಣೆಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಒಟ್ಟಾರೆ ಮೊದಲ ದಿನ ಶಾಲಾ ಮಕ್ಕಳು ಸೇರಿದಂತೆ 50 ಸಾವಿರಕ್ಕೂ ಹೆಚ್ಚು ಮಂದಿ ಊಟೋಪಾಚಾರ ಸವಿದರು.

ಭೋಜನ ವ್ಯವಸ್ಥೆ ಅಸ್ತವ್ಯಸ್ತ

ರಾತ್ರಿ ಪೂರಿ, ಸಾಗು, ಮೈಸೂರು ಪಾಕ್, ಅವರೆಕಾಳು ಬಾತು, ರಾಯಿತ, ಮೊಸರು, ಬಾಳೆ ಹಣ್ಣು, ಕೋಸಂಬರಿ, ಹಪ್ಪಳ, ಪಲ್ಯ, ಸಲಾಡ್ ಸವಿದರು. ಆರಂಭದಲ್ಲಿ ಜನದಟ್ಟಣೆ ಕಡಿಮೆಯಿದ್ದ ಕಾರಣ ಸಮ್ಮೇಳನಕ್ಕೆ ಬಂದವರು ನಿರಾಯಾಸವಾಗಿ ಊಟ ವನ್ನು ಪಡೆದರು. ಮಧ್ಯಾಹ್ನ 1.30 ಆಗುತ್ತಿದ್ದಂತೆ ಜನರು ಸಾಗ ರೋಪಾದಿಯಲ್ಲಿ ಆಗಮಿಸತೊಡಗಿದರು. ಇದರಿಂದಾಗಿ ಊಟದ ವ್ಯವಸ್ಥೆ ಅಕ್ಷರಶಃ ಅಸ್ತವ್ಯಸ್ತವಾಯಿತು.

ಸಾಹಿತ್ಯ ಸಮ್ಮೇಳನದಲ್ಲಿ ಊಟಕ್ಕೆ ಮುಗಿಬಿದ್ದ ಸಾಹಿತ್ಯ ಪ್ರೇಮಿಗಳು.

ಹಕ್ಕೊತ್ತಾಯಗಳು

87ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷ ಗೊ.ರು.ಚನ್ನಬಸಪ್ಪ ಅವರು ನಾಡು-ನುಡಿ ರಕ್ಷಣೆ ಹಾಗೂ ಇತರ ವಿಷಯಗಳ ಬಗ್ಗೆ ಮಂಡಿಸಿದ ಹಕ್ಕೊತ್ತಾಯಗಳು ಇಂತಿವೆ...

1 ಪ್ರಾಥಮಿಕ ಒಂದನೇ ತರಗತಿಯಿಂದ ಹತ್ತನೆಯ ತರಗತಿಯವರೆಗೆ ಬೋಧನೆಯಲ್ಲಿ ಕನ್ನಡ ಮಾಧ್ಯಮವೇ ಕಡ್ಡಾಯವಾಗಬೇಕು. ಯಾವ ಕಾರಣದಿಂದಲೂ ಬೇರಾವ ಭಾಷೆಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಹೇರ ಬಾರದು. ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ಸರಕಾರ ತೆರೆಯುವುದಾಗಲೀ, ಖಾಸಗಿ ಶಾಲೆಗಳಿಗೆ ಅನುಮತಿ ಕೊಡುವುದಾಗಲೀ ಕೂಡಲೇ ನಿಲ್ಲಿಸಬೇಕು.

2 ಅಗತ್ಯವೆನಿಸಿರುವ ಇಂಗ್ಲಿಷ್ ಕಲಿಕೆಗೆ ಪ್ರತ್ಯೇಕ ವ್ಯವಸ್ಥೆ ಮಾಡಿ, ಬೋಧನೆಗೆ ತರಬೇತಿ ಪಡೆದ ಶಿಕ್ಷಕರನ್ನು ನೇಮಿಸಬೇಕು ಮತ್ತು ಗ್ರಾಮೀಣ ಭಾಗದ ಕನ್ನಡ ಶಾಲೆಗಳನ್ನು, ಎಲ್ಲ ಸೌಲಭ್ಯಗಳಿಂದ ಪೂರ್ಣವಾಗಿ ಸಜ್ಜುಗೊಳಿಸ ಬೇಕು. ರಾಜ್ಯದ ಆಯವ್ಯಯ ದಲ್ಲಿ ಕನಿಷ್ಟ ಶೇ.15ರಷ್ಟು ಭಾಗ ಶಿಕ್ಷಣಕ್ಕೆ ಮೀಸಲಿರಬೇಕು.

3 ಕಳೆದ ಅನೇಕ ದಶಕಗಳಿಂದ ನನೆಗುದಿಗೆ ಬಿದ್ದಿರುವ ಸರೋಜಿನ ಮಹಿಷಿ ವರದಿಯನ್ನು ಕೂಡಲೇ ಶಾಸನಬದ್ಧಗೊಳಿಸಿ ಅನುಷ್ಠಾನಗೊಳಿಸಬೇಕು. ಅನುಷ್ಠಾನದ ಮೇಲ್ವಿಚಾರಣೆಯ ಹೊಣೆಗಾರಿಕೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಬೇಕು. ಸಾರ್ವಜನಿಕವಿರಲೀ, ಖಾಸಗಿಯಿರಲೀ, ಉದ್ಯೋಗಾವಕಾಶಗಳಲ್ಲಿ ವಿಶೇಷ ಅರ್ಹತೆಯ ಉನ್ನತ ಹುದ್ದೆಗಳ ಹೊರತಾಗಿ ಸಿ ಮತ್ತು ಡಿ ವರ್ಗದ ಹುದ್ದೆಗಳನ್ನು ಪೂರ್ಣವಾಗಿ ಕನ್ನಡಿಗರಿಗೇ ಮೀಸಲಿಡಬೇಕು.

4 ಕನ್ನಡ ವಿಶ್ವವಿದ್ಯಾಲಯ ಮತ್ತು ಜಾನಪದ ವಿಶ್ವವಿದ್ಯಾಲಯಗಳಹಣಕಾಸು ಮತ್ತು ಬೋಧನಾ ಸಿಬ್ಬಂದಿ ಕೊರತೆ ನಿವಾರಿಸಲು ಕ್ರಮ ಕೈಗೊಳ್ಳ ಬೇಕು. ಕನ್ನಡ ಶಾಸ್ತ್ರೀಯ ಭಾಷಾ ಕೇಂದ್ರವನ್ನು ಸ್ವತಂತ್ರ ಸ್ವಾಯತ್ತ ಕೇಂದ್ರವನ್ನಾಗಿ ಬೆಳೆಸಲು ಮತ್ತು ಕೇಂದ್ರದ ನೆರವನ್ನು ಪಡೆಯಲು ವ್ಯವಸ್ಥೆಮಾಡಬೇಕು.

5 ಅಪಾರ ಸಂಭಾವ್ಯ ಸಾಮರ್ಥ್ಯವಿರುವ ಪ್ರವಾಸೋದ್ಯಮವನ್ನು ಸಾಂಸ್ಕೃತಿಕ ಮತ್ತು ಶೈಕ್ಷಣಿಕ ದೃಷ್ಟಿಯಿಂದಷ್ಟೇ ಅಲ್ಲದೆ ಆದಾಯ ಮತ್ತು ಉದ್ಯೋಗಾ ವಕಾಶ ದೃಷ್ಟಿಯಿಂದಲೂ ಅದನ್ನು ವಿಸ್ತರಣೆಯ ವಲಯವನ್ನಾಗಿ ಅಭಿವೃದ್ಧಿಗೊಳಿಸಬೇಕು.

6 ಕೈಗಾರಿಕೋದ್ಯಮಗಳ ಸ್ಥಾಪನೆ ಎಲ್ಲ ಜಿಲ್ಲೆಗಳಿಗೂ ಹಂಚಿಕೆಯಾಗಬೇಕು. ಯಾವುದೇ ಉದ್ಯಮವಿರಲಿ, ಅಲ್ಲಿ ಕನ್ನಡಿಗರಿಗೆ ದ್ಯೋಗಾವಕಾಶದ ಕಟ್ಟುನಿಟ್ಟಿನ ಷರತ್ತು ವಿಧಿಸಿ, ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು.

7 ಸರ್ಕಾರದ ಸಚಿವಾಲಯ ಕಚೇರಿಗಳ ಹೊರತಾಗಿ, ಉಳಿದ ಇಲಾಖೆಗಳ ನಿರ್ದೇಶನಾಲಯ ಕಚೇರಿಗಳನ್ನು ಬೇರೆ ಬೇರೆ ಜಿಲ್ಲಾ ಕೇಂದ್ರಗಳಿಗೆ ವರ್ಗಾಯಿಸಿ ಬೆಂಗಳೂರಿನ ಒತ್ತಡವನ್ನು ತಪ್ಪಿಸಬೇಕು.

8 ಶಿಕ್ಷಣ ಮಾಧ್ಯಮ, ಅಂತಾರಾಜ್ಯ ಗಡಿ, ಜಲ ಮತ್ತು ವಲಸೆ ಸಮಸ್ಯೆಗಳನ್ನು ಪರಿಹರಿಸಲು ಒಂದು ರಾಷ್ಟ್ರೀಯ ನೀತಿಯನ್ನು ರೂಪಿಸುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸಬೇಕು.

9 ಪ್ರಾದೇಶಿಕ ಅಸಮಾನತೆಯನ್ನು ಸರಿಪಡಿಸುವ ದಿಸೆಯಲ್ಲಿ ಕಿತ್ತೂರು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕದ ಭಾಗದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಕಾಲಬದ್ಧ ಕ್ರಮಕೈಗೊಳ್ಳಬೇಕು.

10 ಬಸವಣ್ಣನವರನ್ನು ರಾಜ್ಯದ 'ಸಾಂಸ್ಕೃತಿಕ ನಾಯಕ' ಎಂದು ಘೋಷಿಸಿರುವ ರಾಜ್ಯ ಸರಕಾರ, 12ನೇ ಶತಮಾನದ ಶರಣರ ಕ್ಷೇತ್ರಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯಕ್ಕಾಗಿ ಸ್ವಾಯತ್ತ ಪ್ರಾಧಿ ಕಾರ ರಚಿಸಬೇಕು. ಮುಂದಿನ ಶೈಕ್ಷಣಿಕ ವರ್ಷದಿಂದ ವಚನ ವಿಶ್ವವಿದ್ಯಾಲಯ ಆರಂಭಿಸಬೇಕು.

11 ರಾಜ್ಯದ ಎಲ್ಲ ಸರಕಾರಿ ಮತ್ತು ಖಾಸಗಿ ಕೈಗಾರಿಕೆಗಳು, ಕಚೇರಿಗಳು, ಅಂಗಡಿ-ಮುಂಗಟ್ಟುಗಳ ನಾಮಫಲಕಗಳು ಕನ್ನಡದಲ್ಲಿರುವುದು ಕಡ್ಡಾಯವಾಗಬೇಕು, ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು.

ಸಮ್ಮೇಳನಾಧ್ಯಕ್ಷರ ಭಾಷಣಗಳನ್ನು ಗಂಭೀರವಾಗಿ ಪರಿಗಣಿಸಿ

ಕನ್ನಡ ಬಂಧುಗಳೇ, ಇದುವರೆಗೆ ನಾನೂ ಸೇರಿ 87 ಸಮ್ಮೇಳನಾಧ್ಯಕ್ಷರ ಭಾಷಣಗಳನ್ನು ಕೇಳಿದ್ದೀರಿ. ಸಾಮಾನ್ಯವಾಗಿ ಇರುವ ಅಭಿಪ್ರಾಯವೆಂದರೆ, ಸಮ್ಮೇಳನಾಧ್ಯಕ್ಷರ ಭಾಷಣಗಳನ್ನು ಎಲ್ಲರೂ ಕೇಳುತ್ತಾರೆ. ನಂತರ ಮರೆಯುತ್ತಾರೆ ಎನ್ನುವುದು. ಸರಕಾರ ವಂತೂ ಇದಕ್ಕೆ ಕಿವಿಯೇ ಕೊಡುವುದಿಲ್ಲ ಎಂಬ ಅಭಿಪ್ರಾಯವೂ ಇದೆ. ಈ ಧೋರಣೆ ಬದಲಾಗಬೇಕು. ನನ್ನ ಭಾಷಣದಲ್ಲಿ ಇರುವ ಆಶಯಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಕಾರ್ಯಗತಗೊಳಿಸಲು ತೊಡಗಬೇಕು. ಹಾಗೆ ತೊಡಗುವಂತೆ ಮಾಡಲು ನಾವು ನೀವು ಎಲ್ಲರೂ ಸರಕಾರದ ಮೇಲೆ ಒತ್ತಡ ತಂದು ಕಾರ್ಯೋನ್ಮುಖವಾಗುವಂತೆ ಮಾಡಬೇಕು. ಕನ್ನಡನಾಡಿನ ಜನ ಈ ಬಗ್ಗೆ ಸದಾ ಜಾಗೃತರಾಗಿ ಇರುತ್ತಾರೆ ಎಂಬ ಭರವಸೆ ನನಗಿದೆ.

12 ಪರಿಸರದ, ವಿಶೇಷವಾಗಿ, ಪಶ್ಚಿಮಘಟ್ಟಗಳ ರಕ್ಷಣೆಗೆ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕು. ಅಲ್ಲಿ ಗಣಿಗಾರಿಕೆಗೆ ಅವಕಾಶ ನೀಡಬಾರದು.

13 ಆಡಳಿತದಲ್ಲಿ ಕನ್ನಡ ಬಳಕೆಯ ಬಗ್ಗೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕು. ಮುಖ್ಯವಾಗಿ ಕನ್ನಡ ಲಿಪಿಯನ್ನು ಆಧುನಿಕ ತಂತ್ರ ವಿಧಾನಗಳಿಗೆ ಹೊಂದಿಸುವ ಕೆಲಸ ತ್ವರಿತವಾಗಿ ನಡೆಯಬೇಕು. ಯಾಂತ್ರಿಕ ಬುದ್ಧಿಮತ್ತೆ ತಂತ್ರದ ಬಳಕೆ ಹೆಚ್ಚಾಗಬೇಕು.

14 ಯಾವುದೇ ಕಾರಣಕ್ಕೆ ಪ್ರಾದೇಶಿಕ ಭಾಷೆಗಳ ಮೇಲೆ ಹಿಂದಿ ಹೇರಿಕೆಗೆ ಅವಕಾಶ ಕೊಡಬಾರದು.

15 ಕನ್ನಡದ ಕೃತಿಗಳನ್ನು ಅನ್ಯಭಾಷೆಗೆ ಅನುವಾದಿಸಿ ಪ್ರಕಟಿಸುವ ಕೆಲಸ ದೊಡ್ಡ ಪ್ರಮಾಣದಲ್ಲಿ ನಡೆಯಬೇಕು. ಇದಕ್ಕಾಗಿ ಭಾಷಾ ಪ್ರಾಧಿಕಾರಕ್ಕೆ ಸೂಕ್ತ ನೆರವು ಒದಗಿಸಬೇಕು.

16 ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನಗಳಲ್ಲಿ ಕೈಗೊಳ್ಳುವ ನಿರ್ಣಯಗಳನ್ನು ಸರಕಾರ ಗಂಭೀರವಾಗಿ ಪರಿಗಣಿಸಿ, ಕೂಡಲಲೇ ಅನುಷ್ಠಾನಗೊಳಿಸಬೇಕು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಬೇಸರ

ಕನ್ನಡ ಭಾಷೆ ಸಂದಿಗ್ಧ ಪರಿಸ್ಥಿತಿಯಲ್ಲಿದೆ

ಪ್ರಧಾನ ವೇದಿಕೆ (ಮಂಡ್ಯ): ಬದಲಾದ ಸಂದರ್ಭದಲ್ಲಿ ಕನ್ನಡ ಭಾಷೆ ಸಂದಿಗ್ಧ ಪರಿಸ್ಥಿತಿಯಲ್ಲಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ, ನಾಡೋಜ ಡಾ. ಮಹೇಶ್ ಜೋಶಿ ಬೇಸರ ವ್ಯಕ್ತಪಡಿಸಿದರು. ಮಂಡ್ಯ ದಲ್ಲಿ ಆರಂಭವಾದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಆಶಯ ನುಡಿಗಳನ್ನಾಡಿದ ಅವರು, ಇಂತಹ ವೇದಿಕೆಗಳ ಮುಖೇನ ಕನ್ನಡ ಕಟ್ಟುವ ಕೆಲಸ ಮಾಡಬೇಕಿದೆ ಎಂದು ಕರೆ ನೀಡಿದರು. ಇಂದಿನ ಮಕ್ಕಳಿಗೆ ಕನ್ನಡದ ಬಗ್ಗೆ ನಿರಾಸಕ್ತಿ ಹೆಚ್ಚಾಗಿ ಕನ್ನಡ ಭಾಷೆಯಿಂದ ವಿಮುಖರಾಗುತ್ತಿ ರುವುದು ಅತ್ಯಂತ ಬೇಸರದ ಸಂಗತಿ. ಇದಕ್ಕೆ ಮಕ್ಕಳು ಮಾತ್ರ ಹೊಣೆಗಾರರಲ್ಲ, ಮಕ್ಕಳ ಪೋಷಕರೂ ಹೊಣೆ ಗಾರರು ಎಂದು ಸೂಚ್ಯವಾಗಿ ತಿಳಿಸಿದರು.

ಕನ್ನಡ ಭಾಷೆ ಕೇವಲ ಅನ್ನದ ಭಾಷೆಯಲ್ಲ, ಈ ನೆಲದ ಅಸ್ಮಿತೆ. ಈ ಭಾಷೆಗೆ ತನ್ನದೇ ಆದ ಗಟ್ಟಿತನ ಇದೆ. ಸಾಂಸ್ಕೃತಿಕ ವೈಭವ ಇದೆ. ಆ ಕಾರಣಕ್ಕಾಗಿ ಎಲ್ಲರೂ ಈ ಬಗ್ಗೆ ಚಿಂತಿಸಬೇಕಿದೆ. ಇದು ಕೇವಲ ಸಮ್ಮೇಳನ ಮಾತ್ರವಲ್ಲ, ಸಾಂಸ್ಕೃತಿಕ ಜಾತ್ರೆ. ಈ ನೆಲದ ಇತಿಹಾಸ, ಪರಂಪರೆ ಸಾರುವ ಜಾತ್ರೆ. ಇಂತಹ ಜಾತ್ರೆ ಸದಾ ಚಲನೆಯಲ್ಲಿರಬೇಕು.

-ನಾಡೋಜ ಡಾ. ಮಹೇಶ್ ಜೋಶಿ,
ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ

ಆದಿಚುಂಚನಗಿರಿ ಮಠದ ಬಾಲಗಂಗಾಧರನಾಥ ಶ್ರೀ ನುಡಿ

ಸಾಹಿತ್ಯದಿಂದ ಸರ್ವೋದಯವಾಗಲಿ

ಕನ್ನಡ ಸಾಹಿತ್ಯ ಸಮ್ಮೇಳನ ವೇದಿಕೆ ಮಂಡ್ಯ: ಜಗತ್ತಿನ ಶ್ರೇಷ್ಠ ಸಾಹಿತ್ಯವೆಲ್ಲ ನಮ್ಮ ಭಾಷೆಗೆ ಬರಲಿ, ನಮ್ಮ ಭಾಷೆಯ ಶ್ರೇಷ್ಠ ಸಾಹಿತ್ಯವೆಲ್ಲ ಇತರ ಭಾಷೆಗಳಿಗೂ ಹೋಗಲಿ ಎಂದು ಆದಿಚುಂಚನಗಿರಿ ಮಠದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ನುಡಿದರು. ಮಂಡ್ಯದಲ್ಲಿ ಆರಂಭಗೊಂಡ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಕವಿ ಕುವೆಂಪು ಅವರ ಮಾತನ್ನು ನೆನಪಿಸಿಕೊಳ್ಳೋಣ. ಇದು ಕನ್ನಡದ ಜಾತ್ರೆ, ಕನ್ನಡದ ನುಡಿಯ ಯಾತ್ರೆ. ಮನೆಗೊಂದು ಹಬ್ಬ, ಊರಿಗೊಂದು ಹಬ್ಬ, ನಾಡಿಗೊಂದು ಹಬ್ಬ. ಇದು ಕೊಳೆಯನ್ನು ತೊಳೆಯಲು, ಅರಿವನ್ನು ಮೂಡಿಸಲು. ಬಾರಿಸು ಕನ್ನಡ ಡಿಂಡಿಮವ. ನಮ್ಮಲ್ಲಿ ಹಲವು ನ್ಯೂನತೆಗಳಿವೆ. ಕ್ಲೇಷಗಳು, ದ್ವೇಷಗಳಿವೆ. ಎಲ್ಲವನ್ನು ಹೋಗಲಾಡಿಸಲು ಇಂಥ ಹಬ್ಬಗಳು ಆವಾಗಾವಗ ಬರುತ್ತಿರಬೇಕು ಎಂದರು. ಕವಿಗಳ, ಸಂತರ ಆದರ್ಶದಲ್ಲಿ ನಾಡಿನಲ್ಲಿ ಸರ್ವೋದಯವಾಗಲಿ. ನಮ್ಮ ಕವಿಗಳನ್ನು ನೆನಪಿಸುವ ಕಾರ್ಯಕ್ರಮವಿದು ಎಂದರು.

ಇಂದಿನ ಸಾಹಿತ್ಯ ಭಾಷೆ ಮೂಲಕ ಗಟ್ಟಿ ಮಾಡಿ ಕೊಳ್ಳುವ, ಭವಿಷ್ಯಕ್ಕೆ ಸೋಪಾನ ರೂಪಿಸಿಕೊಳ್ಳುವ, ಹಿಂದಿನ ಕವಿಗಳನ್ನು ನೆನಪು ಮಾಡಿಕೊಳ್ಳುವ ತ್ರಿವೇಣಿ ಸಂಗಮ ಕಾರ್ಯಕ್ರಮವಿದು. ಜಗತ್ತಿನ ಶ್ರೇಷ್ಠ ಸಾಹಿತ್ಯ ನಮ್ಮ ಭಾಷೆಗೆ ಬರಲಿ. ನ್ಮಮ ಶ್ರೇಷ್ಠ ಸಾಹಿತ್ಯ ನಮ್ಮೆಡೆಗೆ ಬರಲಿ. ಆಗ ನಾವು ಜಗತ್ತಿನ ಎಲ್ಲವನ್ನು ತಿಳಿಯಲು ಸಾಧ್ಯ. ಮಂಡ್ಯದ ನಾಡಿನಲ್ಲಿ ಕನ್ನಡಮ್ಮನ ತೇರು ಸಾಗಲಿ.

-ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ,
ಆದಿಚುಂಚನಗಿರಿ ಮಠ

ಸಾಹಿತ್ಯ ಸಮ್ಮೇಳನದಲ್ಲಿ ಸಚಿವ ಚಲುವರಾಯಸ್ವಾಮಿ ಅಭಿಮತ

ಜನಪದ ನಮ್ಮೆಲ್ಲರ ಸಂಸ್ಕೃತಿಗಳ ತಾಯಿಬೇರು

ಮಂಡ್ಯ: ನಾನು ಮಂಡ್ಯ ಜಿಲ್ಲೆಯ ಉಸ್ತುವಾರಿ ಸಚಿವನಾಗಿರುವ ಸಂದರ್ಭದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಅತೀವ ಸಂತೋಷ ತಂದಿದೆ. ನಾಡು, ನುಡಿ ಹಾಗೂ ಸಾಹಿತ್ಯ ಪರಿಷತ್ತಿಗೆ ಅಪೂರ್ವ ಸೇವೆ ಸಲ್ಲಿಸಿರುವ ಗೊ.ರು.ಚನ್ನಬಸಪ್ಪರವರ ಅಧ್ಯಕ್ಷತೆಯಲ್ಲಿ ಸಮ್ಮೇಳನ ನಡೆಯುತ್ತಿರುವುದು ಇನ್ನಷ್ಟು ಅಭಿಮಾನ ತಂದಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಜಾನಪದ ವಿದ್ವಾಂಸರಾಗಿ , ಕರ್ನಾಟಕ ಜಾನಪದ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಅಪಾರ ಅನುಭವ ಹೊಂದಿರುವ ಗೊ.ರು ಚನ್ನಬಸಪ್ಪ ಅವರನ್ನು ಜನಪದಗಳ ತವರೂರಿನಂತಿರುವ ಮಂಡ್ಯದಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನಕ್ಕೆ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆ ಮಾಡಿರುವುದು ವಿಶೇಷವಾಗಿ ಜಾನಪದ ಕ್ಷೇತ್ರಕ್ಕೆ ಸಂದ ಗೌರವ ಎಂದು ಭಾವಿಸುತ್ತೇನೆ ಎಂದು ತಿಳಿಸಿದರು. ಮಂಡ್ಯ ಜಿಲ್ಲೆ ಅಪ್ಪಟ ಕನ್ನಡದ ನೆಲ, ದೇಶದಲ್ಲೇ ಅತಿಹೆಚ್ಚು ಕನ್ನಡ ಮಾತನಾಡುವ ಜನರು ಹೊಂದಿರುವ ಜಿಲ್ಲೆಯಾಗಿದೆ. ಅಲ್ಲದೇ ಅತಿ ಹೆಚ್ಚು ಕೃಷಿಯನ್ನೇ ಅವಲಂಬಿಸಿರುವ, ಹೃದಯ ಶ್ರೀಮಂತಿಕೆ ಹೊಂದಿರುವ ಗ್ರಾಮೀಣರ ಜಿಲ್ಲೆಯಾಗಿದೆ. ಎಲ್ಲಿ ಕೃಷಿ ಸಂಸ್ಕೃತಿ ಗಟ್ಟಿಯಾಗಿರುತ್ತದೆಯೋ ಅಲ್ಲಿ ಜನಪದವು ಶಕ್ತಿಶಾಲಿ ಯಾಗಿರುತ್ತದೆ. ಜನಪದ ನಮ್ಮೆಲ್ಲರ ಸಂಸ್ಕೃತಿಗಳ ತಾಯಿಬೇರು. ಮಂಡ್ಯ ಜಿಲ್ಲೆಯಲ್ಲಿ ಕಲೆ, ಸಂಸ್ಕೃತಿ, ಸಾಹಿತ್ಯ, ಜಾನಪದ ಶ್ರೀಮಂತವಾಗಿದೆ. ಈ ಸಾಹಿತ್ಯ ಸಮ್ಮೇಳನ ಜಿಲ್ಲೆಯ ಸಾಹಿತ್ಯ ಹಾಗೂ ಜಾನಪದ ಸಂಸ್ಕೃತಿಗಳ ಅನಾವರಣಕ್ಕೂ ಬಹುದೊಡ್ಡ ವೇದಿಕೆಯಾಗಿದೆ ಎಂದರು.

87ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿದರು.

ನೆಲ, ಜಲ ಹಿತಕ್ಕೆ ಬದ್ಧ

ನಮ್ಮ ಸರಕಾರ ನಾಡು, ನೆಲ, ಜಲದ ಹಿತಕ್ಕಾಗಿ ಸದಾ ಶ್ರಮಿಸುತ್ತಿದೆ. ಸಾಹಿತ್ಯ ಪರಿಷತ್ತು ಸಮ್ಮೇಳನದ ಸಂಘಟನೆಗೆ ಯಾರ ಮುಂದೆಯೂ ಕೈಚಾಚುವಂತಾಗಬಾರದು ಎಂಬ ದೃಷ್ಟಿಯಿಂದ ನಮ್ಮ ಸರಕಾರ 25 ಕೋಟಿಗಳ ಅನುದಾನ ಒದಗಿಸಿದೆ.

ವರ್ಷವಿಡೀ ಸುವರ್ಣ ಕರ್ನಾಟಕ ಸಂಭ್ರಮಾಚರಣೆ ನಡೆದಿದೆ. ವಿದೇಶಗಳಲ್ಲಿರುವ ಕನ್ನಡ ಸಂಘಟನೆಗಳನ್ನು ಸಹ ಈ ಸಾಹಿತ್ಯ ಸಮ್ಮೇಳನಕ್ಕೆ ಅಹ್ವಾನಿಸಲಾಗಿದೆ.

ಆ ಮೂಲಕ ಜಗತ್ತಿನಾದ್ಯಂತ ಇರುವ ಕನ್ನಡ ಸಂಘಟನೆಗಳನ್ನು ಬೆಸೆಯುವ ಕಾರ್ಯ ಮಾಡಲಾಗಿದೆ. ರಾಜ್ಯದ ಎಲ್ಲಾ ಭಾಗದ ಕಲೆ, ಸಂಸ್ಕೃತಿ, ಪ್ರಚಲಿತ ವಿದ್ಯಮಾನಗಳು ಸವಾಲುಗಳ ಕುರಿತ ವಿಚಾರಗೋಷ್ಠಿ ಎಲ್ಲಾ ಭಾಗಗಳ ಆಹಾರ ತಿನಿಸುಗಳನ್ನು ಇಲ್ಲಿ ಉಣ ಬಡಿಸಲಾಗುತ್ತಿದೆ ಎಂದು ಹೇಳಿದರು.

ಸಮ್ಮೇಳನ ಸ್ವಾರಸ್ಯ

ಗೋಷ್ಠಿಗಳು ಒಂದು ತಾಸು ತಡ

▸ ಸಾಹಿತ್ಯ ಸಮ್ಮೇಳನದಲ್ಲಿ ನಿಗದಿತ ಕಾರ್ಯಕ್ರಮಗಳು ಒಂದು-ಒಂದೂವರೆ ತಾಸು ತಡವಾಗಿ ಆರಂಭವಾಗುವುದು ಸರ್ವೇಸಾಮಾನ್ಯ. ಹೀಗಾಗಿ ಮಂಡ್ಯ ಸಾಹಿತ್ಯ ಸಮ್ಮೇಳನದ ಎರಡನೇ ದಿನ ವಿಚಾರಗೋಷ್ಠಿಗಳು ಸರಾಸರಿ ಒಂದು ತಾಸು ತಡವಾಗಿ ಆರಂಭವಾಗಿದ್ದಕ್ಕೆ ಯಾರೂ ಬೇಸರಿಸಿಕೊಳ್ಳಲಿಲ್ಲ. 4 ತಾಸು ತಡವಾಗಿ ಆರಂಭವಾಗಿತ್ತು, ಇವತ್ತು 1 ತಾಸು ಯಾವ ಲೆಕ್ಕ ಎಂಬ ಧೋರಣೆ ಕಂಡುಬಂತು.

ಮಳಿಗೆಗಿಂತ ತಿಂಡಿ ತಿನಿಸುಗಳೇ ಹೆಚ್ಚು

▸ ಮಂಡ್ಯದಲ್ಲಿ ನಡೆಯುತ್ತಿರುವ ಸಮ್ಮೇಳನದಲ್ಲಿ ಮಳಿಗೆಗಳಿಗಿಂತ ತಿಂಡಿ ತಿನಿಸುಗಳೆ ಹೆಚ್ಚಾಗಿದ್ದವು. ಮಕ್ಕಳ ಆಟಿಕೆ ಸಾಮಾನುಗಳು ಹೆಚ್ಚಾಗಿ ಕಂಡು ಬಂತು. ಸಮ್ಮೇಳನದ ಮುಖ್ಯ ವೇದಿಕೆಯ ಪಕ್ಕ 40 ರು.ಗೆ ಗೊರಿಲ್ಲಾ ಗ್ಲಾಸ್ ಸಿಗುತ್ತಿತ್ತು. ಹೆಚ್ಚಾಗಿ ಯುವಕ ಯುವತಿಯರು ಈ ಮಳಿಗೆಯ ಸುತ್ತ ಸದಾ ನೆರೆದಿರುತ್ತಿದ್ದರು.

ಫೋಟೋ ಗ್ಯಾಲರಿ

ಭವ್ಯ ಮೆರವಣಿಗೆಯಲ್ಲಿ ರಥದಲ್ಲಿ ವಿರಾಜಮಾನರಾಗಿರುವ ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ

ಕಂಡಿದ್ದು , ಕೇಳಿದ್ದು

ನಾನು ಸಮ್ಮೇಳನಕ್ಕಾಗಿಯೇ ಹಾವೇರಿಯಿಂದ ಬಂದೆ. ಕಳೆದ ವರ್ಷ ನಮ್ಮೂರಿನಲ್ಲಿ ಚೆನ್ನಾಗಿ ಏರ್ಪಡಿಸಿದ್ದೆವು. ಪುಸ್ತಕ ಮಾರಾಟ ಚೆನ್ನಾಗಿ ಆಗಿತ್ತು. ಈ ಬಾರಿ ಆ ದಾಖಲೆಯನ್ನು ಮಂಡ್ಯ ಮುರಿದರೆ ಸಂತೋಷವಾಗುತ್ತದೆ.

-ಶ್ರೀಕರ, ಹಾವೇರಿ, ಶಿಕ್ಷಕ

ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯದಲ್ಲಿ ನೆರವೇರಿರುವುದು ಸಂತಸ ತಂದಿದೆ . ಆದರೆ ಇಲ್ಲಿ ಸಾಹಿತಿಗಳಿಗೆ ಪ್ರೋತ್ಸಾಹವಿಲ್ಲ. ರಾಜಕಾರಣಿಗಳಿಗೆ ಅಷ್ಟೇ ಪ್ರಚಾರ ಕೊಟ್ಟಿದ್ದಾರೆ. ವೇದಿಕೆಯ ಮೇಲೂ ಅವರದ್ದೇ ಅಬ್ಬರ. ನಾವೆಲ್ಲ ಹಿರಿಯ ಸಾಹಿತಿಗಳ ಮಾತನ್ನು ಕೇಳಿಸಿಕೊಳ್ಳಲು ದೂರದ ಊರುಗಳಿಂದ ಬಂದಿದ್ದೇವೆ. ಆದರೆ ರಾಜಕಾರಣಿಗಳ ಮಾತಿನ ಭರಾಟೆ ಮಧ್ಯೆ ಸಾಹಿತಿಗಳು ತಮ್ಮ ಮಾತುಗಳನ್ನು ಮೊಟಕುಗೊಳಿಸಬೇಕಾಯಿತು. ದೊಡ್ಡರಂಗೇಗೌಡ ಅಂತಹ ಖ್ಯಾತ ಸಾಹಿತಿಗಳಿಗೆ ಮಾತನಾಡಲು ಎರಡು ನಿಮಿಷಗಳಷ್ಟೇ ಅವಕಾಶ ನೀಡಿದರು. ಅದು ನಿಜಕ್ಕೂ ಬೇಸರ ತರಿಸಿತು.

- ಶಿವಕುಮಾರ್ , ವಿದ್ಯಾರ್ಥಿ, ಹಂಪಿ ವಿಶ್ವವಿದ್ಯಾಲಯ

ಸಮ್ಮೇಳನದಲ್ಲಿ ಸಮಯ ಪ್ರಜ್ಞೆಯ ಕೊರತೆ ಇತ್ತು. ಮಹೇಶ್ ಜೋಷಿ ಅವರು ಪ್ರತಿಬಾರಿ ಸಮಯ ಪ್ರಜ್ಞೆಯ ಬಗ್ಗೆ ಮಾತನಾಡುತ್ತಿರುತ್ತಾರೆ. ಆದರೆ ಅವರ ನೇತೃತ್ವದ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮದಲ್ಲಿ ಯಾವ ಗೋಷ್ಠಿಯೂ ಸರಿಯಾಗಿ ಪ್ರಾರಂಭವಾಗಲಿಲ್ಲ. 4.30ಕ್ಕೆ ಪ್ರಾರಂಭವಾಗಬೇಕಿದ್ದ ಮಹಿಳಾ ಕವಿಗೋಷ್ಠಿ 6.30ಕ್ಕೆ ಪ್ರಾರಂಭವಾಯಿತು. ಹೊರ ಜಿಲ್ಲೆ ಮತ್ತು ಹೊರ ರಾಜ್ಯಗಳಿಂದ ಬಂದಿದ್ದ ಕವಿಗಳು ತಮ್ಮ ಕವಿತೆಗಳನ್ನು ಒಂದೇ ನಿಮಿಷದಲ್ಲಿ ವೇಗವಾಗಿ ಓದಿ ಮುಗಿಸಿದರು. ಅವರ ಕವಿತೆಗಳು ಯಾರನ್ನೂ ಮುಟ್ಟಲಿಲ್ಲ. ಸಮ್ಮೇಳನದಲ್ಲಿ ಕವಿಗಳಿಗೆ ಆದ್ಯತೆಯಿಲ್ಲದ ಮೇಲೆ ಯಾವುದೇ ಪ್ರಯೋಜನವಿಲ್ಲ.

-ನಿರ್ಮಲ, ಸಾಹಿತಿ

ಮಂಡ್ಯ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಭಾಷಣದಲ್ಲಿ ಸಿಎಂ ನುಡಿ, ಕನ್ನಡದ ಅಭಿವೃದ್ಧಿಗೆ ಮಂಡ್ಯದ ಕೊಡುಗೆ ಗಣನೀಯ | ಮಂಡ್ಯದ ಜನರ ಕನ್ನಡಾಭಿಮಾನ ಸ್ಮರಣೀಯ

ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ

ವಿಶ್ವವಾಣಿ ಸುದ್ದಿ ಮನೆ

(ರಾಜಮಾತೆ ಕೆಂಪನಂಜಮ್ಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆ)

ಕನ್ನಡ ನೆಲದಲ್ಲಿ ಕನ್ನಡ ಭಾಷೆಯೇ ಸಾರ್ವಭೌಮ ಎಂಬುದನ್ನು ನೆನಪಿಟ್ಟುಕೊಳ್ಳಿ. ಅನ್ಯಭಾಷಿಕರೊಂದಿಗೆ ಅವರದೇ ಭಾಷೆಯಲ್ಲಿ ಮಾತನಾಡುವುದನ್ನು ಬಿಡಿ. ಅವರಿಗೆ ಕನ್ನಡ ಕಲಿಸಿ. ಕನ್ನಡ ಉಳಿಸಿ ಬೆಳೆಸಬೇಕಾಗಿದೆ. ಇದು ದೇಶಭಾಷೆ, ಸಾವಿರಾರು ವರ್ಷಗಳ ಸುಪುಷ್ಟ ಸಾಹಿತ್ಯ ಭಾಷೆ. ಮಹಾಕವಿಗಳನ್ನೂ ಶಿಲ್ಪಿಗಳನ್ನೂ ರಾಜಾಧಿರಾಜರನ್ನೂ ವೀರಾಧಿವೀರರನ್ನೂ ರಸಋಷಿ ದಾರ್ಶನಿಕರನ್ನು ಹಡೆದಿರುವ ಭಾಷೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದರು.

ಮಂಡ್ಯದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾವೇರಿ ಕಣಿವೆಯಲ್ಲಿರುವ ಮಂಡ್ಯ ಜಿಲ್ಲೆಯಲ್ಲಿ ಕಾವೇರಿ, ಹೇಮಾವತಿ, ಶಿಂಷಾ, ಲೋಕಪಾವನಿ ಮುಂತಾದ ಜೀವನದಿಗಳು ಹರಿಯುತ್ತಿವೆ. ಕನ್ನಡ ಸಾಹಿತ್ಯ ಪರಂಪರೆಯನ್ನು ಸದಾಕಾಲಕ್ಕೂ ಮೆರೆಸಿರುವ ಮಂಡ್ಯ, ಅಪ್ಪಟ ಕನ್ನಡದ ನೆಲ. ಭತ್ತದ ಕಣಜ, ಸಕ್ಕರೆನಾಡು ಎಂದೇ ಜನಜನಿತ. ಜಗತ್ತಿನ ಯಾವ ಮೂಲೆಯ ಭಾಷಿಕರೇ ಬಂದರೂ ಅವರಿಗೆ ಒಂದೇ ತಿಂಗಳಲ್ಲಿ ಕನ್ನಡವನ್ನು ಕಲಿಸುತ್ತೇವೆ ಎಂಬ ಭಾಷಾಭಿಮಾನ ಮತ್ತು ದಿಟ್ಟತನ ಮಂಡ್ಯದ ಜನರದ್ದು ಎಂದು ಪ್ರಶಂಸಿಸಿದರು.

ಕನ್ನಡದ ಅಭಿವೃದ್ಧಿಗೆ ಮಂಡ್ಯದ ಕೊಡುಗೆ ಸ್ಮರಣೀಯ

ಮಂಡ್ಯ ಜಿಲ್ಲೆಯು ಅಪ್ಪಟ ಕನ್ನಡಿಗರು ವಾಸಿಸುವ ಜಿಲ್ಲೆ, ಕನ್ನಡ ಭಾಷೆ ಮತ್ತು ಸಂಸ್ಕೃತಿ ವಿಕಾಸಕ್ಕೆ ಈ ಜಿಲ್ಲೆಯ ಕೊಡುಗೆ ಅಪಾರ. ಕ್ರಿ.ಶ 10ನೇ ಶತಮಾನದ ಆತಕೂರಿನ ಶಾಸನ ನಾಡಿನ ಹಳೆಯ ಶಾಸನಗಳಲ್ಲೊಂದು. ನಾಯಿಯೊಂದರ ವೀರಮರಣವೂ ಇತಿಹಾಸದಲ್ಲಿ ನೆಲೆ ನಿಲ್ಲುವಂತೆ ಮಾಡಿದ ಶಾಸನ ಮತ್ತು ಅಲ್ಲಿ ಬಳಕೆಯಾದ ಕನ್ನಡವನ್ನು ನಾವು ಮರೆಯಬಾರದು. ನಮ್ಮ ಭಾಷೆ, ನಮ್ಮ ಸಂಸ್ಕೃತಿ, ಪರಂಪರೆಗಳನ್ನು ಪ್ರತಿನಿಧಿಸುತ್ತದೆ. ವಿಶ್ವವೇ ಜಾಗತಿಕ ಹಳ್ಳಿಯಾಗಿ ಪರಿವರ್ತಿತವಾಗಿರುವ ಈ ಸಂದರ್ಭದಲ್ಲಿ ನಾವು ನಮ್ಮತನವನ್ನು ಉಳಿಸಿಕೊಳ್ಳುವ ಅಗತ್ಯ ಹಿಂದೆಂದಿಗಿಂತಲೂ ಈಗ ಹೆಚ್ಚಿದೆ. ನುಡಿ ಬಿಟ್ಟರೆ ನಾಡು ಬಿಟ್ಟಂತೆ ಭಾಷೆಗೇಡಿ ದೇಶಗೇಡಿಯೂ ಆಗುತ್ತಾನೆ ಎಂದು ಕುವೆಂಪು ಹೇಳಿದ್ದರು ಎಂದು ಅವರು ಸ್ಮರಿಸಿಕೊಂಡರು.

ಮಂಡ್ಯ ಅಪ್ಪಟ ಕನ್ನಡದ ನೆಲ: ಯಾರೇ ಅನ್ಯ ಭಾಷಿಕರು ಬಂದರೂ ಒಂದೇ ತಿಂಗಳಲ್ಲಿ ಕನ್ನಡ ಕಲಿಸಬಲ್ಲ ಕನ್ನಡಿಗರ ನೆಲ ಇದು. ಇಂತಹ ಕನ್ನಡದ ನೆಲದಲ್ಲಿ ನಿಜಾರ್ಥದ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಮಂಡ್ಯ ಜಿಲ್ಲೆಯ ಸಾಹಿತ್ಯ- ಸಂಸ್ಕೃತಿಗಳ ಪರಂಪರೆ ಬಹಳ ಉತ್ಕೃಷ್ಟವಾದುದು. ಕನ್ನಡ ನಾಡಿಗೆ ಗೋವಿನ ಹಾಡು ಎಂಬ ಶ್ರೇಷ್ಠ ಸಾಹಿತ್ಯವನ್ನು ಕೊಟ್ಟ ನೆಲವಿದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸಮ್ಮೇಳನದ ಉದ್ಘಾಟನೆಯಲ್ಲಿ ಸಮಾಜಕಲ್ಯಾಣ ಇಲಾಖೆಯ ಸಚಿವ ಡಾ ಎಚ್.ಸಿ.ಮಹದೇವಪ್ಪ, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಮುನಿಯಪ್ಪ, ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಶಾಸಕರಾದ ಪಿ.ಎಂ.ನರೇಂದ್ರ ಸ್ವಾಮಿ, ಪಿ. ರವಿಕುಮಾರ್, ಎಂ.ಬಿ,ರಮೇಶ್ ಬಂಡಿ ಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ ಇದ್ದರು. ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಸಾನಿಧ್ಯ ವಹಿಸಿದ್ದರು. ಸಮ್ಮೇಳನಾಧ್ಯಕ್ಷ ನಾಡೋಜ ಡಾ. ಗೊ.ರು.ಚನ್ನಬಸಪ್ಪ, ಹಿರಿಯ ಸಾಹಿತಿ ಡಾ. ದೊಡ್ಡರಂಗೇಗೌಡ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಚಂದ್ರಶೇಖರ ಕಂಬಾರ ಭಾಗವಹಿಸಿದ್ದರು.

ಮಂಡ್ಯ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಾವೇರಿ ಮಾತೆಯ ಮೂರ್ತಿಯಿದ್ದ ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು. ಆದಿಚುಂಚನಗಿರಿ ಪೀಠದ ಅಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಸಚಿವ ಚಲುವರಾಯಸ್ವಾಮಿ ಹಾಗೂ ಇತರ ಪ್ರಮುಖರು ವೇದಿಕೆಯಲ್ಲಿದ್ದರು.

ವೇದಿಕೆಯಲ್ಲಿ ವಿಶೇಷಗಳು

- ಇತ್ತೀಚೆಗೆ ನಿಧನರಾದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಗೆ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಕೆ.
- ಮಂಡ್ಯ ಜಿಲ್ಲೆಯ ಸರಕಾರಿ ನೌಕರರು ಒಂದು ದಿನದ ವೇತನ ಸಮ್ಮೇಳನಕ್ಕೆ ಅರ್ಪಣೆ.
- ಸಮ್ಮೇಳನದಲ್ಲಿ ಶಾಸಕ ನರೇಂದ್ರ ಸ್ವಾಮಿ ಅವರಿಂದ ಸಂವಿಧಾನ ಪೀಠಿಕೆಯ ವಾಚನ.
- ವೇದಿಕೆ ಹಾಗೂ ಮಹಾಮಂಟಪಗಳ ಉದ್ಘಾಟನೆ
- ಅಂಚೆ ಕಚೇರಿ ಸಿದ್ಧಪಡಿಸಿದ ಕನ್ನಡ ಲಾಂಛನವುಳ್ಳ ಅಂಚೆ ಲಕೋಟೆ ಬಿಡುಗಡೆ.

ಸಿದ್ದರಾಮಯ್ಯ ಭಾಷಣದ ಮುಖ್ಯಾಂಶಗಳು

- ಓದು-ಬರಹ ಭಾಷೆ ಬರವಣಿಗೆ ಎಲ್ಲವೂ ಪರಕೀಯವಾದರೆ ನಮ್ಮ ಮಾತೃಭಾಷೆಗೆ ಅಪಾಯ ತಪ್ಪಿದ್ದಲ್ಲ.
- ಯಾವುದೇ ಭಾಷೆಯ ಅಳಿವು ಆ ಭಾಷೆ ಸಮುದಾಯದ ಅಳಿವೂ ಆಗಿರುತ್ತದೆ.
- ಭಾಷೆ ಬೆಳೆಯುವುದು ಉಳಿಯುವುದು ಅದನ್ನು ಬಳಸಿದಾಗ ಮಾತ್ರ. ಬಳಸದೇ ಹೋದರೆ ಭಾಷೆಯ ಅಸ್ತಿತ್ವ ಹಾಗೂ ಬೆಳವಣಿಗೆ ಎರಡಕ್ಕೂ ಅಪಾಯ ತಪ್ಪಿದ್ದಲ್ಲ.
- ಕನ್ನಡದ ಕಲೆ, ಜಾನಪದ, ಭಾಷೆ, ಉದ್ಯೋಗದ ಜತೆಗೆ ಕನ್ನಡದ ಅಸ್ಮಿತೆಗೆ ಉಂಟಾಗಿರುವ ಸಮಸ್ಯೆಗಳನ್ನು ಗುರುತಿಸಿ ಹಾಗೂ ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಸಾಹಿತ್ಯ ಸಮ್ಮೇಳನಗಳು ಮಹತ್ವದ ಕೊಡುಗೆ ನೀಡುತ್ತಾ ಬಂದಿವೆ.
- ಇಂಗ್ಲಿಷ್ ಸೇರಿದಂತೆ ಪ್ರಮುಖ ಭಾಷೆಗಳ ಕೃತಿಗಳು ಡಿಜಿಟಲೀಕರಣದಿಂದ ಜಗತ್ತಿನ ಎಲ್ಲೆಡೆ ಎಲ್ಲರಿಗೂ ಮುಕ್ತವಾಗಿ ದೊರೆಯುತ್ತದೆ.
- ಕನ್ನಡದ ಸಮಗ್ರ ಸಾರಸ್ವತ ಲೋಕದ ಡಿಜಿಟಲೀಕರಣ ಕಾರ್ಯ ಆರಂಭಿಸಲಾಗಿದೆ. ಜಗತ್ತಿನಲ್ಲಿರುವ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿ ಜ್ಞಾನವನ್ನು ವೃದ್ಧಿಸುವ ಕೆಲಸವಾಗಬೇಕು.
- ಮೈಸೂರಿನ ಹಳೆಯ ಜಿಲ್ಲಾಧಿಕಾರಿ ಕಚೇರಿ ಕಟ್ಟಡದಲ್ಲಿ ಕನ್ನಡ ಸಮಗ್ರ ನಾಗರಿಕತೆಯ ವಿಕಾಸ, ಸಂಸ್ಕೃತಿಯ ಇತಿಹಾಸಗಳನ್ನು ಬಿಂಬಿಸುವ ವಸ್ತುಸಂಗ್ರಹಾಲಯ ಸ್ಥಾಪಿಸಲಾಗುವುದು.

ಶಿಕ್ಷಣದಲ್ಲಿ ಮಕ್ಕಳಿಗೆ 3-ಎಚ್ ಸೂತ್ರ ಅಳವಡಿಸಿ

ಸಮ್ಮೇಳನಕ್ಕೆ ಅನೇಕ ಜನ ಶಿಕ್ಷಕರು ಬಂದಿದ್ದೀರಿ. ನಾನು ತಮಗೆ ಕೇಳುವುದಿಷ್ಟು. ಸಂಕಷ್ಟದಲ್ಲಿರುವ ಭಾಷೆಗಳಲ್ಲಿ ಕನ್ನಡವೂ ಒಂದೆಂದು ವಿದ್ವಾಂಸರು ಹೇಳುತ್ತಾರೆ. ಇದಕ್ಕೆ ಕಾರಣಗಳೇನು ಎಂಬುದನ್ನು ಕಂಡುಕೊಳ್ಳಬೇಕಾಗಿದೆ. ನನಗೆ ತಿಳಿದ ಮಟ್ಟಿಗೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಕೆಲವು ಸಮಸ್ಯೆಗಳಿವೆ. ಶಿಕ್ಷಣ ವ್ಯವಸ್ಥೆಯಲ್ಲಿ ನಾವು ಮಕ್ಕಳಿಗೆ 3-ಎಚ್ ಸೂತ್ರವನ್ನು ಅಳವಡಿಸಿಕೊಳ್ಳಬೇಕಾಗಿದೆ. ಹೆಡ್, ಹಾರ್ಟ್ ಮತ್ತು ಹ್ಯಾಂಡ್ ಎಂದು ಕರೆಯಲಾಗುವ ಈ ಸೂತ್ರಗಳು ಮೆದುಳು, ಕರುಣೆ ಮತ್ತು ಕೌಶಲ್ಯವು ಸೇರಿ ರೂಪುಗೊಂಡ ಶಿಕ್ಷಣ ವ್ಯವಸ್ಥೆ ನಮ್ಮದಾಗಬೇಕಾಗಿದೆ. ಬುದ್ಧ ಇದನ್ನು ಯಶಸ್ವಿಯಾಗಿ ಪ್ರಯೋಗಿಸಿದ್ದ. ಗಾಂಧೀಜಿಯವರೂ ಇದನ್ನೆ ಹೇಳಿದ್ದರು. ಈಗಿನ ಶಿಕ್ಷಣ ವ್ಯವಸ್ಥೆಯು ಹಳೆಯ ವೈದಿಕ ಶಿಕ್ಷಣ ವ್ಯವಸ್ಥೆಯಂತೆಯೆ ಬಾಯಿಪಾಠ ಮಾಡುವ ಉಪಯೋಗವಿಲ್ಲದ ವ್ಯವಸ್ಥೆಯಾಗಿದೆ. ಕನ್ನಡ ಉಳಿಯಬೇಕಾದರೆ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಆಮೂಲಾಗ್ರ ಬದಲಾಯಿಸಿ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಸೆಳೆಯಬೇಕಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸಾಹಿತ್ಯ ಸಮ್ಮೇಳನ ಎಂದರೆ ನಾಡು, ನುಡಿ, ಸೊಬಗು ಸೂಸುವ ಸಂಭ್ರಮದ ಜಾತ್ರೆ. ಸಮಸ್ತ ಕನ್ನಡಿಗರು ಒಂದೆಡೆ ಸೇರಿ ಚರ್ಚಿಸುವ ವೇದಿಕೆ. ಕನ್ನಡ ನಾಡಿನ ಹಿರಿಮೆ ಎತ್ತಿಹಿಡಿಯುವ ಕೆಲಸ ಸಾಹಿತ್ಯ ಸಮ್ಮೇಳನದ ಮೂಲಕ ಮಾಡಬೇಕಿದೆ. ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆ ಕ್ಷೀಣಿಸುತ್ತಿರುವುದು ನಿಜಕ್ಕೂ ಬೇಸರ. ಕನ್ನಡ ಭಾಷೆ ಸಂಕಷ್ಟದಲ್ಲಿದೆ. ಮಕ್ಕಳಲ್ಲಿ ಕನ್ನಡ ಕಲಿಕೆ ಆಸಕ್ತಿ ಕುಸಿಯುತ್ತಿದೆ. ಇದಕ್ಕೆ ಕಾರಣ ಕನ್ನಡ ಅನ್ನದ ಭಾಷೆ ಆಗದಿರುವುದು. ಭಾಷೆ ಉಳಿದರೆ ಸಂಸ್ಕೃತಿ ಉಳಿದಂತೆ.

-ನಾಡೋಜ ಮಹೇಶ್ ಜೋಶಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ

ಕನ್ನಡದ ಹಬ್ಬ ಆಚರಿಸುವ ಮೂಲಕ ಕನ್ನಡ ಡಿಂಡಿಮ ಬಾರಿಸಬೇಕು. ನಮ್ಮಲ್ಲಿರುವ ಹಲವಾರು ನ್ಯೂನತೆಗಳನ್ನು ಹೋಗಲಾಡಿಸಲು ಕನ್ನಡದ ಹಬ್ಬಗಳನ್ನು ಆಚರಿಸಬೇಕು. ಕವಿಗಳ ಮಾರ್ಗದರ್ಶನದಲ್ಲಿ ನಾಡು ಬೆಳವಣಿಗೆ ಹೊಂದಬೇಕು. ಜಗತ್ತಿನ ಶ್ರೇಷ್ಠ ಸಾಹಿತ್ಯ ನಮ್ಮ ಕನ್ನಡ ಭಾಷೆಗೆ ಬರಬೇಕು.

-ನಿರ್ಮಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ ಸಂಸ್ಥಾನದ ಪೀಠಾಧ್ಯಕ್ಷ

ಸಾಹಿತ್ಯ ಸಮ್ಮೇಳನ ನಮ್ಮ ಸಂಸ್ಕೃತಿ, ಆಚಾರ- ವಿಚಾರ ಪರಿಚಯಿಸುವ ಮೂಲಕ ಯುವ ಸಮುದಾಯಕ್ಕೆ ಉತ್ತಮ ಸಂದೇಶ ನೀಡಲಿದೆ. ಮುಂದಿನ ಪೀಳಿಗೆ ಕನ್ನಡದ ನೆಲ, ಜಲ ಉಳಿಸಿಕೊಂಡು ಹೋಗುವ ದಾರಿ ತೋರಬೇಕು. ಕನ್ನಡದಲ್ಲಿ ಹುಟ್ಟಿದ ಜನತೆಯ ನಡುವೆ ಭಾವನಾತ್ಮಕ ಸಂಬಂಧವಿದೆ. ಎಲ್ಲಾ ಜಾತಿ, ಧರ್ಮಗಳನ್ನು ಒಗ್ಗೂಡಿಸುವ ಶಕ್ತಿ ಕನ್ನಡ ಭಾಷೆಗಿದೆ.

-ಯು.ಟಿ.ಖಾದರ್, ವಿಧಾನಸಭಾಧ್ಯಕ್ಷ

ಜಗದ ಮೂಲೆಮೂಲೆಗೂ ಕನ್ನಡದ ವಾಣಿ ಪಸರಿಸಲಿ. ಕನ್ನಡ ಭಾಷೆಯನ್ನು ಪ್ರೇಮಿಸಬೇಕು. ನೆಲ, ಜಲದ ಉಳಿವಿಗಾಗಿ ಒಟ್ಟಾಗಿ ಹೋರಾಡಬೇಕು. ನಾವು ಎಲ್ಲೇ ಇದ್ದರೂ ಕನ್ನಡಿಗರಾಗಿ ನಾಡಿನ ಏಳಿಗೆಗೆ ಶ್ರಮಿಸೋಣ. ಅತಿಹೆಚ್ಚು ಕನ್ನಡ ಭಾಷೆ ಮಾತನಾಡುವ ಜಿಲ್ಲೆ ಎಂದರೆ ಅದು ನಮ್ಮ ಮಂಡ್ಯ. ಗ್ರಾಮೀಣ ಸೊಗಡನ್ನು ಮೈಗೂಡಿಸಿಕೊಂಡಿರುವ ಮಂಡ್ಯ ಸಾಹಿತ್ಯ ಕ್ಷೇತ್ರಕ್ಕೂ ದೊಡ್ಡ ಕೊಡುಗೆ ನೀಡಿದೆ.

-ಎನ್. ಚಲುವರಾಯಸ್ವಾಮಿ, ಕೃಷಿ ಸಚಿವ

ಮೈಸೂರಿನ ವಿಶೇಷ ಚೇತನ ರಮೇಶ್ ಶೆಟ್ಟಿಯ ವಿನೂತನ ಪ್ರಯತ್ನ | ಸಮ್ಮೇಳನದಲ್ಲಿ ಭಾಗಿ

ಗಮನ ಸೆಳೆದ ಕರುನಾಡ ಅಂಬಾರಿ

ಮಂಡ್ಯ: ಸಕ್ಕರೆನಾಡಿನಲ್ಲಿ ನಡೆಯುತ್ತಿರುವ ನುಡಿ ಜಾತ್ರೆಗೆ ಆಗಮಿಸಿದ ವಿಶೇಷ ಚೇತನರೊಬ್ಬರ ಕರುನಾಡ ಅಂಬಾರಿಯೊಂದು ಎಲ್ಲರ ಗಮನ ಸೆಳೆಯಿತು.

ಮೈಸೂರಿನ ಇಲವಾಲದ ವಿಶೇಷ ಚೇತನ ರಮೇಶ್ ಶೆಟ್ಟಿ ಅವರು ತಮ್ಮ ವಿಶೇಷ ಮೂರು ಚಕ್ರದ ಬೈಕ್ ಸಿಂಗರಿಸಿಕೊಂಡು ಕೆಂಪು-ಹಳದಿಯ ಕನ್ನಡ ಬಾವುಟದ ಮಾದರಿಯಲ್ಲಿ ಉಡುಪು ಧರಿಸಿ ಸಾಹಿತ್ಯ ಸಮ್ಮೇಳನದಲ್ಲಿ ಕಾಣಿಸಿಕೊಂಡು ಎಲ್ಲರ ಗಮನ ಸೆಳೆದರು. ಶೆಟ್ಟಿ ಜತೆ ಅವರ ಇಬ್ಬರು ಪುತ್ರಿಯರು ಮತ್ತು ಪತ್ನಿಯೂ ಸಾಥ್ ನೀಡಿದ್ದಾರೆ.

ನಾಡಿನ ಇತಿಹಾಸದ ಪ್ರಚಾರಕ್ಕೆ ಕನ್ನಡದ ಅಂಬಾರಿ

ಕನ್ನಡನಾಡಿನಲ್ಲಿ ಹುಟ್ಟಿ ಕನ್ನಡದಲ್ಲಿ ಪದವಿ ಪಡೆದಿರುವ ನಾನು ರಾಜ್ಯದಲ್ಲಿನ ಪರಭಾಷಿಕರಿಗೆ ಕನ್ನಡ ಭಾಷೆ ಕಲಿಸಬೇಕು ಎಂಬ ಮಹದಾಸೆಯಿಂದ ಈ ಅಂಬಾರಿಯನ್ನು ಮೆರೆಸುತ್ತಿದ್ದೇನೆ ಎಂದು ರಮೇಶ್ ಶೆಟ್ಟಿ ಹೇಳಿದರು.

ಕಲಾತಂಡಗಳ ಮೆರುಗು

ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿ ರಾಜ್ಯ ಮತ್ತು ಹೊರರಾಜ್ಯದ ಕಲಾತಂಡಗಳು ಗಮನ ಸೆಳೆದವು. ನಂದಿಧ್ವಜ, ಚಕ್ಕಡಿಗಾಡಿ, ಕೊಂಬುಕಹಳೆ, ನಾದಸ್ವರ, ಸ್ತಬ್ಧಚಿತ್ರ, ವೀರಗಾಸೆ, ತಮಟೆ, ಕಂಸಾಳೆ, ಮಹಿಳಾ ವೀರಗಾಸೆ, ಕೀಲುಕುದುರೆ, ಜಗ್ಗಲಿಗೆ ಮೇಳ, ಪೂರ್ಣಕುಂಭ, ನಗಾರಿ, ಛತ್ರಿಚಾಮರ, ಲಿಡಕರ್ ಸ್ತಬ್ಧಚಿತ್ರ, ಖಾಸಬೇಡರಪಡೆ, ಭಾಗವಂತಿಕೆ, ಹಗಲು ವೇಷ, ಅರೆವಾದ್ಯ, ಪೆಟ್ಟಿಗೆ ಮಾರಮ್ಮ, ಕೋಲಾಟ, ಗಾರುಡಿಗೊಂಬೆ, ಕರಗ, ಚಿಲಿಪಿಲಿ ಗೊಂಬೆ, ದಾಸಪ್ಪ ಜೋಗಪ್ಪ, ಬೆಂಕಿಭರಾಟೆ, ದೊಣ್ಣೆ ವರಸೆ, ಚಿಟ್ಟಲಗಿ ಮೇಳ, ಷಹನಾಯವಾದನ, ಗಾರುಡಿ ಗೊಂಬೆ, ಯಕ್ಷಗಾನ ಗೊಂಬೆ, ವಾನರಸೇನೆ, ಕರಡಿ ಮಜಲು, ದೇವಿ ವೇಷಧಾರಿ, ಕೀಲು ಕುದುರೆ, ನೃತ್ಯ, ಮರಗಾಲು, ಮುಳ್ಳು ಕುಣಿತ, ಡೊಳ್ಳು ಕುಣಿತ, ಪೂಜಾಕುಣಿತ, ಡೊಳ್ಳು ಕುಣಿತ, ಹಾಲಕ್ಕಿ ಸುಗ್ಗಿ ಕುಣಿತ, ಪಟಕುಣಿತ, ರಂಗದಕುಣಿತ, ಮಹಿಳಾ ಡೊಳ್ಳು ಕುಣಿತ, ಸೋಮನ ಕುಣಿತ, ಗೊರವರ ಕುಣಿತ, ಲಂಬಾಣಿ ನೃತ್ಯ, ಕೋಳಿ ನೃತ್ಯ, ಕೊಡವ ನೃತ್ಯ, ಜೋಗತಿ ನೃತ್ಯ, ವೀರಮಕ್ಕಳ ಕುಣಿತ, ಸತ್ತಿಗೆ ಕುಣಿತ, ದಟ್ಟಿ ಕುಣಿತ, ಹಲಗು ಕುಣಿತ, ಪಟಕುಣಿತ, ನಾಲ್ವಡಿ ಕೃಷ್ಣರಾಜ ಒಡೆಯರ್, ಕೆಂಪೇಗೌಡ, ವಿಶ್ವೇಶ್ವರಯ್ಯ ವೇಷಧಾರಿ, ಅಶ್ವಾರೋಹಿ ದಳ, ಟಾಂಗಾ ಗಾಡಿ, ಎತ್ತಿನ ಗಾಡಿ, ಸಮ್ಮೇಳನಾಧ್ಯಕ್ಷರ ಭಾವಚಿತ್ರ ಒಳಗೊಂಡ 87 ಆಟೋ ರಿಕ್ಷಾಗಳು, ಸ್ಕೌಟ್ಸ್ ಮತ್ತು ಗೈಡ್ಸ್, ಎನ್‌ಸಿಸಿ, ಭಾರತ್ ಸೇವಾದಳ ತಂಡ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು.

ರಾಜಮಾತೆ ಕೆಂಪನಂಜಮ್ಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಧಾನ ವೇದಿಕೆ

ದೃಷ್ಟಿಚೇತನರ ಲೋಕದೃಷ್ಟಿ ತೋರಿಸಿಕೊಟ್ಟ ಕವಿಗೋಷ್ಠಿ

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇದೇ ಮೊದಲ ಬಾರಿಗೆ ದೃಷ್ಟಿಚೇತನರ ವಿಶೇಷ ಕವಿಗೋಷ್ಠಿ' ಆಯೋಜಿಸಿರುವುದು ವಿಶೇಷವಾಗಿತ್ತು.

ವಿಶೇಷಚೇತನರು ಹಾಗೂ ದೃಷ್ಟಿಚೇತನ ಕವಿಗಳಿಗೆ ಸಾಕಷ್ಟು ಕಾರ್ಯಕ್ರಮಗಳಲ್ಲಿ ಅವಕಾಶ ಸಿಗುತ್ತಿರಲಿಲ್ಲ. ತಮ್ಮ ಪ್ರತಿಭೆಗೆ ತಕ್ಕ ವೇದಿಕೆಗಳು ಸೃಷ್ಟಿಯಾಗುತ್ತಿರಲಿಲ್ಲ. ಅಂಥವರಿಗೆ ಕನ್ನಡ ಸಾಹಿತ್ಯ ಪರಿಷತ್ತು ವೇದಿಕೆ ಕಲ್ಪಿಸಿತ್ತು.

ಕವಿತೆಯಂಥಾ ಸೃಜನಶೀಲ ರಚನೆಯ ಹಿಂದಿನ ಅವರ ಶ್ರಮ ನಮ್ಮ ಊಹೆಗೂ ನಿಲುಕದ್ದು. ಆದರೆ ಈ ಬಾರಿ ದೃಷ್ಟಿಚೇತನರಿಗೆ ವಿಶೇಷವಾಗಿ ವೇದಿಕೆ ಕಲ್ಪಿಸಲಾಗಿತ್ತು. ಗೋಷ್ಠಿಯಲ್ಲಿ ಮೊದಲ ಕವಿಗೋಷ್ಠಿಯೇ ದೃಷ್ಟಿಚೇತನರ ವಿಶೇಷ ಕವಿಗೋಷ್ಠಿ ನಡೆಯಿತು. ಮೊದಲಿನಿಂದಲೂ ಯಾವ ಯಾವ ಗೋಷ್ಠಿಗಳು ಇರಬೇಕು ಎಂಬ ಚರ್ಚೆಗಳು, ಸಲಹೆಗಳು, ಚಿಂತಕರು, ವಿಚಾರವಂತರು, ಸಾಹಿತಿಗಳಿಂದ ಕೇಳಿ ಬರುತ್ತಲೇ ಇತ್ತು. ಅದರಲ್ಲಿ ವಿಕಲ ಹಾಗೂ ದೃಷ್ಟಿಚೇತನರ ಗೋಷ್ಠಿಯೂ ಒಂದಾಗಿತ್ತು. ಅದರಂತೆ ಸಾಹಿತ್ಯ ಪರಿಷತ್ತು ದೃಷ್ಟಿಚೇತನರ ವಿಶೇಷ ಕವಿಗೋಷ್ಠಿಗೆ ಅವಕಾಶ ನೀಡಿರುವುದು ಸಾಕಷ್ಟು ದೃಷ್ಟಿಚೇತನ ಕವಿಗಳಿಗೆ ಸ್ಫೂರ್ತಿ ತುಂಬಿದಂತಾಯಿತು.

ಮೂರು ನಿಮಿಷ ಕಾಲಾವಕಾಶ: ಕವಿಗೋಷ್ಠಿಗೆ ಭಾಗವಹಿಸುವ ಪ್ರತಿಯೊಬ್ಬ ಕವಿಗೂ ಕವಿತೆ ಮಂಡಿಸಲು ತಲಾ 3 ನಿಮಿಷ ಕಾಲಾವಕಾಶ ನೀಡಲಾಗಿತ್ತು. ದೃಷ್ಟಿಚೇತನರ ವಿಶೇಷ ಕವಿ ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರಾಧ್ಯಾಪಕ ಡಾ.ಶಿವ ರಾಜ ಶಾಸ್ತ್ರೀ ಹೇರೂರ ವಹಿಸಿದ್ದರು. ಸಾಹಿತಿ ಮುದಿಗೆರೆ ರಮೇಶ್ ಕುಮಾರ್ ಆಶಯ ನುಡಿಗಳನ್ನಾಡಿದರು.

ದೃಷ್ಟಿಚೇತನ ಕವಿಗಳಾದ ಬಾಪುಖಾಡೆ, ಹೇಮಂತಕುಮಾರ, ರಮಾ ಫಣಿಭಟ್ ಗೋಪಿ, ಶಿವಸ್ವಾಮಿ ಚೀನಕೇರ, ಡಾ.ಕೃಷ್ಣ ಹೊಂಬಳ, ಸಿ. ಹರೀಶ್, ಜಯನಂದಾ ಟೋಪುಗೋಳು, ಸೋಮಶೇಖರ್ ಬಳೆಗಾರ, ಟಿ.ಎಂ.ತೋಟಯ್ಯ, ಡಾ.ಆನಂದ್ ಇಂದೂರಾ ಭಾಗವಹಿಸಿದರು. ದೃಷ್ಟಿಚೇತನ ಕವಿಗಳು ಬರುವುದೇ ಅಪರೂಪವಾಗಿರುವ ಇಂಥ ಸಂದರ್ಭದಲ್ಲಿ ಸಾಹಿತ್ಯ ಸಮ್ಮೇಳನದಂಥ ದೊಡ್ಡ ವೇದಿಕೆಯಲಿ ದೃಷ್ಟಿಚೇತನ ಕವಿಗಳಿಗೂ ಅವಕಾಶ ಕಲ್ಪಿಸಿರುವುದು ಸಾರ್ವಜನಿಕ ವಲಯದಲ್ಲಿಯೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಅಂಧರ ಕೃತಿಗಳ ಬಗ್ಗೆ ಯೋಚಿಸಿ

1992 ರಲ್ಲಿ ಕರ್ನಾಟಕ ಸಾಹಿತ್ಯ ಮಿಥಿಕ್ ಸೊಸೈಟಿಯಲ್ಲಿ ಅಂಧರ ಕವಿಗೋಷ್ಠಿ ಆಯೋಜಿಸಲಾಗಿತ್ತು. ಕವಿ ಡಾ.ಸಿದ್ದಲಿಂಗಯ್ಯ ಅವರು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಅಂಧರು ಓದಲು ಪುಸ್ತಕಗಳನ್ನು ಬ್ರೈಲ್ ಲಿಪಿಯಲ್ಲಿ ಮುದ್ರಿಸಿದ್ದರು. ಇತಿಹಾಸದಲ್ಲೆ ಮೊದಲ ಬಾರಿಗೆ ವಿಶೇಷ ಕವಿಗೋಷ್ಠಿಗೆ ಅವಕಾಶ ಸಾರ್ಥಕದ ಭಾವ. ನಮ್ಮ ಸಮುದಾಯದ ಬರವಣಿಗೆ ತಲುಪುತ್ತಿಲ್ಲ. ದೃಷ್ಟಿ ಚೇತನರ ಬದುಕೇ ಸವಾಲು. ನಮ್ಮ ಬರವಣಿಗೆ ಅನೇಕ ಸವಾಲುಗಳಿಗೆ ಸಿಲುಕಿದೆ. ಮೂವತ್ತಕ್ಕೂ ಹೆಚ್ಚು ದೃಷ್ಟಿಚೇತನರು ಪುಸ್ತಕಗಳನ್ನು ಬರೆದಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ನಮ್ಮ ಕೃತಿಗಳನ್ನು ಚಿಂತನೆಗೆ ಒಳಪಡಿಸಬೇಕು. ಓದುಗ ವಲಯಕ್ಕೆ ತಲುಪಿಸುವ ಕಾರ್ಯ ಮಾಡಬೇಕಿದೆ ಎಂದು ಕವಿ ಮುದಿಗೆರೆ ರಮೇಶ್ ಕುಮಾರ್ ಹೇಳಿದರು.

ಕವಿತೆಗಳ ಮೂಲಕ ಆಕ್ರೋಶ ಹೊರ ಹಾಕಿದ ಮಹಿಳಾ ಕವಿಗಳು

ಇಳಿಸಂಜೆಯ ತಂಪಿನಲಿ ಸುಡು ಸುಡು ಕವಿತೆಗಳು

ಮಂಡ್ಯ: ಕವಿತೆಗಳ ಮೂಲಕ ತಮ್ಮ ಸಿಟ್ಟು, ಸೆಡವು ಮತ್ತು ಆಕ್ರೋಶವನ್ನು ಹೊರಹಾಕಿದರು. ಸಮಾಜದ ವಿರುದ್ಧ ಅಸಹನೆಯನ್ನು ವ್ಯಕ್ತಪಡಿಸಿದರು. ಅಂತಃಕರಣದ ದನಿಯನ್ನು ಕವಿತೆಯಾಗಿಸಿದರು. ಗಾಂಧಿ ಕಂಡ ರಾಮ ರಾಜ್ಯದ ಕನಸು ಹುಸಿಯಾಯಿತೇ? ಎಂದು ಕೇಳುತ್ತಾ ಆರ್ದ್ರಗೊಂಡರು. ನೀವು ಎಷ್ಟೇ ತಡೆದರೂ ನಾವು ಎದ್ದು ನಿಲ್ಲುತ್ತೇವೆ. ಬೆಳಕಿನೆಡೆಗೆ ಹೆಜ್ಜೆ ಇಡುತ್ತೇವೆ ಎಂದು ಆತ್ಮವಿಶ್ವಾಸದಿಂದ ನುಡಿದರು. ಈ ಮಧ್ಯೆ ಕವಿತೆ ಎಂದರೆ ಪ್ರೇಮ ಎಂದರು. ಕವಿತೆ ಎಂದರೆ ಕೇಡಿಲ್ಲದ್ದು ,ಸೇಡಿಲ್ಲದ್ದು ಎಂದರು. ಇವೆಲ್ಲವೂ ಇಂದು ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮಹಿಳಾ ಪ್ರಧಾನ ಕವಿಗೋಷ್ಠಿಯಲ್ಲಿ ಕೇಳಿಬಂತು. ನಾಡು ಮತ್ತು ಹೊರ ನಾಡುಗಳಿಂದ ಬಂದಿದ್ದ ಪ್ರತಿಭಾವಂತ ಮಹಿಳಾ ಕವಿಗಳು ಪರಿಣಾಮಕಾರಿ ಕವಿತೆಗಳನ್ನು ಓದಿ ಎಲ್ಲರನ್ನು ಆವರಿಸಿಕೊಂಡರು. ಕವಿತೆಗಿದು ಕಾಲ ಎಂಬುದನ್ನು ಸಾಬೀತು ಮಾಡಿದರು.

ಕಾವ್ಯಕೂಟಕ್ಕೆ ಸಂದ ಗೌರವ: ಈ ಮಹಿಳಾ ಕವಿಗೋಷ್ಠಿ ಮಹಿಳಾ ಕಾವ್ಯಕೂಟಕ್ಕೆ ಸಂದ ಗೌರವ. ಈ ವೇದಿಕೆಯಲ್ಲಿ ನಾವು ನಮ್ಮ ಸಂವೇದನೆ ಮತ್ತು ಸವಾಲುಗಳ ಪರಸ್ಪರ ಕೊಡು ಕೊಳ್ಳುವಿಕೆಯನ್ನು ಸಾಧಿಸಿಕೊಳ್ಳಬಹುದು ಎಂದು ಕವಿಗೋಷ್ಠಿಯ ಆಶಯ ನುಡಿಗಳನ್ನಾಡಿದ ಹಿರಿಯ ಕವಯಿತ್ರಿ ಕೆ. ಎನ್ ಲಾವಣ್ಯ ಪ್ರಭಾ ಹೇಳಿದರು.

ಮಹಿಳಾ ಪ್ರಧಾನ ಕವಿಗೋಷ್ಠಿ ಪ್ರಧಾನ ವೇದಿಕೆ

ಜಾತಿ ಮತ್ತು ಸಮುದಾಯಗಳ ಬಿಕ್ಕಟ್ಟಿನ ಮಧ್ಯೆಯೂ ಮಹಿಳೆಯರು ಬರೆಯುತ್ತಿದ್ದಾರೆ. ಕಾಲ ಬದಲಾಗಿದೆ. ದಾಂಪತ್ಯದಲ್ಲಿ ಬಿರುಕಾದರೂ ವಿಚ್ಛೇದನ ಪಡೆದುಕೊಂಡರೂ ಬದುಕು ಮೂರಾಬಟ್ಟೆಯಾದರೂ ಸಾಹಿತ್ಯ ನಮಗೆ ಸಾಮರಸ್ಯದಿಂದ ಮತ್ತು ಆತ್ಮಸ್ಥೈರ್ಯದಿಂದ ಬದುಕಲು ಕಲಿಸಿದೆ ಎಂದು ಅವರು ನುಡಿದರು.

ಕಾವ್ಯಕ್ಕೆ ಪರ್ಯಾಯ ಪದ ಪ್ರೇಮ: ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಖ್ಯಾತ ಕವಯಿತ್ರಿ ಸವಿತಾ ನಾಗಭೂಷಣ ಮಾತನಾಡಿ, ಕಾವ್ಯಕ್ಕೆ ಪರ್ಯಾಯ ಪದವಿದ್ದರೆ ಅದು ಪ್ರೇಮ. ವಿರುದ್ಧ ಪದವಿದ್ದರೆ ಅದು ದ್ವೇಷ, ಯುದ್ಧ, ಭಿನ್ನ ಮತ್ತು ಕಾದಾಟ ಎಂದರು. ಕಾವ್ಯವೆಂದರೆ ಸೂಕ್ಷ್ಮವಾದ ಮನಸ್ಸು. ಭಾವ ಸ್ಫೋಟ. ಎದೆಯ ಭಾವ ಎಂದು ಅವರು ಹೇಳಿದರು. ಎಲ್ಲಾ ಕವಿಗಳ ಕವಿತೆಗಳು ವಿಭಿನ್ನವಾಗಿದ್ದವು. ಶಬ್ದಗಳು ಉಪ್ಪು, ಹುಳಿ ಮತ್ತು ಖಾರವಿದ್ದ ಹಾಗೆ. ಅದನ್ನು ಹದವಾದಾಗ ಮಾತ್ರ ಅಡುಗೆ ರುಚಿಯಾಗಿರುತ್ತದೆ. ಕವಿತೆಯೂ ಹಾಗೆ. ಇಲ್ಲಿ ವಾಚಿಸಿದ ಕವಿತೆಗಳು ರಸವೋ ಕಸವೋ ಎಂಬುದನ್ನು ನೀವೇ ನಿರ್ಧರಿಸಿ ಎಂದರು. ಮಾತಿನ ಕೊನೆಯಲ್ಲಿ ಸವಿತಾ ನಾಗಭೂಷಣ್ ಒಂದು ಕವಿತೆ ವಾಚಿಸಿದರು.

ಕಾವ್ಯ ರಸಿಕರ ಮನಗೆದ್ದ ಕವಿತೆ:

ಬಿ. ಆರ್ ಶ್ರುತಿ, ಸುಮಾರಾಣಿ ಶಂಭು ಅವರ ಕವಿತೆಗಳು ರಸಿಕರ ಮನಸ್ಸನ್ನು ಗೆದ್ದವು. ತುಳು ಭಾಷೆಯಲ್ಲಿ ಕವಿತೆ ವಾಚಿಸಿದ ಡಾ. ನಿಕೇತನಾ ಅವರು ಶ್ರೋತೃಗಳಿಗೆ ಭಾವವನ್ನು ದಾಟಿಸುವಲ್ಲಿ ಯಶಸ್ವಿಯಾದರು.

ವಿಶ್ವವಾಣಿ

ಸಂಪಾದಕೀಯ

ನಾಡೋಜನ ನುಡಿ ನಮ್ಮ ಆದ್ಯತೆಗಳಾಗಲಿ

ಸಕ್ಕರೆ ನಗರಿ ಮಂಡ್ಯದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಕಾಫಿನಾಡು ಚಿಕ್ಕಮಗಳೂರಿನ 94ರ ಹಿರಿಯಜ್ಜ, ನಾಡೋಜ ಗೊಂಡೆದಹಳ್ಳಿ ರುದ್ರಪ್ಪ ಚನ್ನಬಸಪ್ಪ ಅವರು ಪ್ರಧಾನ ವೇದಿಕೆಯಿಂದ ಆಡಿದ ಮಾತುಗಳು ಕನ್ನಡಿಗರು ಮತ್ತು ಕರ್ನಾಟಕವನ್ನು ಆಳುವ ಸರಕಾರದ ಮುಂದಿರುವ ಆದ್ಯತೆಗಳನ್ನು ತೆರೆದಿಟ್ಟಿವೆ. ಪ್ರತಿಯೊಂದು ಸಾಹಿತ್ಯ ಸಮ್ಮೇಳನದಲ್ಲೂ ಕನ್ನಡ ನಾಡು, ನುಡಿಯ ಕುರಿತಂತೆ ಹಲವು ನಿರ್ಣಯಗಳನ್ನು ಮಂಡಿಸಲಾಗುತ್ತದೆ. ಈ ಬಾರಿ ಅಧ್ಯಕ್ಷರು ತಮ್ಮ 48 ಪುಟಗಳ ಅಧ್ಯಕ್ಷರ ಭಾಷಣದಲ್ಲಿಯೇ 21 ಹಕ್ಕೊತ್ತಾಯಗಳನ್ನು ಮಂಡಿಸಿದ್ದಾರೆ. ಇವು ಕನ್ನಡಿಗರೆಲ್ಲರ ಆಗ್ರಹ ಮತ್ತು ಎಚ್ಚರಿಕೆಯೂ ಹೌದು. ಈ ಸಾಹಿತ್ಯ ಸಮ್ಮೇಳನವೂ ಹತ್ತರಲ್ಲಿ ಹನ್ನೊಂದು ಆಗದೇ ಇರಬೇಕಾದರೆ, ಸಮ್ಮೇಳನಾಧ್ಯಕ್ಷರ ಕಾಳಜಿ, ಕಳಕಳಿಯನ್ನು ಸರಕಾರ ಅರ್ಥ ಮಾಡಿಕೊಂಡು ಅದಕ್ಕೆ ತಕ್ಕಂತೆ ಸ್ಪಂದಿಸಬೇಕಿದೆ. ರಾಜ್ಯದಲ್ಲಿ ಒಂದನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೆ ಬೋಧನೆಯಲ್ಲಿ ಕನ್ನಡ ಮಾಧ್ಯಮವೇ ಕಡ್ಡಾಯವಾಗಬೇಕು. ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ಸರಕಾರ ತೆರೆಯುವುದನ್ನಾಗಲಿ, ಖಾಸಗಿ ಶಾಲೆಗಳಿಗೆ ಅನುಮತಿ ಕೊಡುವುದನ್ನಾಗಲೀ ಕೂಡಲೇ ನಿಲ್ಲಿಸಬೇಕು ಎಂದು ಗೊರುಚ ಆಗ್ರಹಿಸಿದ್ದಾರೆ. ಪ್ರತಿ ಗ್ರಾಮ ಪಂಚಾಯಿತಿಗೊಂದರಂತೆ ಆಂಗ್ಲ ಮಾಧ್ಯಮ ಕರ್ನಾಟಕ ಪಬ್ಲಿಕ್ ಸ್ಕೂಲ್ ತೆರೆಯಲು ಹೊರಟಿರುವ ಸರಕಾರ ಮತ್ತು ಕನ್ನಡ ಓದಲು ಪರದಾಡುವ ಶಿಕ್ಷಣ ಸಚಿವರು ಈ ಮಾತಿನ ಮಹತ್ವವನ್ನು ಅರಿತುಕೊಳ್ಳಬೇಕಾಗಿದೆ. ಇರುವ ಕನ್ನಡ ಶಾಲೆಗಳಲ್ಲಿಯೇ ಆಂಗ್ಲಭಾಷೆಯನ್ನು ಚೆನ್ನಾಗಿ ಕಲಿಯಲು ಪ್ರತ್ಯೇಕ ವ್ಯವಸ್ಥೆ ಮಾಡಿ, ಬೋಧನೆಗೆ ತರಬೇತಿ ಪಡೆದ ಶಿಕ್ಷಕರನ್ನು ನೇಮಿಸಿ, ಗ್ರಾಮೀಣ ಭಾಗದ ಕನ್ನಡ ಶಾಲೆಗಳನ್ನು ಎಲ್ಲ ಸೌಲಭ್ಯಗಳಿಂದ ಪೂರ್ಣವಾಗಿ ಸಜ್ಜುಗೊಳಿಸಬೇಕೆಂಬ ಗೊರುಚ ಅವರ ಹಕ್ಕೊತ್ತಾಯ ಕನ್ನಡ ನಾಡು ನುಡಿಯ ಬಗ್ಗೆ ಕಳಕಳಿ ಉಳ್ಳ ಪ್ರತಿಯೊಬ್ಬರ ಅಭಿಲಾಷೆಯೂ ಹೌದು. ಕನ್ನಡ ಭಾಷೆ ಸಾಹಿತ್ಯಿಕವಾಗಿ ಮಾತ್ರವಲ್ಲ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲೂ ಅಗತ್ಯ ಭಾಷೆಯಾಗಿ ಮುನ್ನಡೆಯಬೇಕಾದ ಅಗತ್ಯವನ್ನು ಅಧ್ಯಕ್ಷರು ಪ್ರತಿಪಾದಿಸಿದ್ದಾರೆ. 'ಗೂಗಲ್ ಗುರು'ವಿಗೆ ಕನ್ನಡ ಕಲಿಸಬೇಕಾದ ಅಗತ್ಯವನ್ನೂ ಪ್ರತಿಪಾದಿಸಿದ್ದಾರೆ. ಶಿಕ್ಷಣ ಮಾಧ್ಯಮ, ಅಂತಾರಾಜ್ಯ ಗಡಿ, ಜಲ ಮತ್ತು ವಲಸೆ ಸಮಸ್ಯೆಗಳನ್ನು ಪರಿಹರಿಸಲು ರಾಷ್ಟ್ರೀಯ ನೀತಿಯನ್ನು ರೂಪಿಸಲು ಕೇಂದ್ರ ಸರಕಾರದ ಮೇಲೆ ಒತ್ತಡ ಹೇರಬೇಕು ಮತ್ತು ತೆರಿಗೆ ಹಣ ಮತ್ತು ಅನುದಾನ ವಿಚಾರದಲ್ಲಿ ರಾಜ್ಯಕ್ಕಾಗುವ ಅನ್ಯಾಯದ ವಿರುದ್ಧ ಧ್ವನಿ ಎತ್ತಬೇಕೆಂಬ ಗೊರುಚ ಅವರ ಹಕ್ಕೊತ್ತಾಯವೂ ನಮ್ಮ ಪಾಲಿನ ಆದ್ಯತೆಗಳಾಗಬೇಕಿವೆ.

ಸೊಂಪಾದಕೀಯ

ಕನ್ನಡ ಮತ್ತು ಸಂಸ್ಕೃತ

ಸಕ್ಕರೆ ನಾಡು ಮಂಡ್ಯದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ ಸಿಕ್ಕಿದೆ. ಘೋಷಣೆ ಆದಾಗಿನಿಂದ ಸುದ್ದಿಯಲ್ಲಿರುವ ಸಮ್ಮೇಳನದಲ್ಲಿ ನಾಡಿನ ಬರಹಗಾರರ ಸಮ್ಮಿಲನ ಆಗಿದೆ. ಅಂದಹಾಗೆ ಊಟದ ವಿಚಾರಕ್ಕೆ ಸಾಕಷ್ಟು ಜನರ ಬಾಯಿಗೆ ಆಹಾರವಾಗಿತ್ತು ಈ ಸಮ್ಮೇಳನ. ಸಮ್ಮೇಳನದಲ್ಲಿ ನಾನ್ ವೆಜ್ ಊಟಕ್ಕೆ ಅವಕಾಶ ಇಲ್ಲ ಎಂದಾಗ ಹಲವರು ಅದರ ವಿರುದ್ಧ ಮಾತನಾಡಿದ್ದರು. ನಾನ್ ವೆಜ್ ಊಟ ಅಷ್ಟೇ ಇರಲ್ವಾ ಅಥವಾ ಸಮ್ಮೇಳನಲ್ಲಿ ನಾನ್ ವೆಜ್ ಜೋಕುಗಳ ಪುಸ್ತಕಗಳೂ ಇರಲ್ವಾ ಅಂತ ಕೆಲವರು ಸಿಲ್ಲಿ ಜೋಕ್ ಮಾಡಿದ್ದರು. ಈಗ ಸಮ್ಮೇಳನವೇನೋ ಸುಗಮವಾಗಿ ಶುರುವಾಗಿದೆ. ಹೀಗೆ ಮಂಡ್ಯದಲ್ಲಿ ಕನ್ನಡ ನುಡಿಯ ಸಿಹಿ ಹರಡುತ್ತಿದ್ದರೆ ಅತ್ತ ಬೆಳಗಾವಿಯ ಸುವರ್ಣ ಸೌಧ ಸಂಸ್ಕೃತ ಮಾತಿನ ಕಾರಣಕ್ಕೆ ಗದ್ದಲಕ್ಕೆ ಕಾರಣ ಆಗಿದೆ. ಎಂಎಲ್‌ಸಿ ಸಿ.ಟಿ ರವಿ ಅವರು ಕಾಂಗ್ರೆಸ್ ನಾಯಕಿ ಲಕ್ಷ್ಮೀ ಹೆಬ್ಬಾಳ್ಕರ್ ಅವರ ವಿರುದ್ಧ ಪ್ರಯೋಗಿಸಿದ್ದಾರೆ ಎನ್ನಲಾದ ಅವಾಚ್ಯ ಪದದ ಕಾರಣಕ್ಕೆ ಜೈಲು ಪಾಲಾಗಿದ್ದರು. ವಿದಾನಸೌಧ ಮತ್ತು ಅದರ ಕಲಾಪ ಅಂದ ಕೂಡಲೇ ಅಲ್ಲಿ ಅವಾಚ್ಯ ಶಬ್ದಗಳಿಗೆ ಕೊರತೆ ಏನಿರಲ್ಲ ಅನ್ನೋದು ಎಲ್ಲರಿಗೂ ಗೊತ್ತಿರೋ ವಿಚಾರ. ಆದರೆ ಈ ಬಾರಿ ರವಿ ಅವರ ಬಾಯಿ ತೀರಾ ನಿಯಂತ್ರಣ ತಪ್ಪಿ ಹೋಗಿದ್ದರಿಂದ ರಾತ್ರಿ ಚಂದ್ರ ಬರುವ ಸಮಯದಿಂದ ಮರುದಿನ ರವಿ ಮೂಡಿದರೂ ಸಿಟಿ ರವಿ ಅವರಿಗೆ ರಿಲೀಫ್ ಸಿಕ್ಕಿರಲಿಲ್ಲ. ಪೊಲೀಸರಿಂದ ಅರೆಸ್ಟ್ ಆಗಿದ್ದ ರವಿ ಅವರ ಕಸ್ಟಡಿಯಲ್ಲೇ ರೆಸ್ಟ್ ತಗೊತಾ ಇದ್ರು. ಸಂಜೆ ವೇಳೆಗೆ ಹೈಕೋರ್ಟ್ ದೊಡ್ಡ ಮನಸ್ಸು ಮಾಡಿ ರವಿ ಅವರಿಗೆ ಬಿಡುಗಡೆಯ ಭಾಗ್ಯ ಕರುಣಿಸಿದೆ. ಆದರೆ ಈ ವಿಷಯಕ್ಕೆ ತಕ್ಕ ಮಟ್ಟಿಗೆ ರೆಸ್ಟ್ ಸಿಕ್ಕಿದ್ದರೂ ಬಿಜೆಪಿ ಮತ್ತು ಕಾಂಗ್ರೆಸ್ ನಾಯಕರ ಮಾತುಗಳ ಜಟಾಪಟಿ ಮಾತ್ರ ಮುಂದುವರಿದಿದೆ. ಹೆಣ್ಣು ನಿಂದಿಸುವ ಪದ ಬಳಸಿದ್ದಾರೆ ಎನ್ನಲಾಗುತ್ತಿರುವ ಸಿಟಿ ರವಿ ಅವರ ವಿರುದ್ಧ ಹೆಬ್ಬಾಳ್ಕರ್ ಅವರ ಬೆಂಬಲಿಗರೂ ಕೂಡ ಸಿಟ್ಟಿಗೆದ್ದು ಅವಾಚ್ಯ ಶಬ್ದಗಳ ಬಳಕೆ ಮಾಡಿದ್ದರು. ಒಟ್ಟಿನಲ್ಲಿ ರಾಜ್ಯ ಮಟ್ಟದಲ್ಲಿ ಈಗ ಮಂಡ್ಯ ಮತ್ತು ಬೆಳಗಾವಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳು ಸದ್ದು ಮಾಡ್ತಾ ಇರೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಭೂಕಂಪಗಳ ರಾಜಧಾನಿ

ನಾನು ಜಪಾನಿಗೆ ಹೋಗುತ್ತೇನೆ ಎಂದು ಹೇಳಿದಾಗ ನನ್ನ ತಾಯಿ ತಕ್ಷಣ ಕೇಳಿದ ಪ್ರಶ್ನೆ – 'ಜಪಾನ್ ಸುರಕ್ಷಿತ ದೇಶವಾ?' ನಾನು ನನ್ನ ತಾಯಿಗೆ 'ಆ ಪ್ರಶ್ನೆಯನ್ನು ಕೇಳಿದ ಉದ್ದೇಶವೇನು?' ಎಂದು ಕೇಳಿದೆ. ಅದಕ್ಕೆ ಅವಳು ಹೇಳಿದ್ದು – 'ಜಪಾನಿನಲ್ಲಿ ಪದೇ ಪದೆ ಭೂಕಂಪ ಸಂಭವಿಸುತ್ತದೆಯಂತೆ. ಹೀಗಿರುವಾಗ ನೀನು ಅಲ್ಲಿಗೆ ಹೋಗ್ತೇನೆ ಅಂತ ಹೇಳುತ್ತಿದ್ದೀಯಲ್ಲ, ಯಾವುದಕ್ಕೂ ಇನ್ನೊಮ್ಮೆ ಯೋಚಿಸಿ ನೋಡು.' ಆಗ ನಾನು ಅವಳಿಗೆ, 'ಜಪಾನಿನಲ್ಲಿ ಹದಿಮೂರು ಕೋಟಿ ಜನ ವಾಸಿಸುತ್ತಿದ್ದಾರೆ. ಪ್ರತಿದಿನ ಭೂಕಂಪವಾಗುತ್ತಿದ್ದರೂ ಅವರೆಲ್ಲ ಜೀವಿಸುತ್ತಿದ್ದಾರಲ್ಲ? ಹೀಗಿರುವಾಗ ಅಲ್ಲಿಗೆ ಹೋಗಲು ನಾನೇಕೆ ಹೆದರಬೇಕು? ನಾನು ಹೋದರೆ ನೀನ್ಯಾಕೆ ಭಯಪಡಬೇಕು? ಅಷ್ಟಕ್ಕೂ ನಾನು ಅಲ್ಲಿಗೆ ಯುದ್ಧಕ್ಕೆ ಹೋಗುತ್ತಿಲ್ಲವಷ್ಟೆ' ಎಂದು ಹೇಳಿದೆ. ಆದರೂ ಹೆತ್ತ ಕರುಳಿಗೆ ಪೂರ್ತಿ ಸಮಾಧಾನವಾಗಲಿಲ್ಲ. ನಾವು ಜಪಾನಿನ ಕ್ಯೋಟೋ ನಗರದಿಂದ ರಾಜಧಾನಿ ಟೋಕಿಯೋಕ್ಕೆ ಬಂದ ಮಾರನೇ ದಿನ ಹೋಟೆಲಿನಲ್ಲಿ ಬೆಳಗಿನ ಉಪಾಹಾರ ಸೇವಿಸುವಾಗ ನನ್ನೊಂದಿಗಿದ್ದವರೊಬ್ಬರು, 'ನಿನ್ನೆ ರಾತ್ರಿ ಭೂಕಂಪವಾಯ್ತಂತೆ ಗೊತ್ತಾ?' ಎಂದು ಕೇಳಿದರು. ಅದಕ್ಕೆ ಜತೆಯಲ್ಲಿದ್ದ ಇನ್ನೊಬ್ಬರು, 'ಜಪಾನಿನಲ್ಲಿ ಬಿಡಿ, ಆಗಾಗ ಭೂಕಂಪಗಳು ಸಂಭವಿಸುತ್ತಲೇ ಇರುತ್ತವೆ, ಅದು ಇಲ್ಲಿ ಹೊಸತೇನೂ ಅಲ್ಲ' ಎಂದು ರಾಗ ಎಳೆದು, ಅದು ಅಷ್ಟೇನೂ ಪ್ರಮುಖ ಸಂಗತಿಯಲ್ಲ ಎಂದು ಕೊಡವಿ ಹಾಕಿದರು. ಅವರ ಮಾತಿನಲ್ಲಿ ನಿಜಾಂಶವಿತ್ತು. ಕಾರಣ, ಜಪಾನಿನಲ್ಲಿ ವರ್ಷಕ್ಕೆ ಸುಮಾರು 1,500ಕ್ಕೂ ಹೆಚ್ಚು ಭೂಕಂಪಗಳು ಸಂಭವಿಸುತ್ತವೆ. ಈ ಮಾಹಿತಿ ಸತ್ಯವಾಗಿದೆಯೆಂದು ಭೂವಿಜ್ಞಾನಿಗಳೂ ದೃಢಪಡಿಸಿದ್ದಾರೆ. ಹೀಗಾಗಿ ಜಪಾನನ್ನು 'ಭೂಕಂಪಗಳ ದೇಶ' ಮತ್ತು 'ಜಗತ್ತಿನ ಭೂಕಂಪದ ರಾಜಧಾನಿ' ಎಂದೂ ಕರೆಯುವುದುಂಟು. ಅಂದರೆ ದೇಶದ ಯಾವುದಾದರೂ ಪ್ರದೇಶದಲ್ಲಿ ಭೂಮಿ ಅದುರುತ್ತಿರುತ್ತದೆ. ಅಂದರೆ ಒಂದು ದಿನದಲ್ಲಿ ಮೂರು-ನಾಲ್ಕು ಕಡೆಗಳಲ್ಲಿ ಭೂಕಂಪವಾಗುವುದು ಸಾಮಾನ್ಯ. ಜಪಾನಿನ ಅಧುನಿಕ ತಂತ್ರಜ್ಞಾನವು ಬಹು ಸೂಕ್ಷ್ಮವಾಗಿರುವ ಭೂಕಂಪ ಪತ್ತೆ ಸಾಧನಗಳನ್ನು ಹೊಂದಿದೆ. ಅಲ್ಪ ಪ್ರಮಾಣದ ಕಂಪನಗಳನ್ನೂ ಇವು ದಾಖಲಿಸುತ್ತವೆ. ಕೆಲವು ಕಂಪನಗಳು ರಿಕ್ಟರ್ ಮಾಪಕದಲ್ಲಿ 2.0ಕ್ಕಿಂತ ಕಡಿಮೆ ತೀವ್ರತೆ ಹೊಂದಿರುವುದುಂಟು. ಈ ಭೂಕಂಪಗಳಲ್ಲಿ ಹೆಚ್ಚಿನವು ತೀವ್ರವಾದವುಗಳಾಗಿರದೇ, ಅಲ್ಪ ಪ್ರಮಾಣದ ಕಂಪನಗಳಾಗಿರುತ್ತವೆ. ತಮಾಷೆಯೆಂದರೆ, ಅಲ್ಲಿನ ಜನ ಈ ಕಂಪನಗಳನ್ನು ಹೆಚ್ಚಾಗಿ ಗಮನಿಸುವುದೂ ಇಲ್ಲ. ವರ್ಷದಲ್ಲಿ 10-15 ಬಾರಿ ಮಾತ್ರ ಭಾರಿ ಸ್ವರೂಪದ ಭೂಕಂಪಗಳು (ರಿಕ್ಟರ್ ಮಾಪಕದಲ್ಲಿ 6.0 ಅಥವಾ ಅದಕ್ಕಿಂತ ಹೆಚ್ಚು ತೀವ್ರತೆ) ಸಂಭವಿಸುತ್ತವೆ. ಜಪಾನ್ ನಾಲ್ಕು ಪ್ರಮುಖ ಟೆಕ್ಟೋನಿಕ್ ಪ್ಲೇಟ್ (ಪದರ)ಗಳಾದ – ಪೆಸಿಫಿಕ್ ಪ್ಲೇಟ್, ಯುರೇಷಿಯನ್ ಪ್ಲೇಟ್, ಫಿಲಿಪೈನ್ ಸೀ ಪ್ಲೇಟ್ ಮತ್ತು ಉತ್ತರ ಅಮೆರಿಕನ್ ಪ್ಲೇಟ್ ಗಳು ಸಂಗಮ ಪ್ರದೇಶದಲ್ಲಿದೆ. ಈ ಪ್ಲೇಟ್‌ಗಳು ಆಗಾಗ ಪಲ್ಲಟಗೊಳ್ಳುವುದರಿಂದ ಮತ್ತು ಪರಸ್ಪರ ಘರ್ಷಣೆಗೊಳಗಾಗುವುದರಿಂದ ಭೂಕಂಪ ಉಂಟಾಗುತ್ತದೆ. ಪೆಸಿಫಿಕ್ ಪ್ಲೇಟ್ ಮತ್ತು ಫಿಲಿಪೈನ್ ಸೀ ಪ್ಲೇಟ್, ಯುರೇಷಿಯನ್ ಪ್ಲೇಟ್ ಅಡಿಗೆ ಹಾಯುತ್ತವೆ. ಈ ಪ್ರಕ್ರಿಯೆಯನ್ನು ಸಬ್ಡಕ್ಷನ್ ಎಂದು ಕರೆಯಲಾಗುತ್ತದೆ. ಇದು ಭೂಕಂಪಗಳಿಗೆ ಪ್ರಮುಖ ಕಾರಣ. ಜಪಾನ್ ಪೆಸಿಫಿಕ್ ರಿಂಗ್ ಆಫ್ ಫೈರ್ ಎಂಬ ಹೆಸರಿನಿಂದ ಕರೆಯುವ ಜ್ವಾಲಾಮುಖಿ ಮತ್ತು ಭೂಕಂಪ ಚಟುವಟಿಕೆಗಳ ಉಷ್ಣವಲಯದ ಭಾಗವಾಗಿದೆ. ಈ ವಲಯದಲ್ಲಿ ಜ್ವಾಲಾಮುಖಿ ಸ್ಫೋಟ ಮತ್ತು ಭೂಕಂಪಗಳು ಸಾಮಾನ್ಯ. ನೂರಾ ಒಂದು ವರ್ಷಗಳ ಹಿಂದೆ (1923ರಲ್ಲಿ), ಟೋಕಿಯೋ ಮತ್ತು ಯೋಕೊಹಾಮಾದಲ್ಲಿ ಸಂಭವಿಸಿದ ಭೂಕಂಪದಲ್ಲಿ ಸುಮಾರು 1.40 ಲಕ್ಷ ಮಂದಿ ಸಾವನ್ನಪ್ಪಿದರು. ಆ ಎರಡೂ ನಗರಗಳಲ್ಲಿ ಅಪಾರ ಆಸ್ತಿ-ಪಾಸ್ತಿ ನೆಲಸಮವಾಗಿದ್ದವು. ಭೂಕಂಪ ತೀವ್ರತೆ ರಿಕ್ಟರ್ ಮಾಪಕದಲ್ಲಿ 7.9 ಇತ್ತು. ಈ ಭೂಕಂಪದ ನಂತರ ಜಪಾನ್‌ನಲ್ಲಿ ನಿರ್ವಹಣಾ ವ್ಯವಸ್ಥೆಗಳಿಗೆ ಹೆಚ್ಚಿನ ಮಹತ್ವ ನೀಡಲಾಯಿತು. 2011 ರಲ್ಲಿ ಸಂಭವಿಸಿದ ಟೋಹೋಕು ಭೂಕಂಪ ಮತ್ತು ಸುನಾಮಿ ದುರಂತದಲ್ಲಿ 18 ಸಾವಿರಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದರು. ಹತ್ತು ಮೀಟರ್ ಎತ್ತರದ ಸುನಾಮಿ, ಜಪಾನ್ನ ಪೂರ್ವ ಕರಾವಳಿಯನ್ನು ಅಪ್ಪಳಿಸಿತ್ತು. ಭೂಕಂಪ ತೀವ್ರತೆ ರಿಕ್ಟರ್ ಮಾಪಕದಲ್ಲಿ 9.1 ಇತ್ತು. '1995 ರಲ್ಲಿ ಸಂಭವಿಸಿದ ಕೊಬೆ ಭೂಕಂಪದಲ್ಲೂ ಎಂಟು ಸಾವಿರ ಮಂದಿ ಸತ್ತಿದ್ದರು. 'ಪ್ರತಿ ಐದು ನಿಮಿಷಕ್ಕೆ ಜಪಾನಿನ ಯಾವುದೋ ಪ್ರದೇಶ ಕಂಪಿಸುತ್ತದೆ, ಆದರೆ ನಾವು ಕಂಪಿಸುವುದಿಲ್ಲ' ಎಂಬ ಮಾತು ಅಲ್ಲಿ ಜನಪ್ರಿಯ.

ಗೆದ್ದಾಗ EVM ಬೇಕು ಸೋತಾಗ ಬೇಡ!

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ಚುನಾವಣೆಯಲ್ಲಿ ಸೋಲು, ಗೆಲುವನ್ನು ಸಮನಾಗಿ ಸ್ವೀಕರಿಸಿದವರು ಮಾತ್ರ ಸುಧೀರ್ಘ ರಾಜಕಾರಣ ಮಾಡಲು ಸಾಧ್ಯ. ಗೆದ್ದಾಗ ವ್ಯವಸ್ಥೆಯನ್ನು ಹೊಗಳಿ, ಸೋತಾಗ ವ್ಯವಸ್ಥೆಯನ್ನು ತೆಗಳಬಾರದು. ಸೋಲಿನ ಸರಿಯಾದ ಪರಾಮರ್ಶೆಯಾದರೆ ಮುಂದಿನ ಗೆಲುವಿಗೆ ಸಹಕಾರಿಯಾಗುತ್ತದೆ, ಅದನ್ನು ಬಿಟ್ಟು ವ್ಯವಸ್ಥೆಯನ್ನು ದೂರುತ್ತಾ ಕೂತರೆ ಜನ ಪದೇ ಪದೇ ಸೋಲಿಸುತ್ತಿರುತ್ತಾರೆ.2024 ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ 99 ಸೀಟುಗಳು ಬಂದಾಕ್ಷಣ, ಜಗತ್ತನ್ನು ಗೆದ್ದಂತೆ ವರ್ತಿಸಿದರು. ಪ್ರಜಾಪ್ರಭುತ್ವದ ಗೆಲುವು, ಸಂವಿಧಾನದ ಗೆಲುವು, ಎಂದೆಲ್ಲ ದೊಡ್ಡ ದೊಡ್ಡ ಮಾತುಗಳನ್ನಾಡಿದರು. ಚುನಾವಣಾ ಆಯೋಗಕ್ಕೆ ವಂದನೆ ಸಲ್ಲಿಸಿ, ಇಡೀ ಇಂಡಿ ಒಕ್ಕೂಟ ತಮ್ಮ ಬೆನ್ನನ್ನು ತಾವು ತಟ್ಟಿಕೊಂಡವು. ಆದರೆ ಕೆಲವೇ ಕೆಲವು ತಿಂಗಳ ನಂತರ ನಡೆದ ಹರಿಯಾಣ ಮತ್ತು ಮಹಾರಾಷ್ಟ್ರದ ಚುನಾವಣಾ ಫಲಿತಾಂಶದಂದು ಸೋತು ಸುಣ್ಣವಾದ ವಿರೋಧ ಪಕ್ಷಗಳು ಚುನಾವಣಾ ಆಯೋಗವನ್ನು ದೂರಿ 'EVM' ಸರಿಯಿಲ್ಲ, ಆಯೋಗ ಸರಿಯಾದ ಚುನಾವಣೆ ನಡೆಸಿಲ್ಲವೆಂದು ಹೇಳುತ್ತಾ ರಸ್ತೆ ರಸ್ತೆಗಳಲ್ಲಿ ಅಳುತ್ತಿದ್ದಾರೆ. ಕಾಂಗ್ರೆಸ್ಸಿನ ಗೋಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ಮತದಾರ ಮಾತ್ರ ಒಳಗೊಳಗೆ ಇವರ ಹಣೆಬರಹ ಇಷ್ಟೇ ಎಂದು ನಗುತ್ತಿದ್ದಾನೆ. ಸೋಲನ್ನು ಒಪ್ಪಿಕೊಳ್ಳದ ಕಾಂಗ್ರೆಸ್ ಪಕ್ಷ ಇವಿಎಂ ಬದಲಿಗೆ ಹಳೆಯ 'ಬ್ಯಾಲಟ್ ಪೇಪರ್' ಬಳಸಿ ಚುನಾವಣೆ ನಡೆಸಬೇಕೆಂಬ ಮಾತುಗಳನ್ನಾಡುತ್ತಿದೆ. ಇಡೀ ಜಗತ್ತು ಮುಂದುವರೆಯುತ್ತಿದ್ದರೆ, ಕಾಂಗ್ರೆಸ್ಸಿಗರಿಗೆ ಮಾತ್ರ ದೇಶ ಹಿಂದೆ ಹೋಗಬೇಕು. ಭಾರತದ ಚುನಾವಣಾ ಇತಿಹಾಸದಲ್ಲಿ ಬ್ಯಾಲಟ್ ಪೇಪರ್ ಚುನಾವಣೆಯಲ್ಲಿ ನಡೆದಿರುವಷ್ಟು ಅಕ್ರಮ EVM ವ್ಯವಸ್ಥೆಯಲ್ಲಿ ನಡೆದಿಲ್ಲ. ಒಂದು ಕಾಲದಲ್ಲಿ ಬಿಹಾರ, ಕಾಶ್ಮೀರ ಮತ್ತು ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಸಮಯದಲ್ಲಿ ಬ್ಯಾಲಟ್ ಪೇಪರ್‌ಗಳನ್ನು ಸುಟ್ಟು ಹಾಕುವುದು ಸಾಮಾನ್ಯ ವಿಷಯವಾಗಿತ್ತು. ಬ್ಯಾಲಟ್ ಪೇಪರ್‌ಗಳನ್ನು ಕದ್ದೊಯ್ಯುವುದು, ಬೂತುಗಳನ್ನು ವಶಪಡಿಸಿಕೊಳ್ಳುವುದು, ಬಲವಂತವಾಗಿ ಮತ ಹಾಕಿಸಿದ್ದ ಅನೇಕ ಪ್ರಕರಣಗಳು ಬ್ಯಾಲಟ್ ಪೇಪರ್ ಚುನಾವಣಾ ಇತಿಹಾಸದಲ್ಲಿ ನಡೆದುಹೋಗಿದೆ.

ಮಾರ್ಚ್ 20 -1971 ರಲ್ಲಿ ಮುಂಬೈನ 'BLITZ TABLOID'ನಲ್ಲಿ ಪ್ರಕಟವಾದ ಒಂದು ವರದಿಯಲ್ಲಿ ಬ್ಯಾಲಟ್ ಪೇಪರ್‌ಗಳನ್ನು ಕೆಮಿಕಲ್ ಬಳಸಿ ಬದಲಾಯಿಸಬಹುದೆಂದು ಹೇಳಲಾಗಿತ್ತು, ಯಾವ ರೀತಿ ಬದಲಾಯಿಸಬಹುದೆಂಬುದನ್ನು ಹೇಳಲಾಗಿತ್ತು. ಇವರ ಪ್ರಕಾರ 200 ರಿಂದ 250 ಕ್ಷೇತ್ರಗಳಲ್ಲಿ ಕೆಮಿಕಲ್ ಬಳಸಿ ಕಣ್ಣಿಗೆ ಕಾಣದ ರೀತಿಯಲ್ಲಿ ಮತವನ್ನು ಒಂದು ಪಕ್ಷಕ್ಕೆ ಬೀಳುವಂತೆ ಮಾಡಲಾಗಿದೆಯೆಂದು ಹೇಳಲಾಗಿತ್ತು. ಮತದಾನವಾಗಿ 72 ಗಂಟೆಯ ನಂತರ ನಿಜವಾದ ಮತ ಹಾಕಿದ್ದ ಶಾಹಿಯ ಮಾರ್ಕ್ ಅಳಿಸಿಹೋಗುತ್ತಿತ್ತೆಂದು ಹೇಳಲಾಗಿತ್ತು. ಕೆಮಿಕಲ್ ಬಳಸಿರುವ ಬ್ಯಾಲಟ್ ಪೇಪರ್ ಗಳನ್ನು ರಷ್ಯಾ ದೇಶದಿಂದ ಆಮದು ಮಾಡಿಕೊಂಡು ಚುನಾವಣೆಗೆ ಬಳಸಲಾಗಿತ್ತೆಂದು ಆರೋಪಿಸಲಾಗಿತ್ತು. ಆದರೆ ಪಶ್ಚಿಮ ಬಂಗಾಳ ಮತ್ತು ಅಲಿಘಡದಲ್ಲಿ ಕಾಂಗ್ರೆಸ್ ಪಕ್ಷ ಹೆಚ್ಚಿನ ಸ್ಥಾನ ಗಳಿಸಲಿಲ್ಲ, ಕಾರಣ ಚುನಾವಣೆ ನಡೆದ 72 ಗಂಟೆಗಳ ಒಳಗೆ ಈ ಕ್ಷೇತ್ರಗಳಲ್ಲಿ ಎಣಿಕೆ ನಡೆದಿತ್ತು. ಚುನಾವಣೆಯಲ್ಲಿ ಬಳಸುತ್ತಿದ್ದ ಬ್ಯಾಲಟ್ ಪೇಪರ್ ಮೇಲೆ ಇದ್ದಂತಹ ಅನುಮಾನಕ್ಕೆ ಪುಷ್ಟಿ ಕೊಡುವಂತಿತ್ತು, ಈ ಕ್ಷೇತ್ರಗಳ ಫಲಿತಾಂಶ. ದಕ್ಷಿಣ ದೆಹಲಿ ಕ್ಷೇತ್ರದಿಂದ ಚುನಾವಣೆಯಲ್ಲಿ ಸೋತಿದ್ದಂತಹ ಜನ ಸಂಘದ ಅಭ್ಯರ್ಥಿ ಬಾಲರಾಜ್ ಮಾಧೋಕ್ ಅಭ್ಯರ್ಥಿಯ ವಿರುದ್ಧ, ನ್ಯಾಯಾಲಯದ ಮೆಟ್ಟಿಲು ಹತ್ತಿದ್ದರು. ಚುನಾವಣೆಯಲ್ಲಿ ನಡೆದಿರುವ ಅಕ್ರಮವನ್ನು ಪ್ರಶ್ನಿಸಿದ್ದರು, ಆದರೆ ನ್ಯಾಯಾಲಯದಲ್ಲಿ 'ಬ್ಯಾಲಟ್ ಪೇಪರ್'ನ ದುರ್ಬಳಕೆಯ ಪ್ರಶ್ನೆಗಳನ್ನು ಚುನಾವಣಾ ಆಯೋಗ ಸಂಪೂರ್ಣವಾಗಿ ತಳ್ಳಿ ಹಾಕುವ ಮೂಲಕ ಪಾರದರ್ಶಕವಾಗಿ ಚುನಾವಣೆ ನಡೆಸಿರುವುದಾಗಿ ಹೇಳಿತ್ತು. ಚುನಾವಣಾ ಫಲಿತಾಂಶ ಬಂದ ನಂತರ ಈ ರೀತಿಯ ಹೇಳಿಕೆಗಳು ಬರುತ್ತಿದ್ದು, ಇವೆಲ್ಲವೂ ಕಟ್ಟು ಕಥೆಯೆಂದು ಹೇಳಿತ್ತು.

ಪಶ್ಚಿಮ ಬಂಗಾಳ ಮತ್ತು ಬಿಹಾರದಲ್ಲಿ ಕಮ್ಯುನಿಸ್ಟ್ ಬೆಂಬಲಿತ ಪಕ್ಷದ ಕಾರ್ಯಕರ್ತರು ಇಡೀ ರಾಜ್ಯದ 'ಬ್ಯಾಲಟ್ ಪೇಪರ್' ಬೂತುಗಳನ್ನು ವಶಪಡಿಸಿಕೊಂಡು ಚುನಾವಣಾ ಫಲಿತಾಂಶಗಳನ್ನು ಆಡಲು ಬದಲು ಮಾಡಿರುವ ಉದಾಹರಣೆಗಳಿವೆ. EVM ಬಳಸಿದರೆ ಬೂತುಗಳನ್ನು ವಶಪಡಿಸಿಕೊಳ್ಳಲಾಗುವುದಿಲ್ಲ, ಚುನಾವಣಾ ಫಲಿತಾಂಶವನ್ನು ಬದಲಾಯಿಸಲು ಸಾಧ್ಯವಿಲ್ಲವೆಂಬ ಸ್ಪಷ್ಟತೆ ಅವರಿಗಿದೆ. ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಚುನಾವಣೆ ಬಂತೆಂದರೆ, ಜನರು ಹೊರಬಂದು ಮತ ಹಾಕುವುದು ಕಷ್ಟವಾಗಿತ್ತು. ಕಾಶ್ಮೀರದ ಅನೇಕ ಬೂತುಗಳಲ್ಲಿ ಶೇಕಡಾ ಸೊನ್ನೆ ಮತದಾನವಾಗಿರುವ ಉದಾಹರಣೆಗಳಿವೆ. ಜನ ಮತಹಾಕಲು ಹೊರಬಂದರೆ ಹೆದರಿಸಲಾಗುತ್ತಿತ್ತು, ಅಪ್ಪಿ ತಪ್ಪಿ ಹೊರಬಂದು ಮತಹಾಕಿದರೆ ಇಡೀ ಬೂತನ್ನು ವಶಪಡಿಸಿಕೊಳ್ಳಲಾಗುತ್ತಿತ್ತು. ವಶಪಡಿಸಿಕೊಂಡ ಬ್ಯಾಲಟ್ ಪೇಪರ್‌ಗಳಿಗೆ ಬೆಂಕಿ ಹಚ್ಚಿ ಸುಟ್ಟಿಹಾಕಲಾಗುತ್ತಿತ್ತು. ಚುನಾವಣಾ ಫಲಿತಾಂಶ ತಮ್ಮ ವಿರುದ್ಧವಾಗಿ ಬರಬಹುದೆಂಬ ಅನುಮಾನ ಬಂದರೆ ಸಾಕು ಬ್ಯಾಲಟ್ ಪೇಪರ್‌ಗಳಿಗೆ ಬೆಂಕಿ ಇಡುವ ಕೆಲಸವನ್ನು ದುಷ್ಕರ್ಮಿಗಳು ಮಾಡುತ್ತಿದ್ದರು. ಚುನಾವಣೆ ಗೆಲ್ಲಲು ಹಣದ ಆಮಿಷದ ಜೊತೆಗೆ, ಬೂತ್ ವಶಪಡಿಸಿಕೊಳ್ಳುವುದು ಅವರ ಚುನಾವಣಾ ತಂತ್ರಗಾರಿಕೆಯ ಭಾಗವಾಗಿತ್ತು. ಪಶ್ಚಿಮ ಬಂಗಾಳದಲ್ಲಿ 2019 ರಲ್ಲಿ ನಡೆದ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಅನೇಕ ಕಡೆ ಬೂತುಗಳನ್ನು ವಶಪಡಿಸಿಕೊಂಡು ಬೆಂಕಿ ಹಚ್ಚಿರುವ ಘಟನೆಗಳು ವರದಿಯಾಗಿದ್ದವು. ಚುನಾವಣಾ ಹಿಂಸಾಚಾರದಲ್ಲಿ 13 ಜನ ಸತ್ತಿದ್ದರು, ಅನೇಕ ಕಡೆಗಳಲ್ಲಿ ಕಚ್ಚಾ ಬಾಂಬುಗಳನ್ನು ಸ್ಫೋಟಿಸಲಾಗಿತ್ತು. ವರದಿ ಮಾಡಲು ಬಂದಿದ್ದ ಪತ್ರಕರ್ತರ ಮೇಲೆ ಹಲ್ಲೆಗಳಾಗಿದ್ದವು, ಬ್ಯಾಲಟ್ ಬಾಕ್ಸ್ ಗಳಿಗೆ ಬೆಂಕಿ ಹಚ್ಚಲಾಗಿತ್ತು. 1990 ರಲ್ಲಿ ಕಮ್ಯುನಿಸ್ಟ್ ಆಡಳಿತದ ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೆಯಲ್ಲಿ 400 ಜನರು ಜೀವ ಕಳೆದುಕೊಂಡಿದ್ದರು. ಮತ ಹಾಕಿದ ನಂತರ ಮತಪತ್ರಗಳನ್ನು ಕಸಿದು ಚುನಾವಣಾ ಫಲಿತಾಂಶವನ್ನು ಬದಲಾಯಿಸುವುದು ಅವರ ಬಹುದೊಡ್ಡ ತಂತ್ರಗಾರಿಕೆಯಾಗಿತ್ತು. ಗೆದ್ದ ನಂತರ ಅಧಿಕಾರದಲ್ಲಿ ಏನು ಮಾಡಬೇಕಾದರೂ ಮಾಡಬಹುದೆಂಬ ಭಂಡ ಧೈರ್ಯ ಅವರಲ್ಲಿತ್ತು, EVM ಬಳಕೆಯ ನಂತರ ಸತತವಾಗಿ ಚುನಾವಣೆಗಳನ್ನು ಸೋಲುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ದಿಕ್ಕು ತೋಚದಂತಾಗಿದೆ, ತನ್ನ ಪಕ್ಷದ ಹಿರಿಯರ ಕಾಲದ ಚುನಾವಣಾ ತಂತ್ರಗಾರಿಕೆಯನ್ನು ಬಳಸಿಕೊಂಡಾದರೂ ಅಧಿಕಾರ ಹಿಡಿಯಬೇಕೆಂಬ ಹಠಕ್ಕೆ ಬಿದ್ದು ತಾನು ಸೋತ ಚುನಾವಣೆಗೆ ಇವಿಎಂ ಯಂತ್ರವನ್ನು ನೇರವಾಗಿ ಹೊಣೆಮಾಡುತ್ತಿದೆ.

1982 ರಲ್ಲಿ ಮೊದಲ ಬಾರಿಗೆ EVM ಯಂತ್ರಗಳನ್ನು ಬಳಸಲು ನಿರ್ಧರಿಸಲಾಯಿತು, ಆದರೆ ಸರ್ವೋಚ್ಚ ನ್ಯಾಯಾಲಯ ಕಾನೂನಿನ ಮಾನ್ಯತೆಯಿಲ್ಲದೆ ಬಳಸಲಾಗುವುದಿಲ್ಲವೆಂದು ಹೇಳಿತ್ತು. ನ್ಯಾಯಾಲಯದ ತೀರ್ಪಿನ ನಂತರ ಸುಮಾರು ಎರಡು ವರ್ಷಗಳ ಕಾಲ EVM ಬಳಕೆ ಸಾಧ್ಯವಾಗಲಿಲ್ಲ. 1986 ರಲ್ಲಿ, ಅಂದಿನ ಚುನಾವಣಾ ಆಯೋಗದ ಆಯುಕ್ತರು ರಾಜೀವ್ ಗಾಂಧಿಯವರ ಕ್ಯಾಬಿನೆಟ್ ಮುಂದೆ EVM ಬಳಕೆಯ ಬಗ್ಗೆ ವಿವರಿಸಿ ಡೆಮೋ ನೀಡಿದ್ದರು. ರಾಜೀವ್ ಗಾಂಧಿ ಸಂಪುಟ ಸಚಿವರು ಸಭೆಯಲ್ಲಿ ಚುನಾವಣೆಯಲ್ಲಿ EVM ಬಳಕೆಯನ್ನು ಪ್ರಶಂಸಿದ್ದರು. 1988 ರಲ್ಲಿ ರಾಜೀವ್ ಗಾಂಧಿ ನೇತೃತ್ವದಲ್ಲಿ ಸಂಸತ್ತಿನಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ ಚುನಾವಣೆಯಲ್ಲಿ EVM ಬಳಕೆಯನ್ನು ಜಾರಿಗೆ ತರಲಾಯಿತು. 2004 ರ ಲೋಕಸಭಾ ಚುನಾವಣೆಯಲ್ಲಿ ಮೊದಲ ಬಾರಿಗೆ EVM ಯಂತ್ರಗಳನ್ನು ಬಳಸಲಾಯಿತು, 2004 ರ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ UPA ಸರಕಾರ ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿಯಿತು. ಇಂದು EVM ವಿರುದ್ಧ ಮಾತನಾಡುವ ಕಾಂಗ್ರೆಸ್ಸಿನ ಜೈರಾಮ್ ರಮೇಶ್, ಅಂದಿನ ಕಾಲದ ರಾಜೀವ್ ಗಾಂಧಿಯವರ ಸ್ನೇಹಿತ. ಅವರ ಸ್ನೇಹಿತರು ಪ್ರಧಾನಿಯಾಗಿದ್ದಾಗ ಒಪ್ಪಿಗೆ ನೀಡಿದ್ದ ನಿರ್ಣಯದ ವಿರುದ್ಧವೇ ಇಂದು ಮಾತನಾಡುತ್ತಾರೆ, ರಾಹುಲ್ ಗಾಂಧಿ ಸ್ವತಃ ತಮ್ಮ ತಂದೆಯವರ ನಿರ್ಧಾರವನ್ನೇ ಪ್ರಶ್ನಿಸುತ್ತಾರೆ. ಇಂಡಿ ಒಕ್ಕೂಟದ ಅನೇಕ ಸದಸ್ಯ ಪಕ್ಷಗಳಿಗೆ ಕಾಂಗ್ರೆಸ್ಸಿನ ಅದಲು ಬದಲು ಆಟದ ಬಗ್ಗೆ ಗೊತ್ತಿದೆ. ಜಮ್ಮು ಮತ್ತು ಕಾಶ್ಮೀರ ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿದಿರುವ ನ್ಯಾಷನಲ್ ಕಾನ್ಫರೆನ್ಸ್ ನಾಯಕ ಒಮರ್ ಅಬ್ದುಲ್ಲಾ ಬಹಿರಂಗವಾಗಿ, EVM ಬಗೆಗಿನ ಕಾಂಗ್ರೆಸ್ಸಿನ ಇಬ್ಬಂಗಿ ನೀತಿಯ ವಿರುದ್ಧ ಮಾತನಾಡಿದ್ದಾರೆ. ಗೆದ್ದಾಗ EVM ಸರಿ ಇದೆಯೆಂದು ಹೇಳಿ, ಸೋತಾಗ ಇವಿಎಂ ಸರಿಯಿಲ್ಲವೆಂಬುದು ನ್ಯಾಯವಲ್ಲವೆಂಬುದನ್ನು ಹೇಳಿದ್ದಾರೆ. ಚುನಾವಣೆಗಳ ಸೋಲಿನ ಹಿಂದಿನ ಕಾರಣಗಳನ್ನು ಪರಾಮರ್ಶಿಸುವ ಬದಲು EVM ಯಂತ್ರಗಳನ್ನು ದೋಷಿಸಿದರೆ ನಗೆಪಾಟಲಿಗೆ ಗುರಿಯಾಗಬೇಕಾಗುತ್ತದೆಯೆಂಬುದು ಅನೇಕ ಇಂಡಿ ಒಕ್ಕೂಟದ ಸದಸ್ಯರಿಗೆ ತಿಳಿದಿದೆ. ಉತ್ತರಪ್ರದೇಶದಲ್ಲಿ ನೆಲೆ ಕಾಣದಂತಾಗಿರುವ ಕಾಂಗ್ರೆಸ್ ಪಕ್ಷದ ವಿರುದ್ಧವಾಗಿ ಅಖಿಲೇಶ್ ಯಾದವ್ ಮಾತನಾಡುತ್ತಿದ್ದಾರೆ, ಇಂಡಿ ಒಕ್ಕೂಟದ ಸದಸ್ಯೆ ಮಮತಾ ಬ್ಯಾನರ್ಜಿ ಕಾಂಗ್ರೆಸ್ ಪಕ್ಷ ಒಕ್ಕೂಟದ ನೇತೃತ್ವ ವಹಿಸಿಕೊಳ್ಳಬಾರದೆಂದು ಹೇಳಿದ್ದಾರೆ. ಇಂಡಿ ಒಕ್ಕೂಟದ ಹಲವು ಸದಸ್ಯರು 'ಮಮತಾ' ಇಂಡಿ ಒಕ್ಕೂಟದ ಸಾರಥ್ಯ ವಹಿಸಿಕೊಳ್ಳಬೇಕೆಂದು ಹೇಳಿದ್ದಾರೆ. ಕರ್ನಾಟಕ ಮತ್ತು ತೆಲಂಗಾಣದಲ್ಲಿ ಗೆದ್ದಾಗ EVM ವಿರುದ್ಧ ಮಾತನಾಡದ ಕಾಂಗ್ರೆಸ್ ಪಕ್ಷದ ಸದಸ್ಯರು,ಸೋತಾಗ ಮಾತ್ರ ಮತ್ತದೇ ಹಳೇ ರಾಗವನ್ನಾಡುತ್ತಾರೆ.

ಭಾರತದ ಚುನಾವಣಾ ಇತಿಹಾಸದಲ್ಲಿ ಬಹುಮುಖ್ಯವಾಗಿ ನೆನಪಿನಲ್ಲಿಡಬೇಕಾದಂತಹ ಹೆಸರು ಟಿ.ಎನ್. ಶೇಷನ್, ಲಾಲು ಪ್ರಸಾದ್ ಅವಧಿಯಲ್ಲಿ ಚುನಾವಣಾ ಅಕ್ರಮಗಳಿಗೆ ಹೆಸರುವಾಸಿಯಾಗಿದ್ದ ಬಿಹಾರದಲ್ಲಿ 1995 ರ ಚುನಾವಣೆಯಲ್ಲಿ ಶೇಷನ್ ಅನೇಕ ಬದಲಾವಣೆಗಳನ್ನು ತಂದರು. ಮೊದಲ ಬಾರಿಗೆ ವಿವಿಧ ಹಂತಗಳಲ್ಲಿ ಚುನಾವಣೆ ನಡೆಸುವ ಪ್ರಕ್ರಿಯೆ ಜಾರಿಗೆ ತಂದರು, ಇದರಿಂದ ಬ್ಯಾಲಟ್ ಪೇಪರ್ ಬಳಕೆಯಿಂದ ಉಂಟಾಗುತ್ತಿದ್ದಂತಹ ಬೂತ್ ವಶಪಡಿಕೆ ಕಡಿಮೆಯಾಯಿತು. ಹೆಚ್ಚಿನ ಅಧಿಕಾರಿಗಳನ್ನು ವಿವಿಧ ಹಂತಗಳಲ್ಲಿ ನಿಯೋಜಿಸಿ ಶಾಂತಿಯುತವಾಗಿ ಚುನಾವಣೆ ನಡೆಸಲು ಅನುಕೂಲವಾಯಿತು. ಲಾಲೂ ಪ್ರಸಾದ್ ಯಾದವ್ ಅವರಿಗೆ ಶೇಷನ್ ಕಂಡರೆ ಆಗುತ್ತಿರಲಿಲ್ಲ, ಅವರು ಬಿಹಾರದಲ್ಲಿ ಜಾರಿಗೆ ತಂದಂತಹ ಸುಧಾರಣೆಗಳ ಬಗ್ಗೆ ಚಕಾರವೆತ್ತುತ್ತಿದ್ದ ಲಾಲು, ಅವರ ವಿರುದ್ಧ ಕಿಡಿಕಾರುತ್ತಿದ್ದರು. ಆದರೆ ಅಂದು ಬಿಹಾರದಲ್ಲಿ ನಡೆದ ಚುನಾವಣೆಯಲ್ಲಿ ಲಾಲು ಪುನಃ ಆಯ್ಕೆಯಾಗಿ ಅಧಿಕಾರಕ್ಕೆ ಬಂದರು. ಶೇಷನ್ ಅಂದು ಜಾರಿಗೆ ತಂದಂತಹ ಅನೇಕ ಸುಧಾರಣೆಗಳನ್ನು ಇಂದಿಗೂ ರಾಜ್ಯ ಮತ್ತು ದೇಶದ ಚುನಾವಣೆಗಳಲ್ಲಿ ಬಳಸಲಾಗುತ್ತಿದೆ. ಶೇಷನ್ ಅವಧಿಯಲ್ಲಿ ಇವಿಎಂ ಯಂತ್ರದ ಮೂಲಕವೂ ಚುನಾವಣೆಗಳು ನಡೆದವು, ಅವರು ಎಂದಿಗೂ EVM ಯಂತ್ರಗಳ ವಿರುದ್ಧ ಮಾತನಾಡಲಿಲ್ಲ. ಅಮೆರಿಕದಲ್ಲಿ ಇಂದಿಗೂ ಬ್ಯಾಲಟ್ ಪೇಪರ್ ಬಳಸುತ್ತಾರೆ, 2019 ರಲ್ಲಿ ಅಮೆರಿಕದಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ 'ರಿಗ್ಗಿಂಗ್' ಆಗಿತ್ತೆಂಬುದು ಡೊನಾಲ್ಡ್ ಟ್ರಂಪ್ ಬೆಂಬಲಿಗರ ವಾದವಾಗಿತ್ತು. 2024 ರ ಅಧ್ಯಕ್ಷೀಯ ಚುನಾವಣೆಯಲ್ಲಿ ಹಲವು ವಾರಗಳ ಕಾಲ ಅಮೆರಿಕಾದ ಕೆಲವು ರಾಜ್ಯಗಳ ಚುನಾವಣಾ ಮತ ಎಣಿಕೆ ನಡೆದಿತ್ತು.'ಟೆಸ್ಲಾ' ಕಂಪನಿಯ ಸಂಸ್ಥಾಪಕ ಎಲಾನ್ ಮಸ್ಕ್ ಮಹಾರಾಷ್ಟ್ರ ಚುನಾವಣಾ ಎಣಿಕೆಯ ದಿವಸ, ಭಾರತದಲ್ಲಿ ಬಳಕೆಯಾಗುತ್ತಿರುವ EVM ಗಳ ಪರವಾಗಿ ನಿಂತು, ಅಮೆರಿಕದಲ್ಲಿ ತಿಂಗಳುಗಟ್ಟಲೆ ನಡೆಯುವ ಎಣಿಕೆಯ ಬಗ್ಗೆ ವ್ಯಂಗ್ಯವಾಗಿ ಟ್ವೀಟ್ ಮಾಡಿದ್ದರು. ಸತತ ಚುನಾವಣಾ ಸೋಲುಗಳಿಂದ ಕಂಗೆಟ್ಟಿರುವ ವಿರೋಧ ಪಕ್ಷಗಳು EVM ಯಂತ್ರವನ್ನು ದೂಷಿಸಿ ಚುನಾವಣಾ ಆಯೋಗವನ್ನು ಪ್ರಶ್ನಿಸುವುದು ಸಾಮಾನ್ಯವಾಗಲಿಬಿಟ್ಟಿದೆ, ಹಿಂದಿನ ಬ್ಯಾಲಟ್ ಪೇಪರ್ ಪದ್ಧತಿ ಮತ್ತೊಮ್ಮೆ ಜಾರಿಗೆ ಬಂದರೆ. ಚುನಾವಣೆಯಲ್ಲಿ ಅಕ್ರಮ ನಡೆಸಿ ಸಲೀಸಾಗಿ ಗೆಲ್ಲಬಹುದೆಂಬ ಭಂಡ ಮನಸ್ಥಿತಿಯಲ್ಲಿದ್ದಾರೆ.

ಹಿಂದುಗಳು ಸಂಘಟಿತರಾಗಿ ಬೆಳೆಯಬೇಕು

ಅಭಿಮತ

ಮಹಾದೇವಯ್ಯ ಕರದಳ್ಳಿ
vveditoped@gmail.com

ಕಬಡ್ಡಿ ಆಡುವಾಗ ಆಟದ ಮೈದಾನವನ್ನು, ತನ್ನ ತಂಡದ ಆಟಗಾರರನ್ನು ಮತ್ತು ಎದುರಾಳಿ ತಂಡದ ಆಟಗಾರರನ್ನು ಸೂಕ್ಷ್ಮವಾಗಿ ಗಮನಿಸುವ ಆಟಗಾರ ಯಶಸ್ವಿ ಆಟಗಾರನಾಗುತ್ತಾನೆ. ತಾನು ಎದುರಿನ ತಂಡದ ಮೈದಾನದೊಳಗೆ ಪ್ರವೇಶಿಸುವಾಗ ತನ್ನ ಮೇಲಿರುವ ಏಳೂ ಜನರ ಕಣ್ಣುಗಳನ್ನು ಅವರ ನಡೆಗಳನ್ನು, ಪಟ್ಟುಗಳನ್ನು ನೋಡುತ್ತ ಆಟ ಆಡಿ ಅಂಕ ಗಳಿಸಬೇಕು. ಅಷ್ಟೇ ಅಲ್ಲ ಸತ್ತ (ಔಟಾಗಿರುವ) ಹೊರಗಿದ್ದ ತನ್ನವರನ್ನು ಮತ್ತೇ ಬದುಕಿಸಿ ಆಟಕ್ಕೆ ತೊಡಗಿಸಬೇಕು. ಕಬಡ್ಡಿ ಆಟಗಾರರಿಗೆ ಎರಡೂ ತಂಡಗಳ ಸದಸ್ಯರು ನಮ್ಮವರೇ ಎಂಬ ಅರಿವು ಇದ್ದಂತೆ ಹಿಂದುಗಳಿಗೆ ಎದುರಾಳಿ ತಂಡದ ಆಟಗಾರರು ಮುಸ್ಲಿಂರು, ಕ್ರಿಶ್ಚಿಯನ್ ಯಾರೇ ಆಗಿರಲಿ ಮೂಲತಃ ಹಿಂದುಗಳೇ ಆಗಿದ್ದವರು. ಯಾವುದೋ ಕಾರಣಕ್ಕಾಗಿ ಮತಾಂತರವಾಗಿ ಇಲ್ಲಿಯೇ ನೆಲೆಸಿದವರು ಮುಂದೆಯೂ ನಮ್ಮ ಜೊತೆ ಇರುವವರು ಮತ್ತು ಆಟಕ್ಕೋಸ್ಕರ ಬೇರೆ ಬೇರೆ ತಂಡಗಳಾಗಿ ಆಡುತ್ತಿದ್ದೇವೆ ಎಂಬ ಸಂಗತಿ ನೆನಪಿಡಬೇಕು ಮತ್ತು ಅನ್ಯಮತೀಯರಿಗೆ ಮನದಟ್ಟಾಗುವಂತೆ ವ್ಯವಹರಿಸಬೇಕು. ಕಬಡ್ಡಿ ಆಟಗಾರ ಎದುರಾಳಿ ತಂಡದ ಶಕ್ತಿ ನೀಡುವ ಅಂಶಗಳು ಅಧ್ಯಯನ ಮಾಡುವಂತೆ ಮುಸ್ಲಿಂ ಮತ್ತು ಕ್ರಿಶ್ಚಿಯನ್‌ರ ರಚನಾತ್ಮಕ ಅಂಶಗಳತ್ತ ವಿಶೇಷ ಗಮನ ಹರಿಸಬೇಕು.

ಮುಸ್ಲಿಂ ಮತ್ತು ಕ್ರಿಶ್ಚಿಯನ್‌ರಲ್ಲಿ ನೂರಾರು ಒಳಪಂಗಡಗಳಿದ್ದರೂ ಅವರು ತಮ್ಮನ್ನು ಅನ್ಯರಿಗೆ/ ಹೊರ ಜಗತ್ತಿಗೆ ಪರಿಚಯಿಸಿ ಕೊಳ್ಳುವಾಗ ಒಳಪಂಗಡಗಳ ಹೆಸರು ಹೇಳುವ ಬದಲಾಗಿ ತಮ್ಮನ್ನು ತಾವು ಮುಸ್ಲಿಂ, ಕ್ರಿಶ್ಚಿಯನ್ ಎಂದೇ ಪರಿಚಯಿಸಿ ಕೊಳ್ಳುತ್ತಾರೆ. ಹಿಂದುಗಳು ಮಾತ್ರ, ತಮ್ಮನ್ನು ಪರಿಚಯಿಸಿ ಕೊಳ್ಳುವಾಗ ಹಿಂದು ಎನ್ನದೇ ವೀರಶೈವ, ಬ್ರಾಹ್ಮಣ, ಕಬ್ಬಲಿಗ, ಕುರುಬ, ಹರಿಜನ ಮುಂತಾದ ಒಳಪಂಗಡಗಳ ಹೆಸರಿನಲ್ಲಿ ಪರಿಚಯಿಸಿ ಕೊಳ್ಳುತ್ತಾರೆ. ಹಿಂದುಗಳು ತಮ್ಮನ್ನು ತಾವು ಹಿಂದು ಎಂದು ಪರಿಚಯಿಸಿಕೊಳ್ಳಬೇಕು.

ಮುಸ್ಲಿಂರು ಮಸೀದಿಗಳಿಗೆ, ಕ್ರಿಶ್ಚಿಯನ್‌ರು ಚರ್ಚಗಳಿಗೆ ಬಂದಾಗ ಅಲ್ಲಿನ ಪಾವಿತ್ರ್ಯತೆ ಕಾಯ್ದುಕೊಳ್ಳುವ ಎಲ್ಲ ನಿಯಮಗಳನ್ನು ಸ್ವಇಚ್ಛೆಯಿಂದ ಪಾಲಿಸುತ್ತಾರೆ. ಯಾರೊಬ್ಬರೂ ಕುಡಿದು ಬರುವುದಿಲ್ಲ. ಅಪ್ಪಿತಪ್ಪಿ ಆಕಸ್ಮಿಕವಾಗಿ ಕುಡಿದದ್ದು ಕಂಡು ಬಂದರೆ ಕಂಡವರು ಬಾಗಿಲಲ್ಲಿ/ ದ್ವಾರದಲ್ಲಿ ಕುಡುಕನನ್ನು ತಡೆದು ಆಚೆ ಹಾಕುತ್ತಾರೆ. ಮಕ್ಕಳಿರಲಿ, ಮುದುಕರಿರಲಿ ಕೈಕಾಲು ತೊಳೆದು ಕೊಂಡು ಮಸೀದಿ ಒಳಗೆ ಪ್ರವೇಶ ಮಾಡುತ್ತಾರೆ. ಪುಟ್ಟ ಮಕ್ಕಳ ಕಾಲಿಗೆ ಚಪ್ಪಲಿ, ಬೂಟು, ಪಾದರಕ್ಷೆ ಸಹಿತ ಒಳಗೆ ಕರೆದುಕೊಂಡು ಬರುವುದಿಲ್ಲ. ಮಕ್ಕಳಿಗೂ ಒಂದು, ಎರಡು ಮಾಡಲು ಬಿಡುವುದಿಲ್ಲ. ಮಸೀದಿಯಲ್ಲಿ, ಚರ್ಚಗಳಲ್ಲಿ ಯಾರೂ ಬೀಡಿ ಸಿಗರೇಟ, ಗುಟಕಾ ಬಳಸುವುದಿಲ್ಲ.

ಹಿಂದೂ ದೇವಸ್ಥಾನಗಳಲ್ಲಿ, ಮಠ ಮಂದಿರಗಳಲ್ಲಿ ಸೂಕ್ತ ಶೌಚಾಲಯ, ಸ್ನಾನಗೃಹ, ಕುಡಿಯುವ ನೀರು, ವಿಶ್ರಾಂತಿ ಸ್ಥಳ ಇಲ್ಲ . ಹಿಂದುಗಳು ತಾವೇ ಎಲ್ಲೆಂದರಲ್ಲಿ ತಿಂದ ಊಟದ ಎಲೆಗಳು, ಪ್ರಸಾದ, ತೆಂಗಿನ ಚಿಪ್ಪುಗಳನ್ನು ಬಿಸಾಡುತ್ತಾರೆ. ಪುಟ್ಟಮಕ್ಕಳ ಕಾಲಿಗೆ ಚಪ್ಪಲಿ, ಬೂಟು, ಪಾದರಕ್ಷೆ ಸಹಿತ ಒಳಗೆ ತರುತ್ತಾರೆ. ಮಕ್ಕಳು ಒಂದು, ಎರಡು ಮಾಡಿರುವುದನ್ನು ಸ್ವಚ್ಛ ಮಾಡದೇ ಲಕ್ಷ್ಯ ಮಾಡುತ್ತಾರೆ. ಜನರಂತಿರಲಿ, ಪೂಜಾರಿಗಳೇ ಬೀಡಿ ಸಿಗರೇಟ, ಗುಟಕಾ ಬಳಸುತ್ತಾರೆ. ಗ್ರಾಮಗಳಲ್ಲಿನ ದೇವಸ್ಥಾನಗಳು ಕುಡುಕರ, ಜೂಜುಕೋರರ ಅಡ್ಡೆಗಳಾಗಿರುತ್ತವೆ. ದೇವಾಲಯಗಳ ವಸ್ತುಗಳನ್ನು ಸ್ವಂತಕ್ಕೆ ಬಳಸುತ್ತಾರೆ. ಇವೆಲ್ಲ ನಿಲ್ಲಿಸಬೇಕು.

ಮುಸ್ಲಿಂ ಕ್ರಿಶ್ಚಿಯನ್‌ರು ತಮ್ಮ ಮಾಂಸ, ಮದ್ಯದ ಅಂಗಡಿಗಳಿಗೆ ಮಹ್ಮದ ಪೈಗಂಬರ, ಕುರಾನ, ಅಥವಾ ಬೈಬಲ್, ಏಸು ಕ್ರಿಸ್ತನ ಹೆಸರಿಡುವುದಿಲ್ಲ. ಆದರೆ ಹಿಂದುಗಳು ದೇವರ ಹೆಸರು ಇಡುತ್ತಾರೆ. ಈ ಎಲ್ಲ ಮಾಡಬಾರದ ಸಂಗತಿಗಳನ್ನು ತಕ್ಷಣ ನಿಲ್ಲಿಸಬೇಕು. ಒಟ್ಟಿನಲ್ಲಿ ದೇವಾಲಯಗಳು ಸ್ವಚ್ಛ ಸುಂದರ ತಾಣಗಳಾಗ ಬೇಕು. ಭಕ್ತಿಭಾವ ಚಿಗರೊಡೆಯುವಂತಾಗಬೇಕು. ಮುಸ್ಲಿಂರು ವಾರಕ್ಕೊಮ್ಮೆ ಶುಕ್ರವಾರ, ಕ್ರಿಶ್ಚಿಯನ್‌ರು ರವಿವಾರ ಪ್ರಾರ್ಥನೆ ಮಾಡಲು ಹೋಗುತ್ತಾರೆ. ಪ್ರತಿ ಬಡಾವಣೆಯಲ್ಲಿರುವ ದೇವಾಲಯದಲ್ಲಿನ ಅಲ್ಲಿರುವ ದೇವರಿಗೆ ತಕ್ಕಂತೆ ಹಿಂದುಗಳು ಒಟ್ಟಾಗಿ ವಾರಕ್ಕೊಮ್ಮೆ ಮಂಗಳಾರತಿ ಪ್ರಾರ್ಥನೆ ಮಾಡಬೇಕು.

ಮುಸ್ಲಿಂರು ಹಣ, ಆಭಿವೃದ್ಧಿ ಕೆಲಸ ನೋಡಿ ಮತಹಾಕುವುದೂ ಇಲ್ಲ. ಮುಸ್ಲಿಂ ಹಿತ ಬೆಂಬಲಿಸುವ ಪಕ್ಷಕ್ಕೆ ಮಾತ್ರ ಮತ ಹಾಕುತ್ತಾರೆ. ಅದೇ ರೀತಿ ಹಿಂದೂ ಹಿತಕ್ಕೆ ಮತ ಹಾಕಬೇಕು. ಮುಸ್ಲಿಂರು, ಕ್ರಿಶ್ಚಿಯನ್‌ರ ಮನೆಗಳಲ್ಲಿನ ಹಿರಿಯರು ಕಿರಿಯರಿಗೆ ಅಥವಾ ದೊಡ್ಡ ಮಕ್ಕಳು ಚಿಕ್ಕಮಕ್ಕಳಿಗೆ ಕುರಾನ್, ಬೈಬಲ್‌ಗಳನ್ನು ನಿತ್ಯ ಬಾಯಿಪಾಠ ಮಾಡಿಸುತ್ತಾರೆ. ಹಿಂದುಗಳೂ ಸಹ ಧಾರ್ಮಿಕ, ಪುರಾಣಗ್ರಂಥಗಳನ್ನು, ವಚನಗಳನ್ನು, ದಾಸರ ಹಾಡುಗಳನ್ನು ಅವರವರ ನಂಬಿಕೆಯಂತೆ ದೇವರ ನಾಮ ನಿತ್ಯ ಪಾರಾಯಣ ಮಾಡಿಸಬೇಕು.

ಬಡಾವಣೆಯಲ್ಲಿ ಮುಸ್ಲಿಂರದ್ದು ಒಂದೇ ಮನೆ ಇದ್ದರೂ ಹಿಂದುಗಳ ಸಹಕಾರದಿಂದ ದರ್ಗಾ/ಮಸೀದಿ ಕಟ್ಟಿ ಕೊಳ್ಳುತ್ತಾರೆ. ಅಜಾನ್ ಕೂಗುತ್ತಾರೆ. ಆದರೆ ಹಿಂದುಗಳು ಮುಸ್ಲಿಂ ಬಡಾವಣೆಯಲ್ಲಿ ಇರಲು ಇಚ್ಛಿಸುವುದಿಲ್ಲ. ಅಷ್ಟೇ ಅಲ್ಲ ಮುಸ್ಲಿಂಬಹುಸಂಖ್ಯಾತ ಪ್ರದೇಶಗಳನ್ನು ಮಿನಿ ಪಾಕಿಸ್ತಾನ ಎಂದು ಹೆಸರಿಸಿ ಅವುಗಳಿಗೆ ಭೇಟಿ ನೀಡುವುದಂತಿರಲಿ ನೋಡುವ ಸಾಹಸ ಮಾಡುವುದಿಲ್ಲ. ಮುಸ್ಲಿಂ ಬಡಾವಣೆಯ ಹಿಂದುಗಳಿಗೆ ಬೆಂಬಲ ಮನೋಬಲ ಹೆಚ್ಚಿಸಲು ಸಂಘಟಿತ ಪ್ರಯತ್ನ ಮಾಡಬೇಕು. ಮತ್ತು ಹಿಂದು ಬಡಾವಣೆಯಲ್ಲಿರುವ ಮುಸ್ಲಿಂ ಕ್ರಿಶ್ಚಿಯನ್‌ರಿಗೆ ಬಡಾವಣೆಯಲ್ಲಿ ನಡೆಯುವ ರಾಷ್ಟ್ರೀಯ ಹಬ್ಬಗಳು, ಜಾತ್ರೆಗಳಂತಹ ಧಾರ್ಮಿಕ ಸಮಾವೇಶಗಳು ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೇರೇಪಿಸಬೇಕು.

ಸರಕಾರ ಬಿಜೆಪಿ ಕಾಂಗ್ರೆಸ್ ಬಿಜೆಡಿ ಯಾವುದೇ ಇರಲಿ ಸರಕಾರದವತಿಯಿಂದ ಪುಗಸಟ್ಟೆ ನೀಡುವ ಸೌಲಭ್ಯಗಳು ಉದಾಹರಣೆಗೆ ಸರಕಾರಿ ಆಸ್ಪತ್ರೆ, ಸರಕಾರಿ ಶಾಲೆ, ಉಚಿತ ತರಬೇತಿ, ವಾಹನ ಖರೀದಿಯಲ್ಲಿ ಶೇ.50 ಸಬ್ಸಿಡಿ, ಉಚಿತ ಐಎಸ್ ಐಪಿಎಸ್ ತರಬೇತಿ ಸೇರಿದಂತೆ ಎಲ್ಲೆಡೆ ಅಲ್ಪಸಂಖ್ಯಾತರು ಇರುತ್ತಾರೆ. ಬಡ, ಆರ್ಥಿಕವಾಗಿ ಹಿಂದುಳಿದ ಹಿಂದುಗಳ ಮಾತ್ರ ಅವುಗಳನ್ನು ಬಳಸಿಕೊಳ್ಳುವುದಿಲ್ಲ. ಆದ್ದರಿಂದ ರಾಜ್ಯ, ಕೇಂದ್ರ ಸರಕಾರಗಳು ನೀಡುವ ಉಚಿತ ಅನುದಾನ, ಸೌಲಭ್ಯಗಳ ಮಾಹಿತಿ ನೀಡಿ ಬಡ ಹಿಂದುಗಳಿಗೆ ಸುಲಭವಾಗಿ ಸಿಗುವಂತೆ ಜಾಗೃತಿ ಮೂಡಿಸಬೇಕು.

ದಿನದ ಬದುಕಿಗಾಗಿ ತಾವು ನಂಬದ ದೇವರ ದೇವಸ್ಥಾನದ ಮುಂದೆ ಪೂಜಾ ಸಾಮಗ್ರಿಗಳಾದ ಕುಂಕುಮ, ಅರಿಶಿನ, ಹೂ, ಹಾರ, ತೆಂಗು, ಬೆಂಡು ಬತ್ತಾಸು, ಚಹಾ, ಭಜಿ, ಆಟದ ಸಾಮಾನು ಮುಂತಾದ ವಸ್ತುಗಳನ್ನು ಮಾರುತ್ತಾರೆ. ಆದರೆ ಹಿಂದುಗಳು ದರ್ಗಾಗಳ ಉರುಸ್‌ನಲ್ಲಿ ಯಾವುದೇ ಅಂಗಡಿ ಹಾಕುವುದಿಲ್ಲ.

ಮೀಸಲಾತಿಯನ್ನು, ಸವಲತ್ತುಗಳನ್ನು, ಅನುದಾನವನ್ನು ನೀಡುವಾಗ, ವೋಟ್ ಶೇರ್ ಲೆಕ್ಕ ಹಾಕುವಾಗ, ಹಿಂದುಗಳನ್ನು ಮಾತ್ರ ಜಾತಿಉಪಜಾತಿಗಳ ಹೆಸರಲ್ಲಿ ಗುರುತಿಸುವ ಸರ್ಕಾರ, ಮಾಧ್ಯಮಗಳು, ರಾಜಕಾರಣಿಗಳು ಮುಸ್ಲಿಂ ಮತ್ತು ಕ್ರಿಶ್ಚಿಯನ್‌ರ ಒಳಪಂಗಡಗಳ ಜನಸಂಖ್ಯೆಗೆ ತಕ್ಕಂತೆ, ಉಪಪಂಗಡಗಳ ಬಡವರಿಗೆ ಅನುಕೂಲವಾಗುವಂತೆ ಸಹಾಯಧನ, ಅನುದಾನ ಬಿಡುಗಡೆ ಮಾಡಬೇಕು ಎಂದು ಸರಕಾರವನ್ನು ಒತ್ತಾಯಿಸಬೇಕು.

ಮುಸ್ಲಿಂ, ಕ್ರಿಶ್ಚಿಯನ್ ಹೆಣ್ಣುಮಕ್ಕಳು ಲವ್‌ಜಿಹಾದ್, ಲಿವಿಂಗ್ ಟುಗೆದರ್‌ಗಳಂತಹ ಸಾಮಾಜಿಕ ಪಿಡುಗಳಿಗೆ ಬಲಿಯಾಗುವುದಿಲ್ಲ. ಪ್ರಚೋದನಕಾರಿ ಬಟ್ಟೆ ಧರಿಸುವುದು, ಅಂಗಾಂಗ ಪ್ರದರ್ಶನ ಮಾಡುವ ಬಟ್ಟೆ ಧರಿಸಿ ಸ್ಟೇಟಸ್ ಇಡುವುದು ಮಾಡುವುದಿಲ್ಲ. ಅಕಾಲಿಕ ಸಮಯದಲ್ಲಿ, ನಿರ್ಜನ ಪ್ರದೇಶಗಳಲ್ಲಿ ಓಡಾಡುವುದಿಲ್ಲ. ಈ ಎಲ್ಲ ಸಂಗತಿಗಳನ್ನು ಹಿಂದು ಹೆಣ್ಣುಮಕ್ಕಳು ಮಾಡುತ್ತಾರೆ. ಮತ್ತು ಅತ್ಯಾಚಾರಕ್ಕೆ ಒಳಗಾಗುತ್ತಾರೆ.ಎಲ್ಲ ಹೆಣ್ಣುಮಕ್ಕಳು ತಮ್ಮ ಅಕ್ಕತಂಗಿಯರಂತೆ, ತಾಯಿಂದರಂತೆ ಭಾವಿಸುವ ಹಿಂದೂಗಳು ತಮ್ಮ ಗಂಡುಮಕ್ಕಳು ಅತ್ಯಾಚಾರ ಅನಾಚಾರಗಳಂತಹ ತಪ್ಪುಗಳನ್ನು ಮಾಡದಂತೆ ಸರಿಯಾದ ತಿಳುವಳಿಕೆ ನೀಡಬೇಕು. ಕಳೆದ 75 ವರ್ಷಗಳಲ್ಲಿ ಸರಕಾರ, ಸಮುದಾಯದಿಂದ ಸಹಾಯ ಪಡೆಯುವ ಬಹುತೇಕ ಮುಸ್ಲಿಂರು ಸಾರ್ವಜನಿ ಕರಿಗಾಗಿ ಉಚಿತ ಆಸ್ಪತ್ರೆ, ಉಚಿತ ಧರ್ಮಶಾಲೆ, ದೇಶಹಿತ ಸಮಾಜಮುಖಿ ಕಾರ್ಯಗಳು ನಡೆಸುತ್ತಿಲ್ಲ ಎಂಬುದನ್ನು ಗಮನಿಸಬೇಕು. ಪ್ರಜ್ಞಾವಂತ ಮುಸ್ಲಿಂರೂ ಸಹ ಸಮಾಜಮುಖಿ ಕಾರ್ಯಮಾಡುವಂತೆ ಪ್ರೋತ್ಸಾಹಿಸಬೇಕು.

ಕಬಡ್ಡಿ ಆಡುವಾಗ ಕಬಡ್ಡಿ ಆಟಗಾರ ಔಟಾದ ತನ್ನ ತಂಡದ ಸದಸ್ಯರನ್ನು ಪುನಃ ಬದುಕಿಸಿ ಆಟ ಆಡಲು ಮಾಡುವಂತೆ ಮತಾಂತರವಾದ ಹಿಂದುಗಳು, ದಶಕಗಳಿಂದ ಭಾರತದವರೇ ಆಗಿರುವ ಮುಸ್ಲಿಂರು, ಕ್ರಿಶ್ಚಿಯನ್‌ರು ಸಹ ಮತ್ತೇ ಭಾರತದ ಮುಖ್ಯವಾಹಿನಿಯಲ್ಲಿ ಸೇರಿಕೊಳ್ಳುವಂತೆ ಮಾಡಬೇಕು. ಭಯೋತ್ಪಾದಕರು, ಉಗ್ರರು, ಅತ್ಯಾಚಾರಿಗಳನ್ನು ಹಿಂದು, ಮುಸ್ಲಿಂ ಮತ್ತು ಕ್ರೈಸ್ತರೆಂದು ಗುರುತಿಸದೇ ಕೇವಲ ಅಪರಾಧಿಗಳೆಂದು ಗುರುತಿಸಬೇಕು. ಹಿಂದು, ಮುಸ್ಲಿಂ ಮತ್ತು ಕ್ರೈಸ್ತ ಪೂಜಾಪದ್ಧತಿಗಳ ವೈಯುಕ್ತಿಕ ನೆಲೆಯಲ್ಲಿ, ಸಮುದಾಯದ ನೆಲೆಯಲ್ಲಿ ಪಾಲಿಸಬೇಕು. ಜೊತೆಗೆ ಅವರಿಗೆಲ್ಲ ನಾವೆಲ್ಲರೂ ಭಾರತೀಯರೆಂಬ ಭಾವ ಬೆಳೆಸಿಕೊಳ್ಳುವ ರೀತಿಯಲ್ಲಿ ಪ್ರತಿ ನಾಗರೀಕರು ಅವರೊಂದಿಗೆ ನಡೆದು ಕೊಳ್ಳಬೇಕು.

(ಲೇಖಕರು: ರಾಷ್ಟ್ರೀಯ ಮತ್ತು ಸ್ವದೇಶಿ ವಿಷಯಗಳ ಚಿಂತಕರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಒಮ್ಮತ ಮೂಡಲಿ

ಕೇಂದ್ರಸರಕಾರದ ಮಹತ್ವದ ನಿರ್ಣಯಗಳಲ್ಲಿ ಒಂದಾದ 'ಒಂದು ದೇಶ, ಒಂದು ಚುನಾವಣೆ' ಪ್ರಸ್ತಾವನೆಗೆ ಮೋದಿ ನೇತೃತ್ವದ ಸಚಿವ ಸಂಪುಟ ಅನುಮೋದನೆ ನೀಡಿ, ಇದಕ್ಕೆ ಈಗಾಗಲೇ ಲೋಕಸಭೆಯಲ್ಲಿ 269 ಪರ ಹಾಗೂ 198 ವಿರುದ್ಧ ಮತಗಳು ದೊರಕಿದೆ. ಲೋಕಸಭೆ ಮತ್ತು ಎಲ್ಲಾ ರಾಜ್ಯಗಳ ವಿಧಾನಸಭಾ ಚುನಾವಣೆಯನ್ನು ಒಂದೇ ಬಾರಿ ನಡೆಸುವ ಮಹತ್ವದ ಯೋಜನೆ ಇದಾಗಿದ್ದು, ಇದಕ್ಕೆ ಪ್ರಮುಖ ಪತ್ರಿಪಕ್ಷವಾದ ಕಾಂಗ್ರೆಸ್ ಸೇರಿದಂತೆ ಕೆಲ ವಿಪಕ್ಷಗಳು ಮಸೂದೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದು, ಇದು ಅಸಂವಿಧಾನಿಕ, ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತದೆ ಮತ್ತು ಸಂವಿಧಾನದ ಮೂಲ ರಚನೆಯನ್ನು ಉಲ್ಲಂಘಿಸುತ್ತದೆ ಎಂದು ವಿರೋಧ ಹಾಗೂ ಆತಂಕವನ್ನು ಸಹಜವಾಗಿ ವ್ಯಕ್ತಪಡಿಸಿವೆ.

ಲೋಕಸಭೆಗೆ ಹಾಗೂ ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದು ಭಾರತಕ್ಕೆ ಹೊಸತೇನಲ್ಲ. ಸ್ವತಂತ್ರ ಭಾರತದ ಮೊದಲ ಎರಡು ಸಾರ್ವತ್ರಿಕ ಚುನಾವಣೆಗಳ ಜತೆಯಲ್ಲೇ ರಾಜ್ಯ ವಿಧಾನಸಭೆಗಳಿಗೂ ಚುನಾವಣೆಗಳು ಈ ಹಿಂದೆ ನಡೆದಿದ್ದವು. ಈಗ ಏಕಕಾಲಕ್ಕೆ ಚುನಾವಣೆಗಳನ್ನು ನಡೆಸುವ ಪ್ರಸ್ತಾಪ ಮತ್ತೆ ಮುನ್ನಲೆಗೆ ಬಂದಿದ್ದು ಅದಕ್ಕೆ ಪೂರಕವಾಗಿ ಸಂಸತ್ತಿನಲ್ಲಿ ವಿವಿಧ ರಾಜಕೀಯ ಪಕ್ಷಗಳಿಂದ ಬಿಸಿ ಬಿಸಿ ಚರ್ಚೆ ಆರಂಭವಾಗಿದೆ. ಏಕಕಾಲದ ಚುನಾವಣೆಗಳ ಒಂದು ಪ್ರಯೋಜನವೆಂದರೆ ಆರ್ಥಿಕ ಉಳಿತಾಯ. ಒಂದು ದೇಶ ಒಂದು ಚುನಾವಣೆಯ ಯೋಜನೆಯು ಪ್ರತಿ ವರ್ಷ ವಿವಿಧ ಬಾರಿ ಭದ್ರತಾ ಪಡೆಗಳು ಮತ್ತು ಚುನಾವಣಾ ಅಧಿಕಾರಿಗಳನ್ನು ನಿಯೋಜಿಸುವ ವೆಚ್ಚವನ್ನು ಕಡಿತಗೊಳಿಸುತ್ತದೆ. ಈ ರೀತಿಯ ಯೋಜನೆಯು ರಾಜಕೀಯ ಪಕ್ಷಗಳ ನೇತೃತ್ವದ ಪ್ರಚಾರಗಳಿಂದ ಉಂಟಾಗುವ ವೆಚ್ಚವನ್ನು ಕಡಿತಗೊಳಿಸುತ್ತದೆ. ಆದಾಗ್ಯೂ, ಸಾಂವಿಧಾನಿಕ ಬದಲಾವಣೆಗಳು, ವ್ಯವಸ್ಥಾಪನಾ ಸಮಸ್ಯೆಗಳು ಮತ್ತು ಪ್ರಾದೇಶಿಕ ಪ್ರಾತಿನಿಧ್ಯದ ಬಗ್ಗೆ ರಾಜಕೀಯ ವಿರೋಧಗಳು ಇದರಲ್ಲಿ ಸೇರಿವೆ. ಇದನ್ನು ಜಾರಿ ಮಾಡುವ ಮುನ್ನ ಚುನಾವಣಾ ಚಕ್ರಗಳನ್ನು ಮರು ಹೊಂದಾಣಿಕೆ ಮಾಡುವ ಹಾಗೂ ಇದಕ್ಕೆ ಕಾನೂನು ಬದ್ಧವಾಗಿ ಸಮರ್ಥನೀಯ ಚೌಕಟ್ಟನ್ನು ನೀಡುವ ಅವಶ್ಯಕತೆಯಿದೆ. ಭಾರತ ಪ್ರಜಾಪ್ರಭುತ್ವ ರಾಷ್ಟ್ರ. ಪ್ರಜಾಪ್ರಭುತ್ವದಲ್ಲಿ ಮೇಲೆ ಪರ ವಿರೋಧ ಬರುವುದು ಕೂಡ ಸಹಜ. ಇದು ಜಾರಿಯಾದರೆ ಪ್ರಾದೇಶಿಕ ಪಕ್ಷಗಳ ಅಸ್ತಿತ್ವಕ್ಕೆ ಧಕ್ಕೆ ಉಂಟಾಗಬಹುದು ಎಂಬ ವಿರೋಧ ಪಕ್ಷಗಳ ಆತಂಕಕ್ಕೆ ಕೇಂದ್ರ ಸರಕಾರದಿಂದ ಸೂಕ್ತ ಉತ್ತರ ದೊರೆಯಬೇಕಿದೆ. ಅಗತ್ಯ ಅನಿಸಿದರೆ ಕೇಂದ್ರಸರಕಾರ ಈ ವಿಷಯದ ಬಗ್ಗೆ ಇನ್ನೊಮ್ಮೆ ಸರ್ವಪಕ್ಷಗಳ ಸಭೆಯನ್ನು ಕರೆದು ಚರ್ಚಿಸಿ ಅವರ ವಿಶ್ವಾಸವನ್ನು ಪಡೆದು ತದನಂತರ ಈ ಯೋಜನೆಯನ್ನು ಸರ್ವಾನುಮತದಿಂದ ಅನುಷ್ಠಾನಕ್ಕೆ ತರುವುದು ಅಗತ್ಯವಾಗಿದೆ.

-ಹರಳಹಳ್ಳಿಪುಟ್ಟರಾಜು, ಪಾಂಡವಪುರ

ಈಡೇರದ ಅಧಿವೇಶನದ ಉದ್ದೇಶ

ಬೆಳಗಾವಿಯಲ್ಲಿ ಹತ್ತು ದಿನಗಳಲ್ಲಿ ಚಳಿಗಾಲದ ಅಧಿವೇಶನ ನಡೆದಿದ್ದು ಕೇವಲ ಎಂಟು ದಿನ. ಬೆಳಗಾವಿಯಲ್ಲಿ 400 ಕೋಟಿ ರು. ವ್ಯಯಿಸಿ ಸುವರ್ಣ ವಿಧಾನಸೌಧ ನಿರ್ಮಿಸಿರುವುದೇ ಉತ್ತರ ಮತ್ತು ದಕ್ಷಿಣ ಕರ್ನಾಟಕ ಭಾಗದಲ್ಲಿ ಅಭಿವೃದ್ಧಿಯಲ್ಲಿ ಆಗಿರುವ ಅಸಮಾನತೆ ನಿವಾರಣೆಗೆ ಈ ಬಾರಿಯ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಬಹುತೇಕ ಜ್ವಲಂತ ಸಮಸ್ಯೆಗಳು ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡ ಹತ್ತಾರು ವಿಷಯಗಳು ಚರ್ಚೆಯಾಗಿ ಉತ್ತರ ಕರ್ನಾಟಕದ ಅಭಿವೃದ್ಧಿ ಆಗುವುದು ಎಂಬ ಸಾರ್ವಜನಿಕರ ಆಶಯ ಈ ಬಾರಿಯು ಈಡೇರಲೇ ಇಲ್ಲ.

ಈ ಮೊದಲು ಅಧಿವೇಶನ ನಡೆಯುವ ಸಂದರ್ಭದಲ್ಲಿ ಜನನಾಯಕರೆಂದು ಕರೆಸಿಕೊಂಡವರು ಪೂರ್ವ ತಯಾರಿ ಮಾಡಿಕೊಂಡು ಬರುತ್ತಿದ್ದರು. ಅಂಕಿ ಅಂಶಗಳನ್ನು ಮುಂದಿಟ್ಟುಕೊಂಡು ಸರಕಾರವನ್ನು ಇಕ್ಕಟ್ಟಿನಲ್ಲಿ ಸಿಲುಕಿಸುತ್ತಿದರು. ಅಂತಹ ಮುತ್ಸದ್ದಿ ಜನಪ್ರತಿನಿಧಿಗಳ ಕೊರತೆ ಅಧಿವೇಶನದಲ್ಲಿ ಎದ್ದು ಕಾಣುತ್ತಿತ್ತು. ಎಂಟು ದಿನಗಳ ಅಧಿವೇಶನದಲ್ಲಿ ಜನಪ್ರತಿನಿಧಿಗಳ ನಿರ್ಲಕ್ಷ್ಯ ಪ್ರಭುತ್ವದ ಅಸಡ್ಡೆ ರಾಜಕಾರಣಿಗಳ ವ್ಯಯಕ್ತಿಕ ಕೆಸರೆರಚಾಟಕ್ಕೆ ಕರ್ನಾಟಕದ ಜನ ಭ್ರಮನಿರಸನಗೊಂಡಿ ದ್ದಾರೆ. ಒಟ್ಟಿನಲ್ಲಿ ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗಳ ಬಗ್ಗೆ ಪರಿಹಾರ ಹುಡುಕುವ ಗಟ್ಟಿ ಪ್ರಯತ್ನ ಅಧಿವೇಶನದಲ್ಲಿ ಕಾಣಲಿಲ್ಲ ಆರೋಪ ಪ್ರತ್ಯಾರೋಪಗಳಿಗೆ ಸದನ ಬಲಿಯಾಯಿತು.

-ಉದಯ ಮ ಯಂಡಿಗೇರಿ, ಧಾರವಾಡ.

ಸದಸ್ಯರ ಜನಸೇವೆ ಇದೇನಾ?

ವಿಧಾನ ಪರಿಷತ್‌ನಲ್ಲಿ ಮಂಡಿಸಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆ ಬೀಳಿಸಲು ಹೋದ ಬಿಜೆಪಿ ಜೆಡಿಎಸ್ ಸದಸ್ಯರು ಮತವಿಭಜನಗೆ ಕೇಳಿ, ತಾವೇ ಬೇಸ್ತು ಬಿದ್ದ ಪ್ರಸಂಗ ನಡೆಯಿತು. ಮಸೂದೆ ಪರವಾಗಿ 26 ಹಾಗೂ ವಿರೋಧವಾಗಿ 25 ಮಾತುಗಳು ಬಂದು ಮಸೂದೆ ಅಂಗೀಕಾರವಾಗಿದೆ. ಈ ಸಂದರ್ಭದಲ್ಲಿ ಮತವಿಭಜನೆಯ ಸಮಯದ ಗಂಟೆ ಬಾರಿಸಿದೆ ಕೂಡಲೇ ಸದನದ ಮಾರ್ಷಲ್‌ಗಳು ಎಲ್ಲ ಬಾಗಿಲುಗಳನ್ನು ಬಂದ್ ಮಾಡಿದರು. ಬಂದ್ ಆದ ನಂತರ ಬಿಜೆಪಿ ಸದಸ್ಯ ಎಂ.ಜಿ. ಮುಂದೆ ಓಡೋಡಿ ಬಂದರೂ ಸಮಯ ಮೀರಿದ್ದರಿಂದ ಮತದಾನದಲ್ಲಿ ಪ್ರತಿಕ್ರಿಯೆಯಲ್ಲಿ ಭಾಗವಹಿಸುವ ಅವಕಾಶ ದೊರೆಯಲಿಲ್ಲ. ಇಂತಹ ಸದಸ್ಯರಿಗೆ ಜವಾಬ್ದಾರಿ ಇರಬೇಕಲ್ಲವೇ? ಬುದ್ಧಿವಂತರು, ವಿಚಾರವಂತರು ಇರುವ ಪರಿಷತ್ತಿನ ಸದಸ್ಯರೇ ಈ ರೀತಿ ವರ್ತಿಸುವುದು ಘನತೆಯಲ್ಲ. ಇದರ ಜೊತೆಗೇ ಸುಮಾರು ಇಪ್ಪತ್ತೈದು ಸದಸ್ಯರು ಗೈರಾಗಿದ್ದು ಗಮನಾರ್ಹ. ಕಲಾಪದ ಪ್ರಮುಖ ಘಟ್ಟಗಳಲ್ಲಿ ಸದನದಲ್ಲಿ ಪಾಲ್ಗೊಳ್ಳದೆ ಇರುವುದು ಎಷ್ಟು ಸರಿ? ಸದಸ್ಯರು ಅಷ್ಟೊಂದು ಬ್ಯುಸಿ ಇದ್ದರೆ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ತಮ್ಮ ಕೆಲಸ ಮಾಡಿಕೊಳ್ಳಲಿ. ನಿಜವಾಗಿ ಸೇವೆ ಸಲ್ಲಿಸುವವರಿಗೆ ಅವಕಾಶ ನೀಡಲಿ.

-ಪತ್ತಂಗಿ ಎಸ್ ಮುರಳಿ ಬೆಂಗಳೂರು

ಮಕ್ಕಳಿಗೆ ಗತಿ ಯಾರು?

ಬಾಣಂತಿಯರ ಸರಣಿ ಸಾವಿನ ಪ್ರಕರಣವು ಇಂದು ಎಲ್ಲರಲ್ಲಿಯೂ ಭಯವನ್ನು ಮೂಡಿಸುವ ಸಂಗತಿಯಾಗಿದೆ 2024ರಲ್ಲಿ 518 ಬಾಣಂತಿಯರು ಮೃತಪಟ್ಟಿದ್ದಾರೆ. ಮೃತರಿಗೆ 5 ಲಕ್ಷ ಪರಿಹಾರವನ್ನು ನೀಡುವುದಾಗಿ ಘೋಷಿಸಿದೆ, ಹಲವಾರು ಬಾಣಂತಿಯರು ಬಡ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಆದರೆ ಮೃತ ಬಾಣಂತಿಯರ ಮಕ್ಕಳ ಜವಾಬ್ದಾರಿ ಮಾಡುವವರು ಯಾರು? ಆ ಮಕ್ಕಳ ರಕ್ಷಣೆಯನ್ನು ಸರಕಾರ ವಹಿಸಿಕೊಳ್ಳುತ್ತದೆಯೇ? ಎಂಬಂತ ಹಲವಾರು ಪ್ರಶ್ನೆಗಳಿಗೆ ಸರಕಾರ ಉತ್ತರಿಸಬೇಕಾಗಿದೆ. ಆದಕಾರಣ ಶಸ್ತ್ರಚಿಕಿತ್ಸೆ ಕೊಠಡಿಯನ್ನು ಸ್ವಚ್ಛತೆಯಿಂದ ಇಟ್ಟುಕೊಳ್ಳಬೇಕು ಏಕೆಂದರೆ ಇದು ಕೂಡ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟುಮಾಡುವುದಾಗಿದೆ ಸ್ವಚ್ಛತೆ ಇಲ್ಲದೆಯೂ ಕೂಡ ಬಾಣಂತಿಯರು ಸಾವನ್ನಪ್ಪುವ ಸಾಧ್ಯತೆ ಇರುತ್ತದೆ ಇದರ ಬಗ್ಗೆ ಸರ್ಕಾರವು ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.

-ವಿದ್ಯಾಶ್ರೀ ಮೇಗಾಡಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ರಾಮು ಮಲ್ಲಿಕಟ್ಟೆ, ಕೋಣಂದೂರು**
  ಭಟ್ರೇ, ಈ ಸಲ ಆರ್‌ಸಿಬಿ ತಂಡ ಆಟಗಾರರ ಆಯ್ಕೆಯಲ್ಲಿ ಎಡವಿದೆಯಂತೆ, ಹೌದಾ?
  - **ಆಯ್ಕೆಯಲ್ಲಿ ಎಡವಲಿ, ಗೆಲ್ಲಲು ಎಡವಬಾರದಷ್ಟೇ!**
- **ವಾದಿರಾಜ ದಂಡಿನ, (ಇಮೇಲ್ ಮೂಲಕ)**
  ಭಟ್ರೇ, ಜಾತ್ಯತೀತವಾದಿಗಳೆಂದು ಹೇಳಿಕೊಂಡು ಜಾತಿ ಸಮಾವೇಶ ಮಾಡ್ತಾರಲ್ಲ?
  - **ಹೇಳದೇ ಮಾಡುವವನು ರೂಢಿಯೊಳಗುತ್ತಮನು. ಹೇಳಿ ಮಾಡುವವನು ಇನ್ನೂ ಉತ್ತಮನು, ಗೊತ್ತಿರಲಿ!**
- **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
  ಭಟ್ರೇ, ಆಮಂತ್ರಣ ಕೊಡುವವರು ನೀವು ಮಾತ್ರ ಅಂತ ನನ್ನ ಸ್ನೇಹಿತ ಹೇಳ್ತಾನಲ್ಲ?
  - **'ಕುಡಿಯೋಣು ಬಾರಾ' ಟೈಟಲ್ ನೋಡಿ ಈ ನಿರ್ಧಾರಕ್ಕೆ ಬರಬಾರದಿತ್ತು!**
- **ವಿ.ಹೇಮಂತಕುಮಾರ, ಬೆಂಗಳೂರು**
  ಭಟ್ರೇ, ಹೆಂಡತಿಗೆ ಇರುವಷ್ಟು ಕಿಮ್ಮತ್ತು ಗಂಡನಿಗೆ ಇಲ್ಲ, ಒಪ್ಪುತ್ತೀರಾ?
  - **ಹೂಂ.. ಹೆಂಡತಿಗೆ ಧರ್ಮಪತ್ನಿ ಅಂತಾರೆ, ಗಂಡನಿಗೆ ಧರ್ಮಪತಿ ಅಂತ ಯಾರೂ ಕರೆಯೊಲ್ಲ!**
- **ಡಾ.ಆನಂದ ಕುಲಿಗೋಡ, ಧಾರವಾಡ**
  ಭಟ್ರೇ, ಬೋಳುತಲೆ ಹೆಚ್ಚೋ, ಬಿಳಿತಲೆಯೋ?
  - **ಬಿಳಿತಲೆ. ಬಾಚಿಕೊಳ್ಳಲು ಕೂದಲಾದರೂ ಇರುತ್ತೆ!**
- **ಜ್ಞನಿ ಜಲೇಂದ್ರ, ಮಲ್ಲುಂಗೆರೆ**
  ಭಟ್ರೇ, ದರ್ಶನ್ ಜೈಲಲ್ಲಿದ್ದಾಗಲೇ ಸುದ್ದಿಯಲ್ಲಿದ್ದರು ಅಲ್ಲವಾ?
  - **ಸುದ್ದಿಯಲ್ಲಿರಬೇಕು ಅಂದ್ರೆ ಜೈಲಿಗೆ ಹೋಗಬೇಕು ಎಂಬುದು ನಿನ್ನ ಇಂಗಿತವಾ?!**
- **ವೇಣುಗೋಪಾಲ ಕಂಚಿತೋಟ, ಕಡೂರು**
  ಭಟ್ರೆ, ಅಷ್ಟಕ್ಕೂ ಬೆಳಗಾವಿಯಲ್ಲಿ ಅಧಿವೇಶನವನ್ನು ಏಕೆ ಮಾಡಿದರು?
  - **ಅದು ಯಾರಿಗೂ ಗೊತ್ತಿಲ್ಲವಂತೆ!**
- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರಗಿ**
  ಭಟ್ರೇ, ಮಂತ್ರಾಲಯಕ್ಕೆ ಜಾಗ ಕೊಟ್ಟಿದ್ದು ಮುಸಲ್ಮಾನರು ಅಂತ ಸಿಎಂ.ಇಬ್ರಾಹಿಂ ಹೇಳಿದ್ದಾರಲ್ಲ?
  - **ಮುಸಲ್ಮಾನರಿಗೆ ಜಾಗ ಕೊಟ್ಟಿದ್ದು ಹಿಂದುಗಳೇ ಅಂತ ಮುತಾಲಿಕ್ ಹೇಳಿದ್ದು ಕೇಳಿಲ್ಲವಾ?!**
- **ಎಲ್.ವಿ.ಸತೀಶ್, ಮೈಸೂರು**
  ಭಟ್ರೇ, ಬಾಯಾರಿಕೆ, ಆಕಳಿಕೆ, ತೂಕಡಿಕೆ, ನೀರಡಿಕೆ... ಕೊನೆಯಲ್ಲಿ 'ಕೆ' ಬರುತ್ತದಲ್ಲ?
  - **ಆ ಪದಗಳಿಗೆಲ್ಲ ತುರಿ'ಕೆ'ಯಂತೆ!**
- **ಮಂಜುನಾಥ ಹತ್ತರವಾಟ, ಕೊಳವಿ**
  ಭಟ್ರೇ, ಡಿಕೆಶಿ ಆಗಾಗ ಪತ್ರಿಕೆಗಳಿಗೆ ಬರೆಯುತ್ತಾರಲ್ಲ, ಅವರು ಯಾವಾಗ ಲೇಖಕರಾದರು?
  - **ಅವರು ಆಗಾಗ ಬರಿತಾರೆ ಕಣ್ಣಿಗೆ ಎಣ್ಣೆ ಬಿಟ್ಕೊಂಡು!**

ಆಯುರ್ವೇದದಲ್ಲಿ ಕೂದಲಿನ ಆರೈಕೆ ಹೇಗೆ?

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಾ ಶ್ರೀ
vveditoped@gmail.com

ಮೊನ್ನೆ ಯಾವುದೋ ಒಂದು ಮದುವೆಯ ಸಮಾರಂಭಕ್ಕೆ ಹೋಗಿದ್ದೆ. ಮಂಟಪದಲ್ಲಿ ಗಂಡು ಹೆಣ್ಣಿನ ಶಾಸ್ತ್ರಗಳು ಬಹಳ ಉತ್ಸುಕತೆಯಿಂದ ನಡೆದಿತ್ತು. ಕೆಳಗೆ ಕುಳಿತಿದ್ದ ಹಿರಿಯರೂ ಸಹ ಮದುವೆಯ ಶಾಸ್ತ್ರದಲ್ಲಿ ತಲ್ಲೀನರಾಗಿ ಆ ಆನಂದವನ್ನು ಮತ್ತೆ ಮೆಲುಕು ಹಾಕುತ್ತಿದ್ದರು. ಆದರೆ, ಇದೇ ಮಂಟಪದಲ್ಲಿ ಹಿಂದೆ ಮತ್ತೊಂದು ಪುಟ್ಟ ವಿಶಿಷ್ಟ ಸಮಾರಂಭವೊಂದು ನಡೆದಿತ್ತು. ಏನಪ್ಪಾ ಅದು ಅಂತ ನೋಡಿದರೆ, ಹೆಂಗಸರ ಮತ್ತು ಹೆಣ್ಣು ಮಕ್ಕಳ ಒಂದು ಪುಟ್ಟ ಚರ್ಚಾ ಕೂಟ. ಚರ್ಚೆಯ ಅಧ್ಯಕ್ಷರು ಸುಮಾರು 70 ವರ್ಷದ ಅಜ್ಜಿ ಮತ್ತೆ ಗುಂಪಿನ ಸದಸ್ಯರು ಸುಮಾರು 20ರಿಂದ 42 ಆಸುಪಾಸಿನ ಹೆಣ್ಣು ಮಕ್ಕಳು. ಚರ್ಚೆಯ ವಿಷಯ ಏನು ಅಂತ ಗೊತ್ತೇ? 'ಕೂದಲು ಸಂರಕ್ಷಣೆ'. ಇದರ ವಿಷಯವಾಗಿ ತಮ್ಮ ಅಪಾರ ಅನುಭವವನ್ನು ಹಂಚಿಕೊಳ್ಳುತ್ತಿದ್ದದ್ದು ನಮ್ಮ ಸೂಪರ್ ಯಂಗ್ ಅಜ್ಜಿ. ಕಾರಣ, ಅವರ ವಯಸ್ಸು 70 ಆಗಿದ್ದರೂ ಸಹ ಅವರ ಕೂದಲು ಇನ್ನೂ ದಟ್ಟವಾಗಿ ಮತ್ತು ಸಾಕಷ್ಟು ಕಪ್ಪಾಗಿಯೇ ಉಳಿದಿತ್ತು. ತ್ವಚೆಯು ಅಷ್ಟೇನು ನೆರೆಯಿಲ್ಲದೆ, ಕಾಂತಿಯುತವಾಗಿ ಹೊಳೆಯುತ್ತಿತ್ತು. ಹಾಗಾಗಿ, ಸಹಜವಾಗಿಯೇ ಇವರು ಆ ಮದುವೆ ಮನೆಯ ಬ್ಯೂಟಿ ಐಕಾನ್ ಆಗಿಬಿಟ್ಟರು. ನಮ್ಮ ಹೆಣ್ಣು ಮಕ್ಕಳನ್ನು ಕೇಳಬೇಕೇ? ಆರೋಗ್ಯವೆಂದರೆ ಅವರಿಗೆ ಕೇವಲ ಸ್ಕಿನ್ ಕೇರ್ ಮತ್ತು ಹೇರ್ ಕೇರ್. ಇವೆರಡರ ಬಗ್ಗೆ ಎಷ್ಟು ತಿಳಿದುಕೊಂಡರು ಸಾಲದು. ಹಾಗಾಗಿ, ಅಜ್ಜಿಯನ್ನು ಮಧ್ಯದಲ್ಲಿ ಕೂರಿಸಿ ತಮ್ಮ ಎಲ್ಲಾ ಅನುಮಾನಗಳ ಪರಿಹಾರ ಮತ್ತು ಕೇಶವೃದ್ಧಿಯ ಬಗ್ಗೆ ಜ್ಞಾನವೃದ್ಧಿ ಮಾಡಿಕೊಳ್ಳುವ ಕಸರತ್ತು ಬಹಳ ಹೊತ್ತಿನಿಂದ ನಡೆದಿತ್ತು. ನಾನು ಒಬ್ಬ ಆಯುರ್ವೇದ ವೈದ್ಯೆಯಾಗಿ ಆ ಅಜ್ಜಿಯ ಮಾತುಗಳನ್ನು ಬಹಳ ಕುತೂಹಲದಿಂದ ಕೇಳಿಸಿಕೊಳ್ಳುತ್ತಿದ್ದೆ. ಆಗ ನನಗೆ ಅರ್ಥವಾದ ಒಂದು ವಿಷಯವೆಂದರೆ ನಮ್ಮ ಭಾರತೀಯ ಪಾರಂಪರಿಕ ಜ್ಞಾನವು, ವಿಜ್ಞಾನಕ್ಕೆ ಎಷ್ಟು ಹತ್ತಿರವಾಗಿದೆ ಎಂದು. ಕಾರಣ, ಅವರು ಹೇಳಿದ ಸಾಕಷ್ಟು ವಿಚಾರಗಳು ಆಯುರ್ವೇದದ ಶಾಸ್ತ್ರದ ಮಾತುಗಳಾಗಿತ್ತು. ಅದಕ್ಕೆ ಅವರ ಅನುಭವಾಮೃತವೂ ಸೇರಿತ್ತು. ಅದನ್ನು ತಿಳಿದುಕೊಳ್ಳುವ ಕುತೂಹಲ ನಿಮಗೂ ಇದೆ ಅಲ್ವಾ? ಬನ್ನಿ ಹಾಗಾದರೆ, ನಮ್ಮ ಮದುವೆ ಮನೆಯ ಅಜ್ಜಿಯ ವಿಷಯಗಳ ಜೊತೆಗೆ ಆಯುರ್ವೇದದ ಮತ್ತಷ್ಟು ವಿಷಯಗಳನ್ನು ಸೇರಿಸಿ ಕೇಶರಕ್ಷಣೆ ಹೇಗೆ ಎಂಬ ವಿಷಯವನ್ನು ಅರ್ಥೈಸಿಕೊಳ್ಳೋಣ.

ಸ್ನೇಹಿತರೆ, ನಾವು ತಿಂಗಳಿಗೊಮ್ಮೆ ಆಯುರ್ವೇದದ ಉಚಿತ ಆರೋಗ್ಯ ಶಿಬಿರವನ್ನು ಹಲವಾರು ವರ್ಷಗಳಿಂದ ಮಾಡುತ್ತಾ ಬಂದಿದ್ದೇವೆ. ಇಲ್ಲಿ ಕಾಣುವ ಸಾಮಾನ್ಯ ಸಮಸ್ಯೆ ಎಂದರೆ ಅತಿಯಾದ ಕೂದಲು ಉದುರುವಿಕೆ. ಅಂತೆಯೇ, ನಮ್ಮ ಕ್ಲಿನಿಕಲ್ ಪ್ರಾಕ್ಟೀಸ್‌ನಲ್ಲಿ ಕೂಡ ಹಲವಾರು ಜನ ತಮ್ಮ ಕೂದಲು ಸಮಸ್ಯೆಗಾಗಿಯೇ ನಮ್ಮನ್ನು ಭೇಟಿ ಮಾಡಲು ಬರುತ್ತಾರೆ. ಡಾಕ್ಟ್ರೇ, 'ಕೂದಲು ತುಂಬಾ ಉದುರುತ್ತೆ, ಕೂದಲು ಉದ್ದವಾಗುತ್ತಿಲ್ಲ, ಕೂದಲು ತುಂಬಾ ಡ್ರೈ ಆಗಿಬಿಟ್ಟಿದೆ, ಕೂದಲಿನ ತುದಿಯಲ್ಲಿ ಜಾಸ್ತಿ ಸ್ಪ್ಲಿಟ್ ಎಂಡ್ಸ್ ಆಗ್ತಾ ಇದೆ, ಡ್ಯಾಂಡ್ರಫ್ ಸಮಸ್ಯೆ, ಕೂದಲು ಬೇಗ ಬಿಳಿ ಆಗ್ತಾ ಇದೆ ಇತ್ಯಾದಿ ಇತ್ಯಾದಿ. ಈ ಸಮಸ್ಯೆಗಳಿಗೆ ನಿಮ್ಮ ಬಳಿ ಯಾವುದಾದರೂ ಒಳ್ಳೆಯ ಹೇರ್ ಆಯಿಲ್ ಇದ್ದರೆ ಪ್ಲೀಸ್ ಬರೆದು ಕೊಡಿ' ಎನ್ನುವ ಬೇಡಿಕೆ ಸರ್ವೇ ಸಾಮಾನ್ಯ.

ಹೇರಳವಾದ ಕಪ್ಪು ಕೂದಲು ಯಾರಿಗೆ ಬೇಡ ಹೇಳಿ? ಸೊಂಪಾದ ಕೇಶ ರಾಶಿ ಮಹಿಳೆಯರಷ್ಟೇ ಗಂಡಸರಿಗೂ ಪ್ರಿಯ. ಆದರೆ ಈಗಿನ ಕಾಲದಲ್ಲಿ 20ರಿಂದ 30 ವರ್ಷದ ಪ್ರಾಯದಲ್ಲಿ ಪಿಳ್ಳೆ ಜಡೆಯ ಹೆಣ್ಣು ಮಕ್ಕಳಾದರೆ ಬಕ್ಕ ತಲೆಯ ಗಂಡು ಮಕ್ಕಳು. ಕೂದಲಿನ ಸಮಸ್ಯೆ ಇಷ್ಟೊಂದು ಜಾಸ್ತಿ ಆಗಲು ಕಾರಣವೇನು? ಯಾಕೆ ಹೀಗೆ? ಹಾಗಾದರೆ, ಒಳ್ಳೆ ಹೇರ್ ಆಯಿಲ್ ಹಚ್ಚಿದ ಕೂಡಲೇ ಈ ಸಮಸ್ಯೆ ಸರಿಯಾಗುತ್ತದೆಯೇ? ಖಂಡಿತ ಇಲ್ಲ. ಕೂದಲಿನ ಸಮಸ್ಯೆ ಕೇವಲ ಕೂದಲಿಗಷ್ಟೇ ಸೀಮಿತವಾದದ್ದಲ್ಲ. ಹಾಗಾಗಿ, ಈ ಸಮಸ್ಯೆಯ ಮೂಲ ಕಾರಣಗಳನ್ನು ತಿಳಿದುಕೊಳ್ಳುವವರೆಗೂ ಈ ಸಮಸ್ಯೆಯನ್ನು ಬಗೆಹರಿಸುವುದು ಕಷ್ಟ. ಆಯುರ್ವೇದದಲ್ಲಿ ಸಮಸ್ಯೆಯ ಕಾರಣದ ಪರಿವರ್ಜನವೇ ಪ್ರಥಮ ಚಿಕಿತ್ಸೆ.

ಸಾಮಾನ್ಯವಾಗಿ, ಈ ಕೂದಲಿನ ಸಮಸ್ಯೆಯ ಕಾರಣಗಳನ್ನು ನಾವು ಎರಡು ಗುಂಪಾಗಿ ವಿಭಾಗಿಸಬಹುದು. ಬಾಹ್ಯ ಹಾಗೂ ಆಭ್ಯಂತರ ಕಾರಣಗಳೆಂದು. ಮೊದಲಿಗೆ ಬಾಹ್ಯ ಕಾರಣಗಳ ಬಗ್ಗೆ ಸ್ವಲ್ಪ ಗಮನಹರಿಸೋಣ.

1. ತಲೆಗೆ ನಿತ್ಯವೂ ಎಣ್ಣೆ ಹಚ್ಚದೇ ಇರುವುದು– ಹೌದು, ಇದೊಂದು ಅತ್ಯಂತ ಸಾಮಾನ್ಯವಾದ ಕಾರಣ. ಎಷ್ಟೋ ತಿಂಗಳುಗಳಿಂದ ಎಣ್ಣೆ ಹಚ್ಚದೆಯೇ ಹಾಗೆಯೇ ತಲೆ ಸ್ನಾನ ಮಾಡುವ ರೋಗಿಗಳನ್ನ ನಾವು ಕಂಡಿದ್ದೇವೆ. ಎಣ್ಣೆ ಹಚ್ಚಿಕೊಂಡರೆ ಕೂದಲು ಉದುರುವಿಕೆ ಜಾಸ್ತಿ ಆಗುತ್ತದೆ ಎಂಬ ಭಯ ಹಲವರಿಗೆ .

2. ಅತಿಯಾದ ಬಿಸಿ ನೀರಿನ ತಲೆ ಸ್ನಾನ– ಸ್ನೇಹಿತರೆ, ಸದಾ ನೆನಪಿಡಿ. ಬಿಸಿ ನೀರನ್ನು ಎಂದಿಗೂ ತಲೆಗೆ ಹಾಕಬಾರದು. ಇದರಿಂದ, ಕೂದಲಿಗಷ್ಟೇ ತೊಂದರೆಯಾಗದೆ ಇಂದ್ರಿಯಗಳಿಗೂ ಮತ್ತು ಮೆದುಳಿಗೂ ಸಹ ಇದು ಹಾನಿಕರ. ಹಾಗಾಗಿ ತಲೆ ಸ್ನಾನ ಮಾಡುವಾಗ ಮೊದಲು ತಲೆಗೆ ತಣ್ಣೀರನ್ನು ಹಾಕಿ ತೊಳೆದು, ಬಟ್ಟೆಯಿಂದ ಕೂದಲನ್ನು ಮೃದುವಾಗಿ ಕಟ್ಟಿ, ನಂತರ ಮೈಗೆ ಬಿಸಿ ನೀರಿನ ಸ್ನಾನ ಸದಾ ಸ್ವಾಸ್ಥ್ಯಕರ.

3. ತಲೆ ಹೊಟ್ಟು – ಏರುಪೇರಾದ ಆಹಾರ ಮತ್ತು ನಿದ್ದೆಯ ಅಭ್ಯಾಸಗಳಿಂದ ಇತ್ತೀಚೆಗೆ ಹೊಟ್ಟಿನ ಹಾವಳಿ ಅತಿಯಾಗಿದೆ. ತಲೆಯ ಚರ್ಮದ ಆರೋಗ್ಯವು ಉತ್ತಮವಾಗಿಲ್ಲದಿದ್ದರೆ ಅದರ ಪರಿಣಾಮಗಳು ಕೂದಲಿನ ಮೇಲೆಯೂ ಆಗುವುದು ಸಹಜ. ತಲೆಯ ಹೊಟ್ಟನ್ನು ನಿವಾರಿಸಿಕೊಳ್ಳದೆ ಕೂದಲಿನ ಸಂರಕ್ಷಣೆಯು ಅಸಾಧ್ಯ.

4. ನೀರಿನ ಬದಲಾವಣೆಯೂ ಸಹ ಕೂದಲು ಉದರವಿಕೆಗೆ ಕಾರಣವಾಗುತ್ತದೆ. ಆಯುರ್ವೇದವು ಬಹಳ ವಿಸ್ತಾರವಾಗಿ ಹೇಳಿರುವ ಒಂದು ವಿಷಯವೆಂದರೆ – ನೀರಿನ ಗುಣಗಳ ಬಗ್ಗೆ. ನದಿ, ಕೆರೆ, ಬಾವಿ, ಬೋರ್ವೆಲ್ ನೀರಿನ ಗುಣಗಳು ಬೇರೆ ಬೇರೆ ಆಗುವುದರಿಂದ ಅವುಗಳ ಪರಿಣಾಮವೂ ಬೇರೆಯೇ ಆಗಿರುತ್ತದೆ. ಸಾಮಾನ್ಯವಾಗಿ ಬೋರ್ವೆಲ್ ನೀರು ಬಹಳಷ್ಟು ಜನರಲ್ಲಿ ಕೂದಲ ಉದರವಿಕೆಯನ್ನು ಹೆಚ್ಚು ಮಾಡುತ್ತದೆ.

5. ಕೆಮಿಕಲ್‌ಗಳಿಂದ ತುಂಬಿರುವ ಶಾಂಪೂಗಳ/ ಸಾಬೂನುಗಳ ಅತಿಯಾದ ಬಳಕೆ– ಟಿವಿಯಲ್ಲಿ ಬರುವ ವಿವಿಧ ಆಡ್‌ಗಳನ್ನು ನೋಡಿ ಮರುಳಾಗಿ ಬೇರೆ ಬೇರೆ ರೀತಿಯ ಶಾಂಪೂಗಳನ್ನು ಬಳಸುವ ಯುವಕ ಯುವತಿಯರಿಗೆ ಏನು ಕಡಿಮೆ ಇಲ್ಲ. ಆದರೆ, ಬಹಳ ಹಾನಿಕರ ಕೆಮಿಕಲ್ಗಳಿಂದ ತುಂಬಿರುವ ಈ ಶಾಂಪುಗಳು ನೈಸರ್ಗಿಕವಾದ ಉತ್ತಮ ಕೂದಲನ್ನು ನೀಡಲು ಸಾಧ್ಯವೇ ಇಲ್ಲ. ಆದಷ್ಟು ನ್ಯಾಚುರಲ್ ಶಾಂಪೂ– ಸಲ್ಫೈಡ್ ಮತ್ತು ಪಾರಬೆನ್ ರಹಿತವಾದ ಶಾಂಪೂಗಳ ಬಳಕೆ ಉತ್ತಮ.

6. ಕೂದಲಿಗೆ ವಿವಿಧ ಕೃತಕ ಬಣ್ಣಗಳನ್ನು ಹಚ್ಚುವ ಅಭ್ಯಾಸ– ಹೌದು, ಬಣ್ಣಗಳ ಪ್ಯಾಕೆಟ್ ಮೇಲೆ This does not cause hair fall- ಅಂತನೂ ಬರೆದಿರುತ್ತಾರೆ. ಆದರೆ ಖಂಡಿತವಾಗಿಯೂ ಅದು ಸುಳ್ಳು ಎನ್ನುವ ಅರಿವು ನಮಗೆ ಇರಲಿ.

7. ಅಂತೆಯೇ, ಕಪ್ಪು ಕೂದಲಿ ಗೋಸ್ಕರ ಕೃತಕ ಬಣ್ಣಗಳ ಬಳಕೆಯೂ ಸಹ ಕೂದಲು ಉದುರುವಿಕೆಗೆ ಕಾರಣವಾಗಬಹುದು .

8. ಬಿಸಿಲು, ಧೂಳು, ಹಿಮದಲ್ಲಿನ ಅತಿಯಾದ ಓಡಾಟ– ದ್ವಿಚಕ್ರ ವಾಹನಗಳಲ್ಲಿ ಓಡಾಡುವಾಗ ಕೆಲವು ನಿಯಮಗಳನ್ನು ಪಾಲಿಸುವುದು ಕೂದಲ ಸಂರಕ್ಷಣೆಗೆ ಸಹಾಯಕಾರಿ. ಉದಾಹರಣೆಗೆ– ಎದರು ಗಾಳಿಗೆ ತಲೆಯನ್ನು ಒಡ್ಡದೆ ಕಡ್ಡಾಯವಾಗಿ ಹೆಲ್ಮೆಟ್ ಧರಿಸುವುದು ಒಳ್ಳೆಯದು. ಹೆಲ್ಮೆಟ್ ಧರಿಸುವ ಮುನ್ನ ತೆಳುವಾದ, ಬಿಳಿಯಾದ ಕಾಟನ್ ಬಟ್ಟೆಯನ್ನು ತಲೆಗೆ ಸುತ್ತಿಕೊಂಡು ನಂತರ ಹೆಲ್ಮೆಟ್ ಧರಿಸುವುದು ಸಹಾಯಕಾರಿ. ಇದು ಕೇಶವನ್ನು ಬಿಸಿಲು, ಧೂಳು ಮತ್ತು ಗಾಳಿಯಿಂದ ಸಂರಕ್ಷಿಸಿತ್ತದೆ.

ಇವಿಷ್ಟು ಬಾಹ್ಯಾ ಕಾರಣಗಳ ಸಂಕ್ಷಿಪ್ತ ಪಟ್ಟಿ. ಈಗ ಬಹಳ ಮುಖ್ಯವಾದ ಆಭ್ಯಂತರ ಅಥವಾ ಆಂತರಿಕ ಕಾರಣಗಳ ಬಗ್ಗೆ ನೋಡೋಣ.

1. ಬಹಳ ಮುಖ್ಯವಾದ ಕಾರಣವೆಂದರೆ ನಿದ್ದೆಗೆಡುವುದು ಅಥವಾ ಕ್ರಮರಹಿತ ನಿದ್ದೆ. ಅದರಲ್ಲೂ, ರಾತ್ರಿ ಜಾಗರಣೆ ಮಾಡಿ ಹಗಲು ನಿದ್ದೆಯನ್ನು ಮಾಡುವ ಅಭ್ಯಾಸ ಕೇಶದ ಆರೋಗ್ಯಕ್ಕೆ ಒಳ್ಳೆಯದಲ್ಲ. ಸಕಾಲಿಕ ನಿದ್ದೆ ಎಂದಿಗೂ ಕೇಶ ವೃದ್ಧಿಕರ.

2. ಜ್ವರ, ರಕ್ತ ಹೀನತೆ, ಪಾಂಡುರೋಗ ಮುಂತಾದ ವಿವಿಧ ರೀತಿಯ ಆರೋಗ್ಯ ಸಮಸ್ಯೆಗಳಿಂದ ದೀರ್ಘಕಾಲ ಬಳಲುವುದೂ ಸಹ ಕೂದಲನ್ನು ದುರ್ಬಲಗೊಳಿಸುತ್ತದೆ.

3. ಆಹಾರದಲ್ಲಿ ಅತಿಯಾಗಿ ಉಪ್ಪು, ಖಾರ ಮತ್ತು ಹುಳಿ ರುಚಿಯ ಬಳಕೆ– ಸ್ನೇಹಿತರೆ ನೆನಪಿಡಿ, ಅತಿಯಾಗಿ ಉಪ್ಪು ಮತ್ತು ಹುಳಿ ರುಚಿಗಳ ಬಳಕೆಯು ಕೂದಲಿಗಷ್ಟೇ ಹಾನಿತರದೆ ಮುಪ್ಪಿನ ಲಕ್ಷಣಗಳನ್ನು ಬಹು ಬೇಗ ಆಹ್ವಾನಿಸುತ್ತದೆ. ಚರ್ಮ ಬೇಗ ಸುಕ್ಕುಗಟ್ಟುವುದು, ಕೂದಲು ಬೇಗ ಬಿಳಿಯಾಗುವುದು, ಮೂಳೆಗಳು ಬೇಗ ಸವೆಯುವುದು ಸಹ ಈ ಒಂದು ಕಾರಣದಿಂದಲೇ ಎಂದು ಹೇಳಬಹುದು. ಇದರ ಜೊತೆಗೆ ಮದ್ಯಪಾನ ಮತ್ತು ಧೂಮಪಾನಗಳು ಸೇರಿಕೊಂಡರೆ ಅಧೋಗತಿ!

4. ಆಹಾರದಲ್ಲಿ ಒಳ್ಳೆ ಜಿಡ್ಡಿನ ಅಂಶದ ಕೊರತೆಯೂ ಸಹ ಕೂದಲು ಹಾಳಾಗಲು ಕಾರಣ. ತುಪ್ಪ, ಬೆಣ್ಣೆ ಮತ್ತು ಹಾಲುಗಳ ಬಳಕೆ ಕೂದಲು ಬೆಳೆಯುವುದಕ್ಕೆ ಬೇಕಾಗುವ ಅತ್ಯವಶ್ಯಕವಾದ ಸಾಮಗ್ರಿಗಳು. ಅಂತೆಯೇ ಷಡ್ರಸದಿಂದ ಕೂಡಿದ ಸಂತುಲಿತ ಆಹಾರದ ಕೊರತೆಯೂ ಕೂದಲು ಉದುರುವಿಕೆಗೆ ಕಾರಣ.

5.ನಮ್ಮ ಜೀವನ ಶೈಲಿ ಅಂದರೆ ದಿನಚರ್ಯೆ ಮತ್ತು ಋತುಚರ್ಯೆಗಳನ್ನು ಸರಿಯಾಗಿ ಪಾಲಿಸದೆ ಇರುವುದು ಸಹ ಕೂದಲು ಉದುರುವಿಕೆಗೆ ಕಾರಣ.

6.ಅತಿಯಾದ, ಕ್ರಮರಹಿತ ವ್ಯಾಯಾಮದ ಮೂಲಕ ನಮ್ಮ ದೇಹವನ್ನು ಫಿಟ್ನೆಸ್ ಹೆಸರಿನಲ್ಲಿ ದಂಡಿಸುವುದು ಕೂದಲ ಆರೋಗ್ಯವನ್ನು ಹಾಳು ಮಾಡುತ್ತದೆ. ಸರಿಯಾದ ಕ್ರಮವನ್ನು ತಿಳಿದು ಮಿತವಾದ ವ್ಯಾಯಾಮವನ್ನು ಮಾಡುವುದು ಸದಾ ಕ್ಷೇಮ.

7.ಆಯುರ್ವೇದದ ಪ್ರಕಾರ ಕೂದಲನ್ನು ಅಸ್ಥಿಧಾತುವಿನ ಉಪಧಾತುವೆಂದು ಹೇಳಿದ್ದಾರೆ. ಹಾಗಾಗಿ, ಅಸ್ಥಿಧಾತುವಿನ (ಮೂಳೆಗಳ) ಪೋಷಣೆಯಲ್ಲಿ ಏರುಪೇರು ಆದರೂ ಸಹ ಕೂದಲಿನ ಸಮಸ್ಯೆ ಕಾಣಿಸಿಕೊಳ್ಳುತ್ತದೆ.

8. ಮಾನಸಿಕ ಕಾರಣಗಳಾದ ಅತಿಯಾದ ಕೋಪ, ಚಿಂತೆ, ದುಃಖ ಅಥವಾ ಸ್ಟ್ರೆಸ್ ಕೂದಲ ಬುಡವನ್ನೇ ದುರ್ಬಲಗೊಳಿಸಿ ಕೂದಲು ಉದುರುವಿಕೆಗೆ ನೇರವಾಗಿ ಕಾರಣವಾಗುತ್ತದೆ. ಇನ್ನು ಕೂದಲು ಉದುರುವಿಕೆಗೆ ಪರಿಹಾರವೇನು? ಚಿಕಿತ್ಸೆ ಹೇಗೆ? ನೋಡೋಣ.

ಮೊಟ್ಟಮೊದಲಿಗೆ ನಿದಾನ ಪರಿವರ್ಜನೆ ಅಂದರೆ ನಾನು ಮೇಲೆ ಹೇಳಿದ ಎಲ್ಲ ಕಾರಣಗಳನ್ನು ಸರಿಪಡಿಸಿಕೊಂಡು ಆ ಕಾರಣಗಳನ್ನು ನಮ್ಮ ಜೀವನದಿಂದ ಮತ್ತು ಜೀವನ ಶೈಲಿಯಿಂದ ದೂರವಾಗಿಸುವುದು. ಇಲ್ಲವಾದರೆ, ಯಾವ ಚಿಕಿತ್ಸೆಯೂ ಫಲ ಕೊಡುವುದಿಲ್ಲ.

ಆಯುರ್ವೇದ ಹೇಳುತ್ತದೆ – ಸ್ನೇಹಸಾರೋಯಂ ಪುರುಷಃ – ನಮ್ಮ ಅಸ್ತಿತ್ವಕ್ಕೆ ಬಹಳ ಮುಖ್ಯವಾದ ಕಾರಣವೆಂದರೆ ಸ್ನೇಹ ಅಂದರೆ ಜಿಡ್ಡಿನ ಪದಾರ್ಥಗಳು. ಹಾಗಾಗಿ, ನಮ್ಮ ಪ್ರತಿನಿತ್ಯ ಆಹಾರದಲ್ಲಿ ತುಪ್ಪ, ಬೆಣ್ಣೆ, ಮಾಂಸರಸದಂತಹ ಒಳ್ಳೆಯ ಜಿಡ್ಡಿನ ಪದಾರ್ಥಗಳನ್ನು ಸೇರಿಸಿಕೊಳ್ಳುವುದು ಅತ್ಯವಶ್ಯಕ.

ಪ್ರತಿನಿತ್ಯ ತಲೆಗೆ ಎಣ್ಣೆ ಹಚ್ಚುವುದು ಬಹಳ ಮುಖ್ಯ. ಸರಿಯಾದ ಎಣ್ಣೆಯನ್ನು, ಸರಿಯಾದ ರೀತಿಯಲ್ಲಿ, ಸರಿಯಾದ ಸಮಯಕ್ಕೆ ಹಚ್ಚುವುದು ಅತ್ಯವಶ್ಯಕ. ಇದರಿಂದ ಬರೀ ಕೂದಲು ಮಾತ್ರವಲ್ಲದೆ ತಲೆಯ ಚರ್ಮದ ಸಂರಕ್ಷಣೆಯೂ ಆಗುತ್ತದೆ. ಹೊಟ್ಟು ಕಡಿಮೆಯಾಗಿ, ಕೂದಲ ತುದಿ ಒಡೆಯುವುದಿಲ್ಲ. ಇದು ಅಕಾಲ ನರೆಯನ್ನು ತಡೆಯುತ್ತದೆ. ಜೊತೆಗೆ, ಇಂದ್ರಿಯಗಳನ್ನು ಸುಸ್ಥಿತಿಯಲ್ಲಿಟ್ಟು ಶಿರಸ್ಸಿಗೆ ಬಲವನ್ನು ಕೊಡುತ್ತದೆ. ಸರಿಯಾದ ಕ್ರಮದಲ್ಲಿ ನಿತ್ಯವೂ ಅಥವಾ ಕನಿಷ್ಠ ವಾರಕ್ಕೆ ಎರಡು ಬಾರಿಯಾದರೂ ತಲೆಗೆ ಎಣ್ಣೆ ಹಚ್ಚಿ, ಕ್ರಮಬದ್ಧವಾಗಿ ಸ್ನಾನ ಮಾಡುವುದು ಕೇಶ ಸಂರಕ್ಷಕ.

ನೆಲ್ಲಿಕಾಯಿ, ಭೃಂಗರಾಜ, ಕರಿಬೇವು, ದ್ರಾಕ್ಷಿ, ದಾಳಿಂಬೆ, ಮೆಂತ್ಯ, ಒಂದೆಲಗ ಮುಂತಾದವು ಕೂದಲಿಗೆ ಸೊಂಪನ್ನು ಕೊಡುತ್ತದೆ. ಹಾಗಾಗಿ ಇವುಗಳನ್ನು ನಿತ್ಯ ಆಹಾರದಲ್ಲಿ ಮತ್ತು ತೈಲಗಳಲ್ಲಿ ಬಳಸಬಹುದು.

ಆಯುರ್ವೇದದ ಪ್ರಕಾರ ನಿತ್ಯವೂ ಮೂಗಿಗೆ ಎರಡು ಹನಿ ಎಣ್ಣೆಯನ್ನು ಹಾಕುವುದು ಒಂದು ಉತ್ತಮವಾದ ದಿನಚರ್ಯೆ. ಇದು ಕೇಶ ಸಂರಕ್ಷಕವೂ ಹೌದು. ಇದಕ್ಕೆ ನಸ್ಯ ಎಂದು ಕರೆಯುತ್ತಾರೆ. ನಿತ್ಯವೂ ಸ್ನಾನ ಮಾಡುವ ಮುನ್ನ ಖಾಲಿ ಹೊಟ್ಟೆಯಲ್ಲಿ ಎರಡು ಹನಿ ಬೆಚ್ಚಗಿನ ಎಣ್ಣೆಯನ್ನು ಮೂಗಿಗೆ ಹಾಕಿಕೊಳ್ಳುವುದು ಉತ್ತಮವಾದ ಅಭ್ಯಾಸ. ಇದನ್ನು ಇಂದೇ ಪ್ರಾರಂಭಿಸಿ.

ಇನ್ನು, ತೊಂದರೆ ಹೆಚ್ಚಾದಾಗ ಆಯುರ್ವೇದ ವೈದ್ಯರ ಮಾರ್ಗದರ್ಶನದಲ್ಲಿ ಶಿರೋಧಾರಾ , ಶಿರೋಬಸ್ತಿ, ಶಿರೋಲೇಪ ಮುಂತಾದ ಚಿಕಿತ್ಸೆಗಳನ್ನು ಮಾಡಿಸಿಕೊಳ್ಳಬಹುದು. ನಿತ್ಯವೂ ಎಣ್ಣೆ ಹಚ್ಚಿ, ಮೃದುವಾಗಿ ವ್ಯಾಯಾಮ ಮಾಡಿ, ಪ್ರಾಣಾಯಾಮಗಳನ್ನು ಅಭ್ಯಾಸ ಮಾಡಿದರೆ ಶಿರಸ್ಸಿಗೆ ರಕ್ತ ಸಂಚಾರ ಉತ್ತಮವಾಗಿ ಸಹಜವಾಗಿಯೇ ಸಮಸ್ಯೆಗಳು ಪರಿಹಾರವಾಗುತ್ತದೆ. ಇವಿಷ್ಟು ಉಪಾಯಗಳ ಪುಟ್ಟ ಪಟ್ಟಿ. ಒಟ್ಟಾರೆ ಸ್ನೇಹಿತರೆ, ನೆನಪಿನಲ್ಲಿಡಿ– ಕೇಶ ಸಂರಕ್ಷಣೆ ಮತ್ತು ಕೇಶ ಸಂವರ್ಧನೆ ಯಾವುದೋ ಮ್ಯಾಜಿಕ್ ಪರಿಹಾರದಿಂದ ಬಗೆಹರಿಯುವ ವಿಷಯವಲ್ಲ. ನಮ್ಮ ದೈನಂದಿನ ಆಹಾರ ಮತ್ತು ವಿಹಾರಗಳಲ್ಲಿಯೇ ಇದರ ಸೀಕ್ರೆಟ್ ಅಡಗಿದೆ . ಯಾವುದೋ ಒಂದು ಎಣ್ಣೆಯನ್ನು ಹಚ್ಚಿಯೋ ಅಥವಾ ವಿಟಮಿನ್ ಮಾತ್ರೆ ನುಂಗುವುದರಿಂದಲೋ ಕೇಶ ಸೊಂಪಾಗಿ ಬೆಳೆಯುವುದಾಗಿದ್ದರೆ ಈ ಜಗತ್ತಿನಲ್ಲಿ ಎಲ್ಲರೂ ಶಕುಂತಲೆಯರೇ ಆಗಿಬಿಡುತ್ತಿದ್ದರು, ಅಲ್ಲವೇ?

ಬೆಂಗಳೂರು ವಾಯುಸಾರಿಗೆ: 3 ಕಾರ್ಯಸಾಧು ಯೋಜನೆಗಳು!

ಪ್ರಚಲಿತ

ರವೀ ಸಜಂಗದ್ದೆ
vveditoped@gmail.com

ಕಳೆದೆರಡು ದಶಕಗಳಿಂದ ಅತ್ಯಂತ ಕ್ಷಿಪ್ರವಾಗಿ, ಎಲ್ಲ ಎಂಟು ದಿಕ್ಕುಗಳಲ್ಲೂ ಬೆಂಗಳೂರು ವ್ಯಾಪಕವಾಗಿ ಬೆಳೆಯುತ್ತಿದೆ. ಭಾರತದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಾ, ಅಭಿವೃದ್ಧಿ ಸೂಚ್ಯಂಕದಲ್ಲಿ 2ನೆಯ ಸ್ಥಾನವನ್ನು ಬೆಂಗಳೂರು ಹೊಂದಿದೆ. ಇದು ಭಾರತದ 3ನೆಯ ಅತಿ ದೊಡ್ಡ ನಗರ. ಯಾವುದೇ ನಗರ ಬೆಳೆಯಲು, ಅಭಿವೃದ್ಧಿ ಹೊಂದಲು ಅಲ್ಲಿನ ಮೂಲ ಸೌಕರ್ಯ ಮತ್ತು ಸಂಪರ್ಕ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ದೇಶ, ವಿದೇಶಗಳಿಂದ ಆಗಮಿಸುವವರಿಗೆ ಉತ್ತಮ ರಸ್ತೆ ಸಾರಿಗೆ, ರೈಲು ಸಂಪರ್ಕ ಮತ್ತು ವಾಯು ಸಂಪರ್ಕ ಇರುವುದು ಬೆಂಗಳೂರಿನ ಹೆಗ್ಗಳಿಕೆ. ಹಾಗಿದ್ದೂ ವರ್ಷದಿಂದ ವರ್ಷಕ್ಕೆ ಬೇಡಿಕೆಗಳು ಮತ್ತು ಜನರ ದಟ್ಟಣೆ ಹೆಚ್ಚುತ್ತಿದ್ದು ಸದ್ಯದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು (ಕೆಐಎಎಲ್) ಪ್ರಯಾಣಿಕರ ದಟ್ಟಣೆ ಎದುರಿಸುತ್ತಿದೆ. ದೇಶದ ಅತ್ಯಂತ ಕಾರ್ಯನಿರತ (busy) ವಿಮಾನ ನಿಲ್ದಾಣಗಳ ಪೈಕಿ ಕೆಐಎಎಲ್ ಮುಂಚೂಣಿಯಲ್ಲಿದೆ.

ದಕ್ಷಿಣ ಭಾರತದ ವಿಮಾನ ನಿಲ್ದಾಣಗಳಲ್ಲಿ ಅತ್ಯಂತ ಆಧುನಿಕ, ವಿಶಾಲ ಮತ್ತು ಸುವ್ಯವಸ್ಥಿತವಾದದ್ದು ಎನ್ನುವ ಹೆಗ್ಗಳಿಕೆ ಕೆಐಎಎಲ್ ಹೊಂದಿದೆ. ಎರಡು ರನ್ ವೇ ಹೊಂದಿರುವ ದಕ್ಷಿಣದ ಏಕೈಕ ವಿಮಾನ ನಿಲ್ದಾಣವಿದು. ಇಲ್ಲಿ ನುರಿತ ಏರ್ ಟ್ರಾಫಿಕ್ ಕಂಟ್ರೋಲ್ ವ್ಯವಸ್ಥೆ ಇದ್ದು ದಿನವೊಂದಕ್ಕೆ 780+ ವಿಮಾನಗಳ ಆಗಮನ ಮತ್ತು ನಿರ್ಗಮನ ನಿಯಂತ್ರಿಸುವ ಸುವ್ಯವಸ್ಥೆ ಇದೆ – 2 ನಿಮಿಷಕ್ಕೊಂದು ವಿಮಾನದ ಆಗಮನ ಯಾ ನಿರ್ಗಮನ ಆಗುತ್ತಿರುತ್ತದೆ! 2024ರ ನವೆಂಬರ್ ಅಂಕಿ–ಅಂಶಗಳ ಪ್ರಕಾರ ತಿಂಗಳಿಗೆ 40 ಲಕ್ಷಕ್ಕಿಂತ ಹೆಚ್ಚು ಪ್ರಯಾಣಿಕರು ಕೆಐಎಎಲ್ ಮೂಲಕ ಪ್ರಯಾಣಿಸಿದ್ದಾರೆ. ಅಂದರೆ ದಿನಕ್ಕೆ 1.3 ಲಕ್ಷ, ವರ್ಷಕ್ಕೆ ಸುಮಾರು 5 ಕೋಟಿ ಪ್ರಯಾಣಿಕರು! ಇದು ಆಸ್ಟ್ರೇಲಿಯಾದ ಜನಸಂಖ್ಯೆಯ ಎರಡುಪಟ್ಟು! ಅಲ್ಲಿಗೆ ಕೆಐಎಎಲ್ ಎಷ್ಟು busyಎನ್ನುವ ಅಂದಾಜು ಸಿಗುತ್ತದೆ.

ವರದಿಯೊಂದರ ಪ್ರಕಾರ 2030ರ ವೇಳೆ ಬೆಂಗಳೂರಿನ ವಿಮಾನ ಪ್ರಯಾಣಿಕರ ಸಂಖ್ಯೆ 10 ಕೋಟಿ ದಾಟುವ ನಿರೀಕ್ಷೆಯಿದೆ. ಈಗಿರುವ ಬೇಡಿಕೆಯ ಎರಡರಷ್ಟು! ಸದ್ಯದ ಅಂದಾಜು ಮತ್ತು ಸಾಮರ್ಥ್ಯದ ಪ್ರಕಾರ ಬರೋಬ್ಬರಿ 6ರಿಂದ 7 ಕೋಟಿ ಪ್ರಯಾಣಿಕರು ಮತ್ತು ತತ್ಸಮಾನ ಸರಕು ಮತ್ತು ನಾಗರಿಕ ಸೇವಾ (1100–1200) ವಿಮಾನಗಳನ್ನು ನಿರ್ವಹಿಸುವ ಗರಿಷ್ಠ ಸಾಮರ್ಥ್ಯ ಮಾತ್ರ ಕೆಐಎಎಲ್ ಗೆ ಇದೆ. ಬೇಡಿಕೆ ದುಪ್ಪಟ್ಟು ಇದೆ! ಹಾಗಾಗಿ ಮತ್ತೊಂದು ವಿಮಾನ ನಿಲ್ದಾಣ, ಕೆಐಎಎಲ್ ನಲ್ಲಿ ಹೊಸದೊಂದು ಟರ್ಮಿನಲ್, ಈಗಿರುವ ಎಚ್‌ಎಎಲ್ ವಿಮಾನ ನಿಲ್ದಾಣ ಮತ್ತೊಮ್ಮೆ ಶುರು ಮಾಡುವುದು ಇತ್ಯಾದಿ ಸಾಧ್ಯಾಸಾಧ್ಯತೆಗಳ ಕುರಿತಾದ ಚರ್ಚೆ, ಮಾತುಕತೆ, ವಿಶ್ಲೇಷಣೆ ನಡೆಯುತ್ತಿದೆ. ಈ ಕುರಿತು ಒಂದು ಅವಲೋಕನ.

ವಿಮಾನಯಾನ ಸಚಿವಾಲಯದ ಪ್ರಮಾಣಿತ ನಿಬಂಧನೆಗಳ ಪ್ರಕಾರ, ಇರುವ ವಿಮಾನ ನಿಲ್ದಾಣದಿಂದ ಹೊಸ ವಿಮಾನ ನಿಲ್ದಾಣದ ವೈಮಾನಿಕ ದೂರ (aerial distance) ಕನಿಷ್ಠ 150 ಕಿಲೋಮೀಟರ್ ಆಗಿರಬೇಕು. ಹಾಗಿದ್ದೂ ಈ ವಿಚಾರದಲ್ಲಿ ಆ ಭಾಗದ ಜನಸಾಂದ್ರತೆ ಮತ್ತು ಪ್ರಯಾಣಿಕರ ದಟ್ಟಣೆ ಅವಲೋಕನ ಮಾಡಿ ಈ ಮಿತಿಯನ್ನು ಸಡಿಲಿಸಲು ಸಾಧ್ಯವಿದೆ ಎಂದು ಉಲ್ಲೇಖಿಸಲಾಗಿದೆ. ಭಾರತೀಯ ವಾಯು ಸಂಪರ್ಕ ಇಲಾಖೆ ಈ ಕುರಿತು ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿದೆ. ಹಾಗಾಗಿ ಬೆಂಗಳೂರು ಹೊರವಲಯದಲ್ಲಿ ಇನ್ನೊಂದು ವಿಮಾನ ನಿಲ್ದಾಣ ಸ್ಥಾಪಿಸಲು ಈ ಕಾನೂನು ಅಡ್ಡಿಯಾಗಲಾರದು.

ಈಗಿರುವ ಕೆಐಎಎಲ್ ಮತ್ತು ಸರಕಾರಗಳ ನಡುವಿನ ಒಪ್ಪಂದದ ಪ್ರಕಾರ, 2033ರವರೆಗೆ ಬೆಂಗಳೂರು ಆಸುಪಾಸಿನಲ್ಲಿ ಯಾವುದೇ ಹೊಸ ವಿಮಾನ ನಿಲ್ದಾಣ ಕಾರ್ಯಾಚರಿಸುವಂತಿಲ್ಲ. ಹಾಗಾಗಿ ಈಗಿರುವ ಎಚ್‌ಎಎಲ್ ಒಡೆತನದ ವಿಮಾನ ನಿಲ್ದಾಣದಲ್ಲಿ ವಿಮಾನಗಳ ಪುನರ್ ಕಾರ್ಯಾಚರಣೆ ನಡೆಸಲೂ 2034ರವರೆಗೆ ಕಾಯಲೇಬೇಕು. ಆ ವಿಮಾನ ನಿಲ್ದಾಣದ ಸಾಮರ್ಥ್ಯ ವರ್ಷಕ್ಕೆ ಗರಿಷ್ಠ 50 ಲಕ್ಷ ಪ್ರಯಾಣಿಕರು ಮಾತ್ರ. ಅಲ್ಲಿ ಯಾವುದೇ ವಿಸ್ತರಣೆಗೆ ಜಾಗ ಲಭ್ಯವಿಲ್ಲ. ಹಾಗಾಗಿ ಸದ್ಯಕ್ಕೆ ಆ ವಿಮಾನ ನಿಲ್ದಾಣದ ಕೊಡುಗೆ 'ಭೀಮನ ಹೊಟ್ಟೆಗೆ ಕಾಸಿನ ಮಜ್ಜಿಗೆ'!

ಇನ್ನು ಹೊಸ ವಿಮಾನ ನಿಲ್ದಾಣದ ವಿಚಾರಕ್ಕೆ ಬಂದರೆ, ಎಲ್ಲವೂ ಅಂದುಕೊಂಡಂತೆ ನಡೆದು, ಕಾಮಗಾರಿ ಶೀಘ್ರ ಪೂರ್ಣಗೊಂಡರೂ ಜಾಗ ನಿಗದಿಯಿಂದ ತೊಡಗಿ ಪ್ರಥಮ ವಿಮಾನ ಹಾರಾಟದವರೆಗೆ ತಲುಪಲು ತಗಲುವ ಕನಿಷ್ಠ ಸಮಯ 10–12 ವರ್ಷಗಳು! ಅಂದರೆ ಹೊಸ ವಿಮಾನ ನಿಲ್ದಾಣ ಕಾರ್ಯಾರಂಭ ಮಾಡಬಹುದಾದ ನಿಕಟತಮ ವರ್ಷ 2035–2037! ಆ ಸಮಯಕ್ಕೆ ಪ್ರಯಾಣಿಕರು ಮತ್ತು ವಿಮಾನ ನಿಲ್ದಾಣದ ಬೇಡಿಕೆ ಮತ್ತೂ ದುಪ್ಪಟ್ಟಾಗುವುದರಲ್ಲಿ ಸಂಶಯವಿಲ್ಲ. ಅಲ್ಲಿಗೆ ವಾಯುಯಾನ ಕ್ಷೇತ್ರದಲ್ಲಿ ಬೆಂಗಳೂರಿನ ಬೇಡಿಕೆ ಪೂರೈಸುವಲ್ಲಿ ಸರಕಾರಗಳು ಸಂಪೂರ್ಣ ಎಡವಿದಂತೆಯೇ ಸರಿ.

ಸರಕಾರದ ಎದುರಿಗಿರುವ ಇನ್ನೊಂದು ಆಯ್ಕೆ ಎಂದರೆ ಕೆಐಎಎಲ್ ಪರಿಸರದಲ್ಲಿ ಮತ್ತೊಂದು ಟರ್ಮಿನಲ್ (ಮೂರನೆಯ) ಅಭಿವೃದ್ಧಿ ಪಡಿಸುವುದು. ಇರುವ ಮಾಹಿತಿಯ ಪ್ರಕಾರ, ಇನ್ನೊಂದು ಟರ್ಮಿನಲ್ ನಿರ್ಮಿಸಲು ಬೇಕಾದಷ್ಟು ಜಾಗ ಅಲ್ಲಿದೆ (ಅಥವಾ ಭೂ ಸ್ವಾಧೀನ ಕಷ್ಟವಲ್ಲ!) ಮತ್ತು ಈ ಕೆಲಸಕ್ಕೆ ಈಗಿಂದೀಗಲೇ ಪ್ರಾರಂಭಿಸಿದರೆ ನಾಲ್ಕೈದು ವರ್ಷಗಳಲ್ಲಿ ಹೊಸ ಟರ್ಮಿನಲ್ ಕಾರ್ಯಾರಂಭ ಮಾಡಬಹುದು. ಟರ್ಮಿನಲ್ 1 ಅಂದಾಜು 3 ಕೋಟಿ, ಟರ್ಮಿನಲ್ 2 ಅಂದಾಜು 3.5 ಕೋಟಿ ಪ್ರಯಾಣಿಕರನ್ನು ವರ್ಷಕ್ಕೆ ನಿಭಾಯಿಸುವ ಸಾಮರ್ಥ್ಯ ಹೊಂದಿದೆ. 2029–2030ರ ಸಮಯಕ್ಕೆ ಟರ್ಮಿನಲ್ 3 ಕಾರ್ಯಾರಂಭ ಮಾಡುವಂತಾದರೆ ಅದೂ 3.5 ಕೋಟಿ ಪ್ರಯಾಣಿಕರನ್ನು ನಿಭಾಯಿಸಬಹುದು. ಒಟ್ಟಿಗೆ ಸುಮಾರು 10 ಕೋಟಿ ಪ್ರಯಾಣಿಕರನ್ನು ನಿಭಾಯಿಸುವ ಸಾಮರ್ಥ್ಯ ಆಗ ಕೆಐಎಎಲ್ ಗೆ ಬರಲಿದೆ. 2032ರ ವರೆಗಿನ ಬೇಡಿಕೆ–ಪೂರೈಕೆ ಸುಗಮವಾದೀತು.

ಈ ಮಧ್ಯೆ ತಮಿಳುನಾಡು ಸರಕಾರವು ಗಡಿ ಪ್ರದೇಶವಾದ ಹೊಸೂರಿನಲ್ಲಿ ಹೊಸ ವಿಮಾನ ನಿಲ್ದಾಣ ಸ್ಥಾಪಿಸಲು ನಿರ್ಧಾರ ಮಾಡಿರುವ ವರದಿಗಳು ಬರುತ್ತಿವೆ. ಆ ವಿಮಾನ ನಿಲ್ದಾಣ ಸ್ಥಾಪನೆಯಾಗಿ ಕಾರ್ಯಾರಂಭ ಮಾಡಿದಾಗ ಅದರ ಪ್ರಯೋಜನವನ್ನು ಬೆಂಗಳೂರು ಪಡೆಯಬಹುದು. 2035ರ ನಂತರವಷ್ಟೇ ಆ ಕುರಿತು ಯೋಚಿಸಬಹುದು.

ಕರ್ನಾಟಕ ಸರಕಾರ ಹಾಗೂ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿ ಸಚಿವಾಲಯ ಬೆಂಗಳೂರಿಗೆ ಹೊಸ ವಿಮಾನ ನಿಲ್ದಾಣ ಸ್ಥಾಪಿಸಲು ಸ್ಥಳ ಪರಿಶೀಲನೆಯ ಕುರಿತು ಚರ್ಚೆ, ಮಾತುಕತೆ ನಡೆಸುತ್ತಿದೆ. ಬೆಂಗಳೂರು ಹೊರವಲಯಗಳಾದ ನೆಲಮಂಗಲ–ತುಮಕೂರು–ಕೊರಟಗೆರೆ, ಹೊಸಕೋಟೆ, ಹುಲಿಯೂರುದುರ್ಗ–ಮಳವಳ್ಳಿ, ಬಿಡದಿ–ಹಾರೋಹಳ್ಳಿ, ರಾಮನಗರ–ಕನಕಪುರ, ದಾಬಸ್‌ಪೇಟೆ–ಕುಣಿಗಲ್ ಮುಂತಾದ ಪ್ರದೇಶಗಳಲ್ಲಿ ಪರಿಶೀಲನೆ ನಡೆಯುತ್ತಿದೆ. ವಿಮಾನ ನಿಲ್ದಾಣಕ್ಕೆ ಸುಮಾರು 4000–5000 ಎಕರೆ ಸಮತಟ್ಟಾದ, ಸುತ್ತ ಮುತ್ತ ಬೆಟ್ಟ ಗುಡ್ಡಗಳು ಇರದ ಜಾಗ ಸಿಗಬೇಕು. ಹೆಮ್ಮಿಗೆಪುರದಲ್ಲಿ ಉದ್ದೇಶಿತ ಸ್ಕೈಡೆಸ್ಕ್ ನಿರ್ಮಾಣದ ಮಾತುಕತೆಗಳು ಪ್ರಗತಿಯಲ್ಲಿರುವುದರಿಂದ ಬಿಡದಿ–ಹಾರೋಹಳ್ಳಿ ಭಾಗವನ್ನು ಆಯ್ಕೆ ಮಾಡುವ ಸಾಧ್ಯತೆಯಿಲ್ಲ.

ವಿಮಾನ ಸಂಚಾರ ದಟ್ಟಣೆಯ ಬಹುದೊಡ್ಡ ಸಮಸ್ಯೆ. ಬೆಂಗಳೂರು ನಗರದ 360೦ ಜಾಗವನ್ನು ಎಚ್‌ಎಎಲ್ ವಿಮಾನ ನಿಲ್ದಾಣ ಆವರಿಸಿಕೊಂಡಿದೆ. ಕೆಐಎಎಲ್ ದೇವನಹಳ್ಳಿಯ ಆಚೆಗೆ 30 ಕಿಮೀಗಳಷ್ಟು ವ್ಯಾಪ್ತಿಯವರೆಗೆ ವಾಯು ಪ್ರದೇಶವನ್ನು ಬಳಸುತ್ತಿದೆ. ಅದರಾಚೆಯ ವಾಯು ಪ್ರದೇಶವನ್ನು ಹಾಸನದವರೆಗೆ ಭಾರತೀಯ ವಾಯುಪಡೆ ಬಳಸುತ್ತಿದೆ. ಈ ಎಲ್ಲರ ಜೊತೆ ಮಾತುಕತೆ ನಡೆಯುತ್ತಿದ್ದು ವಿಮಾನಗಳ ಹಾರಾಟಕ್ಕೆ ಲಭ್ಯವಾಗುವಂತೆ ಮಾಡಬಹುದಾದ ವಾಯು ಜಾಗದ ಮಾಹಿತಿ ಸಂಗ್ರಹಿಸುವ ಕೆಲಸ ಪ್ರಗತಿಯಲ್ಲಿದೆ. ನಾಗರಿಕ ವಿಮಾನಯಾನ ಸಚಿವಾಲಯ ಅಥವಾ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯದ ಮಾರ್ಗದರ್ಶನ ಮತ್ತು ನೆರವಿನಿಂದ ಮಾತ್ರವೇ ಈ ಸಮಸ್ಯೆಯನ್ನು ಪರಿಹರಿಸಬಹುದು. ಹೊಸ ವಿಮಾನ ನಿಲ್ದಾಣ ಪ್ರದೇಶವನ್ನು ಅನಂತರವಷ್ಟೇ ಅಂತಿಮಗೊಳಿಸಲು ಸಾಧ್ಯ.

ಈಗಿನ ಪರಿಸ್ಥಿತಿಯಲ್ಲಿ ಸರಕಾರವು ಮೂರು ವಿಭಿನ್ನ ಯೋಜನೆಗಳನ್ನು ಹಾಕಿಕೊಂಡು ಕ್ಷಿಪ್ರವಾಗಿ ಕಾರ್ಯೋನ್ಮುಖವಾಗಬೇಕಿದೆ. ಮೊದಲನೆಯದು, ಕೆಐಎಎಲ್‌ನಲ್ಲಿ ಟರ್ಮಿನಲ್ 3 ಅಭಿವೃದ್ಧಿ ಯೋಜನೆ ಕೈಗೆತ್ತಿಕೊಂಡು 2028–29ರೊಳಗೆ ಸಾರ್ವಜನಿಕ ಸೇವೆಗೆ ಲಭ್ಯವಾಗುವಂತೆ ಅಭಿವೃದ್ಧಿ ಪಡಿಸುವುದು. ಎರಡನೆಯದು, ದೇಶೀಯ ಹಾರಾಟದ ವಿಮಾನಗಳಲ್ಲಿ ಕೆಲವು ವಿಮಾನಗಳನ್ನು ಎಚ್‌ಎಎಲ್ ವಿಮಾನ ನಿಲ್ದಾಣದಿಂದ ಕಾರ್ಯಾಚರಿಸುವಂತೆ ಯೋಜನೆ ನಿರ್ಮಿಸಿ ಆ ವಿಮಾನ ನಿಲ್ದಾಣವನ್ನು 2034ರಿಂದ ಸಾರ್ವಜನಿಕ ಸೇವೆಗೆ ಬಳಸುಸುವುದು. ಮೂರನೆಯದು, ಅತ್ಯಂತ ಹೆಚ್ಚು ಆರ್ಥಿಕ ಮತ್ತು ಭೌಗೋಳಿಕ ಸಂಪನ್ಮೂಲ ಬೇಡುವ ಹೊಸ ವಿಮಾನ ನಿಲ್ದಾಣ ಯೋಜನೆ. ಒಂದು ವರ್ಷದಷ್ಟು ಕಾಲ ಲಭ್ಯವಿರುವ ಎಲ್ಲ ಪ್ರದೇಶಗಳ ವಿಸ್ತೃತ ಅಧ್ಯಯನ ಮಾಡಿ ಸೂಕ್ತ ಪ್ರದೇಶವನ್ನು ಆರಿಸುವುದು. ಈ ಸಂದರ್ಭದಲ್ಲಿ ಬರಬಹುದಾದ ರಿಯಲ್ ಎಸ್ಟೇಟ್ ಮಾಫಿಯಾದ ಒತ್ತಡವನ್ನು ನಿಭಾಯಿಸುವುದೂ ಸವಾಲಿನ ಕೆಲಸ! ಪಕ್ಷಾತೀತವಾಗಿ ರಾಜಕಾರಣಿಗಳು, ಉದ್ಯಮಿಗಳು ತಂತಮ್ಮ ಪ್ರಾಬಲ್ಯ ಮತ್ತು ಭೂಮಿ ಇರುವ ಕಡೆ ಉದ್ದೇಶಿತ ವಿಮಾನ ನಿಲ್ದಾಣ ಬರುವಂತೆ ದುಂಬಾಲು ಬೀಳುವುದು ಖಂಡಿತ! ಇದನ್ನೆಲ್ಲ ಮೀರಿ, ಪ್ರಶಸ್ತ ಪ್ರದೇಶ ಆಖೈರುಗೊಂಡು ಹೊಸ ವಿಮಾನ ನಿಲ್ದಾಣ ಯೋಜನೆ ಕೈಗೆತ್ತಿಕೊಳ್ಳುವ ಗುರುತರ ಜವಾಬ್ದಾರಿ ಸರಕಾರಗಳ ಮೇಲಿದೆ.

ಈ ಮೂರೂ ಕಾರ್ಯಯೋಜನೆಗಳು ಅಂದುಕೊಂಡಂತೆ ಸಾಕಾರಗೊಂಡು 2029–30ಕ್ಕೆ ಕೆಂಪೇಗೌಡ ವಿಮಾನ ನಿಲ್ದಾಣದ ಟರ್ಮಿನಲ್ 3 ಕಾರ್ಯಾರಂಭ ಮಾಡಲಿ. ವಿಮಾನ ನಿಲ್ದಾಣವನ್ನು ಸುಲಭವಾಗಿ ತಲುಪಲುವಂತೆ ನಮ್ಮ ಮೆಟ್ರೋ ರೈಲು ಸಂಪರ್ಕವೂ ಅಷ್ಟರೊಳಗೆ ಪೂರ್ಣವಾಗಲಿ. 2034ರಿಂದ ಎಚ್‌ಎಎಲ್ ವಿಮಾನ ನಿಲ್ದಾಣ ದೇಶೀಯ ವಿಮಾನಗಳ ಹಾರಾಟಕ್ಕೆ ಲಭ್ಯವಾಗುವಂತಾಗಲಿ. 2035–37ರ ಸಮಯದಲ್ಲಿ, ಸೂಕ್ತ ಪ್ರದೇಶದಲ್ಲಿ ಬೆಂಗಳೂರಿನ ಹೊಚ್ಚ ಹೊಸ ವಿಮಾನ ನಿಲ್ದಾಣ ಕಾರ್ಯಾರಂಭ ಆಗುವಂತಾಗಲಿ. ಅಲ್ಲಿಗೂ ನಮ್ಮ ಮೆಟ್ರೋ ರೈಲು ಸಂಪರ್ಕ ಇರಲಿ. ಈ ಮೂರು ಯೋಜನೆಗಳು ನನಸಾಗಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಇಚ್ಛಾಶಕ್ತಿ ತೋರಿಸಲಿ. ವಿಮಾನ ಯಾನ ಕ್ಷೇತ್ರದಲ್ಲಿ ರಾಜಕಾರಣಿಗಳು 'ರೈಲು ಬಿಡುವುದನ್ನು' ನಿಲ್ಲಿಸಿ ವಿಮಾನಗಳು ಮಾತ್ರ ಹಾರುವಂತಾಗಲಿ!

(ಲೇಖಕರು: ಸಾಫ್ಟ್‌ವೇರ್ ಉದ್ಯೋಗಿ)

ಅವಲೋಕನ

ಶ್ರೀರಾಮ್ ಕಲ್ಯಾಣರಾಮನ್

ಬ್ಯಾಂಕ್ ರಕ್ಷಣೆಗೆ ಏಕೆ ಖಾಸಗೀಕರಣ ಉತ್ತರವಲ್ಲ!

ಭಾರತ ಸರಕಾರವು ಸಾರ್ವಜನಿಕ ವಲಯದ ಬ್ಯಾಂಕುಗಳನ್ನು(ಪಿಎಸ್‌ಬಿ) ಖಾಸಗೀಕರಣಗೊಳಿಸಬೇಕು ಎಂಬ ಬಗ್ಗೆ ಚರ್ಚೆ ನಡೆಸುತ್ತಿದೆ ಮತ್ತು ಈ ಕುರಿತು ಹಲವಾರು ಸಲಹೆಗಳೂ ಬಂದಿವೆ.

ಭಾರತದಲ್ಲಿ, ಸಾರ್ವಜನಿಕ ವಲಯದ ಬ್ಯಾಂಕ್‌ಗಳನ್ನು 1960ರ ದಶಕದ ಉತ್ತರಾರ್ಧದಲ್ಲಿ ರಾಷ್ಟ್ರೀಕರಣಗೊಳಿಸಿದಾಗಿನಿಂದಲೂ ಅವು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಸಾರ್ವಜನಿಕ ವಲಯದ ಬ್ಯಾಂಕ್‌ಗಳು, ಅನುತ್ಪಾದಕ ಆಸ್ತಿಗಳು(ಎನ್‌ಪಿಎ), ಕಾರ್ಯ ದಕ್ಷತೆ ಹೊಂದಿರದ ಉದ್ಯೋಗಿಗಳನ್ನು ವಜಾಗೊಳಿಸುವಲ್ಲಿ ಯಶಸ್ವಿಯಾಗಿವೆ.

2023ರ ಏಪ್ರಿಲ್‌ನಿಂದ ಸೆಪ್ಟೆಂಬರ್ ಹೊತ್ತಿಗೆ, ಭಾರತದ ಸಾರ್ವಜನಿಕ ವಲಯದ ಬ್ಯಾಂಕುಗಳು (ಪಿಎಸ್‌ಬಿ) 1.99 ಲಕ್ಷ ಕೋಟಿ ನಿವ್ವಳ ಬಡ್ಡಿ ಆದಾಯವನ್ನು ವರದಿ ಮಾಡಿವೆ, ಇದು ಖಾಸಗಿ ವಲಯದ ಬ್ಯಾಂಕುಗಳು ದಾಖಲಿಸಿದ 1.77 ಲಕ್ಷ ಕೋಟಿ ರು. ನಿವ್ವಳ ಬಡ್ಡಿ ಆದಾಯಕ್ಕಿಂತಲೂ ತುಸು ಹೆಚ್ಚು ಎನ್ನುವುದು ಅಂಕಿ ಅಂಶಗಳನ್ನು ನೋಡಿದರೆ ತಿಳಿಯುತ್ತವೆ. ಖಾಸಗಿ ವಲಯದ ಬ್ಯಾಂಕ್‌ಗಳು ಹೊಂದಿರುವ 68.63 ಲಕ್ಷ ಕೋಟಿ ರು. ಠೇವಣಿ ಮತ್ತು 63.76 ಲಕ್ಷ ಕೋಟಿ ರು. ಸಾರ್ವಜನಿಕ ವಲಯದ ಬ್ಯಾಂಕ್‌ಗಳು 122.13 ಲಕ್ಷ ಕೋಟಿ ರು. ಠೇವಣಿ ಮತ್ತು 87.63 ಲಕ್ಷ ಕೋಟಿ ರು.ಸ್ವತ್ತುಗಳ ಮೂಲಕ ಪ್ರಬಲ ಸ್ಥಾನವನ್ನು ಉಳಿಸಿಕೊಂಡಿವೆ.



ಆದಾಯದಲ್ಲಿ ವ್ಯಾಪಕ ಅಸಮಾನತೆಗಳಿರುವ ಭಾರತದಂತಹ ದೇಶದಲ್ಲಿ, ಬ್ಯಾಂಕಿಂಗ್ ಕೇವಲ ಲಾಭ–ಚಾಲಿತವಾಗಿರಬಾರದು. ಅದು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯತ್ತಲೂ ಗಮನ ಹರಿಸಬೇಕು. ಹಲವು ವರ್ಷಗಳಲ್ಲಿ ಹತ್ತಾರು ಸವಾಲುಗಳನ್ನು ಎದುರಿಸುತ್ತಿದ್ದರೂ, ಈ ಬ್ಯಾಂಕುಗಳು ವಿವಿಧ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಆಯಾಮಗಳಲ್ಲಿ ತಮ್ಮ ನಿರ್ಣಾಯಕ ಪ್ರಾಮುಖ್ಯತೆಯನ್ನು ಪ್ರದರ್ಶಿಸಿವೆ.

ಆರ್ಥಿಕ ಸೇರ್ಪಡೆ

ಸಾರ್ವಜನಿಕ ವಲಯದ ಬ್ಯಾಂಕುಗಳು (ಪಿಎಸ್‌ಬಿ) ಭಾರತದಲ್ಲಿ ಆರ್ಥಿಕ ಸೇರ್ಪಡೆಯನ್ನು ಮುನ್ನಡೆಸುವಲ್ಲಿ ನಿರ್ಣಾಯಕವಾಗಿವೆ, ಮುಖ್ಯವಾಗಿ ಅವುಗಳ ವ್ಯಾಪಕವಾದ ಶಾಖೆ ಜಾಲವು ಇದಕ್ಕೆ ಕಾರಣವಾಗಿದೆ. 12 ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಸುಮಾರು 87,526 ಶಾಖೆಗಳನ್ನು ಹೊಂದಿವೆ. ಈ ಪೈಕಿ 28,884 ಶಾಖೆಗಳು ಗ್ರಾಮೀಣ ಪ್ರದೇಶಗಳಲ್ಲಿವೆ. ಖಾಸಗಿ ವಲಯಕ್ಕೆ ಹೋಲಿಸಿದರೆ, ಒಟ್ಟು ಸುಮಾರು 38000 + ಶಾಖೆಗಳನ್ನು ಹೆಚ್ಚಿಗೆ ಹೊಂದಿದೆ. ಈ ಶಾಖೆಗಳ ಜಾಲವು ಬ್ಯಾಂಕಿಂಗ್ ಸೌಲಭ್ಯವಿದಿಂದ ದೂರವಿರುವ ಪ್ರದೇಶ ಮತ್ತು ಜನರನ್ನು ತಲುಪಲು ಪಿಎಸ್‌ಬಿಗಳಿಗೆ ಅನುವು ಮಾಡಿಕೊಡುತ್ತದೆ. ಮಾರ್ಚ್ 2023ರ ಹೊತ್ತಿಗೆ, ಪಿಎಸ್‌ಬಿಗಳು ಒಟ್ಟು 12.77 ಲಕ್ಷ ಕೋಟಿ ರು.ಗಳ (154 ಶತಕೋಟಿ ಡಾಲರ್) ಕೃಷಿ ಸಾಲಗಳನ್ನು ಬಾಕಿ ಉಳಿಸಿಕೊಂಡಿದ್ದರೆ, 21 ಖಾಸಗಿ ವಲಯದ ಬ್ಯಾಂಕುಗಳಲ್ಲಿ ಈ ಪ್ರಮಾಣ 7.53 ಲಕ್ಷ ಕೋಟಿ ರು. (90 ಶತಕೋಟಿ ಡಾಲರ್)ಆಗಿದೆ. ಪಿಎಸ್‌ಬಿಗಳು ಈ ಸಾಲಗಳಲ್ಲಿ ಸುಮಾರು ಶೇ.58ಎಷ್ಟು ಸಣ್ಣ ಮತ್ತು ಅತಿಸಣ್ಣ ರೈತರಿಗೆ ಹಂಚಿಕೆ ಮಾಡಿವೆ, ಈ ವಿಚಾರದಲ್ಲಿ ಖಾಸಗಿ ಬ್ಯಾಂಕುಗಳ ಶೇ. 47ರ ಪಾಲಿಗೆ ಹೋಲಿಸಿದರೆ, ಕೃಷಿ ಸಾಲದಲ್ಲಿ ಪಿಎಸ್‌ಬಿಗಳು ವಹಿಸುವ ಮಹತ್ವದ ಪಾತ್ರವನ್ನು ಎತ್ತಿ ತೋರಿಸುತ್ತದೆ.

ಮಾರ್ಚ್ 2023ಕ್ಕೆ ಕೊನೆಗೊಳ್ಳುವ ಹಣಕಾಸು ವರ್ಷದಲ್ಲಿ, ಪಿಎಸ್‌ಬಿಗಳು 1.71 ಲಕ್ಷ ಕೋಟಿ ರು.ಗಳನ್ನು ಮುದ್ರಾ ಸಾಲಗಳ ರೂಪದಲ್ಲಿ ವಿತರಿಸಿದರೆ, ಖಾಸಗಿ ವಲಯದ ಬ್ಯಾಂಕುಗಳು 1.41 ಲಕ್ಷ ಕೋಟಿ ರು. ಮೊತ್ತದ ಮುದ್ರಾ ಸಾಲಗಳನ್ನು ನೀಡಿವೆ.

ಸಾರ್ವಜನಿಕ ವಲಯದ ಬ್ಯಾಂಕುಗಳ ಪುನಾರಚನೆಗೆ ಕ್ರಮಗಳು

- ನಿರ್ದೇಶಕರ ಮಂಡಳಿಗೆ ವೃತ್ತಿಪರರನ್ನು ನೇಮಿಸುವುದು.
- ಉನ್ನತ ಮಟ್ಟದ ವ್ಯವಸ್ಥಾಪಕರು ಸಚಿವಾಲಯಕ್ಕೆ ಉತ್ತರದಾಯಿ ಗಳಾಗಿರುವುದಕ್ಕಿಂತಲೂ ನಿರ್ದೇಶಕ ಮಂಡಳಿಗೆ ಸಮಗ್ರ ರೀತಿಯಲ್ಲಿ ಉತ್ತರದಾಯಿಗಳಾಗಿರಬೇಕು.
- ರಾಜ್ಯಭಾಷೆ, ಪ್ರಾದೇಶಿಕ ಜಿಲ್ಲಾ ಮಟ್ಟದ ಸಮಿತಿಗಳಿಗೆ ಹಾಜರಾಗುವುದು ಮುಂತಾದ ಪ್ರಮುಖವಲ್ಲದ (ನಾನ್ ಕೋರ್) ಚಟುವಟಿಕೆಗಳನ್ನು ಕೈಬಿಡುವುದು.
- ಅಪಾಯ, ಖಜಾನೆ ಮುಂತಾದ ಕಾರ್ಯಗಳಿಗೆ ತಜ್ಞರನ್ನು ನೇಮಿಸುವುದು ಮತ್ತು ವರ್ಗಾವಣೆಗಳಿಂದ ಅವರನ್ನು ರಕ್ಷಿಸುವುದು.
- 5 ವರ್ಷಗಳ ದೃಷ್ಟಿಕೋನ ಮತ್ತು ಕನಿಷ್ಠ 5 ವರ್ಷಗಳ ವರೆಗೆ ಉನ್ನತ ನಿರ್ವಹಣಾ ನಿರಂತರತೆಯನ್ನು ಒದಗಿಸುವುದು – ವರ್ಧಿತ ಪ್ರವೇಶ ಮತ್ತು ಸೇವಾ ಶ್ರೇಷ್ಠತೆ (ಇಎಎಸ್) ಸುಧಾರಣೆಗಳು ಇದನ್ನು ಪರಿಹರಿಸುತ್ತವೆ.

ಭಾರತದಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳ ಅನುಕೂಲಗಳು ಬಹುಮುಖಿಯಾಗಿದ್ದು, ಕೇವಲ ಹಣಕಾಸು ವಹಿವಾಟುಗಳನ್ನು ಮೀರಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಒಳಗೊಂಡಿವೆ. ಪಿಎಸ್‌ಬಿಗಳ ದಕ್ಷತೆ ಮತ್ತು ಲಾಭದಾಯಕತೆಯನ್ನು ಸುಧಾರಿಸಬೇಕೆಂಬ ವಾದಗಳಿವೆಯಾದರೂ, ಖಾಸಗೀಕರಣವು ಇದಕ್ಕೆ ರಾಮಬಾಣವಲ್ಲ. ಈ ಬ್ಯಾಂಕುಗಳನ್ನು ರಾಷ್ಟ್ರೀಯ ಆದ್ಯತೆಗಳ ಕಡೆಗೆ ನಿರ್ದೇಶಿಸುವಲ್ಲಿ ಸರಕಾರದ ಪಾತ್ರವು ನಿರ್ಣಾಯಕವಾಗಿದೆ. ಖಾಸಗೀಕರಣಗೊಳಿಸುವ ಬದಲು, ಪಿಎಸ್‌ಬಿಗಳನ್ನು ಸುಧಾರಿಸಲು ಮತ್ತು ಬಲಪಡಿಸಲು ಪ್ರಯತ್ನಗಳನ್ನು ಮಾಡಬೇಕು. ಆ ಮೂಲಕ ಅವು ಆರ್ಥಿಕತೆ ಮತ್ತು ಸಮಾಜದ ವಿಶಾಲ ಹಿತಾಸಕ್ತಿ ಪೂರೈಸುವುದನ್ನು ಮುಂದುವರಿಸುತ್ತವೆ ಎಂದು ಖಚಿತಪಡಿಸಿಕೊಳ್ಳಬೇಕು. ಈ ವಿಧಾನವು ಲಾಭದಾಯಕತೆ ಮತ್ತು ಸಾಮಾಜಿಕ ಜವಾಬ್ದಾರಿಯ ನಡುವಿನ ಸೂಕ್ಷ್ಮ ಸಮತೋಲನವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ, ರಾಷ್ಟ್ರಕ್ಕೆ ಸುಸ್ಥಿರ ಮತ್ತು ಅಂತರ್ಗತ ಬೆಳವಣಿಗೆಯನ್ನು ಖಚಿತಪಡಿಸುತ್ತದೆ.

(ಲೇಖಕರು: ಬಿಎಫ್‌ಎಸ್‌ಐ ಸಲಹೆಗಾರರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 226

ಬೆಳಗಾವಿ ಟು ಬೆಂಗಳೂರು, ಹೈಡ್ರಾಮ

ರಾತ್ರಿಯಿಡೀ ಸುತ್ತಾಡಿಸಿದ ಪೊಲೀಸರಿಂದ ಊಟ ಕೊಡದೇ ದೈಹಿಕ, ಮಾನಸಿಕ ಹಿಂಸೆ: ಸಿ.ಟಿ.ರವಿ ಆರೋಪ

ಬೆಳಗಾವಿ: ಭಾರಿ ರಾದ್ಧಾಂತಕ್ಕೆ ಕಾರಣವಾಗಿರುವ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ಪರಿಷತ್ ಸದಸ್ಯ ಸಿ.ಟಿ. ರವಿ ಅವರಾಡಿರುವ ಮಾತು, ಶುಕ್ರವಾರ ಕ್ಷಣಕ್ಕೊಂದು ತಿರುವು ಪಡೆದಿದೆ. ಸಿ.ಟಿ. ರವಿ ಅವರಿಗೆ ಮಧ್ಯಂತರ ಜಾಮೀನು ಮಂಜೂರಾಗಿದ್ದರೂ, ಮುಂದಿನ ದಿನದಲ್ಲಿ ಈ ಪ್ರಕರಣ ಕಾನೂನು ಮೀರಿ ರಾಜಕೀಯ ಸಮರಕ್ಕೆ ವೇದಿಕೆಯಾಗುವುದು ಸ್ಪಷ್ಟವಾಗಿದೆ.

ಗುರುವಾರ ಸಂಜೆ ಬೆಳಗಾವಿ ಗ್ರಾಮಾಂತರ ಪೊಲೀಸರು ಬಂಧಿಸಿದ ಬಳಿಕ, 'ಸುರಕ್ಷತೆ' ಕಾರಣ ನೀಡಿ ಮೂರು ಜಿಲ್ಲೆಗಳನ್ನು ರಾತ್ರಿಯಿಡೀ ಸುತ್ತಾಡಿಸಿದ್ದಾರೆ. ಇದರೊಂದಿಗೆ ಪೊಲೀಸರು ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ ಎನ್ನುವ ಗಂಭೀರ ಆರೋಪ ಮಾಡಿರುವುದು ಭಾರಿ ಚರ್ಚೆಗೆ ಗ್ರಾಸವಾಗಿದೆ.

ಆರಂಭದಲ್ಲಿ ಖಾನಾಪುರ ಪೊಲೀಸ್ ಠಾಣೆಗೆ ಕರೆದೊಯ್ದ ಪೊಲೀಸರು ಬಳಿಕ ಬೆಳಗಿನ ಜಾವ ಮೂರು ಗಂಟೆವರೆಗೂ ಬೆಳಗಾವಿ ಜಿಲ್ಲೆಯ ವಿವಿಧ ಭಾಗಗಳಿಗೆ ಕರೆದೊಯ್ದು ನಂತರ ಜೆಎಂಎಫ್‌ಸಿ ಕೋರ್ಟ್‌ಗೆ ಹಾಜರುಪಡಿಸಿದರು. ಬಳಿಕ ಪ್ರಕರಣವನ್ನು ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ವರ್ಗಾಯಿಸಿ ರಸ್ತೆಯ ಮೂಲಕ ಭಾರಿ ಬಿಗಿ ಭದ್ರತೆಯೊಂದಿಗೆ ರವಿ ಅವರನ್ನು ಬೆಂಗಳೂರಿಗೆ ಕರೆತರಲಾಯಿತು. ಆದರೆ ದಾವಣಗೆರೆ ತಲುಪುವ ವೇಳೆಗೆ ಜಾಮೀನು ಸಿಕ್ಕಿದ್ದರಿಂದ ಪೊಲೀಸರು ಬಿಟ್ಟಿದ್ದಾರೆ. ಬಳಿಕ ಬಿಜೆಪಿ ನಾಯಕರು ಸುದ್ದಿಗೋಷ್ಠಿ ನಡೆಸಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ನ್ಯಾಯಾಧೀಶೆಯ ಮುಂದೆ ದೂರಿನ ಸರಮಾಲೆ: ಪ್ರಕರಣ ಕುರಿತು ನಗರದ ಜೆಎಂಎಫ್‌ಸಿ ಕೋರ್ಟ್‌ನಲ್ಲಿ ನ್ಯಾಯಾಧೀಶೆ ಸ್ಪರ್ಶಾ ಡಿಸೋಜಾ ಅವರು ವಿಚಾರಣೆ ಕೈಗೊಂಡರು. ಗುರುವಾರ ರಾತ್ರಿಯಿಡೀ ನನ್ನನ್ನು ಪಶುವಿನಂತೆ ಪೊಲೀಸರು ನೋಡಿಕೊಂಡಿದ್ದಾರೆ. ಖಾನಾಪುರ ಪೊಲೀಸ್ ಠಾಣೆಯಲ್ಲಿ ನನಗೆ ಹಲ್ಲೆ ಮಾಡಲಾಗಿದೆ. ತಲೆಗೆ ಗಂಭೀರ ಗಾಯವಾಗಿ ರಕ್ತ ಸೋರುತ್ತಿದ್ದರು ವೈದ್ಯಕೀಯ ಚಿಕಿತ್ಸೆ ಕೊಡಿಸದೆ ಹಿಂಸಿಸಿದ್ದಾರೆ ಎಂದು ಸಿ.ಟಿ ರವಿ ನ್ಯಾಯಾಧೀಶರ ಎದುರು ಅಳಲು ತೋಡಿಕೊಂಡರು.

ಸಿ.ಟಿ ರವಿ ಅವರಿಗೆ ಜಾಮೀನು ನೀಡುವಂತೆ ವಕೀಲರಾದ ರವಿರಾಜ್ ಪಾಟೀಲ ಹಾಗೂ ಎಂಬಿ ಜಿರಲಿ ಅರ್ಜಿ ಸಲ್ಲಿಸಿ ಘಟನೆ ಕುರಿತು ವಿಸ್ತೃತ ವರದಿ ಸಲ್ಲಿಸಿದರು. ಈ ವೇಳೆ ವಾದ ಮಂಡಿಸಿದ ಎಂ.ಬಿ ಜಿರಲಿ. ಸಿ.ಟಿ ರವಿ ಸಾಮಾನ್ಯ ವ್ಯಕ್ತಿಯಲ್ಲ. ಪೊಲೀಸರು ತಡರಾತ್ರಿ ವರೆಗೂ ಸಿಕ್ಕ, ಸಿಕ್ಕ ಸ್ಥಳಗಳಿಗೆ ಸುತ್ತಾಡಿಸಿದ್ದಾರೆ. ಘಟನೆ ನಡೆದಿದ್ದು ಹಿರೇಬಾಗೇವಾಡಿ ಪೊಲೀಸ್ ಠಾಣೆ ಆದರೂ ಮೂರು ಜಿಲ್ಲೆಗಳಿಗೆ ಸುತ್ತಾಡಿಸಿದ್ದು ಏನು ಕಾರಣ? ಅವರಿಗೆ ಪೊಲೀಸರು ಚಿತ್ರಹಿಂಸೆ ನೀಡಿದ್ದು ಚಿಕಿತ್ಸೆ ಅವಶ್ಯಕತೆ ಹಿನ್ನಲೆಯಲ್ಲಿ ಜಾಮೀನು ನೀಡುವಂತೆ ಆಗ್ರಹಿಸಿದರು. ಸ್ಪರ್ಶಾ ಡಿಸೋಜಾ ಅವರು ಪ್ರಕರಣ ಜನಪ್ರತಿನಿಧಿಗಳ ನ್ಯಾಯಾಲಯ ವ್ಯಾಪ್ತಿಗೆ ಬರುತ್ತದೆ. ಈ ಹಿನ್ನಲೆಯಲ್ಲಿ ಸಂಚಾರಿ ಸಮಯ ಹೊರತುಪಡಿಸಿ ಕೂಡಲೇ ನ್ಯಾಯಾಲಯಕ್ಕೆ ಹಾಜರುಪಡಿಸಬೇಕು. ಸಿ.ಟಿ ರವಿ ಅವರಿಗೆ ಮೂಲಭೂತ ಸೌಕರ್ಯ ಕಲ್ಪಿಸಿ ಗೌರವಯುತವಾಗಿ ಕರೆದೊಯ್ಯವಂತೆ ಆದೇಶ ಹೊರಡಿಸಿದರು. ಪೊಲೀಸ್ ಕಸ್ಟಡಿಗೆ ಸಿಗುವ ನೀರಿಕ್ಷೆಯಲ್ಲಿದ್ದ ಜಿಲ್ಲಾ ಪೊಲೀಸರಿಗೆ ಕೋರ್ಟ್ ಸ್ಪಷ್ಟ ನಿರ್ದೇಶನ ನೀಡಿ ಆದೇಶ ಹೊರಡಿಸಿತು. ಕೋರ್ಟ್ ಆದೇಶದ ನಂತರ ನ್ಯಾಯಾಲಯಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ, ಪ್ರತಿಪಕ್ಷ ನಾಯಕ ಆರ್. ಅಶೋಕ್, ಶಾಸಕ ಸುನೀಲ್ ಕುಮಾರ್, ಅಭಯ್ ಪಾಟೀಲ್ ಆಗಮಿಸಿ ಸಿ.ಟಿ ರವಿ ಅವರ ಜತೆ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

ತನಿಖಾಧಿಕಾರಿ ದಿಢೀರ್ ಬದಲಾವಣೆ : ಹಿರೇಬಾಗೇ ವಾಡಿ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸಿದ್ದ ಆರ್.ಆರ್ ಪಾಟೀಲ್ ಅವರನ್ನು ಬದಲಿಸಿ ಬೆಳಗಾವಿ ಗ್ರಾಮೀಣ ಎಸಿಪಿ ಜಿ.ಎಂ ಗಂಗಾಧರ ಅವರನ್ನು ನೇಮಕ ಮಾಡಲಾಯಿತು. ಅನಾರೋಗ್ಯದ ಕಾರಣ ಹೇಳಿ ಗುರುವಾರ ತಡರಾತ್ರಿ ಆರ್.ಆರ್ ಪಾಟೀಲ ಬೆಳಗಾವಿ ಖಾಸಗಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡರು. ಇವರ ಜಾಗಕ್ಕೆ ತನಿಖಾಧಿಕಾರಿಯಾಗಿ ಎಸಿಪಿ ಜಿ.ಎಂ ಗಂಗಾಧರರನ್ನು ನೇಮಿಸಿ ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಆದೇಶ ಹೊರಡಿಸಿದರು.

ಮಧ್ಯರಾತ್ರಿ ಊರೂರು ಅಲೆದಾಡಿಸಿದ ಪೊಲೀಸರು: ಗುರುವಾರ ರಾತ್ರಿ ಬೆಳಗಾವಿ ಸುವರ್ಣಸೌಧದಲ್ಲಿ ಸಿ.ಟಿ ರವಿ ಬಂಧಿಸಿದ ಹಿರೇಬಾಗೇವಾಡಿ ಪೊಲೀಸರು ಠಾಣೆಗೆ ಕರೆದೊಯ್ದರು. ಈ ಸಂದರ್ಭದಲ್ಲಿ ಹೆಬ್ಬಾಳ್ಕರ್ ಬೆಂಬಲಿಗರು ಗಲಾಟೆ ಮಾಡುತ್ತಾರೆ ಎಂಬ ಕಾರಣಕ್ಕೆ ಅವರನ್ನು ಖಾನಾಪುರ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಲಾಯಿತು. ವೈದ್ಯಕೀಯ ಪರೀಕ್ಷೆ ನಂತರ ಸ್ಥಳೀಯ ಕೋರ್ಟ್‌ಗೆ ಹಾಜರುಪಡಿಸಿ ವಾಪಸ್ ಠಾಣೆಗೆ ಕರೆತರಲಾಯಿತು. ಮೊದಲಿಗೆ ಬೈಲಹೊಂಗಲಕ್ಕೆ ಕರೆತಂದ ಪೊಲೀಸರು ಕೆಲಹೊತ್ತು ಸುತ್ತಾಡಿಸಿದರು. ನಂತರ ಸವದತ್ತಿ, ಕಟಕೋಳ, ರಾಮದುರ್ಗ, ಲೋಕಾಪುರ ಠಾಣೆ ವರೆಗೂ ಕರೆದೊಯ್ದರು. ಈ ಸಂದರ್ಭದಲ್ಲಿ ತಲೆಗೆ ಗಾಯವಾಗಿ ರಕ್ತ ಸೋರುತ್ತಿದ್ದ ಕಾರಣ ಸಿ.ಟಿ ರವಿ ಬಳಲಿದಂತೆ ಕಂಡುಬಂತು. ಮಾರ್ಗ ಮಧ್ಯೆ ವಾಹನ ನಿಲ್ಲಿಸಿ ಪೊಲೀಸರ ವಿರುದ್ಧ ಆಕ್ರೋಶ ಹೊರಹಾಕಿದರು. ನನಗೆ ಜೀವ ಭಯ ಕಾಡುತ್ತಿದ್ದು ದೇವರ ಮೇಲೆ ಬಾರ ಹಾಕಿ ಪೊಲೀಸ್ ವಾಹನ ಹತ್ತಿದ್ದು ನನ್ನ ಪ್ರಾಣಕ್ಕೆ ಹೆಚ್ಚುಕಡಿಮೆ ಆದರೆ ಸರಕಾರ ಹೊಣೆ ಎಂದು ಹೇಳಿದರು.

ನನ್ನ ಹತ್ಯೆಗೆ ಯತ್ನ; ಯಾವುದೇ ಕಾರಣ ಹೇಳದೆ ಪೊಲೀಸರು ನನ್ನನ್ನು ರಾತ್ರಿಯಿಡಿ ಸುತ್ತಿಸುವ ಕೆಲಸ ಮಾಡುತ್ತಿದ್ದಾರೆ. ಕಬ್ಬಿನ ಗದ್ದೆ, ಕಲ್ಲು ಕ್ವಾರಿ ಗಳಿಗೆ ಕರೆದೊಯ್ದು ಹತ್ಯೆಗೆ ಯತ್ನಿಸುವ ಭೀತಿ ಎದುರಾಗಿದೆ ಎಂದು ವಿಡಿಯೊ ಹೇಳಿಕೆಯನ್ನು ಸಿ.ಟಿ ರವಿ ಬಿಡುಗಡೆ ಮಾಡಿದ್ದರು. ಪೊಲೀಸರು ಒತ್ತಡದಲ್ಲಿ ಕೆಲಸ ಮಾಡುತ್ತಿದ್ದಾರೆ. ನನ್ನನ್ನು ಸುತ್ತಾಡಿಸುವ ಸಂದರ್ಭದಲ್ಲಿ ಪೊಲೀಸರಿಗೆ ಒಬ್ಬ ವ್ಯಕ್ತಿ ಪದೇ, ಪದೇ ಕರೆ ಮಾಡುತ್ತಿದ್ದಾನೆ. ತಲೆಗೆ ಗಂಭೀರ ಗಾಯವಾದರೂ ಆಸ್ಪತ್ರೆಯಲ್ಲಿ ವೈದ್ಯರಿಂದ ಚಿಕಿತ್ಸೆ ಕೊಡಿಸುತ್ತಿಲ್ಲ. ಸರಕಾರದ ನಿರ್ದೇಶನದಂತೆ ಈ ರೀತಿಯಲ್ಲಿ ಹಿಂಸೆ ನೀಡುತ್ತಿದ್ದಾರೆ ಎಂದು ಸಿ.ಟಿ ರವಿ ಆರೋಪಿಸಿದರು.

ಸಮಾಚಾರ ಸಣ್ಣದಲ್ಲ

6 ತಿಂಗಳ ಬಳಿಕ ಮೈಸೂರಿಗೆ ದರ್ಶನ್

ಮೈಸೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ ನಟ ದರ್ಶನ್ 6 ತಿಂಗಳ ಬಳಿಕ ಶುಕ್ರವಾರ ಮೈಸೂರಿಗೆ ಆಗಮಿಸಿ ತಮ್ಮ ಫಾರ್ಮ್‌ಹೌಸ್‌ನಲ್ಲಿ ವಾಸ್ತವ್ಯ ಹೂಡಿದರು. ಕೊಲೆ ಪ್ರಕರಣದಲ್ಲಿ ದರ್ಶನ್ ಜೂ.11ರಂದು ಮೈಸೂರಿನಲ್ಲೇ ಬಂಧನಕ್ಕೊಳಗಾಗಿದ್ದರು. ಜಾಮೀನು ಸಿಕ್ಕರೂ ಬೆಂಗಳೂರು ಬಿಟ್ಟು ತೆರಳದಂತೆ ಕೋರ್ಟ್ ಆದೇಶಿಸಿತ್ತು. ಜ.5ರವರೆಗೆ ಮೈಸೂರಿಗೆ ತೆರಳಲು ಬೆಂಗಳೂರಿನ ಸಿಸಿಎಚ್ 57ನೇ ಸೆಷನ್ಸ್ ನ್ಯಾಯಾಲಯ ಶುಕ್ರವಾರದಿಂದ ಅವಕಾಶ ನೀಡಿದೆ. ಹೀಗಾಗಿ ತಿ.ನರಸೀಪುರ ಮುಖ್ಯರಸ್ತೆಯ ಕೆಂಪಯ್ಯನ ಹುಂಡಿ ಬಳಿಯ ತಮ್ಮ ಫಾಮ್‌ಹೌಸ್‌ಗೆ ಅಕ್ಕನ ಮಗ ಚಂದನ್ ಜತೆ ಆಗಮಿಸಿದರು. ತಾಯಿ ಮೀನಾ ತೂಗುದೀಪ, ಪತ್ನಿ ವಿಜಯಲಕ್ಷ್ಮಿ, ನಟ ಧನ್ವೀರ್ ಜತೆಗಿದ್ದು ಫಾರ್ಮ್‌ಹೌಸ್‌ನ ಗೇಟನ್ನು ಟಾರ್ಪಾಲ್‌ನಿಂದ ಮುಚ್ಚಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಆನಂದರಾವ್ ವೃತ್ತ, ಬೆಂಗಳೂರು – 560009

ಸಂ: ಕಾ.ಪಾ.ಅ/ಪಂರಾಇಂವಿ/ಬೆಂ.ಗ್ರಾಂ/ಟೆಂ–24/ತಾಂ.ಶಾ/2024–25 ದಿನಾಂಕ: 17.12.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 24/2024–25

(ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ನ್ನು ನಾಲ್ಕನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಜಿಲ್ಲಾ ಪಂಚಾಯತ್ ವಿವಿಧ ಲೆಕ್ಕ ಶೀರ್ಷಿಕೆಯಡಿ ಅನುಮೋದನೆಗೊಂಡಿರುವ ಕಾಮಗಾರಿಗಳಿಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಇವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗಳಿಗೆ ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **26–12–2024 ಸಂಜೆ 5.00 ಗಂಟೆಯವರೆಗೆ** ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ ಹಾಗೂ ಟೆಂಡರ್ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ಗ್ರಾಮಾಂತರ, ಬೆಂಗಳೂರು

DIPR/CP/3883/SPAN/2024-25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಕವಿಪ್ರನಿನಿ/ಅ.ಇಂ(ವಿ)ಆರ್‌ಟಿ(ಬಿ)/ಟಿ–53/24–25/2088–89 ದಿನಾಂಕ: 19.12.2024

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿ, ರಾಜಾಜಿನಗರ, ಬೆಂಗಳೂರು ವ್ಯಾಪ್ತಿಯಲ್ಲಿ ಬರುವ ಆರ್.ಟಿ. ವೃತ್ತ ಹಾಗೂ ಆರ್.ಟಿ. ದಕ್ಷಿಣ ವಿಭಾಗ ಕಟ್ಟಡದ ಆವರಣ ಹಾಗೂ ಕಛೇರಿಗಳು, ಆರ್.ಟಿ. ಉತ್ತರ ಹಾಗೂ ಆರ್.ಟಿ. ಅಧಿಕ ಕಟ್ಟಡದ ಆರ್.ಟಿ. ಉತ್ತರ ವಿಭಾಗದ ಆವರಣ ಹಾಗೂ ಕಛೇರಿಗಳನ್ನು ಶುಚಿಗೊಳಿಸಲು ಓರ್ವ House keeping ಸೇವೆಗಾಗಿ ಟೆಂಡರ್ ಕರೆಯಲಾಗಿದೆ.

ಕಛೇರಿಯ ಹೆಸರು: ಆರ್.ಟಿ.ವೃತ್ತ ಹಾಗೂ ಆರ್.ಟಿ.ದಕ್ಷಿಣ ವಿಭಾಗ ಕಟ್ಟಡದ ಆವರಣ ಹಾಗೂ ಕಛೇರಿಗಳು, ಆರ್.ಟಿ. ಉತ್ತರ ಹಾಗೂ ಆರ್.ಟಿ.ಅಧಿಕ ಕಟ್ಟಡದ ಆರ್.ಟಿ. ಉತ್ತರ ವಿಭಾಗದ ಆವರಣ ಹಾಗೂ ಕಛೇರಿ, ಕವಿಪ್ರನಿನಿ, ರಾಜಾಜಿನಗರ, ಬೆಂಗಳೂರು–10. **ಸಂಖ್ಯೆ:** 01.

ಹೆಚ್ಚಿನ ವಿವರಗಳಿಗೆ **www.kppp.karnataka.gov.in** ನಲ್ಲಿ ಲಾಗಿನ್ ಆಗಿ **ದಿನಾಂಕ:26.12.2024 ರ ಮಧ್ಯಾಹ್ನ 3:00 ಘಂಟೆಯ ನಂತರ** ಪಡೆಯಬಹುದು. ಇನ್ನಿತರೆ ಯಾವುದೇ ವಿವರಗಳನ್ನು ಕೆಳ ಸಹಿದಾರರ ಕಛೇರಿಯಿಂದ ಪಡೆದುಕೊಳ್ಳಬಹುದು.

ಸಹಿ/– ಅಧೀಕ್ಷಕ ಇಂಜಿನಿಯರ್(ವಿದ್ಯುತ್)
ಆರ್.ಟಿ. ವೃತ್ತ, ಕವಿಪ್ರನಿನಿ, ಪಶ್ಚಿಮ ಕಾರ್ಡ್ ರಸ್ತೆ, ರಾಜಾಜಿನಗರ, ಬೆಂಗಳೂರು–10.

ಕಾಂಗ್ರೆಸ್ ಗೂಂಡಾ ವರ್ತನೆಗೆ ತಕ್ಕಪಾಠ: ಬಿ.ವೈ. ವಿಜಯೇಂದ್ರ

ದಾವಣಗೆರೆ: ಪೊಲೀಸರನ್ನು ದುರುಪಯೋಗ ಪಡಿಸಿಕೊಂಡು ದೌರ್ಜನ್ಯ, ದಬ್ಬಾಳಿಕೆ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರದ ಗೂಂಡಾವರ್ತನೆ ವಿರುದ್ಧ ಬಿಜೆಪಿ ನಾಯಕರ ಜತೆ ಚರ್ಚೆ ನಡೆಸಿ ಮುಂದಿನ ಹೆಜ್ಜೆಯ ಬಗ್ಗೆ ತೀರ್ಮಾನ ಕೈಗೊಳ್ಳುತ್ತೇವೆ ಎಂದು ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಎಚ್ಚರಿಕೆ ನೀಡಿದರು.

ನಗರದ ಹೊರವಲಯದಲ್ಲಿರುವ ಸರ್ಕ್ಯೂಟ್ ಹೌಸ್ ನಲ್ಲಿ ಶುಕ್ರವಾರ ಸಂಜೆ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು.

ಬೆಳಗಾವಿಯ ಸುವರ್ಣಸೌಧದಲ್ಲಿ ಕಾಂಗ್ರೆಸ್ ಪುಡಾರಿಗಳು ನುಗ್ಗಿ ನಮ್ಮ ಪಕ್ಷದ ಸಿಟಿ ರವಿ ಅವರ ಮೇಲೆ ಹಲ್ಲೆ ನಡೆಸಿದ್ದಾರೆ. ಹಾಗಿದ್ದರೂ ಕಾಂಗ್ರೆಸ್ ಸರ್ಕಾರ ಪೊಲೀಸರನ್ನು ದುರುಪಯೋಗ ಪಡಿಸಿಕೊಂಡು ಸಿಟಿ ರವಿ ಅವರ ಮೇಲೆ ಯಾವುದೇ ನೋಟಿಸ್ ನೀಡದೆ ಎಫ್‌ಐಆರ್ ದಾಖಲಿಸಿ ಬಂಧಿಸಿ, ಅವರನ್ನು ಅಮಾನವಿಯವಾಗಿ ನಡೆಸಿಕೊಂಡಿರುವುದು ಖಂಡನೀಯ ಎಂದು ಕಿಡಿಕಾರಿದರು.

ಕಾಂಗ್ರೆಸ್ ಸರ್ಕಾರ ತೋರುತ್ತಿರುವ ಗುಂಡಾವರ್ತನೆ ನೋಡಿ ಸುಮ್ಮನಿರಲು ಬಿಜೆಪಿ ಕಾರ್ಯಕರ್ತರೇನು ಬಳೆ ತೊಟ್ಟುಕೊಂಡು ಕೂತಿಲ್ಲ, ಈ ರೀತಿ ದೌರ್ಜನ್ಯ, ದಬ್ಬಾಳಿಕೆಗೆ ತಕ್ಕ ಶಾಸ್ತಿ ಮಾಡುತ್ತೇವೆ. ನಾವು ನಮ್ಮ ಪಕ್ಷದ ನಾಯಕರೊಂದಿಗೆ ಚರ್ಚೆ ನಡೆಸಿ ಮುಂದಿನ ಹೋರಾಟದ ಬಗ್ಗೆ ತೀರ್ಮಾನಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಕಾಂಗ್ರೆಸ್ ಪುಡಾರಿಗಳು ನಡೆಸಿದ ಹಲ್ಲೆ ಸಂಬಂಧ ಕಾನೂನುಬಾಹಿರವಾಗಿ ಸಿಟಿ ರವಿ ಅವರನ್ನೇ ಬಂಧಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ತೀರ್ಪನ್ನು ಬಿಜೆಪಿ ಸ್ವಾಗತಿಸುತ್ತದೆ ಎಂದರು.

---

77 ಹಳ್ಳಿಗಳಲ್ಲಿ ಪೂರ್ಣ 'ನಮ್ಮೂರಿಗೆ ನಮ್ಮ ಶಾಸಕ' ಕಾರ್ಯಕ್ರಮ

ಸಿಎಂ ಟ್ವೀಟ್ ಬಗ್ಗೆ ಹೆಮ್ಮೆಯಿದೆ: ಪ್ರದೀಪ್ ಈಶ್ವರ್

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ನಾನು ಹಮ್ಮಿಕೊಂಡಿರುವ ನಮ್ಮೂರಿಗೆ ನಮ್ಮ ಶಾಸಕ ಕಾರ್ಯಕ್ರಮದ ಬಗ್ಗೆ ಮಾಧ್ಯಮಗಳಲ್ಲಿ ಬಂದ ಸುದ್ದಿನೋಡಿದ ಮುಖ್ಯಮಂತ್ರಿಗಳು ಈ ಬಗ್ಗೆ ಕೇಳಿದಾಗ ನನ್ನ ಕಾರ್ಯವೈಖರಿ ಬಗ್ಗೆ ತಿಳಿಸಿದ್ದೆ. ಇದನ್ನು ತಮ್ಮ ಟ್ವೀಟ್‌ನಲ್ಲಿ ಉಲ್ಲೇಖಿಸಿ ಮೆಚ್ಚುಗೆ ವ್ಯಕ್ತಪಡಿಸಿರುವುದು ನನ್ನ ಸೌಭಾಗ್ಯ. ಇದೊಂದು ವಿಶೇಷ ಕಾರ್ಯಕ್ರಮವಾಗಿದ್ದು ಮುಂದುವರಿಸು ಎಂದು ಬೆನ್ನುತಟ್ಟಿದ್ದಾರೆ ಎನ್ನುವ ಮೂಲಕ ಯಾವ ಕಾರಣಕ್ಕೂ ಇದನ್ನು ನಿಲ್ಲಿಸುವ ಮಾತೇ ಇಲ್ಲ ಎಂದು ಶಾಸಕ ಪ್ರದೀಪ್ ಈಶ್ವರ್ ತಿಳಿಸಿದರು.

ಪೋಶೆಟ್ಟಿಹಳ್ಳಿ ವ್ಯಾಪ್ತಿಯ ಕಾಮರೆಡ್ಡಿಹಳ್ಳಿ ಗ್ರಾಮದಲ್ಲಿ ವಿಶ್ವವಾಣಿಯೊಂದಿಗೆ ಮಾತನಾಡಿದ ಪ್ರದೀಪ್, ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರದಲ್ಲಿ ಈವರೆಗೆ 77 ಹಳ್ಳಿಗಳಲ್ಲಿ ನಮ್ಮೂರಿಗೆ ನಮ್ಮ ಶಾಸಕ ಅಭಿಯಾನ ಪೂರ್ಣಗೊಳಿಸಿದ್ದೇನೆ. ಮುಂದಿನ ದಿನಗಳಲ್ಲಿ ಉಳಿದ ಗ್ರಾಮಗಳಲ್ಲಿ ಕಾರ್ಯಕ್ರಮ ಮುಂದುವರಿಸಲಾಗುವುದು ಎಂದರು.

ಮೆಟ್ರೋ ತರುವುದೇ ನನ್ನ ಗುರಿ:: ಚಿಕ್ಕಬಳ್ಳಾಪುರ ಕ್ಷೇತ್ರವನ್ನು ಬೆಂಗಳೂರಿಗೆ ಪರ್ಯಾಯ ನಗರವಾಗಿ ರೂಪಿಸುವುದು ನನ್ನ ಗುರಿಯಾಗಿದೆ.ಮೆಟ್ರೋ ರೈಲು ಸಂಪರ್ಕವನ್ನು ಚಿಕ್ಕಬಳ್ಳಾಪುರಕ್ಕೆ ತರಲು ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳೊಂದಿಗೆ ಮಾತನಾಡಿದ್ದೇನೆ ಎಂದ ಅವರು ಕೈಗಾರಿಕೆಗಳನ್ನು ಎಚ್ಚರಿಕೆಯಿಂದ ತರುವತ್ತ ಚಿತ್ತ ಹರಿಸಿದ್ದೇನೆ ಎಂದು ಶಾಸಕರು ತಿಳಿಸಿದರು..

ಯೋಜಿತ ಕೈಗಾರಿಕೀಕರಣಕ್ಕೆ ಒತ್ತು: ಸುಮ್ಮನೆ ರೈತರ ಹತ್ತಿರ ಜಮೀನು ಕಿತ್ತುಕೊಂಡು ಯಾರನ್ನೋ ಉದ್ಧಾರ ಆಗಲು ಕೊಡುವುದಲ್ಲ.ಅದನ್ನು ತುಂಬಾ ಎಚ್ಚರಿಕೆಯಿಂದ ಒಳ್ಳೆಯ ದೃಷ್ಟಿಕೋನ ಇಟ್ಟುಕೊಂಡು ಮಾಡಬೇಕು. ಎಂ.ಜಿ ರಸ್ತೆ ಅಗಲೀಕರಣ 2007ರಲ್ಲಿ ಪ್ರಾರಂಭವಾಗಿದೆ. ನಾನು ಬಂದೇ ಅದನ್ನು ಒಡೆಸಬೇಕಾಯಿತಾ,ಕಾರಣ ಮುಟ್ಟಕ್ಕೆ ಭಯ, ಎಲ್ಲಾ ಮತರಾಜಕಾರಣ.ನಾನು ಇಂತಹವಕ್ಕೆಲ್ಲಾ ಹೆದರಲ್ಲ.ಈಗ ಎಂ.ಜಿ.ರಸ್ತೆ ನೋಡಿ ನಾನು ಬರಲಿಲ್ಲ ಎಂದರೆ ಇದನ್ನು ಒಡೆಸಲು 3–4 ವರ್ಷ ಬೇಕಾಗುತ್ತಿತ್ತು. ಬಜಾರ್ ರಸ್ತೆ ಸಭೆ ಮಾಡಿ ಮೂರು ನೋಟೀಸು ಕೊಟ್ಟಿದ್ದೇವೆ.ಕಾನೂನು ರೀತಿ ಕ್ರಮ ತೆಗೆದುಕೊಳ್ಳತ್ತೇವೆ.ಇಲ್ಲವಾದಲ್ಲಿ ಕೋರ್ಟಿನಲ್ಲಿ ಸ್ಟೇ ಬಂದು ಬಿಡುತ್ತದೆ ಎಂದು ತಮ್ಮ ಅಭಿವೃದ್ಧಿ ಯೋಜನೆಗಳನ್ನು ಮಾಧ್ಯಮದ ಮುಂದೆ ಶಾಸಕ ಪ್ರದೀಪ್ ಈಶ್ವರ್ ತೆರೆದಿಟ್ಟರು.

ನಮ್ಮೂರಿಗೆ ನಮ್ಮ ಶಾಸಕ ಅಭಿಯಾನದಲ್ಲಿ ಪಾಲ್ಗೊಂಡಿರುವ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್

ಅಮಿತ್ ಶಾಗೆ ಪ್ಯಾಷನ್: ಅಮಿತ್ ಶಾ ಹೇಳಿಕೆ ಬಹಳ ನೋವಿನ ಸಂಗತಿ. ಅಂಬೇಡ್ಕರ್ ಹೆಸರು ಹೇಳುವುದು ಅಮಿತ್ ಶಾ ಅವರಿಗೆ ಪ್ಯಾಶನ್ ಇರಬಹುದು.ನಮ್ಮಂತಹವರಿಗೆ ಈ ದೇಶದ ಕೋಟ್ಯಾಂತರ ಮಂದಿಗೆ ಅಂಬೇಡ್ಕರ್ ಅವರೇ ದೇವರು.ಬಿಜೆಪಿ ಅವರು ಸಂಸ್ಕತಿ ಬಗ್ಗೆ ಮಾತನಾಡುತ್ತಾರೆ.ಸಿ.ಟಿ.ರವಿ ಅವರು ಸಂಸ್ಕೃತಿ ಬಗ್ಗೆ ದೊಡ್ಡ ದೊಡ್ಡ ಭಾಷಣ ಬಿಗಿಯುತ್ತಾರೆ.ರಾಜ್ಯದ ಜನಪ್ರಿಯ ಸಚಿವೆಯಾದ ಲಕ್ಷ್ಮಿ??ೀ ಹೆಬ್ಬಾಳ್‌ಕರ್ ಬಗ್ಗೆ ತಪ್ಪು ಮಾತಾಡಿದ್ದಾರೆ,ಬಂಧನಕ್ಕೆ ಒಳಗಾಗಿದ್ದಾರೆ. ಬಾಬಾ ಸಾಹೇಬರ ಬಗ್ಗೆ ಮಾತನಾಡಲು ಬಿಜೆಪಿಯರು ವೇಸ್ಟ್.ನಿಜ ಹೇಳಬೇಕೆಂದರೆ ಸಂವಿಧಾನ ಮತ್ತು ಬಾಬಾ ಸಾಹೇಬ ಅಂಬೇಡ್ಕರ್ ಬಗ್ಗೆ ಬಿಜೆಪಿ ಮಂದಿಗೆ ಎಳ್ಳಷ್ಟೂ ಗೌರವವಿಲ್ಲ. ಇಂತಹವರ ಬಗ್ಗೆ ನಾವೇಕೆ ಮಾತಾಡಬೇಕು ಬಿಡಿ ಎಂದರು.

ವಾಹನ ದಟ್ಟಣೆ ನಿಯಂತ್ರಣ: ಚಿಕ್ಕಬಳ್ಳಾಪುರದಲ್ಲಿ ವಾಹನ ದಟ್ಟಣೆ ಕಡಿಮೆ ಮಾಡಲು ನಾಗರಿಕರ ಸಹಕಾರ ಇದ್ದರೆ ಮಾತ್ರ ಸಾಧ್ಯ.ಸಿಂಗಾಪುರ ಸ್ವಚ್ಛ ನಗರ ಆಗಬೇಕಾದರೆ ಅಲ್ಲಿನ ಜನರ ಸಹಕಾರ, ಅಧಿಕಾರಿಗಳ ಕರ್ತವ್ಯಪ್ರಜ್ಞೆ ಕೆಲಸ ಮಾಡಿದೆ. ಅಲ್ಲಿ ಎಲ್ಲೆಂದರಲ್ಲಿ ಕಸ ಹಾಕಿದರೆ ತಕ್ಷಣವೇ ದಂಡ ಹಾಕುತ್ತಾರೆ. ಇಲ್ಲಿಯೂ ಅದೇ ರೀತಿ ಕಾನೂನು ಇದೆ. ಆದರೆ ಅಧಿಕಾರಿಗಳು ದಂಡ ಹಾಕಿದರೆ, ಜನಪ್ರತಿನಿಧಿಗಳಿಗೆ ದೂರು ನೀಡುತ್ತಾ,ಅಧಿಕಾರಿಗಳ ಮೇಲೆ ಅಂಕುಶ ಹಾಕುತ್ತಾರೆ. ನಾನು ಇದನ್ನು ಬದಲಾಯಿಸಲು ಮುಂದಾಗಿದ್ದೇನೆ ಎನ್ನುವ ಮೂಲಕ ನಗರದಲ್ಲಿ ಬೇಕಾಬಿಟ್ಟಿಯಾಗಿ ಎಲ್ಲೆಂದರಲ್ಲಿ ವಾಹನ ನಿಲುಗಡೆ ಮಾಡುವ ಮಂದಿಗೆ ಎಚ್ಚರಿಕೆ ನೀಡಿದರು.

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ, ಕೋಲಾರ.

ನೇಹಾಲಾ ಕಟ್ಟಡ, ಸರ್ವಜ್ಞ ಪಾರ್ಕ್ ಮುಂಭಾಗ, ಬಾಲಕರ ಕಾಲೇಜು ಹತ್ತಿರ, ಕೋಲಾರ–563101. Email:dmkolarkfcsc@yahoo.com,

NO:KFCSC/KLR/MSP/HT/2024-25/ ದಿನಾಂಕ: 19.12.2024

ಟೆಂಡರ್ ಪ್ರಕಟಣೆ

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ, ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ 2024–25ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಖರೀದಿಸಿದ ಭತ್ತ ಮತ್ತು ರಾಗಿ ದಾಸ್ತಾನನ್ನು ಖರೀದಿ ಕೇಂದ್ರಗಳಿಂದ ಸಂಗ್ರಹಣಾ ಕೇಂದ್ರಗಳಿಗೆ ಸಾಗಾಣಿಕೆ ಹಾಗೂ ಹಸ್ತಾಂತರ ಮಾಡಲು ಗುತ್ತಿಗೆದಾರರನ್ನು ನೇಮಿಸಲು ಕರ್ನಾಟಕ ಪಾರದರ್ಶಕತೆ ವಿಧೇಯಕ–1999ರ ವೆಬ್‌ಸೈಟ್ https://kppp.karnataka.gov.in, NO.KFCSCL/2024-25/SE0092 DATE:19.12.2024 ರಿಂದ DOWNLOAD ಮಾಡಿಕೊಳ್ಳಬಹದು.

ಸಹಿ/–
ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಆಹಾರ ಮತ್ತು ನಾಗರಿಕ
ಸರಬರಾಜು ನಿಗಮ ನಿಯಮಿತ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:374/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ

ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ

ದೂರವಾಣಿ ಸಂಖ್ಯೆ: 08352–276996, ಫ್ಯಾಕ್ಸ: 08352–276984, ವೆಬ್‌ಸೈಟ್:www.vijayapura.uda.gov.in

ನಂ: ನಪ್ರಾವಿ/ತಾಂತ್ರಿಕ/ಟೆಂಡರ/2024–25/1122 ದಿನಾಂಕ:09.12.2024

ಕೆ.ಪಿ.ಪಿ. ಪೋರ್ಟಲ್ ಟೆಂಡರ್ ಪ್ರಕಟಣೆ

ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ರನ್ವಯ ಕೆ.ಪಿ.ಪಿ ಪೋರ್ಟಲ್‌ನಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ವಿವೇಕ ನಗರ ಪಶ್ಚಿಮದಲ್ಲಿರುವ ಉದ್ಯಾನವನ ನಿರ್ವಹಣೆ ಕಾಮಗಾರಿ ಕುರಿತು ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ.

1) ಟೆಂಡರ್ ಸಲ್ಲಿಸಲು ಪ್ರಾರಂಭದ **ದಿನಾಂಕ: 20.12.2024. 2)** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 04.01.2025** ರಂದು ಸಾಯಂಕಾಲ 17.30 ಘಂಟೆಗೆ. **3)**ಟೆಂಡರ್ ತೆರೆಯುವ **ದಿನಾಂಕ: 06.01.2025** ರಂದು ಮುಂಜಾನೆ 11.00 ಘಂಟೆಗೆ.

ಹೆಚ್ಚಿನ ಮಾಹಿತಿ ಹಾಗೂ ಇತರೇ ಷರತ್ತುಗಳಿಗಾಗಿ (https://kppp.karnataka.gov.in) ನಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ನಗರಾಭಿವೃದ್ಧಿ ಪ್ರಾಧಿಕಾರದ ಕಾರ್ಯಾಲಯದ ತಾಂತ್ರಿಕ ಶಾಖೆಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ವೆಬ್‌ಸೈಟ್ www.vijayapura.uda.gov.in ನಿಂದ ಪಡೆಯಬಹುದಾಗಿದೆ.

ಅ. ನಂ.	ಕಾಮಗಾರಿ ಹೆಸರು	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಕೆಲಸದ ಅವಧಿ
1	ನಗರಾಭಿವೃದ್ಧಿ ಪ್ರಾಧಿಕಾರದ ವಿವೇಕ ನಗರ ಪಶ್ಚಿಮದಲ್ಲಿರುವ ಉದ್ಯಾನವನ ನಿರ್ವಹಣೆ ಕಾಮಗಾರಿ ಕುರಿತು.	VUDA/2024-25/SE0006	10.00	25,000/–	12 ತಿಂಗಳು

ಸಹಿ/– (ರಾಜಶೇಖರ ಡಂಬಳ, ಕೆ.ಎ.ಎಸ್)
ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ

ವಾಸಾಸಂಇ/ವಿಜಯಪುರ/544/ಕೆಎಸ್‌ಎಂಸಿಎ/2024–25

ಸಹಿ/– (ಕನ್ನಾನ ಅಬ್ದುಲಹಮೀದ ಮುಶ್ರೀಫ)
ಅಧ್ಯಕ್ಷರು
ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ

ಪುರಸಭೆ ಕಾರ್ಯಾಲಯ ಇಂಡಿ

ವೆಬ್‌ಸೈಟ್: www.inditown.mrc.gov.in,
ಇ–ಮೇಲ್:itstaff_ulb_indi@yahoo.co.in, ಫೋನ್/ಫ್ಯಾಕ್ಸ್:08359–225025

ಕ್ರ.ಸಂ:ಪು.ಸ.ಇಂ/ತಾ.ವಿ/MRF/2024–25 ದಿನಾಂಕ:17.12.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಗೆ, ಈ ಮೂಲಕ ತಿಳಿಯಪಡಿಸುವದೆನೆಂದರೆ, ಇಂಡಿ ಪುರಸಭೆ ವ್ಯಾಪ್ತಿಯಲ್ಲಿ ಕಾಮಗಾರಿಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಕರೆಯಲಾಗಿದ್ದು ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು ಅದರಂತೆ ಆಸಕ್ತಿಯುಳ್ಳವರು ತಮ್ಮ ದರವಾರುಗಳನ್ನು http://kppp.karnataka.gov.in ಮತ್ತು GEM Portal ಮೂಲಕ ಸಲ್ಲಿಸಬಹುದಾಗಿದೆ.

ಅ.ನಂ	ಕಾಮಗಾರಿ ಹೆಸರು
01	DMA/2024-25/INDENT33484
02	DMA/2024-25/IND4050
03	BID NO: GEM/2024/B/5694623

ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳನ್ನು ವೆಬ್‌ಸೈಟ್ http://kppp.karnataka.gov.in ಮತ್ತು GEM Portal ನಲ್ಲಿ ಪಡೆಯಬಹುದು ಹಾಗೂ ಕಾರ್ಯಾಲಯದ ತಾಂತ್ರಿಕ ಶಾಖೆಯಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/– ಮುಖ್ಯಾಧಿಕಾರಿ, ಪುರಸಭೆ ಇಂಡಿ

ಸಹಿ/– ಅಧ್ಯಕ್ಷರು, ಪುರಸಭೆ ಇಂಡಿ

ವಾಸಾಸಂಇ/ವಿಜಯಪುರ/537/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಮಗಾನ/ಬೂನೀನಿಯೋ/ಟೆ.ಪ್ರ/ತಾಸ/2024–25/1555 ದಿನಾಂಕ:19.12.2024

ಅಲ್ಪಾವಧಿ ಸಂಕ್ಷಿಪ್ತ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ದ್ವಿಲಕೋಟೆ

1) ಕಾಮಗಾರಿಗಳ ವಿವರ.: ಸುರಪೂರ ತಾಲೂಕಿನ 07 ಕಾಮಗಾರಿಗಳು (3ನೇ ಕರೆ) ಶಹಾಪೂರ ತಾಲೂಕಿನ 08 ಕಾಮಗಾರಿಗಳು (2ನೇ ಕರೆ) ಯಾದಗಿರ ತಾಲೂಕಿನ 03 ಕಾಮಗಾರಿಗಳು (2ನೇ ಕರೆ) **2) ಲೆಕ್ಕ ಶೀರ್ಷಿಕೆ:** 2024–25ನೇ ಸಾಲಿನ ಮಹಾತ್ಮಗಾಂಧಿ ನರೇಗಾ ಬೂದು ನೀರು ನಿರ್ವಹಣೆ ಯೋಜನೆ **3) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ 5.37 ಮತ್ತು ಗರಿಷ್ಠ ರೂ. 61.21 ಲಕ್ಷ **4) ಗುತ್ತಿಗೆದಾರರ ದರ್ಜೆ** : As per Bid Document **5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:** 23.12.2024 ರಿಂದ 01.01.2025 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು** ಇ.ಎಂ.ಡಿ. **ಮೊತ್ತ:** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶಿಲ್ಕು ಹಿಂದಿರುಗಿಸಲಾಗುವುದಿಲ್ಲಾ) **7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 01.01.2024 ಸಾಯಂಕಾಲ 4:00 ಗಂಟೆವರೆಗೆ **8) ಟೆಂಡರ ತೆರೆಯುವ ದಿನಾಂಕ ತಾಂತ್ರೀಕ:** 03.01.2025 ಬೆಳ್ಳಿಗೆ 11:00 ನಂತರ **9) ಟೆಂಡರ ತೆರೆಯುವ ದಿನಾಂಕ ಆರ್ಥಿಕ:** 06.01.2025 ಬೆಳ್ಳಿಗೆ 11:00 ನಂತರ **10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ. 11 ಅಂತರಜಾಲ ತಾಣದ ವಿಳಾಸ:https://kppp.karnataka.gov.in

ಸೂಚನೆ :– ಟೆಂಡರರಿಗೆಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/–ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,
ಯಾದಗಿರ.

ವಾ.ಸಾ.ಸಂ.ಇ/ಯಾದಗಿರಿ/355/ಕೆ.ಎಸ್.ಎಂ.ಸಿ.ಎ/2024–25

ಸಿ ಟಿ ರವಿ ಬಿಡುಗಡೆ; ಡ್ರಾಮಾಕ್ಕೆ ಹೈ ತಡೆ

← ಮೊದಲಪುಟದಿಂದ

ರವಿ ಅವರು ವಿಧಾನ ಪರಿಷತ್ ಸದಸ್ಯರಾಗಿದ್ದು, ಅವರು ತನಿಖೆಗೆ ಲಭ್ಯವಾಗುವುದಿಲ್ಲ ಎಂಬ ಪರಿಸ್ಥಿತಿ ನಿರ್ಮಾಣ ವಾಗುವುದಿಲ್ಲ. ಬೆಳಗಾವಿಯ ಸುವರ್ಣಸೌಧದ ವಿಧಾನ ಪರಿಷತ್‌ನಲ್ಲಿ ನಡೆದಿರುವ ಘಟನೆಯ ಬಗ್ಗೆ ಸಭಾಪತಿಗಳು ಏನನ್ನೂ ಉಲ್ಲೇಖಿಸಿಲ್ಲ. ರವಿ ಅವರು ತಕ್ಷಣ ಬಿಡುಗಡೆ ಸಂಬಂಧಿತ ಮಧ್ಯಂತರ ಕೋರಿಕೆಗೆ ಅರ್ಹರಾಗಿದ್ದಾರೆ. ಹೀಗಾಗಿ, ಅವರನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ನ್ಯಾಯಾಲಯ ಆದೇಶಿಸಿದೆ.ರವಿ ಅವರನ್ನು ವಶಕ್ಕೆ ಪಡೆದಿರುವ ರೀತಿಯ ಬಗ್ಗೆ ಏನು ಹೇಳುತ್ತೀರಿ? ಗಂಭೀರ ಅಪರಾಧ ಪ್ರಕರಣಗಳಲ್ಲೂ ಪೊಲೀಸರು ವರ್ಷಗಟ್ಟಲೇ ಬಂಧಿಸುವು ದಿಲ್ಲ. ವ್ಯಕ್ತಿಯ ಸ್ವಾತಂತ್ರ್ಯ ಹರಣವಾದಾಗ ಅದನ್ನು ರಕ್ಷಿಸುವುದು ಹೈಕೋರ್ಟ್ ಕರ್ತವ್ಯ. ರವಿ ಅವರನ್ನು ವಶಕ್ಕೆ ಪಡೆದಿರುವ ರೀತಿ, ಅವರು ಗಾಯಗೊಂಡಿರುವ ರೀತಿಗೆ ಏನು ಉತ್ತರಿಸುತ್ತೀರಿ? ದೂರುದಾರರು ಮತ್ತು ಅರ್ಜಿದಾರರು ಇಬ್ಬರೂ ಜನಪ್ರತಿನಿಧಿಗಳು. ದುರದೃಷ್ಟಕರ ಬೆಳವಣಿಗೆ ಎಂದರೆ ಅವರಿಬ್ಬರೂ ನಮ್ಮ ನಾಯಕರು ಎಂದು ಪೀಠವು ಮೌಖಿಕವಾಗಿ ಬೇಸರ ವ್ಯಕ್ತಪಡಿಸಿದೆ.

ಯಾವುದೇ ಕಾರಣ ಹೇಳದೆ ಪೊಲೀಸರು ನನ್ನನ್ನು ರಾತ್ರಿಯಿಡಿ ಸುತ್ತಿಸಿದ್ದಾರೆ. ಸರಕಾರ ಸರ್ವಾಧಿಕಾರ ಧೋರಣೆ ಅನುಸರಿಸುತ್ತಿದೆ. ಇವರ ಸರ್ವಾಧಿಕಾರ ಬಹಳ ದಿನ ನಡೆಯಲ್ಲ. ಎಲ್ಲದಕ್ಕೂ ಅಂತ್ಯ ಇದ್ದೇ ಇರುತ್ತದೆ.

– **ಸಿ.ಟಿ.ರವಿ** ವಿಧಾನ ಪರಿಷತ್ ಸದಸ್ಯ

ಪರಿಷತ್ತಿನಲ್ಲಿ ನಡೆದ ಘಟನೆಯಿಂದ ನಾನು ಮಾನಸಿಕವಾಗಿ ಕುಗ್ಗಿ ಹೋಗಿದ್ದೇನೆ. ನಮ್ಮ ಪಕ್ಷದ ಮುಖಂಡ ರಾಹುಲ್ ಗಾಂಧಿ ವಿರುದ್ಧ ಮಾತನಾಡಿದ್ದಕ್ಕೆ ನಾನು ಕೊಲೆಗಾರ ಎಂದು ಹೇಳಿರುವೆ. ಆದರೆ ಚಿಂತಕರ ಚಾವಡಿಯಲ್ಲಿ ನನ್ನ ವಿರುದ್ಧ ಕೆಟ್ಟ ಪದ ಬಳಕೆ ಮಾಡಿದಾಗ ಕೆಲವರು ಧೃತರಾಷ್ಟ್ರನಂತೆ ವರ್ತನೆ ಮಾಡಿದರು.

– **ಲಕ್ಷ್ಮೀ ಹೆಬ್ಬಾಳ್ಕರ್** ಸಚಿವೆ

ಸಾಮಾನ್ಯವಾಗಿ ಹೆಣ್ಣುಮಕ್ಕಳು ಸುಳ್ಳು ಆರೋಪ ಮಾಡಿ ದೂರು ಕೊಡುವುದಿಲ್ಲ. ಒಂದು ವೇಳೆ ಆ ರೀತಿ ಪದ ಬಳಕೆ ಮಾಡದಿದ್ದರೆ ರವಿ ಬಂಧನ ಏಕೆ ಆಗುತ್ತಿತ್ತು? ಸಿ.ಟಿ.ರವಿ ಅವಾಚ್ಯ ಶಬ್ದ ಬಳಸಿರುವುದು ನಿಜ. ತಪ್ಪು ಮಾಡಿದವರು ಯಾವುದನ್ನೂ ಒಪ್ಪಿಕೊಳ್ಳುವುದಿಲ್ಲ.

– **ಸಿದ್ದರಾಮಯ್ಯ** ಮುಖ್ಯಮಂತ್ರಿ

ಸಿ.ಟಿ. ರವಿಯಿಂದ ಇಂತಹ ನಡೆ ಇದೇ ಮೊದಲಲ್ಲ. ಸಿದ್ದರಾಮಯ್ಯ, ಜಯಮಾಲಾ, ಸೇರಿದಂತೆ ನಮ್ಮ ನಾಯಕರ ಬಗ್ಗೆ ಈ ಹಿಂದೆ ಅನೇಕ ಬಾರಿ ಹೀನವಾಗಿ ಮಾತನಾಡಿದ್ದಾರೆ. ಅವರ ಹೇಳಿಕೆ ಹಾಗೂ ನಡತೆ ಸರಿಯೋ ತಪ್ಪೋ ಎನ್ನುವುದನ್ನು ಬಿಜೆಪಿಯವರು ನಿರ್ಧರಿಸಲಿ. ಪೊಲೀಸರು ತಪ್ಪು ಮಾಡಿದ್ದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳೋಣ.

– **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ಕಾಂಗ್ರೆಸ್ ಮಾನ, ಮರ್ಯಾದೆ ಇದ್ದರೆ ಸರಕಾರ ವಿಸರ್ಜಿಸಲಿ: ಆರ್.ಅಶೋಕ್

ದಾವಣಗೆರೆ: ಸಿ.ಟಿ. ರವಿಗೆ ಯಾವುದೇ ನೋಟೀಸ್ ನೀಡದೆ ಬಂಧಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಛೀಮಾರಿ ಹಾಕಿದ್ದು, ಈ ಕಾಂಗ್ರೆಸ್ ಸರಕಾರಕ್ಕೆ ಮಾನ, ಮರ್ಯಾದೆ ಇದ್ದರೆ ಸರಕಾರ ವಿಸರ್ಜಿಸಲಿ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಒತ್ತಾಯಿಸಿದರು.

ಸಿಟಿ ರವಿ ಅವರ ಯಾವ ಆರೋಪಕ್ಕೆ ಬಂಧನವಾಯಿತು ಎಂಬ ಬಗ್ಗೆ ಇದುವರೆಗೂ ನಮಗೆ ಸ್ಪಷ್ಟನೆ ಸಿಕ್ಕಿಲ್ಲ. ಈಗಾಗಲೇ ಕೋರ್ಟ್ ಸರಕಾರದ ನಡವಳಿಕೆಗೆ ಛೀಮಾರಿ ಹಾಕಿದೆ. ಸರಕಾರಕ್ಕೆ ಇದೊಂದು ಪ್ರಕರಣ ಕಪ್ಪು ಚುಕ್ಕೆ ಇದ್ದಂತೆ ಎಂದರು.

ಕಬಾಬ್ ಕೊಟ್ಟ ಸರಕಾರವಿದು: ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದು ಹೇಳಿದವರನ್ನು ಬಂಧಿಸಿಲ್ಲ, ಅವರಿಗೆ ಕೇವಲ ನೋಟಿಸ್ ಕೊಟ್ಟು ಬಂಧಿಸಿದ ಬಳಿಕ ಬಿರಿಯಾನಿ, ಕಬಾಬ್ ಕೊಟ್ಟ ಸರಕಾರವಿದು. ಆದರೆ ಸಿ.ಟಿ ರವಿಯವರು ಮಾಡಿದ ಯಾವ ತಪ್ಪಿಗೆ ಬಂಧಿಸಿದರು ಎಂಬುದರ ಬಗ್ಗೆ ಉತ್ತರ ಕೂಡ ಕೊಟ್ಟಿಲ್ಲ ಎಂದು ಅಶೋಕ್ ಆಕ್ರೋಶ ವ್ಯಕ್ತಪಡಿಸಿದರು. ಈಗಾಗಲೇ ಹುಬ್ಬಳ್ಳಿ ಪ್ರಕರಣ ವಾಪಸ್ ಪಡೆಯಲು ಮುಂದಾಗಿರುವ ಕಾಂಗ್ರೆಸ್ ಸರಕಾರ, ನಾಳೆ ಡಿ.ಜೆ ಹಳ್ಳಿ ಪ್ರಕರಣವನ್ನು ಕೂಡ ಹಿಂಪಡೆಯಲು ತಯಾರಿದೆ. ಸಿಟಿ ರವಿ ಒಬ್ಬ ಹಿಂದೂ ಕಾರ್ಯಕರ್ತ ಆದ್ದರಿಂದಲೇ ಅವರನ್ನು ಗುರಿ ಮಾಡಿ ಬಗ್ಗು ಬಡಿಯುವ ಕೆಲಸ ಮಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಿ.ಟಿ. ರವಿ ಮಾತನಾಡಿ, ಕಾಂಗ್ರೆಸ್ ಪೊಲೀಸ್ ಬಲ ದುರುಪಯೋಗ ಪಡಿಸಿಕೊಂಡು ನನ್ನನ್ನು ಕುಗ್ಗಿಸಲು ಪ್ರಯತ್ನಿಸುತ್ತಿದೆ. ಈಗಾಗಲೇ 35 ವರ್ಷಗಳ ಹಿಂದೆಯೇ ಇಂಥ ಬಲಪ್ರಯೋಗ ಅನುಭವಿಸಿ ಗಟ್ಟಿಯಾಗಿದ್ದೇನೆ. ಎಂಥ ಹೋರಾಟಕ್ಕೂ ನಾನು ಸಿದ್ಧ ಎಂದರು.ಸತ್ಯಮೇವ ಜಯತೆ ಎಂಬುದನ್ನಷ್ಟೇ ನಾನು ನಂಬಿದ್ದೇನೆ. ಅದರಂತೆ ಈಗ ಕೋರ್ಟ್ ನಿಂದ ನನಗೆ ಜಾಮೀನು ಸಿಕ್ಕಿದೆ. ಪಕ್ಷದ ನಾಯಕರು, ಕಾರ್ಯಕರ್ತರು, ಮುಖಂಡರ ಸ್ಪಂದನೆಗೆ ನಾನು ಅಭಾರಿಯಾಗಿದ್ದೇನೆ ಎಂದರು.

ಸಮ್ಮೇಳನ ಸ್ವಾರಸ್ಯ

ಬರ್ತಾರಾ ಸಿ.ಟಿ. ರವಿ?

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿಧಾನ ಪರಿಷತ್ ಸದಸ್ಯ, ಬಿಜೆಪಿ ಮುಖಂಡ ಸಿ.ಟಿ.ರವಿ ಅವರು ಭಾಗವಹಿಸ ಬೇಕಾಗಿದ್ದ ವಿಚಾರಗೋಷ್ಠಿಯೊಂದನ್ನು ಶನಿವಾರ ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ರವಿ ಅವರೂ ವಿಚಾರ ಮಂಡನೆ ಮಾಡುವ ಸಂಪನ್ಮೂಲ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದು, ಅವರ ಬಂಧನದಿಂದಾಗಿ ಇದೀಗ ಅವರ ಉಪಸ್ಥಿತಿ ಅನುಮಾನ ಎನ್ನಲಾಗಿದೆ. ಘಿ ಮಂಡ್ಯದಲ್ಲಿ ನಡೆಯುತ್ತಿರುವ ಸಮ್ಮೇಳನದಲ್ಲಿ ಸಾಹಿತ್ಯದಲ್ಲಿ ರಾಜಕೀಯ, ರಾಜಕೀಯದಲ್ಲಿ ಸಾಹಿತ್ಯ ಎಂಬ ಹೆಸರಿನ ಗೋಷ್ಠಿಯೊಂದನ್ನು ಇಟ್ಟುಕೊಳ್ಳಲಾಗಿದೆ. ಸಾಹಿತ್ಯ ಸಮ್ಮೇಳನದಲ್ಲಿ ಹೊಸ ವಿಷಯಗಳನ್ನು ಅಳವಡಿಸಿಕೊಳ್ಳುವ ಉದ್ದೇಶದಿಂದ ಇದನ್ನು ಇಟ್ಟುಕೊಳ್ಳಲಾಗಿದೆ. ಈ ಗೋಷ್ಠಿಯಲ್ಲಿ ರಾಜಕೀಯ ಚಿಂತಕರಾದ ಸಿ.ಟಿ ರವಿ ಅವರು ಸಾಹಿತ್ಯ ಕೇಂದ್ರಿತವಾದ ಸೈದ್ಧಾಂತಿಕ-ರಾಜಕೀಯ ನಿಲುವುಗಳು ಎಂಬ ವಿಷಯದಲ್ಲಿ ಭಾಷಣ ಮಾಡಬೇಕಿತ್ತು. ಈ ಗೋಷ್ಠಿಗೆ ಎಚ್.ಕೆ ಪಾಟೀಲ ಅಧ್ಯಕ್ಷರಾಗಿದ್ದು, ಬಿ.ಎಲ್ ಶಂಕರ್, ಕೆ.ಅನ್ನದಾನಿ, ರವೀಂದ್ರ ರೇಷ್ಮೆ ವಿಷಯ ಭಾಷಣ ಮಾಡಲಿದ್ದಾರೆ. ಶನಿವಾರ ಬೆಳಗ್ಗೆ 11 ಗಂಟೆಗೆ ಗೋಷ್ಠಿ ಇದೆ.ಜಾಮೀನು ದೊರೆತಿದ್ದು ರವಿ ಗೋಷ್ಠಿಗೆ ಹಾಜರಾಗಲೂ ಬಹುದು. ಆದರೆ ರವಿ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಸಾಕಷ್ಟು ಆಕ್ರೋಶ ಇದೆ. ಅದು ಸಮ್ಮೇಳನದ ಅಂಗಣದಲ್ಲೂ ಆಕ್ರೋಶ ಭುಗಿಲೇಳುವ ಸಾಧ್ಯತೆ ಇದೆ.

ಫೋಟೋ ಗ್ಯಾಲರಿ



ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ನೆಲ್ಲಿಕುಪ್ಪ ಎಂಬವರು ಪ್ರಧಾನಿ ನರೇಂದ್ರ ಮೋದಿ ಅವರ ಮುಖವಾಡ ಧರಿಸಿ ಸಮ್ಮೇಳನದಲ್ಲಿ ಜನಾಕರ್ಷಿಸಿದರು.

ಕಂಡಿದ್ದು , ಕೇಳಿದ್ದು

ಸಾಹಿತ್ಯ ಸಮ್ಮೇಳನವನ್ನು ನಗರದ ಆಚೆ ಆಯೋಜಿಸಿರುವುದು ಸರಿಯಲ್ಲ. ವಿಪರೀತ ಟ್ರಾಫಿಕ್ ಸಮಸ್ಯೆ. ಬಸ್ ಸ್ಟಾಂಡ್ ನಿಂದ ಇಲ್ಲಿಗೆ ಬರಲು, ಒಂದು ಗಂಟೆ ಬೇಕಾಯಿತು. ಪಾರ್ಕಿಂಗ್ ವ್ಯವಸ್ಥೆ ಕೂಡ ಸರಿಯಿಲ್ಲ. ಮತ್ತಷ್ಟು ಬದಲಾವಣೆಗಳ ಅಗತ್ಯವಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರು ಇದರ ಬಗ್ಗೆ ಗಮನಹರಿಸಬೇಕು

– **ಕೇಶವಮೂರ್ತಿ**, ಉದ್ಯೋಗಿ

ನಾನು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪುಸ್ತಕಗಳನ್ನು ಖರೀದಿಸುವ ಸಲುವಾಗಿ ಬಂದೆ. ಸಾಮಾನ್ಯವಾಗಿ ನಾನು ಹಣ ಇಟ್ಟುಕೊಳ್ಳುವುದಿಲ್ಲ. ಪುಸ್ತಕ ಖರೀದಿಸಿ ಫೋನ್ ಪೇ ಮೂಲಕ ಹಣ ಕಳುಹಿಸಲು ಹೋದರೆ ನೆಟ್ ವರ್ಕ್ ಜಾಮ್ ನಿಂದಾಗಿ ಹಣ ಹೋಗಲಿಲ್ಲ. ತುಂಬಾ ಬಾರಿ ಪ್ರಯತ್ನಿಸಿದೆ. ಈಗ ಪುಸ್ತಕ ಖರೀದಿ ಮಾಡದೆ ಮನೆಗೆ ಹೋಗುತ್ತಿದ್ದೇನೆ

-**ಸುಕನ್ಯ**, ಉಪನ್ಯಾಸಕಿ

ಸಮ್ಮೇಳನ ಸ್ವಾರಸ್ಯ

ಮಹಿಳೆಯರೇ ಹೆಚ್ಚು

ಸಾಹಿತ್ಯ ಸಮ್ಮೇಳನದಲ್ಲಿ ಮಹಿಳಾ ಮಣಿಗಳೆ ಹೆಚ್ಚಾಗಿ ಕಂಡು ಬಂದವು. ಉಚಿತ ಬಸ್ ಯಾನದಿಂದ ಮಹಿಳೆಯರ ದಂಡು ಕಂಡು ಬಂತು. ಸಾಂಸ್ಕೃತಿಕ ಕಾರ್ಯಕ್ರಮಕ್ಕಂತೂ ಕಿಕ್ಕಿರಿದು ಜನ ಬಂದಿದ್ದರು. ಮಂಡ್ಯದ ಸುತ್ತಮುತ್ತಲಿನ ಜನ ಭಾಗವಹಿಸಿದ್ದರಿಂದ ಸಾಹಿತ್ಯ ಸಮ್ಮೇಳನದಲ್ಲಿ ಹಬ್ಬದ ಮನೆ ಮಾಡಿತ್ತು.

ಬಳೆ, ಬೆಂಡೋಲೆ !

ಗೋಷ್ಠಿಗಳಲ್ಲಿ ಖಾಲಿ ಖಾಲಿ ಕುರ್ಚಿಗಳು. ಆದರೆ, ಸಮ್ಮೇಳನ ನಡೆಯುವ ಸುತ್ತಮುತ್ತ ಬಳೆ, ಬೆಂಡೋಲೆ ಖರೀದಿಗೆಲ್ಲ ಜನರು ಮುಗಿಬಿದ್ದಿದ್ದರು. ಜೇನುತುಪ್ಪ, ವೈನ್, ಕಿತ್ತಲೆ ಖರೀದಿಯ ಜತೆಗೆ ಕಡಿಮೆ ಬೆಲೆಗೆ ಅಂಗಿ, ಪ್ಯಾಂಟು ಮಾರಾಟದ ಭರಾಟೆ ಹೆಚ್ಚಿತ್ತು. ಇವುಗಳ ಜತೆಗೆ ಊಟ ಹಾಗೂ ತಿಂಡಿಯ ವ್ಯವಸ್ಥೆಗೊಳಿಸಿದ ಜಾಗ ಸುಮಾರು ಎರಡು ಕಿ.ಮೀ. ದೂರವಿದ್ದ ಕಾರಣ ಸಮ್ಮೇಳನ ನಡೆಯುವ ಆವರಣದಲ್ಲಿದ್ದ ತಿಂಡಿತಿನಿಸುಗಳ ಅಂಗಡಿಗಳಿಗೆ ಮಕ್ಕಳ ಸಮೇತ ದೊಡ್ಡವರೂ ಮುತ್ತಿಗೆ ಹಾಕಿ ತಿನ್ನಲು ಮುಂದಾದರು.

ರಂಗಭೂಮಿ, ಚಲನಚಿತ್ರ ಮತ್ತು ಕಿರುತೆರೆ ಕ್ಷೇತ್ರದ ಸವಾಲುಗಳು ಗೋಷ್ಠಿ | ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಆತಂಕ

ಪ್ಯಾನ್ ಇಂಡಿಯಾ ಚಂದನವನಕ್ಕೆ ಮಾರಕ

ಮಂಡ್ಯ: ಪ್ಯಾನ್ ಇಂಡಿಯಾ ಎಂಬುದು ಇಡೀ ಕನ್ನಡ ಚಿತ್ರೋದ್ಯಮವನ್ನು ಕೊಲ್ಲುತ್ತಿರುವ ಪರಿಕಲ್ಪನೆ. ಯಾರೋ ಒಂದೊಬ್ಬರ ಲಾಭಕ್ಕಾಗಿ ಇಡೀ ಚಲನಚಿತ್ರೋದ್ಯಮದವರು ಸಂಕಷ್ಟಕ್ಕೀಡಾಗಿದ್ದಾರೆ ಎಂದು ಚಲನಚಿತ್ರ ನಿರ್ಮಾಪಕ ಎಸ್.ವಿ ರಾಜೇಂದ್ರ ಸಿಂಗ್ ಬಾಬು ಕಳವಳ ವ್ಯಕ್ತಪಡಿಸಿದ್ದಾರೆ.

ಸಾಹಿತ್ಯ ಸಮ್ಮೇಳನದಲ್ಲಿ ರಂಗಭೂಮಿ, ಚಲನಚಿತ್ರ ಮತ್ತು ಕಿರುತೆರೆ ಕ್ಷೇತ್ರದ ಸವಾಲುಗಳು ಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕನ್ನಡ ಚಿತ್ರರಂಗವನ್ನು ಕಾಡುತ್ತಿರುವ ಸಮಸ್ಯೆಗಳು ಅಂದಿನಿಂದಲೂ ಇವೆ. ಅಂದು ಅದನ್ನು ಎದುರಿಸಲು ಎಲ್ಲರೂ ಒಟ್ಟಾಗುವಂತೆ ರಾಜುಕುಮಾರ್ ಅವರ ನಾಯಕತ್ವ ಇತ್ತು. ಇಂದು ಅಂಥವರು ಯಾರೂ ಇಲ್ಲ. ಹೀಗಾಗಿ ಪರಭಾಷಿಕರು ಮೆರೆಯುತ್ತಿದ್ದಾರೆ. ನಮ್ಮ ಬೆಂಗಳೂರಿನಲ್ಲಿ ಅನ್ಯ ಭಾಷೆ ಚಿತ್ರಗಳನ್ನು ಜನ 2000 ಟಿಕೆಟ್ ದರ ಕೊಟ್ಟು ನೋಡುತ್ತಿದ್ದಾರೆ. ಆದರೆ ನಮ್ಮ ಚಿತ್ರಗಳು ದಿವಾಳಿ ಯಾಗುತ್ತಿವೆ. ಇದಕ್ಕೆ ಅರ್ಥವಿದೆಯೇ ಎಂದು ಪ್ರಶ್ನಿಸಿದರು.

- **ಒಬ್ಬರ ಲಾಭಕ್ಕಾಗಿ ಇಡೀ ಕನ್ನಡ ಚಿತ್ರೋದ್ಯಮ ಸಂಕಷ್ಟದಲ್ಲಿ : ಬಾಬು ಕಳವಳ**
- **ಬೆಂಗಳೂರಿನಲ್ಲಿ ಪರಭಾಷಿಕರ ಚಿತ್ರಗಳಿಗೆ ಮನ್ನಣೆ, ಕನ್ನಡ ಚಿತ್ರಗಳ ಬಗ್ಗೆ ಅನಾದರ**
- **ಚಿತ್ರೋದ್ಯಮದ ಹಿತಾಸಕ್ತಿ ರಕ್ಷಣೆ ಬಗ್ಗೆ ನಟರಿಗೆ ಕಾಳಜಿ ಇಲ್ಲ : ನಿರ್ದೇಶಕನ ಅಸಮಾಧಾನ**

ಉದ್ಯಮದ ಬಗ್ಗೆ ನಟರಿಗೆ ಕಾಳಜಿ ಇಲ್ಲ: ಇಂದಿನ ನಟರು ಅವರದೇ ವ್ಯವಹಾರ, ವರ್ಚಸ್ಸು ಕಟ್ಟಿಕೊಳ್ಳುವುದರಲ್ಲಿ ಆಸಕ್ತರಾಗಿದ್ದಾರೆ. ಯಾರೂ ಉದ್ಯಮದ ಬೆಳವಣಿಗೆ ಯೋಚಿಸುತ್ತಿಲ್ಲ. ಪರಭಾಷಾ ಚಿತ್ರಗಳಿಗೆ ಹೆಚ್ಚುವರಿ ತೆರಿಗೆ ಹಾಕಬೇಕು. ಕನ್ನಡ ಚಿತ್ರಗಳಿಗೆ ಹೆಚ್ಚಿನ ವಿನಾಯಿತಿ ಕೊಡಿ ಎಂದು ಸಿಂಗ್ ಸರಕಾರಕ್ಕೆ ಮನವಿ ಮಾಡಿದರು.

ಬಂಗಾರದ ಮನುಷ್ಯದಂಥ ಚಿತ್ರವನ್ನು ಇವತ್ತು ಮಾಡುವ ಸಾಹಸ ಯಾರೂ ಮಾಡುವುದಿಲ್ಲ. ನೆಟ್ ಫ್ಲಿಕ್ಸ್ ನಂಥ ಒಟಿಟಿಗಳಲ್ಲಿ ಕನ್ನಡ ಚಿತ್ರಗಳಿಗೆ ಆದ್ಯತೆಯೇ ಇಲ್ಲ. ಅವುಗಳನ್ನು ನಾವು ಯಾಕೆ ಬಿಟ್ಟಿಯಾಗಿ ಒಳಗೆ ಬಿಟ್ಟುಕೊಳ್ಳಬೇಕು ಎಂದು ಅವರು ಪ್ರಶ್ನಿಸಿದರು. ಅವರ್‍ಯಾರಿಗೂ ಇಲ್ಲದ ಸೆನ್ಸಾರ್ ಕನ್ನಡ ಚಿತ್ರಗಳಿಗೆ ಮಾತ್ರ ಇದೆ. ಒಟಿಟಿ ಕಂಟೆಂಟ್‌ಗಳಲ್ಲಿ ಪ್ರಣಯದ ದೃಶ್ಯಗಳೇ ಇಪ್ಪತ್ತು ನಿಮಿಷ ಇರುತ್ತವೆ. ನಾವು ನಮ್ಮ ಅತ್ಯುತ್ತಮ ಸಂಸ್ಕೃತಿಯ ವಿಷಯಗಳನ್ನು ತೆಗೆದುಕೊಂಡು ಹೋದರೆ ಮನ್ನಣೆ ಇಲ್ಲವಾಗಿದೆ ಎಂದು ಬೇಸರಿಸಿದರು.

ನಿರ್ಮಾಪಕರ ಅನಾಸಕ್ತಿ: ಗಂಡದ ಗುಡಿ ಫಿಲಂ ಚಿತ್ರವನ್ನೇ ಇನ್ನೊಂದು ರೀತಿಯಿಂದ ಪುಷ್ಪ ಮಾಡಿದ್ದಾರೆ. ನನ್ನ ಮುತ್ತಿನಹಾರ ಚಿತ್ರವನ್ನೇ ತುಸು ಬದಲಾಯಿಸಿ ಅಮರನ್ ಚಿತ್ರ ಮಾಡಿದರು. ಅವರು ಮುನ್ನೂರು ಕೋಟಿ ಲಾಭ ಮಾಡಿಕೊಂಡರು. ನಾನು ನಷ್ಟ ಮಾಡಿಕೊಂಡೆ ಎಂದು ಬಾಬು ನುಡಿದರು. ವಸುಧೇಂದ್ರ ಅವರ ತೇಜೋ ತುಂಗಭದ್ರಾ, ಕಾದಂಬರಿ ಅದ್ಭುತವಾಗಿದೆ. ಅದನ್ನು ತೆಗೆದುಕೊಂಡು ಒಬ್ಬರು ನಿರ್ಮಾಪಕರಲ್ಲಿಗೆ ಹೋಗಿದ್ದೆ. ಅವರು ಕತೆಯನ್ನು ಕೇಳಿಸಿಕೊಳ್ಳಲೇ ತಯಾರಿರಲಿಲ್ಲ. ಇದು ಕನ್ನಡದ ಕತೆಗಳ ಇಂದಿನ ಸ್ಥಿತಿಯಾಗಿದೆ ಎಂದು ರಾಜೇಂದ್ರ ಸಿಂಗ್ ಬಾಬು ವಿಷಾದಿಸಿದರು.

ಒಟಿಟಿಯಿಂದ ಕನ್ನಡಕ್ಕೆ ಧಕ್ಕೆ: ಒಟಿಟಿಯಿಂದ ಮೊದಲ ಸವಾಲು ಕನ್ನಡ ಭಾಷೆಗೆ ಉಂಟಾಗಿದೆ. ಮಕ್ಕಳು ಬೇರೆ ಭಾಷೆಯ ಕಂಟೆಂಟ್ ಅನ್ನೇ ಬಯಸುತ್ತಿದ್ದಾರೆ. ಪ್ರಮುಖ ಒಟಿಟಿಗಳಲ್ಲಿ ಕನ್ನಡ ಭಾಷೆಗೆ ಪ್ರಾತಿನಿಧ್ಯವಿಲ್ಲ ಎಂದು 'ಚಲನಚಿತ್ರ ಎದುರಿಸುತ್ತಿರುವ ಒಟಿಟಿ ಸವಾಲು' ಕುರಿತು ಮಾತನಾಡಿದ ಡಿ. ಸತ್ಯಪ್ರಕಾಶ್ ಹೇಳಿದರು. ಕನ್ನಡದ ನಿರ್ದೇಶಕರಿಗೆ ಗಂಭೀರ ಸವಾಲು ಒದಗಿದೆ. ಕನ್ನಡದಲ್ಲಿ ಯೋಚಿಸುವ ಮನಸ್ಸುಗಳಿಗಾಗಿ ಸಿನಿಮಾ ಮಾಡಬೇಕೇ ಅಥವಾ ಬೇರೆ ಭಾಷೆಯವರನ್ನು ಗಮನದಲ್ಲಿಟ್ಟುಕೊಂಡೇ ಮಾಡಬೇಕೇ ಎಂಬುದು ಅರ್ಥವಾಗುತ್ತಿಲ್ಲ ಅವರು ನುಡಿದರು.

ಮಾರುಕಟ್ಟೆಯಲ್ಲಿ ಯಾವುದಕ್ಕೆ ರೀಚ್ ಇದೆಯೋ ಅದನ್ನೇ ಬಯಸುವವರು ಒಟಿಟಿಯಲ್ಲಿರುತ್ತಾರೆ. ಹೀಗಾಗಿ ಸೃಜನಶೀಲ ನಿರ್ದೇಶಕರಿಗೆ, ಸ್ವತಂತ್ರ ಚಿಂತಕರಿಗೆ ಅವಕಾಶ ಇಲ್ಲದಾಗಿದೆ. ಪ್ಯಾನ್ ಇಂಡಿಯಾ ಎಂದರೆ ಎಲ್ಲರನ್ನೂ ತಲುಪುವುದು ಎಂದರ್ಥ. ಆದರೆ ಎಲ್ಲರನ್ನೂ ತಲುಪುವುದು ಎಂಬುದಕ್ಕೆ ಅರ್ಥವಿಲ್ಲ. ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ ಎಂಬ ಹಾಡು ನಮ್ಮದು. ಕಲಾವಿದರ ಯೋಚನೆಗಳನ್ನು ಹೀಗೆ ಸಂಕುಚಿತ ಮಾಡಲಾಗುತ್ತಿದೆ. ಕೇವಲ ಸೆಕ್ಸ್, ಡ್ರಗ್ಸ್ ಮತ್ತು ಕ್ರೈಮ್ ಮಾತ್ರ ರೀಚ್ ಆಗುತ್ತಿದೆ. ಇದಕೆ ಉತ್ತರವಾಗಿ, ಕನ್ನಡದ ನಿರ್ದೇಶಕರು, ನಟರು, ನಿರ್ಮಾಪಕರು ಸಿಂಡಿಕೇಟ್ ಮಾಡಿಕೊಂಡು ಒಟಿಟಿಯವರ ಜೊತೆ ಹೋರಾಡಬೇಕಿದೆ ಎಂದರು.

ಧಾರಾವಾಹಿಗಳ ಪ್ರಭಾವ: ಕುಟುಂಬವನ್ನು ಒಂದೆಡೆ ಸೇರಿಸುವ ಶಕ್ತಿ ಕಿರುತೆರೆಗೆ, ಧಾರಾವಾಹಿಗಳಿಗೆ ಇತ್ತು. ಇಂದೂ ಅದು ಇದೆ. ಅದನ್ನು ಸಕಾರಾತ್ಮಕವಾಗಿ ಬಳಸಿಕೊಳ್ಳಬೇಕು ಎಂದು ನಟಿ ರಂಜಿನಿ ರಾಘವನ್ ನುಡಿದರು. ಅವರು 'ಕಿರುತೆರೆ ಸಾಧ್ಯತೆ ಮತ್ತು ಸವಾಲುಗಳು' ಕುರಿತು ಮಾತನಾಡಿದರು. ಟಿವಿ ಎಂದರೆ ಗೃಹಿಣಿಯಂತೆ. ಕುಟುಂಬದ ಎಲ್ಲರೂ ಆಕೆಯನ್ನು ಬಳಸಿಕೊಳ್ಳುತ್ತಾರೆ. ಆದರೆ ನಂತರ ಕಡೆಗಣಿಸುತ್ತಾರೆ ಅಥವಾ ದೂರುತ್ತಾರೆ. ನಾನು ನಟಿಸಿದ ಪುಟ್ಟಗೌರಿ ಮದುವೆ ಸೀರಿಯಲ್ ಅತಿ ಹೆಚ್ಚು ಟಿಆರ್‌ಪಿ ಗಳಿಸಿತ್ತು. ಆದರೆ ತುಸು ಗಂಭೀರವಾದ ಕನ್ನಡತಿ ಸೀರಿಯಲ್ ಅಷ್ಟು ಟಿಆರ್‌ಪಿ ಪಡೆಯಲಿಲ್ಲ. ಹೀಗೆ ಮನೋಧರ್ಮಗಳನ್ನು ನೋಡಿಕೊಂಡು ಅವರವರಿಗೆ ಬೇಕಾದ ಕಂಟೆಂಟ್ ಕೊಡಬೇಕಿದೆ ಎಂದರು.

ಜನರಿಂದ ಸರಿಯಾದ ಪ್ರತಿಕ್ರಿಯೆ. ಬೇಡಿಕೆ ಬಂದರೆ ಅಂಥ ಕಂಟೆಂಟ್ ಸೃಷ್ಟಿಯಾಗುತ್ತದೆ. ಹೊಸ ವೀಕ್ಷಕರು ಸೃಷ್ಟಿಯಾಗುತ್ತಿದ್ದಾರೆ. ಕನ್ನಡದ ಕಿರುತೆರೆ ಸನ್ನಿವೇಶ ಸಕಾರಾತ್ಮಕವಾಗಿದೆ. ಹೊಸಹೊಸ ವಿಷಯಗಳಿಗೆ ನಿರ್ಮಾಪಕ ನಿರ್ದೇಶಕರು ತೆರೆದುಕೊಳ್ಳಬೇಕು ಎಂದರು.

ಸಾಹಿತ್ಯ ಸಮ್ಮೇಳನದಲ್ಲಿ ರಂಗಭೂಮಿ, ಚಲನಚಿತ್ರ ಮತ್ತು ಕಿರುತೆರೆ ಕ್ಷೇತ್ರದ ಸವಾಲುಗಳು ಗೋಷ್ಠಿಯಲ್ಲಿ ಹಿರಿಯ ಚಲನಚಿತ್ರ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ ಹಾಗೂ ಇತರ ಗಣ್ಯರು ಪಾಲ್ಗೊಂಡರು.

ರಂಗಭೂಮಿ ಪ್ರಾಧಿಕಾರ ರಚಿಸಿ

ಗೋಷ್ಠಿಯ ಆಶಯ ಭಾಷಣ ಮಾಡಿದ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ ನಾಗರಾಜಮೂರ್ತಿ ಅವರು, ರಾಜಕಾರಣಿಗಳಷ್ಟು ಮನರಂಜನೆ ಕೊಡಲು ಇತ್ತೀಚೆಗೆ ನಾವು ಕಲಾವಿದರು ವಿಫಲರಾಗಿದ್ದೇವೆ. ಒಮ್ಮೆ ಇಡೀ ಭಾರತದ ರಂಗಭೂಮಿ, ಕನ್ನಡದ ರಂಗಭೂಮಿಯತ್ತ ತಿರುಗಿ ನೋಡುವಂತಾಗಿತ್ತು. ಅಂಥ ರಂಗಭೂಮಿಗೆ ಸರಕಾರ ಹಾಗೂ ಜನರ ಪ್ರೋತ್ಸಾಹ ಇನ್ನಷ್ಟು ಬೇಕಿದೆ. ರಂಗಭೂಮಿ ಅಭಿವೃದ್ಧಿಗಾಗಿಯೇ ಪ್ರಾಧಿಕಾರ ರಚಿಸಬೇಕಿದೆ ಎಂದರು. ರಂಗಭೂಮಿಯಿಂದ ಚಲನಚಿತ್ರಕ್ಕೆ ಹೋದವರು ರಂಗಭೂಮಿಯನ್ನು ಮರೆಯಬಾರದು. ರಂಗಾಯಣಗಳನ್ನು ಬಲಿಷ್ಠಗೊಳಿಸಬೇಕು. ವರ್ಷಕ್ಕೆ ಸುಮಾರು 300-400 ಕೋಟಿಯಷ್ಟು ಖರ್ಚು ರಾಜ್ಯದ ಗ್ರಾಮೀಣ ಜನತೆಯೇ ರಂಗಭೂಮಿಗಾಗಿ ಮಾಡುತ್ತಿದ್ದಾರೆ. ರಾಮ-ಕೃಷ್ಣರು ಜನರ ಮನದಲ್ಲಿ ಉಳಿದಿರುವುದು ಹಿಂದುತ್ವದಿಂದ ಅಲ್ಲ, ಬದಲಾಗಿ ರಂಗಭೂಮಿಯಿಂದ ಎಂದರು. ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ. ನರಸಿಂಹಲು ಗೋಷ್ಠಿಯಲ್ಲಿದ್ದರು. ಕನ್ನಡ ಚಿತ್ರಗಳಿಗೆ ಪ್ರೇಕ್ಷಕರು ಯಾಕೆ ಬರುತ್ತಿಲ್ಲ ಎಂಬುದನ್ನು ಗಂಭೀರವಾಗಿ ಎಲ್ಲರೂ ಸೇರಿ ಅಧ್ಯಯನ ಮಾಡಿ ಪರಿಹಾರ ಕಂಡುಕೊಳ್ಳಬೇಕಿದೆ ಎಂದರು. ಹಿರಿಯ ಪತ್ರಕರ್ತ, ವಿಮರ್ಶಕ ಎನ್.ಎಸ್.ಶ್ರೀಧರಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

ಭಾಷಣಗಾರರ ಸಿಟ್ಟು

ಚಲನಚಿತ್ರ ಕುರಿತ ಗೋಷ್ಠಿಯನ್ನು ಪ್ರಧಾನ ವೇದಿಕೆಯಿಂದ ದೂರ ಇಟ್ಟಿರುವುದಕ್ಕೆ ಸಂಪನ್ಮೂಲ ವ್ಯಕ್ತಿಗಳಿಂದ ಆಕ್ರೋಶ ವ್ಯಕ್ತವಾಯಿತು. ನಮ್ಮನ್ನು ಕೇಳುವವರೇ ಇರಲಿಲ್ಲ. ಯಾರು ನೀವು ಎಂದು ಸೆಕ್ಯುರಿಟಿ ಪೊಲೀಸರು ತಡೆದು ಒಳಗೆ ಬಿಡಲಿಲ್ಲ ಎಂದು ರಾಜೇಂದ್ರ ಸಿಂಗ್ ಆಕ್ಷೇಪಿಸಿದರು. ಗೋಷ್ಠಿಯ ಆಯೋಜಕರು ಸಂಪನ್ಮೂಲ ವ್ಯಕ್ತಿಗಳಿಗೆ ಬ್ಯಾಡ್ಜ್ ಒದಗಿಸಬೇಕಿತ್ತು. ಊಟ ಇಲ್ಲ, ಗತಿಗೆಟ್ಟವರಂತೆ ಸ್ಟೇಜಿಗೆ ಬಂದಿದ್ದೇವೆ. ಇಂಥ ಆತಿಥ್ಯದಿಂದ ಮಂಡ್ಯಕ್ಕೆ ಕೆಟ್ಟ ಹೆಸರು ಬರುವ ಸಾಧ್ಯತೆ ಇದೆ ಎಂದು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ ನಾಗರಾಜಮೂರ್ತಿ ಆಕ್ರೋಶಿಸಿದರು.

ಹುಸಿಯಾದ ಸಂಘಟಕರ ಭರವಸೆ | ಶೌಚಾಲಯ ಸಮಸ್ಯೆ | ಮಹಿಳೆಯರಿಗೆ ಕಷ್ಟ

ಹರಿದುಬಂತು ಜನಸಾಗರ, ಅವ್ಯವಸ್ಥೆಯ ಆಗರ

ಮಂಡ್ಯ: ಕನ್ನಡ ಸಾಹಿತ್ಯ ಸಮ್ಮೇಳನ ಎಲ್ಲ ರೀತಿಯಿಂದಲೂ ಸುವ್ಯವಸ್ಥಿತವಾಗಿ ನಡೆಯಲಿದೆ ಎಂದು ಉಸ್ತುವಾರಿ ಸಚಿವರು ಹಾಗೂ ಸಾಹಿತ್ಯ ಪರಿಷತ್ ಅಧ್ಯಕ್ಷರು ಭರವಸೆ ಕೊಟ್ಟಿದ್ದರು. ಆದರೆ ಈ ಭರವಸೆಗಳೆಲ್ಲ ಶುಕ್ರವಾರ ಮಧ್ಯಾಹ್ನ ಹೊತ್ತಿಗೆ ಹುಸಿಯಾಗಿ ಸಾಹಿತ್ಯಾಸಕ್ತರಲ್ಲಿ ಬೇಸರ ಉಂಟಾಯಿತು.

ಗಣ್ಯರ ಆಗಮನವೇ ಪ್ರತಿನಿಧಿಗಳ ನೆಮ್ಮದಿಗೆ ಮೊದಲ ತೊಂದರೆ ಕೊಟ್ಟಿತು.. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇತರ ವಿಐಪಿಗಳ ಸುರಕ್ಷತೆಗಾಗಿ ಮೊಬೈಲ್ ಜಾಮರ್ ಅಳವಡಿಸಲಾಗಿತ್ತು. ಹೀಗಾಗಿ ಸಮ್ಮೇಳನ ವೇದಿಕೆಯ ಆಸುಪಾಸಿನಲ್ಲಿ ಎಲ್ಲೂ ಯಾವ ಮೊಬೈಲ್ ನೆಟ್‌ವರ್ಕ್ ಕೂಡ ಕೆಲಸ ಮಾಡಲಿಲ್ಲ. ಇದರಿಂದ ಮಳಿಗೆಗಳಲ್ಲಿ ಹಾಗೂ ಪುಸ್ತಕ ಮಳಿಗೆಗಳಲ್ಲಿ ಇದ್ದವರು ಪರದಾಡಿದರು. ಯುಪಿಐ ವ್ಯವಹಾರ ನಡೆಸುವವರೇ ಅನೇಕರಾದ್ದರಿಂದ, ಪುಸ್ತಕ ಬಯಸಿ ಬಂದ ಸಾವಿರಾರು ಮಂದಿ ಅವುಗಳನ್ನು ಕೊಳ್ಳಲಾಗದೆ ಬರಿಗೈಯಲ್ಲಿ ವಾಪಸ್ ಹೋಗುವುದನ್ನು ಮಾರಾಟಗಾರರು ಅಸಹಾಯಕರಾಗಿ ನೋಡುವಂತಾಯಿತು.

ಹಳಿತಪ್ಪಿದ ಸಮಯಪಾಲನೆ: ಸಮ್ಮೇಳನದ ಧ್ವಜಾರೋಹಣ ಹಾಗೂ ಮೆರವಣಿಗೆಯಿಂದಲೇ ಸಮಯಪಾಲನೆಯ ಹಳಿ ತಪ್ಪಿತು. 10.30ಕ್ಕೆ ಶುರುವಾಗಬೇಕಿದ್ದ ಸಮಾರಂಭ 12 ಗಂಟೆಯಾದರೂ ಆರಂಭವಾಗಲಿಲ್ಲ. ಇದರಿಂದಾಗಿ ಸಮ್ಮೇಳನಾಧ್ಯಕ್ಷರೂ ತಮ್ಮ ಭಾಷಣವನ್ನು ಮೊಟಕು ಮಾಡಬೇಕಾಯಿತು. ತಮ್ಮ ಭಾಷಣದ ಪ್ರಮುಖ ಅಂಶಗಳನ್ನು ಅವರು ಚುಟುಕಾಗಿ ಪ್ರಸ್ತಾವಿಸಿ ಮುಗಿಸಿದರು. ನಂತರ ಎಲ್ಲ ಗೋಷ್ಠಿಗಳೂ ಅದಕ್ಕನುಗುಣವಾಗಿ ಚಲಿಸಲಾರಂಭಿಸಿದವು. ಸಮಾನಾಂತರ ವೇದಿಕೆಗಳ ಗೋಷ್ಠಿಗಳಿಗೆ ಕೂಡ ಈ ಚಾಳಿ ದಾಟಿತು. ಕೆಲವು ಗೋಷ್ಠಿಗಳ ಭಾಷಣಕಾರರು ತಮ್ಮ ವಿಷಯವನ್ನು ಪ್ರಧಾನ ವೇದಿಕೆಯಲ್ಲಿ ಇಡಬೇಕಾಗಿತ್ತು ಎಂದು ಗೊಣಗಿಕೊಂಡರು.

ಕೊಳೆತು ನಾರತೊಡಗಿದ ಶೌಚಾಲಯಗಳು: ಮಧ್ಯಾಹ್ನದ ಹೊತ್ತಿಗಾಗಲೇ ಶೌಚಾಲಯಗಳು ಕೊಳೆತು ನಾರತೊಡಗಿದ್ದವು. ಮಂಡ್ಯ ನಗರಕ್ಕೆ ದೂರದಲ್ಲಿರುವ ಜಾಗಕ್ಕೆ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲಾಗಿತ್ತು. ಆದರೆ ಅದು ಯಾವುದಕ್ಕೂ ಸಾಲದೇ ಹೋಯಿತು. ವಿಐಪಿ ಕೌಂಟರ್‌ಗಳಲ್ಲಿದ್ದ ಶೌಚಾಲಯಗಳು ಕೂಡ ಅವ್ಯವಸ್ಥೆಯಿಂದ ಕೂಡಿದ್ದವು. ಫೈಬರ್ ಶೌಚಾಲಯಗಳ ಚಿಲಕಗಳು ಸರಿಯಾಗಿ ಕೆಲಸ ಮಾಡಲಿಲ್ಲ. ಹೀಗಾಗಿ ಇದರೊಳಗೆ ಹೋದ ಮಹಿಳೆಯರು ಜೀವ ಕೈಯಲ್ಲಿ ಹಿಡಿದುಕೊಂಡು ಕೆಲಸ ಮುಗಿಸಿಕೊಳ್ಳಬೇಕಾಯಿತು. ಪುರುಷರು ತುಸು ದೂರದಲ್ಲಿದ್ದ ಕಬ್ಬಿನ ಗದ್ದೆಗಳಿಗೆ ಹೋಗಿ ನಿಸರ್ಗದ ಕರೆ ಮುಗಿಸಿ ಬಂದರು.

ಸಮಾನಾಂತರ ವೇದಿಕೆ ಅವ್ಯವಸ್ಥೆ: ಸಮಾನಾಂತರ ವೇದಿಕೆಗಳು ಪ್ರಧಾನ ವೇದಿಕೆಯಿಂದ ದೂರದಲ್ಲಿ ಹಾಗೂ ಒಳಗೆಲ್ಲೋ ಇದ್ದವು. ಅವು ಅಲ್ಲಿದೆ ಎಂಬುದು ಅಲ್ಲಿನ ಭಾಷಣಕಾರರಿಗೇ ಗೊತ್ತಾಗಲಿಲ್ಲ. ಕೇಳುಗರಿಗೂ ತಿಳಿಸುವ ವ್ಯವಸ್ಥೆ ಇರಲಿಲ್ಲ. ಅದನ್ನು ಸೂಚಿಸುವ ಫಲಕಗಳೂ ಇರಲಿಲ್ಲ. ಈ ಕುರಿತು ಸಂಪನ್ಮೂಲ ವ್ಯಕ್ತಿಯಾಗಿದ್ದ ಹಿರಿಯ ಚಿತ್ರ ನಿರ್ಮಾಪಕ ರಾಜೇಂದ್ರ ಸಿಂಗ್ ಬಾಬು ಅವರೇ ವೇದಿಕೆಯ ಮೇಲಿನಿಂದಲೇ ಅಸಮಾಧಾನ ವ್ಯಕ್ತಪಡಿಸಿದರು. ಹೀಗಾಗಿ ಈ ಗೋಷ್ಠಿಗಳಿಗೆ ಜನರೂ ಬರಲಿಲ್ಲ.

ಸಮ್ಮೇಳನದ ತಾಣ ನಗರದಿಂದ ದೂರದಲ್ಲಿದೆ. ಸರಿಯಾದ ಪಾರ್ಕಿಂಗ್ ವ್ಯವಸ್ಥೆಯಿಲ್ಲ ಎಂದು ಕೆಲವರು ಗೊಣಗಿಕೊಂಡಿದ್ದು ಕೂಡ ಕೇಳಿಸಿತು.

ಸಾಹಿತ್ಯ ಸಮ್ಮೇಳನದ ಅಂಗವಾಗಿ ಶುಕ್ರವಾರ ಸಂಜೆ ರಸಿಕರ ಮನಸೆಳೆದ ಸಾಂಸ್ಕೃತಿಕ ಕಾರ್ಯಕ್ರಮ. ಖ್ಯಾತ ಕಲಾವಿದ ಸಾಧು ಕೋಕಿಲ ಮತ್ತು ಗಾಯಕ ರಾಜೇಶ್ ಕೃಷ್ಣನ್ ತಮ್ಮ ಗಾಯನದಿಂದ ಜನರನ್ನು ರಂಜಿಸಿದರು.

ಇಂದಿನ ಕಾರ್ಯಕ್ರಮ

ಇಂದು ಸಮಾನಾಂತರ ವೇದಿಕೆ – 1ರಲ್ಲಿ ನಡೆಯುವ ಕಾರ್ಯಕ್ರಮಗಳ ವಿವರ

ಗೋಷ್ಠಿಗಳು :

ಬೆಳಗ್ಗೆ 9.30ರಿಂದ 11 ಗಂಟೆಯವರೆಗೆ ಡಿ.21 ರಂದು ಸಮಾನಂತರ ವೇದಿಕೆ – 1ರಲ್ಲಿ ಸೃಜನಶೀಲತೆ – ವಿದ್ಯುನ್ಮಾನ ಮಾಧ್ಯಮಗಳ ಸವಾಲುಗಳು ವಿಷಯದ ಬಗ್ಗೆ ಗೋಷ್ಠಿ – 3 ನಡೆಯಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ರಾಂತ ಕುಲಪತಿಗಳು ಡಾ ಚಿದಾನಂದಗೌಡ ಅವರ ವಹಿಸಲಿದ್ದು, ಹಿರಿಯ ಮಾಧ್ಯಮ ತಜ್ಞ ಜಿ ಎನ್ ಮೋಹನ್ ಅವರು ಆಶಯ ನುಡಿ ನುಡಿಯಲಿದ್ದಾರೆ.

ಕೃತಕ ಬುದ್ಧಿಮತ್ತೆ ಹಾಗೂ ಚಾಟ್ ಜಿ ಪಿ ಟಿ ಸೃಷ್ಟಿಸಿರುವ ಸವಾಲುಗಳು – ವಿಷಯದ ಬಗ್ಗೆ ಮಧು ವೈ.ಎನ್ ಅವರು, ಕನ್ನಡ ಸಾಹಿತ್ಯ ಮತ್ತು ಸಾಮಾಜಿಕ ಜಾಲತಾಣಗಳು – ಓಂ ಶಿವಪ್ರಕಾಶ್, ತಂತ್ರಜ್ಞಾನ ಯುಗದಲ್ಲಿ ಕನ್ನಡದ ಅನುಸಂಧಾನ – ಶಂಕರ ಸಿಹಿಮೊಗ್ಗೆ ಅವರು ವಿಷಯ ಮಂಡನೆ ಮಾಡಲಿದ್ದಾರೆ.

ಗೋಷ್ಠಿ – 4: ಬೆಳಗ್ಗೆ 11 ರಿಂದ 12:30 ಗಂಟೆಯವರೆಗೆ ದಲಿತ ಸಾಹಿತ್ಯದ ನೆಲೆಗಳು ವಿಷಯದ ಬಗ್ಗೆ ಗೋಷ್ಠಿ – 4 ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಸಾಹಿತಿಗಳು ಮೂಡ್ನಕೂಡು ಚಿನ್ನಸ್ವಾಮಿ ಅವರು ವಹಿಸಲಿದ್ದು, ದಲಿತ ಸಂಘಟನೆಗಳ ಅಸ್ಮಿತೆ ವಿಷಯದ ಬಗ್ಗೆ – ಡಾ ಎಂ ವೆಂಕಟಸ್ವಾಮಿ, ದಲಿತ ಬಂಡಾಯ ಸಾಹಿತ್ಯ ಐದು ದಶಕಗಳ ಸಾಧಕ-ಬಾಧಕಗಳು – ಡಾ. ವೈ.ಬಿ. ಹಿಮ್ಮಡಿ, ಕನ್ನಡ ಸಂವರ್ಧನೆಯಲ್ಲಿ ತಳ ಸಮುದಾಯಗಳ ಪಾತ್ರ – ಪ್ರೊ. ಚೆಲುವರಾಜು, ದಲಿತ ಸಾಹಿತ್ಯ ಚಳವಳಿ ಮತ್ತು ಮಹಿಳೆ – ಡಾ. ಜಯದೇವಿ ಗಾಯಕವಾಡ ಅವರು ವಿಷಯ ಮಂಡನೆ ಮಾಡಲಿದ್ದಾರೆ.

ಗೋಷ್ಠಿ – 5: ಮಧ್ಯಾಹ್ನ 12:30 ರಿಂದ 2 ಗಂಟೆಯವರೆಗೆ ಕರ್ನಾಟಕ – ಪ್ರಕೃತಿ ವಿಕೋಪದ ಆತಂಕಗಳು ವಿಷಯದ ಬಗ್ಗೆ ಗೋಷ್ಠಿ 5 ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ.ಅ.ನಾ. ಯಲ್ಲಪ್ಪರೆಡ್ಡಿ ಹಿರಿಯ ಪರಿಸರವಾದಿಗಳು, ಆಶಯ ನುಡಿ : ಡಾ. ವಿ.ಎಸ್. ಪ್ರಕಾಶ್ ಪರಿಸರ ತಜ್ಞರು ನೆರವೇರಿಸಲಿದ್ದಾರೆ.

ಕರ್ನಾಟಕದಲ್ಲಿನ ಭೂಕುಸಿತ ಪ್ರಕರಣಗಳು – ಡಾ. ಮಾರುತಿ, ಅಕಾಲಿಕ ಮಳೆ ಮತ್ತು ವಾಯುಭಾರ ಕುಸಿತ ಪ್ರಕರಣಗಳು ಡಾ. ಕೇಶವ ಕೂರ್ಸೆ, ಹವಾಮಾನದಲ್ಲಿ ಆಗುತ್ತಿರುವ ಬದಲಾವಣೆಗಳು – ಡಾ. ಟಿ.ಆರ್. ಅನಂತರಾಮು, ಪ್ರಕೃತಿ ವಿಕೋಪಗಳು – ಡಾ. ಜಿ.ಎಸ್. ಶ್ರೀನಿವಾಸರೆಡ್ಡಿ ಅವರು ವಿಷಯ ಮಂಡನೆ ಮಾಡಲಿದ್ದಾರೆ.

ಗೋಷ್ಠಿ – 6 : ಮಧ್ಯಾಹ್ನ 2 ರಿಂದ 4 ಗಂಟೆಯವರೆಗೆ ಶತಮಾನೋತ್ಸವ ವರ್ಷದ ಕನ್ನಡ ಲೇಖಕರು ವಿಷಯದ ಬಗ್ಗೆ ಗೋಷ್ಠಿ – 6 ನಡೆಯಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಮಲ್ಲೇಪುರಂ ಜಿ. ವೆಂಕಟೇಶ ಹಿರಿಯ ವಿದ್ವಾಂಸರು ವಹಿಸಲಿದ್ದು, ಎಲ್.ಎಸ್. ಶೇಷಗಿರಿರಾವ್ ವಿಷಯದ ಬಗ್ಗೆ – ಡಾ. ವನಮಾಲ ವಿಶ್ವನಾಥ, ನಿರಂಜನ – ಮಲ್ಲಿಕಾರ್ಜುನ ಹೆಗ್ಗಳಿಗೆ, ಕು.ಶಿ. ಹರಿದಾಸಭಟ್ಟ – ಪ್ರೊ. ಚಿತ್ರಪಾಡಿ ಉಪೇಂದ್ರ ಸೋಮಯಾಜಿ, ಶಾಂತರಸ – ಡಾ. ಅಕ್ಬರ್ ಕಾಲಿಮಿರ್ಚಿ, ಜಿ.ಎಸ್. ಆಮೂರ – ಶ್ಯಾಮಸುಂದರ ಬಿದರಕುಂದಿ, ವಿಜಯ ಭಾಸ್ಕರ್ – ಎಸ್.ಆರ್. ರಾಮಕೃಷ್ಣ ಅವರು ವಿಷಯ ಮಂಡನೆ ಮಾಡಲಿದ್ದಾರೆ.

ಗೋಷ್ಠಿ – 7 : ಸಂಜೆ 4 ರಿಂದ 6:00 ಗಂಟೆಯವರೆಗೆ ಕವಿ ಗೋಷ್ಠಿ – 3ರ ಗೋಷ್ಠಿ – 7 ನಡೆಯಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಸಾಹಿತಿ ಡಾ.ಪ್ರದೀಪ್ ಕುಮಾರ್ ಹೆಬ್ರಿ ಅವರು ವಹಿಸಲಿದ್ದು, ಸಾಹಿತಿ ಡಾ ರವಿ ಬೆಸಗರಹಳ್ಳಿ ಅವರು ಆಶಯ ನುಡಿ ನುಡಿಯಲಿದ್ದಾರೆ. ಕವಿಗಳಾದ ಡಾ. ಹಾ.ಮಾ. ನಾಗಾರ್ಜುನ, ಡಾ. ಶರೀಫ್ ಹಸಮಕಲ್, ಸಂತೋಷ ಎಸ್. ಕರಹರಿ, ನಾಗೇಶ ಜೆ. ನಾಯಕ, ರವೀಂದ್ರ ಸಿಂಗ್, ವನಜಾ ಸುರೇಶ್, ರೇವಣಸಿದ್ದಪ್ಪ ಜಿ.ಆರ್, ಸುಬ್ರಾಯ ಬಿದ್ರಮನೆ, ಡಾ. ಸೋಮಲಿಂಗಪ್ಪ ಚಿಕ್ಕಳ್ಳವರ, ಡಾ. ಎಂ.ಎಸ್. ರಘುನಂದನ, ರಮ್ಯ ಕೆ.ಜಿ, ಯೋಗೀಶ್ ಲಮಾಣಿ, ಗಂಗಾಧರ ಪತ್ತಾರ, ಚಂದಕಚರ್ಲ ರಮೇಶ್ ಬಾಬು, ಚಲಪತಿಗೌಡ ಪಾ.ಮಂ, ಶಿಲ್ಪಾ ರಮೇಶ ಕುರಿ, ಬಾಬು ಕೊರಗ (ಕೊರಗ ಭಾಷೆ), ಸದಾನಂದ ಮುಂಡಾಜೆ, ಡಾ. ಶ್ರೀಶೈಲ್ ಎನ್. ಪೂಜಾರಿ, ರುದ್ರಮ್ಮ ಅಮರೇಶ, ಎನ್. ಬಸವರಾಜು, ದೋ.ಚಿ. ಗೌಡ, ರವಿಕುಮಾರ ಎನ್, ಡಾ. ವಸಂತ ಎಸ್. ಬಾಂದೇಕರ (ಕೊಂಕಣಿ ಭಾಷೆ), ಶರಣಯ್ಯ ಹಿರೇಮಠ ಅವರು ಕವಿಗೋಷ್ಠಿ ನಡೆಸಲಿದ್ದಾರೆ.

ಕಾರ್ಯಕ್ರಮದ ನಿರ್ವಹಣೆ – ಮಂಜುಳಾ ಗುಪ್ತ, ಸ್ವಾಗತ – ಡಾ ಸಿ ರಾಮಲಿಂಗೇಶ್ವರ (ಸಿಸಿರಾ), ನಿರೂಪಣೆ – ಪ್ರಭಾ ನಾರಾಯಣಗೌಡ, ವಂದನಾರ್ಪಣೆ – ಸಿಡದರಗಲ್ಲು ರಂಗನಾಥ ಅವರು ನೆರವೇರಿಸಲಿದ್ದಾರೆ.

ವಿಶ್ವವಾಣಿ ಮಳಿಗೆ ಸಮ್ಮೇಳನದಲ್ಲಿ ಸಾಹಿತ್ಯಾಸಕ್ತರನ್ನು ಸೆಳೆಯುತ್ತಿರುವ ವಿಶ್ವವಾಣಿ ಪತ್ರಿಕೆಯ ಮಳಿಗೆಯಲ್ಲಿ ಅಂಕಣಕಾರ ಕಿರಣ್ ಉಪಾಧ್ಯಾಯ ಅವರು ಪುಸ್ತಕಪ್ರೇಮಿಗಳಿಗೆ ತಮ್ಮ ಕೃತಿಗಳನ್ನು ನೀಡಿದರು. ವಿಶ್ವವಾಣಿಯ ಸಿಬ್ಬಂದಿ ಜತೆಯಲ್ಲಿದ್ದಾರೆ.

ಮಂಡ್ಯ ಸಾಹಿತ್ಯ ಸಮ್ಮೇಳನದ ಉದ್ಘಾಟನೆ ಹಿನ್ನೆಲೆಯಲ್ಲಿ ಸಕ್ಕರೆ ನಗರಿಯಲ್ಲಿ ನಡೆದ ವೈಭವದ ಶೋಭಾಯಾತ್ರೆಯಲ್ಲಿ ಪಾಲ್ಗೊಂಡ ಜಾನಪದ ಕಲಾತಂಡಗಳು ನಾಡಿನ ಶ್ರೀಮಂತ ಕಲಾಪ್ರಪಂಚವನ್ನು ಜನತೆಗೆ ತೆರೆದಿಟ್ಟವು.

ಅನುದಿನವೂ ವಿರಾಮಕ್ಕೆ ಒಂದು ನೆಪ

ಆರಾಮ

ವಿಶ್ವವಾಣಿ
ಬೆಂಗಳೂರು ಶನಿವಾರ 21 | 12 | 2024
@vishwavaninews

ಚಿತ್ತ ವಿಹಾರ

ಹರುಷಕ್ಕಿದೇ ದಾರಿ..

ಸಂವೇದನಾಶೀಲರೇ ಹಾಗೆ. ಸಂಕಷ್ಟದಲ್ಲಿದ್ದವರನ್ನು ಕಂಡು, ಅವರ ಕಣ್ಣೀರಿಗೆ ಕರಗಿ, ಕೆಲವು ಬಾರಿ ಕೆಲವರ ಕಣ್ಣೀರನ್ನು ಕಂಡು, ಬೀದಿಯಲ್ಲಿರುವ ಮಾರಿಯನ್ನು ಮನೆಯಲ್ಲಿ ತಂದುಕೊಂಡು ನೋವನ್ನು ಅನುಭವಿಸುತ್ತಾರೆ. ತನ್ನ ತಾ ಸುಡುತ ಬೆಳಕು ಕೊಡುವ ದೀಪದಂತೆ ಮತ್ತೊಬ್ಬರ ಕಷ್ಟಕ್ಕೆ ನೆರವಾಗಲು ತಮಗೆ ಕಷ್ಟವಾದರೂ ಸಹಿಸಿಕೊಂಡು ಸಹಾಯಕ್ಕೆ ಮುಂದಾಗುತ್ತಾರೆ.

ಸಂತರೊಬ್ಬರು ನೀರಲ್ಲಿ ಬಿದ್ದ ಚೇಳನ್ನು ಸುರಕ್ಷಿತವಾಗಿ ದಡ ತಲುಪಿಸಬೇಕೆಂದು ಪ್ರಯತ್ನಿಸುತ್ತಿರುವಾಗ ಆ ಚೇಳು ಮುಟ್ಟಿದಾಗಲೊಮ್ಮೆ ಸಂತರನ್ನು ಕುಟುಕುತ್ತದೆ. ಕುಟುಕುವ ಗುಣ ಚೇಳಿನದಾಗಿದೆ. ಅದು ಕುಟುಕದೆಯೇ ಬಿಟ್ಟಿತೇ? ಚೇಳು ಕುಟುಕುವುದರಿಂದ ನೋವಾಗುತ್ತದೆ ಎಂದು ಗೊತ್ತಿದ್ದರೂ, ಪ್ರಸ್ತುತ ಸಂದರ್ಭದಲ್ಲಿ ಅದನ್ನು ಮುಟ್ಟುವ ಸಾಹಸ ಮಾಡದೇ ದಡಕ್ಕೆ ತಲುಪಿಸದಿದ್ದರೆ ಅನ್ಯಾಯವಾಗಿ ಸತ್ತು ಹೋಗುತ್ತದೆ. ಈ ರೀತಿಯಲ್ಲಿ ಕುಟುಕುವ ಜನರಿಗೆ ಸಹಾಯ ಮಾಡುವ ಸಂದರ್ಭದಲ್ಲಾಗುವ ನೋವನ್ನು ಸಹಿಸಿಕೊಳ್ಳುವ ಶಕ್ತಿ ಹಾಗೂ ತಾಳ್ಮೆಯೊಂದಿದ್ದರೆ ಒಂದು ಜೀವವನ್ನು ಉಳಿಸಿದೆನೆಂಬ ಸಂತೃಪ್ತಿ ಸಿಗಬಹುದಲ್ಲವೇ? ಕೆಲವೊಮ್ಮೆ ಭಾವುಕತೆಯಿಂದ ಕೈಗೊಂಡ ನಿರ್ಧಾರಗಳು ಬೆಳ್ಳಗಿರುವುದೆಲ್ಲ ಹಾಲೆಂದು ನಂಬುವಂತೆ ಮಾಡುತ್ತದೆ. ಈ ಅತಿಯಾದ ನಂಬಿಕೆ ಹಾಗೂ ಒಳ್ಳೆಯತನವೇ ಇಂದಿನ ಕಾಲಘಟ್ಟದಲ್ಲಿ ಇಲ್ಲದ ಸಂಕಷ್ಟಗಳಿಗೆ ದಾರಿ ಮಾಡಿಕೊಡುತ್ತದೆ. ಆದರೆ ಒಂದಂತು ಸತ. ಆಸ್ಪತ್ರೆಯಲ್ಲಿ ನರಳಾಡುವ ರೋಗಿಗೆ ಆರೋಗ್ಯದ ಮಹತ್ವ, ಜೈಲಿನಲ್ಲಿರುವ ವ್ಯಕ್ತಿಗೆ ಸ್ವಾತಂತ್ರ್ಯದ ಮಹತ್ವ ಎಷ್ಟೆಂಬುದು ಗೊತ್ತಾಗುವಂತೆ, ನಾವು ಮೋಹಿಸುವ ವಸ್ತುವಿನಿಂದ ಅಪಾಯವುಂಟಾಗುವ ಸುಳಿವು ಸಿಕ್ಕಾಗ ಅದರಿಂದ ದೂರಾಗುವ ಜಾಣ್ಮೆಯನ್ನು ತೋರಿ, ಜೀವನದಲ್ಲಿ ವಸ್ತು ವ್ಯಾಮೋಹಕ್ಕಿಂತ ನೆಮ್ಮದಿಯೇ ಹೆಚ್ಚು ಮಹತ್ವ ಎಂಬುದರ ಅರಿವಾಗುತ್ತದಲ್ಲವೇ? ಜೀವನದಲ್ಲಿ ಎಷ್ಟೇ ಸಂಕಷ್ಟಗಳು ಬಂದರೂ ಆದದೆಲ್ಲ ಒಳ್ಳೆಯದೆ ಆಗುತ್ತದೆಂಬ ನಂಬಿಕೆಯಿಂದ 'ಇರುವ ಭಾಗ್ಯವ ನೆನೆದು ಬಾರದೆಂಬುದನು ಬಿಡು ಹರುಷಕ್ಕಿದೇ ದಾರಿ' ಎಂಬಂತೆ ನಮಗಿಂತಲೂ ಭಾಗ್ಯದಲ್ಲಿ ಬಡವರೆನಿಸಿಕೊಂಡವರನ್ನು ಕಂಡು ಇರುವ ಭಾಗ್ಯದಲ್ಲಿಯೇ ಸುಖ, ಶಾಂತಿ ಹಾಗೂ ಸಮಾಧಾನದಿಂದ ಈ ಜೀವನ ಯಾತ್ರೆಯ ಪಯಣ ಮುಂದುವರೆಸಿದರೆ ಒಳಿತಲ್ಲವೆ?

• ರವಿ ಕಂಗಳ.ಕೊಂಕಣಕೊಪ್ಪ

ಪುಸ್ತಕ ಲೋಕ

ಪರಿಸರ ಸಂಬಂಧಿ ಪ್ರಬಂಧ ಸಂಕಲನ 'ಪರಿಸರದ ಒಡನಾಟ' ಇದೀಗ ಸಪ್ನ ಬುಕ್ ಹೌಸ್ ಮೂಲಕ ಪ್ರಕಟಣೆಗೊಳ್ಳಲಿದ್ದು, ಈ ಪುಸ್ತಕವನ್ನು ಪ್ರಕಟಣಪೂರ್ವ ರಿಯಾಯತಿ ಬೆಲೆಗೆ ಸಪ್ನ ಬುಕ್ ಹೌಸ್ ಓದುಗರಿಗೆ ನೀಡುತ್ತಿದೆ. 'ಪರಿಸರದ ಒಡನಾಟ' ಪುಸ್ತಕವು ಶಶಿಧರ ಹಾಲಾಡಿಯವರ ಪ್ರಬಂಧಗಳನ್ನು ಓದುಗರಿಗೆ ನೀಡುತ್ತಿದೆ. ರು.250/– ಮುಖಬೆಲೆಯ ಈ ಪ್ರಬಂಧ ಸಂಕಲನವು ಪ್ರಕಟಣ ಪೂರ್ವ ಬೆಲೆಯಾದ ರು. 188/–ಕ್ಕೆ ಈಗ ಲಭ್ಯವಿದ್ದು, ಸಪ್ನ ಆನ್‌ಲೈನ್ ಮೂಲಕವೂ ಪಡೆಯಬಹುದು.

ಕರಗುತ್ತಿದೆ ಹಿಮ ಕಾಣಿಸುತ್ತಿದೆ ನೆಲ!

ಇದು ಅಲಾಸ್ಕಾ ಪ್ರವಾಸ ಕಥನ. ಅಲ್ಲಿ ಕೃಷಿಭೂಮಿ ಜಾಸ್ತಿಯಾಗುತ್ತಾ ಇದೆ; ಹಿಮ ಮುಚ್ಚಿದ ನೆಲೆ ಕಡಿಮೆಯಾಗುತ್ತಿದೆ! ಜಾಗತಿಕ ತಾಪಮಾನ ಏರಿಕೆಯ ದುಷ್ಪರಿಣಾಮ ಇದು!

• ಪ್ರಕಾಶ ಹೆಗಡೆ

ಅಮೆರಿಕದ ಅಲಾಸ್ಕಾ , ಆ ದೇಶದ ದೇಶದ ಅತಿದೊಡ್ಡ ರಾಜ್ಯವಾದರೂ ತನ್ನ ದೇಶದ ಜೊತೆಗೆ ಗಡಿ ಹಂಚಿಕೊಳ್ಳದೆ ಕೆನಡಾದೊಂದಿಗೆ ಹೊಂದಿಕೊಂಡಿದೆ. ಇಂತಹ ಅನೇಕ ವೈಚಿತ್ರ್ಯಗಳು ಅಲಾಸ್ಕಾವನ್ನು ವಿಶೇಶ ತಾಣವಾಗಿಸಿದೆ. ಯುಎಸ್ ಈ ಭೂಭಾಗವನ್ನು 19ನೇ ಶತಮಾನದ ಉತ್ತರಾರ್ಧದಲ್ಲಿ ರಷ್ಯಾದಿಂದ ಖರೀದಿಸಿ ತನ್ನ 49ನೆಯ ರಾಜ್ಯವಾಗಿಸಿಕೊಂಡಿತು. ಅಂದು ದಟ್ಟವಾದ ಕಾಡುಗಳು, ಹಿಮದಿಂದ ಆವೃತವಾದ ಪರ್ವತಗಳು, ಅಸಂಖ್ಯಾತ ಜಲಮೂಲಗಳು ಮತ್ತು ಕೃಷಿಯೋಗ್ಯವಲ್ಲದ ಅತ್ಯಂತ ಶೀತಲ ಹಾಗೂ ನಿರ್ಜನ ಪ್ರಾಂತ್ಯವಾಗಿತ್ತು. ನಂತರದ ದಶಕಗಳಲ್ಲಿ ಬೃಹತ್ ತೈಲ ನಿಕ್ಷೇಪಗಳ ಅವಿಷ್ಕಾರ ಅಲಾಸ್ಕಾಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿತು.

ಮೀನುಗಾರಿಕೆ ಮತ್ತು ಪ್ರವಾಸೋದ್ಯಮವು ಈ ರಾಜ್ಯದ ವಿಶೇಷತೆ. ಇಂದು ಅಲಾಸ್ಕಾ ವಿಶ್ವದ ಅತ್ಯಂತ ಬೇಡಿಕೆಯ ಪ್ರವಾಸಿ ತಾಣವಾಗಿದೆ. ಭೌಗೋಳಿಕವಾಗಿ ಅಲಾಸ್ಕಾದ ಒಂದು ಭೂಭಾಗ ರಷ್ಯಾಗೆ ಅತೀ ಹತ್ತಿರದಲ್ಲಿದೆ. 53 ಮೈಲಿ ಅಂತರದ ಬೇರಿಂಗ್ ಜಲಸಂಧಿ ಈಶಾನ್ಯ ರಷ್ಯಾವನ್ನು ವಾಯುವ್ಯ ಅಲಾಸ್ಕಾದಿಂದ ಬೇರ್ಪಡಿಸುತ್ತದೆ. ಬೇರಿಂಗ್ ಜಲಸಂಧಿಯಲ್ಲಿರುವ ಲಿಟಲ್ಡಯೋಮೀಡ್ ಮತ್ತು ಬಿಗ್ಡಯೋಮೀಡ್ ದ್ವೀಪಗಳು ರಷ್ಯಾ ಮತ್ತು ಯುಎಸ್ ನಡುವಿನ ಅತಿ ಹತ್ತಿರದ ಬಿಂದುಗಳಾಗಿ ಕೇವಲ 2 ಮೈಲಿಗಳ ಅಂತರದ್ದರೂ, ಸಮಯ ವಲಯದಲ್ಲಿ 21ಗಂಟೆಗಳ ವ್ಯತ್ಯಾಸವಿದೆ.

ಜುನೌ ಅಲಾಸ್ಕಾದ ರಾಜಧಾನಿ. ಅಲಾಸ್ಕಾ ಜನಸಂಖ್ಯೆ ಸುಮಾರು ಎಂಟೂವರೆ ಲಕ್ಷ. ರಾಜ್ಯದ 0.4% ಭೌಗೋಳಿಕ ಪ್ರದೇಶದಲ್ಲಿ ಜನವಸತಿ ಇದೆ. ಮಿಕ್ಕೆಲ್ಲ ಭಾಗ, ಮಾನವನಿಲ್ಲದ ನೈಸರ್ಗಿಕ ಪ್ರದೇಶಗಳಾಗಿಯೇ ಉಳಿದಿದೆ. ಇಂತಹ ಅಪರೂಪದ ತಾಣವನ್ನು ನೋಡಬೇಕೆಂಬ ನನ್ನ ಬಹುದಿನದ ಹಂಬಲ ಈ ಬಾರಿಯ ಅಮೇರಿಕ ಪ್ರವಾಸದಲ್ಲಿ ಕೂಡಿಬಂದಿತ್ತು. 'ಕೊನೆಯ ಗಡಿನಾಡು' ಎಂದು ನಿಸರ್ಗಪ್ರೇಮಿ ಪ್ರವಾಸಿಗರ ಕನಸಿನ ತಾಣವಿದು. ಹಾಗೂ 'ಜಾಗತಿಕ ತಾಪಮಾನ ಏರಿಕೆಯ'' ಪರಿಣಾಮಗಳನ್ನು ಅಭ್ಯಸಿಸಲು ಉತ್ತಮ ಜಾಗವೂ ಹೌದು.

ಆಂಕೋರೇಜ್ ವಾಯುನಿಲ್ದಾಣದಲ್ಲಿ ಜಿಪಿಎಸ್ ಗ್ಯಾಜೆಟ್ ಅಳವಡಿಸಿದ ಟೊಯೊಟಾ ಆರ್‌ವಿ ಬಾಡಿಗೆಗೆ ಪಡೆದು, ಸೆವಾರ್ಡ್‌ಗೆ 140ಮೈಲಿಯ ಎರಡೂವರೆ ಗಂಟೆಗಳ ನಮ್ಮ ಪ್ರಯಾಣ ಬೆಳೆಸಿದೆವು. ಸೆವಾರ್ಡ್ ಹಿಮನದಿಗಳಿಂದ ಸಂಯುಕ್ತವಾದ ಕೌಂಟಿಯಾಗಿದ್ದು, ಪರ್ವತಗಳು ಮತ್ತು ಸಾಗರದ ನಡುವೆ ನೆಲೆಗೊಂಡಿದೆ. ಇದು ಸುಗ್ಪಿಯಾಕ್ ಬುಡಕಟ್ಟು ಜನಾಂಗದ ಪೂರ್ವಜರ ತಾಯ್ನಾಡು ಮತ್ತು ಕೆನ್ನೈ ಫ್ಯೋರ್ಡ್ಸ್ ರಾಷ್ಟ್ರೀಯ ಉದ್ಯಾನವನದ ಪ್ರವೇಶದ್ವಾರ. ಫ್ಯೋರ್ಡ್ಸ್ ಎಂಬುದು ಎತ್ತರದ ಪರ್ವತಗಳ ನಡುವಿನ ಸಮುದ್ರದ ಉದ್ದ ವಾದ, ಕಿರಿದಾದ, ಆಳವಾದ ಒಳಹರಿವು. ಹಿಮನದಿ ಕರಗಿ ಸಮುದ್ರ ಕಣಿವೆಯ ಮುಳುಗುವಿಕೆಯಿಂದ ರೂಪುಗೊಂಡ ಪ್ರದೇಶ.

ನಮ್ಮದು ಕೆನ್ನೈ ಫ್ಯೋರ್ಡ್‌ನಲ್ಲಿ ಆರು ಗಂಟೆಗಳ ಕ್ರೂಸ್ ಪ್ರವಾಸ. ಮೂರು ಮಹಡಿಗಳನ್ನು ಹೊಂದಿರುವ ಸುಮಾರು ಇನ್ನೂರು ಪ್ರಯಾಣಿಕರನ್ನು ಕರೆದೊಯ್ಯುವ ಹಡಗಿದಾಗಿತ್ತು. ಸರ್ವ ಸೌಕರ್ಯಗಳಿರುವ ತೇಲುತ್ತಿರುವ ಊರಿನಂತೆನಿಸುತ್ತಿತ್ತು. ಕ್ಯಾಪ್ಟನ್ ಹಾಸ್ಯ ಪ್ರಜ್ಞೆಯವನಾಗಿದ್ದು ಪ್ರವಾಸದ ಪ್ರತಿಯೊಂದು ಸ್ಥಳದ ಇತಿಹಾಸ, ಪ್ರಾಮುಖ್ಯತೆ ಹಾಗೂ ಅಂಕಿಅಂಶಗಳನ್ನು ಕುತೂಹಲಕಾರಿಯಾಗಿ ನಿರೂಪಿಸುತ್ತಿದ್ದರು. ಹಡಗಿನ ಡೆಕ್‌ನಲ್ಲಿ ಕೊರೆಯುವ ಚಳಿ. ಉಣ್ಣೆಯ ಸ್ವೆಟರ್ ಮತ್ತು ಥರ್ಮಲ್ ಉಪಯೋಗ. ಮಧ್ಯಾಹ್ನದ ಬಿಸಿಲಲ್ಲಿ ತಾಪಮಾನವು ಸುಮಾರು 7 ಡಿಗ್ರಿ ಸೆಲ್ಸಿಯಸ್ ಇದ್ದರೂ, ತಣ್ಣಗಿನ ಗಾಳಿಯಿಂದ ಚಳಿ ಇನ್ನೂ ಹೆಚ್ಚಿರುವಂತೆನಿಸುತ್ತಿತ್ತು.

ಸಮುದ್ರದ ನಾಯಿ

ಜಲಚರಗಳ ವೀಕ್ಷಣೆಗೆ ಉತ್ತಮ ಅವಕಾಶ. ಮೊದಲು ನಮಗೆ ಕಂಡದ್ದು ಹೊಟ್ಟೆ ಮೇಕಾಗಿ ತೇಲುತ್ತಿದ್ದ ಸಮುದ್ರದ ನಾಯಿ. ಮುಂದೆ ಸಾಗುತ್ತಾ ನಾವು ಹಂಪ್ ಬ್ಯಾಕ್ ತಿಮಿಂಗಿಲ, ಸಮುದ್ರ ಸಿಂಹ, ಕೊಂಬಿನ ಪಫಿನ್ ಪಕ್ಷಿ, ಸೀಗಲ್ ಇತ್ಯಾದಿಗಳನ್ನು ಹೇರಳವಾಗಿ ನೋಡಿದೆವು.

ಜೆಲ್ಲಿ ಮೀನುಗಳು

ಮೈನಸ್ ಐದು ಡಿಗ್ರಿ ಸೆಲ್ಸಿಯಸ್ ತಲುಪಿದರೂ ಈ ಕೊಲ್ಲಿ ಹೆಪ್ಪುಗಟ್ಟುವುದಿಲ್ಲ. ನಮ್ಮ ಹಡಗು ವಿಶ್ರಾಂತಿಗಾಗಿ ಫಾಕ್ಸ್ ದ್ವೀಪದಲ್ಲಿ ಲಂಗರು ಹಾಕಿತು. ದ್ವೀಪದ ತೀರ ಸುಂದರವಾದ ಜೆಲ್ಲಿ ಮೀನುಗಳಿಗೆ ಹೆಸರುವಾಸಿ. ಕಡಲ ತೀರದಲ್ಲಿ ನುಣುಪಾದ ಪೆಬಲ್‌ಗಳು ಕಾಣಸಿಗುತ್ತವೆ. ವಿಚಿತ್ರವೆಂದರೆ ಹೆಚ್ಚಿನ ಕಲ್ಲುಗಳು ಹೃದಯದ ಆಕಾರದಲ್ಲಿರುತ್ತವೆ. ಬಫೆ ಭೋಜನದ ಅನುಭವ ಅನನ್ಯವಾಗಿತ್ತು. ವಿಶೇಷವಾದ ಅಲಾಸ್ಕನ್ ರೀತಿಯ ಅಡುಗೆಯ ಸಾಲ್ಮನ್ ಮೀನು, ಹಣ್ಣುಗಳು, ತಾಜಾ ತರಕಾರಿಗಳು ಮತ್ತು ಬ್ರೆಡ್ಗಳೊಂದಿಗೆ ವಿಧವಿಧವಾದ ಐಟಮ್‌ಗಳನ್ನು ಸುಂದರವಾಗಿ ಓರಣವಾಗಿಟ್ಟಿದ್ದರು.

ಹಸಿರು ನೆಲದ ಹೆಚ್ಚಳ!

ಊಟದ ನಂತರ, ಸುಗ್ಪಿಯಾಕ್ ಬುಡಕಟ್ಟು ಜನಾಂಗದವರಾದ ನ್ಯಾಷನಲ್ ಪಾರ್ಕ್ ರೇಂಜರ್, ಶತಮಾನಗಳಿಂದ ಅಲಾಸ್ಕಾದಲ್ಲಿ ಬದಲಾಗುತ್ತಿರುವ ವಾತಾವರಣದ ಬಗ್ಗೆ ವಿವರಿಸಿದರು. ಜಾಗತಿಕ ತಾಪಮಾನ ಏರಿಕೆ ಮತ್ತು ಹಿಮನದಿಗಳ ಕರಗುವಿಕೆಯ ಪರಿಣಾಮಗಳಿಂದ ಕೆನ್ನೈ ಫ್ಯೋರ್ಡ್ಸ್ ರಾಷ್ಟ್ರೀಯ ಉದ್ಯಾನದ ರೂಪಾಂತರವನ್ನು ಬಣ್ಣಿಸಿದರು. ಆಲಾಸ್ಕಾದಲ್ಲಿ ಈಗ ಹೋದ ಶತಮಾನಕ್ಕಿಂತ ಹೆಚ್ಚು ಹಸುರಿಂದ ಆವೃತವಾದ ಕಾಡುಗಳು ಕಾಣಸಿಗುತ್ತವೆ. ಏಕೆಂದರೆ, ಹಿಮದ ಕರಗುವಿಕೆಯಿಂದ ಕೃಷಿಗೆ ಉಪಯುಕ್ತವಾಗುವಂತಹ ಭೂಮಿ ದೊರಕುತ್ತಿದೆ! ರೇಂಜರ್ ವಿಷಾದದಿಂದ ಉದ್ಗರಿಸಿದರು-''ಜಾಗತಿಕ ತಾಪಮಾನ ಏರಿಕೆ ನಮ್ಮ ಅಲಾಸ್ಕದ ಜನರಿಗೆ ಒಳ್ಳೆಯದನ್ನು ಮಾಡಬಹುದು. ಆದರೆ ಜಗದ ದೃಷ್ಟಿಯಲ್ಲಿ ಇದು ಒಳ್ಳೆಯ ಬೆಳವಣಿಗೆಯಲ್ಲ.''

ಅಲಾಸ್ಕಾ ಹಿಮನದಿಗಳ ತಾಣ. ಚಳಿಗಾಲದ ಹಿಮಪಾತದ ಪ್ರಮಾಣವು ಅದೇ ವರ್ಷದ ಬೇಸಿಗೆ ಕರಗುವಿಕೆಗಿಂತ ಹೆಚ್ಚಾಗಿದ್ದರೆ ಮಾತ್ರ ಹಿಮನದಿಯ ಉಗಮ ಸಾಧ್ಯ. ಹೆಚ್ಚಿನ ಹಿಮನದಿಗಳ ತಯಾರಾಗಲು, ನೂರು ವರ್ಷಗಳಿಗಿಂತ ಹೆಚ್ಚು ಸಮಯ ಬೇಕು.. ಹಿಮನದಿಗಳಲ್ಲಿ ಮೂರು ವಿಧಗಳಿವೆ-ಟೈಡ್ವಾಟರ್, ಆಲ್ಪೈನ್ ಮತ್ತು ವ್ಯಾಲಿ ಹಿಮನದಿಗಳು. ಟೈಡ್ವಾಟರ್ ಹಿಮನದಿಗಳು ನೇರವಾಗಿ ಸಾಗರಕ್ಕೆ ಹರಿಯುತ್ತವೆ. ಸಮುದ್ರದ ನೀರಿನ ಸಂಪರ್ಕದಿಂದ ಮಂಜುಗಡ್ಡೆ ಕರಗಲಾರಂಭಿಸುತ್ತದೆ. ಹಿಮನದಿಯ ಬೃಹತ್ ತುಂಡುಗಳು ಆಗಾಗ್ಗೆ ಶಬ್ದಮಾಡುತ್ತ ನೀರಿಗೆ ಅಪ್ಪಳಿಸುತ್ತವೆ. ಅಗಾಧ ಪ್ರಮಾಣದ ಪರ್ವತಗಳು ಧರೆಗುರುಳಿದಂತಹ ಭಯಂಕರ ದೃಶ್ಯದ ನೋಡಲು ಧೈರ್ಯ ಬೇಕು.

ಹಂಪ್‌ಬ್ಯಾಕ್ ತಿಮಿಂಗಿಲ

ಸಮುದ್ರಕ್ಕೆ ಅಪ್ಪಳಿಸುತ್ತಿರುವ ಮಂಜುಗಡ್ಡೆಯ ನೋಟವನ್ನು ನೋಡುತ್ತಿರುವಂತೆಯೇ, ಬೃಹತ್ ಹಂಪ್‌ಬ್ಯಾಕ್ ತಿಮಿಂಗಲವೊಂದು ನೀರ ಮೇಲೆ ಕಾಣಿಸಿಕೊಂಡಿತು. ಈ ಜಾತಿಯ ತಿಮಿಂಗಲ ಸುಮಾರು 60ಅಡಿ ಉದ್ದವಿದ್ದು, 30 ಟನ್ ಭಾರವಿರುತ್ತದೆ.ಆಲ್ಪೈನ್ ಹಿಮನದಿಗಳು ಪರ್ವತಗಳಲ್ಲಿ ರೂಪುಗೊಂಡು ಕಣಿವೆಗಳ ಮೂಲಕ ನಿಧಾನವಾಗಿ ಕೆಳಕ್ಕೆ ತಳ್ಳಲ್ಪಡುತ್ತವೆ. ಕಣಿವೆ ಹಿಮನದಿಗಳು ಕಣಿವೆಗಳಲ್ಲಿ ಉಗಮವಾಗಿ ಸಿಹಿನೀರಿನ ಲಗೂನ್‌ಗಳಲ್ಲಿ ವಿಲೀನವಾಗುತ್ತವೆ. ಎಲ್ಲ ಹಿಮಮನದಿಗಳೂ ಸಿಹಿನೀರಿನವು. ಕ್ರೂಸ್ ಪ್ರಯಾಣವು ಸಂಜೆ 6 ಗಂಟೆಗೆ ಮುಗಿಯಿತು; ಅದೊಂದು ಅನನ್ಯ ಅನುಭವ.

ಅದೇ ಸಂಜೆ ನಾವು ಹಾರ್ಡಿಂಗ್ ಹಿಮನದಿಯ ಎಕ್ಸಿಟ್ ಜಾಗದ ಚಾರಣಕ್ಕೆ ಹೋದೆವು. ಹಿಮನದಿಯನ್ನು ಅತಿ ಹತ್ತಿರದಿಂದ ನೋಡುವ ಅವಕಾಶ ಇದು. ರಾತ್ರಿ ಒಂಭತ್ತಾದರೂ ಸೂರ್ಯನ ಬೆಳಕಿದ್ದಿದ್ದರಿಂದ ನಾಲ್ಕು ಮೈಲಿಗಳ ಚಾರಣ, ಭೋರ್ಗರೆಯುವ ನೀಲಿ ನೀರಿನ ಹರಿಯುಕೆಯ ದಾರಿಯಲ್ಲಿ ಆಹ್ಲಾದಕರವಾಗಿತ್ತು. ಹಿಮನದಿಯ ಪಾದದಿಂದ ಮಂಜುಗಡ್ಡೆ ಕರಗಿ ಝುರಿಯಾಗಿ ಹರಿಯುವ ಶಬ್ದ ಬಹಳ ವಿಶೇಷವಾಗಿತ್ತು. ಹಿಮನದಿಯ ಮೇಲೆ ನಡೆಯುವುದು ರೋಮಾಂಚಕ ಅನುಭವ. ಕಳೆದ 200 ವರ್ಷಗಳಲ್ಲಿ ಹಿಮನದಿ ಸಾಕಷ್ಟು ಹಿಂದಕ್ಕೆ ಸರಿದಿದ್ದು, ಕೆಳಗಿರುವ ಕಣಿವೆಯು ಗೋಚರವಾಗಿ ಈಗ ಹಸಿರಿನ ತಾಣವಾಗಿದೆ. ಹಿಮನದಿಗಳು ಹೀಗೆ ಹಿಂದೆ ಸರಿಯುವ ವಿದ್ಯಮಾನವು, ಜಾಗತಿಕ ತಾಪಮಾನದ ಏರಿಕೆಯ ಎಚ್ಚರಿಕೆಯ ಗಂಟೆ ಎನ್ನಬಹುದು.



ಪದಬಂಧ



ಎಡದಿಂದ ಬಲಕ್ಕೆ
1. ನಾಡಿನ ರಾಜ (3)
4. ಬರೆಯುವ ಹಾಳೆ (3)
6. ಚಪ್ಪಾಳೆ ತಟ್ಟುವುದನ್ನು ಹೀಗೆಯೂ ಹೇಳಬಹುದು (6)
7. ಪುರದಲ್ಲಿ ದೊರೆತ ಶತ್ರು (2)
9. ಹಗಲು ಮತ್ತು ರಾತ್ರಿ (3)
11. ಎರಡಕ್ಷರದ ಮನ್ಮಥ (2)
12. ತುಂಬಾ 'ಬುದ್ಧಿವಂತ' ಹಕ್ಕಿಯಿದು (3)
13. ವಿರಳವಾಗಿ ಬಂದಿರುವ ಹೋಮ (3)
14. ಮೇಲಕ್ಕೆ ಹತ್ತು ಎಂದರ್ಥ (2)
15. ಕೆಸರಿನಲ್ಲರಳಿದ ಹೂವು (3)
17. ಮತ್ತೊಂದು ಹಾರ (2)
21. ರುಚಿಕರವಾದ ಭೋಜನ (5)
22. ನಡೆದು ಹೋಗು (3)
23. ದಿನದ ಮಧ್ಯೆ ಸಿಲುಕಿದ ಮಂತ್ರಿ (3)

ಮೇಲಿನಿಂದಕೆಳಕ್ಕೆ
1. ಒಂದೆಡೆ ನಿಲ್ಲದೆ ತಿರುಗಾಡುವವನು (4)
2. ಸಂಪೂರ್ಣವಾದ, ಸಮಗ್ರವಾದ (3)
3. ತಂದೆಯ ತಂದೆ (4)
4. ಕೊಲೆ ಮಾಡುವಿಕೆ (3)
5. ಒಬ್ಬ ಪೊಲೀಸು ಅಧಿಕಾರಿ ದರದ ಮಧ್ಯೆ ನಿಂತಿದ್ದಾನೆ (4)
8. ಮೋಟಾರು ವಾಹನದೊಂದಿಗೆ ಬಂದಿದೆ ಅಪವಾದ (3)
9. ಅಣ್ಣ ಮಾಡಿದ ಅಪಹಾಸ್ಯ (3)
10. ಅಸ್ತವ್ಯಸ್ತವಾದ ಮನೆ (3)
11. ಹಿಮಾಲಯದಲ್ಲಿರುವ ಒಂದು ಪವಿತ್ರ ಸರೋವರ (3)
14. ಒಂದೇ ವಿಷಯದಲ್ಲಿ ಗಮನವನ್ನು ಕೇಂದ್ರೀಕರಿಸುವುದು (4)
16. ಅಮಲೇರಿದ ಆನೆ (4)
18. ಬಾಳೆಹಣ್ಣು, ಬೆಲ್ಲ ಸೇರಿಸಿ ಮಾಡಿದ ಸಿಹಿ ಖಾದ್ಯ (4)
19. ಹಿಂತಿರುಗು ಎನ್ನುವ ಉಸುಕು (3)
20. ಕಾಮಾಲೆ ಕಣ್ಣಿಗೆ ಕಾಣುವ ಬಣ್ಣ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 5. ಬಿಲವಾರ 6. ಮಾನಪತ್ರ 7. ಕತ್ತರಿ 8. ಮುತ್ತುಗ 10. ನಾಯಕ 11. ವುನೋ 12. ವಾಸಿ 13. ಅವಳಿ 15. ಕತಜಾ 17. ವಿಷಾದ 19. ಅಮಾನುಷ 20. ನುಡಿಗಟ್ಟು

ಮೇಲಿನಿಂದ ಕೆಳಕ್ಕೆ: 1. ಕಲಬತ್ತು 2. ಚರಕ 3. ಸೋಮಾರಿ 4. ಅಪಜಯ 9. ಗವುಳಿ 10. ನಾಸಿಕ 14. ವರ್ಧಮಾನ 16. ತರಗತಿ 17. ವಿಷಣ್ಣ 18. ದನುಜ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ,
ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine @gmail.com

ತಾಯಿಯ ಪ್ರೀತಿ ಅತೀ ಶ್ರೇಷ್ಠವಾದದ್ದು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಒಂದು ಸಲ ರಾಜನ ಆಸ್ಥಾನಕ್ಕೆ ಇಬ್ಬರು ಮಹಿಳೆಯರು ಒಂದು ಮಗುವಿನ ಜೊತೆಯಲ್ಲಿ ನ್ಯಾಯಕ್ಕಾಗಿ ಬಂದಿದ್ದರು. ಅವರಿಬ್ಬರೂ ಆ ಮಗು ತನ್ನದೆಂದು ಒಬ್ಬಳು, ತನ್ನದೆಂದು ಇನ್ನೊಬ್ಬಳು ಕಿತ್ತಾಡುತ್ತಿದ್ದರು. ಆ ಇಬ್ಬರು ಮಹಿಳೆಯರ ಗಂಡಂದಿರೂ ರಾಜನಿಗೋಸ್ಕರ ಯುದ್ಧದಲ್ಲಿ ಹೋರಾಡಿ ಮಡಿದಿದ್ದರು. ಇವರಿಗೆ ಇದರ ಬಗ್ಗೆ ಬೇರೆ ಯಾವ ಸಾಕ್ಷಿ ಆಧಾರಗಳೂ ಇರಲಿಲ್ಲ. ರಾಜ ತಮಗೇ ನ್ಯಾಯ ದೊರಕಿಸಿ ಕೊಡಬೇಕೆಂದು ಇಬ್ಬರೂ ಆಸ್ಥಾನಕ್ಕೆ ಬಂದಿದ್ದರು. ರಾಜನಿಗೀಗ ಧರ್ಮಸಂಕಟಕ್ಕೆ ಇಟ್ಟುಕೊಂಡಿತು.

ಸಾಕಷ್ಟು ತಲೆಕೆಡಿಸಿಕೊಂಡರೂ ಅವನಿಗೆ ಪರಿಹಾರ ದೊರೆಯಲಿಲ್ಲ. ರಾಜ ದಿಕ್ಕು ಕಾಣದೆ, ವಯಸ್ಸಾದ ಸಂತರೊಬ್ಬರ ಮೊರೆಹೊಕ್ಕ. ಸಂತರು ಮುಗುಳ್ನಗೆ ಬೀರುತ್ತಾ, 'ಇದು ಬಹಳ ಸುಲಭ, ಮಗುವನ್ನು ಇತ್ತ ಕೊಡಿ' ಎಂದರು.

ಮಗುವನ್ನು ರಾಜನ ಕೈಗೆ ಕೊಟ್ಟು ಸಂತರು, 'ಈ ಮಗುವನ್ನು ಸರಿಯಾಗಿ ಅರ್ಧಕ್ಕೆ ಸೀಳಿ, ಇಬ್ಬರಿಗೂ ಒಂದೊಂದು ಸಮಭಾಗವನ್ನು ಕೊಟ್ಟುಬಿಡಿ' ಎಂದು ಹೇಳಿದರು. ಗಾಬರಿಯಾದ ರಾಜ, 'ಗುರುಗಳೇ ನೀವು ಇದೇನು ಹೇಳುತ್ತಿರುವಿರಿ?' ಎಂದು ಕೇಳಲು, 'ಸಂತರು ಇದರಲ್ಲೇನು ಸಮಸ್ಯೆ? ಇಬ್ಬರೂ ಈ ಮಗುವನ್ನು ತಮ್ಮದೆನ್ನುತ್ತಿದ್ದಾರೆ, ಬೇರೆ ಯಾವ ಸಾಕ್ಷಿ ಆಧಾರಗಳೂ ಇಲ್ಲ, ನ್ಯಾಯ ದೊರಕಬೇಕಾದರೆ ಮಗುವನ್ನು ಎರಡು ಭಾಗ ಮಾಡಲೇಬೇಕು' ಎಂದೆನ್ನುತ್ತಾ, ರಾಜನ ಸೊಂಟದಲ್ಲಿದ್ದ ಕತ್ತಿಯನ್ನು ಹೊರಗೆಳೆದರು. ಆಶ್ಚರ್ಯಚಕಿತನಾದ ರಾಜ ಚೇತರಿಸಿಕೊಳ್ಳುವಷ್ಟರಲ್ಲಿ, ಒಬ್ಬ ಹೆಂಗಸು ಮುಂದೆ ಬಂದು ಸಂತರನ್ನು ತಡೆಯುತ್ತಾ, 'ದಯವಿಟ್ಟು ಬೇಡ ಸ್ವಾಮಿ, ಆ ಮಗು ನನ್ನದಲ್ಲ ಅದು ಅವಳದ್ದೇ ಅವಳಿಗೇ ಕೊಟ್ಟುಬಿಡಿ' ಎಂದು ಕಣ್ಣೀರಿಡುತ್ತಾ ಸಂತರನ್ನು ತಡೆದಳು.

ಆಗ ಸಂತರು ತಮ್ಮನ್ನು ತಡೆದ ಮಹಿಳೆಗೆ ಮಗುವನ್ನು ಕೊಡುತ್ತಾ ತೆಗೆದುಕೋ ತಾಯಿ ಇದು ನಿನ್ನದೇ ಮಗು ಎಂದರು. ನಡೆದುದ್ದೆಲ್ಲವನ್ನು ಆಶ್ಚರ್ಯದಿಂದ ನೋಡುತ್ತಿದ್ದ ರಾಜ 'ಗುರುಗಳೇ, ನನಗೊಂದು ಅರ್ಥವಾಗುತ್ತಿಲ್ಲ. ಆಕೆ ಆ ಮಗು ತನ್ನದಲ್ಲವೆಂದು ಸ್ಪಷ್ಟವಾಗಿ ಹೇಳಿದ ಮೇಲೂ ಆ ಮಗು ಅವಳದ್ದೇ ಎಂದು ನೀವು ಹೇಗೆ ತೀರ್ಮಾನಿಸಿದಿರಿ?' ಎಂದು ಕೇಳಿದ. ಆಗ ಸಂತರು, 'ನಿಜವಾದ ತಾಯಿಯು ತನ್ನ ಮಗುವಿಗೆ ನೋವಾಗುವುದನ್ನು ಎಂದೂ ಕೂಡ ಸಹಿಸಲಾರಳು. ಆದರೆ ತಾನು ತಾಯಿ ಎಂದು ಸುಳ್ಳು ಹೇಳಿಕೊಳ್ಳುವವಳು ಮಗು ತುಂಡಾಗುವುದನ್ನು ನೋಡಿ ಕೂಡಾ ಸುಮ್ಮನೆ ನಿಂತಿದ್ದಾಳೆ. ಮಗುವಿಗೆ ಏನಾದರೂ ಅವಳಿಗೆ ಏನೂ ಚಿಂತೆ ಇಲ್ಲ, ಅವಳು ತುಂಡಾದ ಮಗುವನ್ನು ಕೂಡಾ ಪಡೆಯಲು ತಯಾರಾಗೇ ನಿಂತಿದ್ದಾಳೆ. ಮಗುವಿಗೆ ಏನಾದರೇನು? ಅದು ಹೇಗೂ ಅವಳ ಮಗುವಲ್ಲ!'

'ಆದರೆ ನಿಜವಾದ ತಾಯಿ, ಅದು ಕ್ಷೇಮವಾಗಿದ್ದರೆ ಸಾಕೆಂದು ಅದನ್ನು ಬಿಟ್ಟುಕೊಡಲೂ ತಯಾರಿದ್ದಳು. ಇದರಿಂದಲೇ ಗೊತ್ತಾಗುವುದಿಲ್ಲವೇ, ನಿಜವಾದ ಮಗುವಿನ ತಾಯಿ ಯಾರೆಂದು?' ಎಂದು ಹೇಳಿದರು ಸಂತರು.

ನಮಗೆಲ್ಲ ನಮ್ಮ ತಾಯಿಯ ಬೆಲೆ ತಿಳಿಯುವುದು ನಾವು ತಾಯಿಯ ಸ್ಥಾನಕ್ಕೆ ಬಂದಾಗಲೇ. ಮನೆಯಲ್ಲಿ ತಾಯಿ, ನಿಷ್ಠೂರವಾಗಿ ಮಾತನಾಡಿ ಹಠ ಹಿಡಿದರೂ ಅದರ ಬೆನ್ನ ಹಿಂದಿಗಯೇ ಅವಳಿಗೆ ನಮ್ಮ ಬಗ್ಗೆ ಅಪಾರವಾದ ಕಾಳಜಿ ಇರುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ, ನಾವು ಮಾಡುವ ತಪ್ಪುಗಳನ್ನು, ನಮ್ಮ ಸುಳ್ಳುಗಳನ್ನ ಮೊದಲು ಗಮನಿಸಿ ನಮ್ಮನ್ನು ಹಿಡಿಯುವುದೇ ತಾಯಿ. ಅವಳಲ್ಲಿ ನಮ್ಮ ತಪ್ಪುಗಳಿಗೆ ಎಂದಿಗೂ ಮೃದು ಧೋರಣೆ ಇರುವುದಿಲ್ಲ. ದಂಡಿಸಿ ಬೈದು ಬುದ್ಧಿ ಹೇಳಿನಮ್ಮನ್ನು ಸಮಾಜಮುಖಿಯಾಗಿಸುವುದರಲ್ಲಿ ತಾಯಿಯ ಪಾತ್ರ ಬಹಳ ದೊಡ್ಡದು. ಅವಳು ನಮ್ಮನ್ನು ಎಷ್ಟೇ ದಂಡಿಸಿದರೂ ಹೊರಗಿನ ಪ್ರಪಂಚದ ಯಾರಾದರೂ ನಮಗೆ ತೊಂದರೆ ಕೊಡುತ್ತಿದ್ದಾರೆ ಎಂದು ಗೊತ್ತಾದರೆ ಸಾಕು, ರೌದ್ರ ರೂಪ ತಾಳಿ ಅವರಿಗೆ ತಕ್ಕ ಶಾಸ್ತಿ ಕಲಿಸಲು ನಮ್ಮ ಬೆನ್ನ ಹಿಂದೆಯೇ ನಿಲ್ಲುತ್ತಾಳೆ. ಇಂತಹ ತಾಯಿಯ ನೆರಳು ಆಶೀರ್ವಾದ ಜೀವನದಲ್ಲಿ ಇರುವವರೆಗೆ ನಮಗೆ ಯಾವ ದುಷ್ಟ ಶಕ್ತಿಯ ಭಯವೂ ಇರುವುದಿಲ್ಲ. ನೂರು ದೇವರುಗಳಿಗಿಂತ, ತಾಯಿ ದೇವರು ಮೇಲು. ತಾಯಿಯ ಮನಸ್ಸನ್ನು ಎಂದಿಗೂ ನೋಯಿಸಬೇಡಿ ಅವಳು ನಿಟ್ಟುಸಿರಿಟ್ಟರೆ ನಮಗೆ ಖಂಡಿತ ಒಳ್ಳೆಯದಾಗುವುದಿಲ್ಲ.

ಕನ್ನಡಕೆ ಜಯಕಾರ

ಕನ್ನಡದ ನುಡಿ ಚಂದ ಅಕ್ಷರಗಳಿಂದ
ಮಲ್ಲಿಗೆಯ ಹೂವಿನೊಲು ಸ್ಮಿತ ಮಧುರ
ಗಂಧ!
ತಾಯ್ನುಡಿಯು ಮನೆ
ಮನೆಯೊಳನುರಣಿಸುತಿರಲಿ
ಕನ್ನಡಕೆ ಜಯಕಾರ ಎನುವ ದನಿ ಬರಲಿ!

★★★★★★

ನುಡಿ ಜಾತ್ರೆ

ಮಂಡ್ಯದಲಿ ನಡೆಯುತಿದೆ ಕನ್ನಡದ ನುಡಿ
ಜಾತ್ರೆ
ನಾವೆಲ್ಲ ಸಡಗರದಿ ಸೇರಿಕೊಳುವ
ಸಾಹಿತ್ಯದೌತಣವ ಮನದಣಿಯೆ ಸವಿಯುತ್ತ
ಜ್ಞಾನಸುಧೆಯನು ಮೊಗೆದು ತುಂಬಿಕೊಳುವ

★★★★★★

ಚಳಿಯೋಡಿಸಿ

ಸಾಹಿತ್ಯ ಜಾತ್ರೆಯಲಿ ಚಳಿಯೆಂದು
ನಡುಗದಿರಿ
ಗೋಷ್ಠಿಗಳ ನಡುನಡುವೆ ಬೆರೆತುಕೊಳ್ಳಿ
ಭಾಷಣಗಳಬ್ಬರಕೆ ಸುಳಿವ ಬೆಚ್ಚನೆ ಗಾಳಿ
ಚಳಿಯನ್ನು ಗುಡಿಸುವುದು, ಬಳಸಿಕೊಳ್ಳಿ!

– ನಭನೆಂಪು

ಪರಮಾತ್ಮನೊಂದಿಗೆ ಒಂದಾಗುವ ಪರಿ

ನಿತ್ಯಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ಸ್ವಧರ್ಮ ಮತ್ತು ಪರಧರ್ಮ (ಇತರರ ಗುಣ)ಗಳ ಬಗ್ಗೆ ವಿವರಿಸುತ್ತಾನೆ (2.31, 2.37) ಮತ್ತು ಪರಮಾತ್ಮನೊಂದಿಗೆ ಒಂದಾಗಲು ಎಲ್ಲ ಧರ್ಮಗಳನ್ನು ತ್ಯಜಿಸುವಂತೆ ಉಪದೇಶಿಸುತ್ತಾನೆ(18.66).

ತಾನು ಯುದ್ಧ ಮಾಡಿ ತನ್ನ ಸಹೋದರನನ್ನು ಕೊಂದರೆ ತನ್ನ ಕೀರ್ತಿಗೆ ಧಕ್ಕೆ ಉಂಟಾಗುತ್ತದೆ ಎಂಬ ಅಹಂ ಕೇಂದ್ರೀಕೃತ ಭಯವೇ ಅರ್ಜುನನ ವಿಷಾದಕ್ಕೆ ಕಾರಣವಾಗಿದೆ. ಯುದ್ಧ ಮಾಡುವುದು ಅವನ ಸ್ವಧರ್ಮವಾದ್ದರಿಂದ ಅವನು ಯುದ್ಧವನ್ನು ತಪ್ಪಿಸಿಕೊಂಡರೂ ಅವನ ಕೀರ್ತಿಗೆ ಭಂಗ ಉಂಟಾಗುತ್ತದೆ ಎಂದು ಕೃಷ್ಣ ಹೇಳುತ್ತಾನೆ (2.34, 2.36). ಅರ್ಜುನನು ಯುದ್ಧ ಮಾಡಲು ಹೆದರುತ್ತಾನೆ ಮತ್ತು ಕ್ಷತ್ರಿಯನಿಗೆ ಯುದ್ಧದ ಭೀತಿ ಸಾವಿಗಿಂತ ಕೆಟ್ಟದ್ದು ಎಂದು ಮುಂದೆ ಸಮಾಜ ಹೇಳಬಹುದು.

ಸ್ವಧರ್ಮದಲ್ಲಿ ದೋಷ ಇದ್ದರೂ, ಒಳ್ಳೆಯ ಗುಣಗಳು ಇಲ್ಲದಿದ್ದರೂ ಅದು ಪರಧರ್ಮಕ್ಕಿಂತ ಹೆಚ್ಚು ಒಳ್ಳೆಯದು ಮತ್ತು ಸ್ವಧರ್ಮದ ಮಾರ್ಗದಲ್ಲಿ ಬರುವ ಮರಣವು ಭಯದಿಂದ ಮಾಡುವ ಯುದ್ಧದ ಪರಧರ್ಮಕ್ಕಿಂತ ಹೆಚ್ಚು ಒಳ್ಳೆಯದು.

ವಿಶೇಷವಾಗಿ ಇತರ ಯಶಸ್ವಿ ಜನರನ್ನು ನಾವು ನೋಡಿದಾಗ ಬಾಹ್ಯ ದೃಷ್ಟಿಯುಳ್ಳ ಇಂದ್ರಿಯಗಳಿಗೆ ಪರಧರ್ಮ ಸುಲಭವಾಗಿ ಹಾಗೂ ಹೆಚ್ಚು ಒಳ್ಳೆಯದಾಗಿ ಅನಿಸುತ್ತದೆ. ಆದರೆ ಸ್ವಧರ್ಮಕ್ಕೆ ಶಿಸ್ತು ಮತ್ತು ಪರಿಶ್ರಮ ಬೇಕಾಗುತ್ತದೆ. ಮತ್ತು ಅದು ನಿಧಾನವಾಗಿ ನಮ್ಮೊಳಗೆ ಅನಾವರಣಗೊಳ್ಳಬೇಕಾಗುತ್ತದೆ. ಸಾಮಾನ್ಯವಾಗಿ ನಾವು ಹುಟ್ಟಿದ ಗೌರವಯುತ ಸ್ಥಳ, ಕುಟುಂಬ, ಶಾಲೆಯಲ್ಲಿಯ ಶ್ರೇಣಿಗಳು, ವೃತ್ತಿಯಲ್ಲಿ ಅಥವಾ ಕೆಲಸದಲ್ಲಿಯ ಒಳ್ಳೆಯ ಸಂಪಾದನೆ ಹಾಗೂ ನಾವು ಪಡೆಯುವ ಅಧಿಕಾರ ಕೀರ್ತಿ ಇವುಗಳೊಂದಿಗೆ ಹೋಲಿಸುವುದರಿಂದ ನಮ್ಮ ಸ್ವ ಸಾಮರ್ಥ್ಯದ ಅರಿವಾಗುತ್ತದೆ. ಆದರೆ ಕೃಷ್ಣನ ಪ್ರಕಾರ ಪ್ರತಿಯೊಬ್ಬನೂ ಶ್ರೇಷ್ಠನಾಗಿದ್ದಾನೆ ಹಾಗೂ ತನ್ನ ಸ್ವಧರ್ಮದಂತೆ ಅದ್ವಿತೀಯನಾಗಿ ವಿಕಾಸಗೊಳ್ಳುತ್ತಾನೆ. ಎಲ್ಲದರಲ್ಲಿಯೂ ಅವಶ್ಯಕವಾಗಿರುವದು ಒಂದೇ ಆಗಿರುವಾಗ ವ್ಯಕ್ತವಾದ ಪ್ರತಿ ವಸ್ತುವು ಶ್ರೇಷ್ಠವಾಗಿರುತ್ತದೆ.

ಅಂತಿಮವಾಗಿ ನಾವು ಎಲ್ಲ ಧರ್ಮಗಳನ್ನು ತ್ಯಜಿಸಿ ಅವನಿಗೆ (ಪ್ರಭುವಿಗೆ) ಶರಣಾದರೆ ಅವನು ನಮ್ಮನ್ನು ಎಲ್ಲ ಪಾಪಗಳಿಂದ ಬಿಡುಗಡೆಗೊಳಿಸುತ್ತಾನೆ ಎಂದು ಕೃಷ್ಣ ಹೇಳುತ್ತಾನೆ (18.66). ಇದು ಭಕ್ತಿ ಯೋಗದಲ್ಲಿ ತಿಳಿಸಿದ ಶರಣಾಗತಿಗೆ ಸಮವಾಗಿದೆ ಮತ್ತು ಆಧ್ಯಾತ್ಮಿಕತೆಯ ತಳಹದಿಗಳಲ್ಲಿ ಒಂದಾಗಿದೆ. ಸಾಗರದಲ್ಲಿ ಒಂದು ಭಾಗವಾಗಿ ಸುತ್ತುತ್ತಿರುವ ನದಿಯು ತನ್ನ ಸ್ವಧರ್ಮವನ್ನು ಕಳೆದುಕೊಳ್ಳುವಂತೆ, ನಾವು ಕೂಡ ನಮ್ಮ ಅಹಂಕಾರ ಮತ್ತು ಸ್ವಧರ್ಮವನ್ನು ಕಳೆದುಕೊಂಡು ಪರಮಾತ್ಮನಲ್ಲಿ ಒಂದಾಗಬೇಕು.

ಸಮಾಚಾರ ಸಣ್ಣದಲ್ಲ

ಚಂಡಮಾರುತ: ಸತ್ತವರ ಸಂಖ್ಯೆ 73ಕ್ಕೆ

ಮಾಪುಟೊ: ಮೊಜಾಂಬಿಕದಲ್ಲಿ ಚಿಡೋ ಚಂಡಮಾರುತದಿಂದ ಸಾವನ್ನಪ್ಪಿದವರ ಸಂಖ್ಯೆ 73ಕ್ಕೆ ಏರಿದೆ ಎಂದು ಅಲ್ಲಿನ ರಾಷ್ಟ್ರೀಯ ಅಪಾಯ ಮತ್ತು ವಿಪತ್ತು ನಿರ್ವಹಣಾ ಸಂಸ್ಥೆ ತಿಳಿಸಿದೆ. ಉತ್ತರ ಕ್ಯಾಬೊ ಡೆಲ್ಗಾಡೊ ಪ್ರಾಂತ್ಯದಲ್ಲಿ ಕನಿಷ್ಠ 66 ಸಾವುಗಳು ಸಂಭವಿಸಿವೆ ಎಂದು ವಿಪತ್ತು ಕೇಂದ್ರ ಮಾಹಿತಿ ನೀಡಿದೆ. ನಾಂಪುಲಾ ಪ್ರಾಂತ್ಯದಲ್ಲಿ ನಾಲ್ವರು ಮತ್ತು ಒಳನಾಡಿನ ನಿಯಾಸ್ಸಾದಲ್ಲಿ ಮೂವರು ಸಾವನ್ನಪ್ಪಿದ್ದು, ಒಬ್ಬ ವ್ಯಕ್ತಿ ಕಾಣೆಯಾಗಿದ್ದಾರೆ ಎಂದು ಅದು ಹೇಳಿದೆ. ಚಂಡಮಾರುತದಿಂದ 540ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಗಂಟೆಗೆ ಸರಿಸುಮಾರು 260 ಕಿಮೀ ವೇಗದ ಗಾಳಿ ಬೀಸುತ್ತಿದ್ದು, 24 ಗಂಟೆಗಳಲ್ಲಿ ಸುಮಾರು 250 ಮಿ.ಮೀ ಭಾರೀ ಮಳೆಯನ್ನು ಸುರಿಸಿದೆ ಎಂದು ಅಧಿಕಾರಿಗಳನ್ನು ಉಲ್ಲೇಖಿಸಿ ಅಲ್ ಜಜೀರಾ ವರದಿ ಮಾಡಿದೆ.

ಇಂದು ಜಿಎಸ್‌ಟಿ ಕೌನ್ಸಿಲ್ ಸಭೆ

ಜೈಸಲ್ಮೇರ್: ನಾಳೆ ಇಲ್ಲಿ ಹೋಟೆಲ್ ಮ್ಯಾರಿಯಟ್‌ನಲ್ಲಿ 55ನೇ ಜಿಎಸ್‌ಟಿ ಕೌನ್ಸಿಲ್ ಸಭೆ ಇಂದು ನಡೆಯಲಿದೆ. ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ಈ ಸಭೆ ನಡೆಯಲಿದೆ. ದೆಹಲಿ ಮುಖ್ಯಮಂತ್ರಿ ಅತಿಶಿ, ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್, ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ಗೋವಾ ಮುಖ್ಯಮಂತ್ರಿ ಮತ್ತು ಹಣಕಾಸು ಸಚಿವ ಪ್ರಮೋದ್ ಸಾವಂತ್, ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ, ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ, ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ಮತ್ತು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಸೇರಿದಂತೆ ವಿವಿಧ ರಾಜ್ಯಗಳ ಇತರ ಪ್ರತಿನಿಧಿಗಳೂ ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಶಸ್ತ್ರ ಕೈಗೆತ್ತಿಕೊಳ್ಳಲು ಕುರ್ದಿಶ್ ಪಡೆ ಕರೆ

ಡಮಾಸ್ಕಸ್: ಸಿರಿಯಾದ ಗಡಿ ನಗರ ಕೊಬಾನಿ ಬಳಿ ಟರ್ಕಿ ಪಡೆಗಳು ಮತ್ತು ಅದರ ಮಿತ್ರ ಪಡೆಗಳು ದಾಳಿಗಳನ್ನು ಹೆಚ್ಚಿಸಿವೆ ಎಂದು ಕುರ್ದಿಶ್ ನೇತೃತ್ವದ ಸಿರಿಯನ್ ಡೆಮಾಕ್ರಟಿಕ್ ಫೋರ್ಸ್ (ಎಸ್‌ಡಿಎಫ್) ಆರೋಪಿಸಿದೆ. ಟರ್ಕಿಯ ಪಡೆಗಳು ಮತ್ತು ಅದರ ಬಾಡಿಗೆ ಸೈನಿಕರು ಕೊಬಾನಿಯ ದಕ್ಷಿಣ ಹೊರವಲಯದಲ್ಲಿ, ವಿಶೇಷವಾಗಿ ತಿಶ್ರೀನ್ ಅಣೆಕಟ್ಟು ಪ್ರದೇಶದ ಬಳಿ ಪೂರ್ಣ ಪ್ರಮಾಣದ ದಾಳಿ ಆರಂಭಿಸಿದ್ದಾರೆ ಎಂದು ಎಸ್‌ಡಿಎಫ್ ಹೇಳಿಕೆಯಲ್ಲಿ ತಿಳಿಸಿದೆ. ತನ್ನ ಹೋರಾಟಗಾರರು ರಾತ್ರಿಯ ವೇಳೆಗೆ ದಾಳಿಕೋರರನ್ನು ಹಿಮ್ಮೆಟ್ಟಿಸಿದರು. ಆದರೆ ಟರ್ಕಿಯ ಡ್ರೋನ್‌ಗಳು ಮತ್ತು ಫಿರಂಗಿಗಳು ಕೊಬಾನಿಯ ವಿವಿಧ ಭಾಗಗಳ ಮೇಲೆ ದಾಳಿ ಮುಂದುವರಿಸಿವೆ ಎಂದು ಗುಂಪು ಹೇಳಿಕೊಂಡಿದೆ. ಇದಲ್ಲದೆ ಟ್ಯಾಂಕ್‌ಗಳು ಮತ್ತು ಶಸ್ತ್ರಸಜ್ಜಿತ ವಾಹನಗಳು ಸೇರಿದಂತೆ ಟರ್ಕಿಯ ಮಿಲಿಟರಿ ಪಡೆಗಳು ಸಿರಿಯಾದ ಉತ್ತರ ಗಡಿ ಉದ್ದಕ್ಕೂ ಜಮಾಯಿಸುತ್ತಿವೆ ಎಂದು ಹೇಳಲಾಗುತ್ತಿದೆ.

ರಾಹುಲ್ ಪ್ರಕರಣ: ಕ್ರೈಂ ಬ್ರಾಂಚ್‌ಗೆ

ದೆಹಲಿ: ಸಂಸತ್ತಿನ ಪ್ರಕರಣದ ವಿಚಾರಣೆ ಮತ್ತು ಎರಡೂ ಪ್ರಕರಣಗಳ (ಬಿಜೆಪಿಯ ದೂರು ಮತ್ತು ಕಾಂಗ್ರೆಸ್‌ನ ದೂರು) ತನಿಖೆಯನ್ನು ಅಪರಾಧ ವಿಭಾಗಕ್ಕೆ ವರ್ಗಾಯಿಸಲಾಗಿದೆ ಎಂದು ದೆಹಲಿ ಪೊಲೀಸರು ಇಂದು ಖಚಿತಪಡಿಸಿದ್ದಾರೆ. ಬಿಜೆಪಿ ನೀಡಿದ ದೂರಿನ ಆಧಾರದಲ್ಲಿ ಸಂಸದ ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಗುರುವಾರ ಸಂಸತ್ತಿನ ಆವರಣದಲ್ಲಿ ನಡೆದ ಗದ್ದಲದ ಸಂದರ್ಭದಲ್ಲಿ ದೈಹಿಕ ಹಲ್ಲೆ ಮತ್ತು ಪ್ರಚೋದನೆಯ ಆರೋಪದ ಮೇಲೆ ಬಿಜೆಪಿ ದೂರು ನೀಡಿದ ಕೆಲವೇ ಗಂಟೆಗಳ ನಂತರ ದೆಹಲಿ ಪೊಲೀಸರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

685 ಭಾರತೀಯರಿಂದ ಬಹಿರಂಗ ಪತ್ರ

ದೆಹಲಿ: ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಸ್ಥಿತಿ ದಿಂದ ದಿನಕ್ಕೆ ಹದಗೆಡುತ್ತಿರುವ ಹಿನ್ನೆಲೆಯಲ್ಲಿ ಮಾಜಿ ರಾಜತಾಂತ್ರಿಕರು, ಸಾರ್ವಜನಿಕ ಸೇವಕರು, ಹಿರಿಯ ಸರ್ಕಾರಿ ಅಧಿಕಾರಿಗಳು, ಸಶಸ್ತ್ರ ಸಿಬ್ಬಂದಿ ಮತ್ತು ನಾಗರಿಕ ಸಮಾಜದ ಸದಸ್ಯರು ಸೇರಿದಂತೆ 685 ಗಣ್ಯರು ಸಹಿ ಮಾಡಿದ ಬಹಿರಂಗ ಪತ್ರವನ್ನು ಬಿಡುಗಡೆ ಮಾಡಲಾಗಿದೆ. ಬಾಂಗ್ಲಾದಲ್ಲಿನ ಪ್ರಸ್ತುತ ಪರಿಸ್ಥಿತಿಯು ಭಾರತೀಯ ಅಲ್ಪಸಂಖ್ಯಾತ ಜನರಿಗೆ ಅಸಹನೀಯವಾಗಿದೆ, ಹೀಗಾಗಿ ಬಾಂಗ್ಲಾದೇಶದಲ್ಲಿ ಹಿಂದೂಗಳು ಮತ್ತು ಇತರ ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳು ಮೊಟಕಾಗಿವೆ.

{ ಪ್ರಿಯಾಂಕ ಗಾಂಧಿ } ಸಂಸದೆ

ಅಂಬೇಡ್ಕರ್ ಅವರ ನಿಜವಾದ ಭಾವನೆಗಳು ಮುನ್ನೆಲೆಗೆ ಬಂದಿವೆ ಎಂದು ನನಗೆ ತಿಳಿದಿದೆ. ಹಾಗಾಗಿ ನಾವು ಈ ವಿಷಯವನ್ನು ಪ್ರಸ್ತಾಪಿಸುತ್ತಿರುವುದರಿಂದ ಕೇಂದ್ರ ಸರ್ಕಾರ ಈಗ ಪ್ರತಿಪಕ್ಷಗಳಿಗೆ ಹೆದರುತ್ತಿದೆ. ಈ ವಿಷಯದಲ್ಲಿ ರಾಷ್ಟ್ರೀಯ ಹಿತಾಸಕ್ತಿ ಒಳಗೊಂಡಿದೆ. ಸಂವಿಧಾನ ನೀಡುವ ಮೂಲಕ ಅಂಬೇಡ್ಕರ್ ಅವರು ಈ ದೇಶದ ಜನರಿಗೆ ಪ್ರತಿಭಟಿಸುವ ಹಕ್ಕು ನೀಡಿದ್ದಾರೆ.

ವಿವಾದದಿಂದ ಹಿಂದೂ ನಾಯಕರಾಗಲು ಯತ್ನ : ಆರೆಸ್ಸೆಸ್ ನಾಯಕನ ಬೇಸರ

ಮಂದಿರ-ಮಸೀದಿ ಕಿಚ್ಚು ಸಾಕು ಮಾಡಿ: ಭಾಗವತ್ ಕಿವಿಮಾತು

ಪುಣೆ: ಅಯೋಧ್ಯೆ ರಾಮ ಮಂದಿರ ನಿರ್ಮಾಣದ ನಂತರ ಕೆಲವು ವ್ಯಕ್ತಿಗಳು ಕೋಮುವಾದವನ್ನು ಕೆರಳಿಸುವ ಮೂಲಕ ತಾವು ಹಿಂದೂಗಳ ನಾಯಕರು ಆಗಬಹುದು ಎಂದು ನಂಬಿದ್ದಾರೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಪುಣೆಯ ಸಹಜೀವನ ವ್ಯಾಖ್ಯಾನ್ಮಾಲಾ ಉಪನ್ಯಾಸ ಸರಣಿಯಲ್ಲಿ ಭಾರತ ವಿಶ್ವಗುರು ಕುರಿತು ಉಪನ್ಯಾಸ ನೀಡಿದ ಭಾಗವತ್, ಎಲ್ಲರನ್ನೂ ಒಳಗೊಳ್ಳುವ ಸಮಾಜಕ್ಕಾಗಿ ಪ್ರತಿಪಾದಿಸುತ್ತಾ, ದೇಶವು ಸಾಮರಸ್ಯದಿಂದ ಒಟ್ಟಿಗೆ ಬದುಕಬಹುದು ಎಂಬುದನ್ನು ಜಗತ್ತಿಗೆ ತೋರಿಸಬೇಕಾಗಿದೆ ಎಂದೂ ಹೇಳಿದರು.

ಭಾರತೀಯ ಸಮಾಜದ ಬಹುತ್ವವನ್ನು ಎತ್ತಿ ತೋರಿಸಿದ ಅವರು, ರಾಮಕೃಷ್ಣ ಮಿಷನ್‌ನಲ್ಲಿ ಕ್ರಿಸ್‌ಮಸ್ ಆಚರಿಸಲಾಗುತ್ತಿದ್ದು, ನಾವು ಹಿಂದೂಗಳಾಗಿರುವುದರಿಂದ ನಾವು ಮಾತ್ರ ಇದನ್ನು ಮಾಡಬಹುದು ಎಂದು ಹೇಳಿದರು. ಬಹಳ ಸಮಯದಿಂದ ಸಾಮರಸ್ಯದಿಂದ ನಾವು ಬದುಕುತ್ತಿದ್ದೇವೆ. ಈ ಸೌಹಾರ್ದತೆಯನ್ನು ನಾವು ಜಗತ್ತಿಗೆ ಒದಗಿಸಬೇಕಾದರೆ, ಅದರ ಮಾದರಿಯನ್ನು ರಚಿಸಬೇಕಾಗಿದೆ. ರಾಮಮಂದಿರ ನಿರ್ಮಾಣದ ನಂತರ, ಕೆಲವು ಜನರು ಹೊಸ ಸ್ಥಳಗಳಲ್ಲಿ ಕೋಮುವಾದವನ್ನು ಬಿತ್ತುವ ಮೂಲಕ ತಾವು ಹಿಂದೂಗಳ ನಾಯಕರಾಗಬಹುದು ಎಂದು ಭಾವಿಸುತ್ತಾರೆ, ಇದು ಸ್ವೀಕಾರಾರ್ಹವಲ್ಲ ಎಂದು ಭಾಗವತ್ ಹೇಳಿದ್ದಾರೆ.

ರಾಮ ಮಂದಿರವು ಎಲ್ಲಾ ಹಿಂದೂಗಳ ನಂಬಿಕೆಯಾಗಿರುವುದರಿಂದ ಅದನ್ನು ನಿರ್ಮಿಸಲಾಗಿದೆ. ಆದರೆ ಬೇರೆ ಬೇರೆ ಆರಾಧನಾಲಯಗಳ ಬಗ್ಗೆ ಪ್ರತಿದಿನ ವಿವಾದ ಹುಟ್ಟಿಕೊಳ್ಳುತ್ತಿದೆ, ಅದನ್ನು ಮುಂದುವರಿಸಲು ಸಾಧ್ಯವಿಲ್ಲ. ನಾವು ಒಟ್ಟಿಗೆ ಬದುಕಬಲ್ಲೆವು ಎಂಬುದನ್ನು ಭಾರತವು ತೋರಿಸಬೇಕಾಗಿದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಭಾಗವತ್ ಅವರು ಐತಿಹಾಸಿಕ ಪ್ರಭಾವಗಳ ಬಗ್ಗೆ ಮಾತನಾಡಿ, ಭಾರತದ ಮೇಲಾದ ಹೊರಗಿನ ದಾಳಿ ಬಗ್ಗೆ ಉಲ್ಲೇಖಿಸಿ ವಿದೇಶಿಯರು ಕಠಿಣ ಸಿದ್ಧಾಂತಗಳನ್ನು ತಂದರು ಮತ್ತು ಪ್ರಾಬಲ್ಯವನ್ನು ಪುನಃಸ್ಥಾಪಿಸಲು ಪ್ರಯತ್ನಿಸಿದರು. ಭಾರತವು ಈಗ ಸಾಂವಿಧಾನಿಕ ಆಡಳಿತದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಚುನಾಯಿತ ಪ್ರತಿನಿಧಿಗಳು ಸರ್ಕಾರವನ್ನು ನಿರ್ವಹಿಸುತ್ತಾರೆ, ಇದು ಪ್ರಾಬಲ್ಯದ ಆಳ್ವಿಕೆಗೆ ಅಂತ್ಯವನ್ನು ಸೂಚಿಸುತ್ತದೆ ಎಂದು ಹೇಳಿದ್ದಾರೆ. ಮೊಘಲ್ ಚಕ್ರವರ್ತಿ ಔರಂಗಜೇಬನ ಆಡಳಿತದ ಬಗ್ಗೆ ಮಾತನಾಡಿದ ಭಾಗವತ್, ಅದೇ ವಂಶದ ಬಹದ್ದೂರ್ ಶಾ ಜಾಫರ್ 1857ರಲ್ಲಿ ಗೋಹತ್ಯೆಯನ್ನು ನಿಷೇಧಿಸಿ ಬದಲಾವಣೆ ತಂದಿದ್ದರು ಎಂದು ಹೇಳಿದರು. ಬ್ರಿಟಿಷರ ಒಡೆದು ಆಳುವ ನೀತಿಯ ಬಗ್ಗೆ ಕಿಡಿಕಾರಿದ ಭಾಗವತ್, ವಸಾಹತುಶಾಹಿ ತಂತ್ರಗಳು ಧಾರ್ಮಿಕ ವಿಭಜನೆಗಳನ್ನು ತಮ್ಮ ಲಾಭಕ್ಕಾಗಿ ಬಳಸಿಕೊಂಡು ಪಾಕಿಸ್ತಾನವನ್ನು ಹೇಗೆ ರಚಿಸಲಾಗಿತು ಎಂಬುದರ ಬಗ್ಗೆಯೂ ಮಾತನಾಡಿದ್ದಾರೆ.

ಭಾಗವತ್ ಹೇಳಿಕೆಯ ಹಿನ್ನೆಲೆ

ಉತ್ತರ ಪ್ರದೇಶದ ಸಂಭಾಲ್‌ನ ಶಾಹಿ ಜಾಮಾ ಮಸೀದಿ ಮತ್ತು ರಾಜಸ್ಥಾನದ ಅಜ್ಮೀರ್ ಷರೀಫ್ ನಂತಹ ಧಾರ್ಮಿಕ ಸ್ಥಳಗಳ ಮೂಲದ ಬಗ್ಗೆ ಇತ್ತೀಚಿನ ವಿವಾದಗಳ ಹಿನ್ನೆಲೆಯಲ್ಲಿ ಮೋಹನ್ ಭಾಗವತ್ ಹೀಗಂದಿದ್ದಾರೆ. ಭಾರತದಲ್ಲಿ ಬಹುಸಂಖ್ಯಾತ ಅಥವಾ ಅಲ್ಪಸಂಖ್ಯಾತ ಎಂಬುದಿಲ್ಲ, ಎಲ್ಲರೂ ಒಂದೇ ಎಂಬುದು ಆರ್‌ಎಸ್‌ಎಸ್ ಮುಖ್ಯಸ್ಥರ ಮಾತಿನ ತಾತ್ಪರ್ಯವಾಗಿದೆ. ತಮ್ಮ ತಪ್ಪುಗಳಿಂದ ಭಾರತೀಯರು ಪಾಠ ಕಲಿಯಬೇಕು, ವಿವಾದಾತ್ಮಕ ವಿಷಯಗಳನ್ನು ತಪ್ಪಿಸುವ ಮೂಲಕ ಒಳ್ಳೆಯತನಕ್ಕೆ ಮಾದರಿಯಾಗಬೇಕು. ಉಗ್ರವಾದ, ಆಕ್ರಮಣಶೀಲತೆ, ಬಲಪ್ರಯೋಗ ಮತ್ತು ಇತರರ ದೇವರನ್ನು ಅವಮಾನಿಸುವುದು ನಮ್ಮ ಸಂಸ್ಕೃತಿಯಲ್ಲ ಎಂಬ ಮಾತನ್ನು ಒತ್ತಿ ಹೇಳಲು ಈ ಸಂದರ್ಭದಲ್ಲಿ ಮೋಹನ್ ಭಾಗವತ್ ಮರೆಯಲಿಲ್ಲ.

ರಾಹುಲ್ ಪೌರತ್ವ: ಕೇಂದ್ರ ವಿವೇಚನೆಗೆ ಬಿಟ್ಟ ಹೈಕೋರ್ಟ್

ದೆಹಲಿ: ಪೌರತ್ವ ಸಂಬಂಧಿತ ವಿಷಯಗಳ ಬಗ್ಗೆ ನಿರ್ಧರಿಸಲು ಕೇಂದ್ರ ಸರ್ಕಾರವು ಸಮರ್ಥವಾಗಿದೆ ಎಂದು ಅಲಹಾಬಾದ್ ಹೈಕೋರ್ಟ್ ಹೇಳಿದೆ. ಲೋಕಸಭಾ ವಿಪಕ್ಷ ನಾಯಕ ಹಾಗೂ ಸಂಸದ ರಾಹುಲ್ ಗಾಂಧಿ ದ್ವಿಪೌರತ್ವಕ್ಕೆ ಸಂಬಂಧಿಸಿದಂತೆ ಅಲಹಾಬಾದ್ ಹೈಕೋರ್ಟ್ ಈ ವಿಚಾರವನ್ನು ಹೇಳಿದೆ. ರಾಹುಲ್ ಅವರ ಬ್ರಿಟಿಷ್ ಪೌರತ್ವದ ಬಗ್ಗೆ ಸಿಬಿಐ ತನಿಖೆಗೆ ನ್ಯಾಯಾಲಯದಿಂದ ನಿರ್ದೇಶನಗಳನ್ನು ಕೋರುವ ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ಮೌಖಿಕ ಅವಲೋಕನ ಮಾಡಲಾಯಿತು.

ಮುಖ್ಯ ನ್ಯಾಯಮೂರ್ತಿ ಅರುಣ್ ಬನ್ಸಾಲಿ ಮತ್ತು ನ್ಯಾಯಮೂರ್ತಿ ಜಸ್‌ಪ್ರೀತ್ ಸಿಂಗ್ ಅವರ ಪೀಠದ ವಿಚಾರಣೆ ನಡೆಸುತ್ತಿರುವ ಎಸ್. ವಿಘ್ನೇಶ್ ಶಿಶಿರ್ ಅವರು ಸಲ್ಲಿಸಿದ ಅರ್ಜಿಯನ್ನು ಮುಖ್ಯ ಚುನಾವಣಾ ಆಯುಕ್ತರು, ಉತ್ತರ ಪ್ರದೇಶದ ಮುಖ್ಯ ಚುನಾವಣಾಧಿಕಾರಿ ಮತ್ತು ರಾಯ್‌ಬರೇಲಿಯ ಚುನಾವಣಾಧಿಕಾರಿಗೆ ನಿರ್ದೇಶನಗಳನ್ನು ನೀಡುವಂತೆ ನ್ಯಾಯಾಲಯಕ್ಕೆ ಮನವಿ ಮಾಡಲಾಯಿತು. ರಾಹುಲ್ ಗಾಂಧಿ ವಿರುದ್ಧ ಬ್ರಿಟನ್ ಪೌರತ್ವ ಆರೋಪದಡಿ ಸಲ್ಲಿಸಿರುವ ಅರ್ಜಿಯ ಕುರಿತು ನಿರ್ಧಾರವನ್ನು ತಿಳಿಸಲು ಅಲಹಾಬಾದ್ ಹೈಕೋರ್ಟ್ ಮುಂದಿನ ವರ್ಷ ಮಾರ್ಚ್ 24ರವರೆಗೆ ಕೇಂದ್ರ ಸರ್ಕಾರಕ್ಕೆ ಕಾಲಾವಕಾಶ ನೀಡಿದೆ. ರಾಹುಲ್ ಅವರ ಬ್ರಿಟಿಷ್ ಪೌರತ್ವವನ್ನು ಮರೆಮಾಚಿರುವ ಆರೋಪದ ಮೇಲೆ ರಾಯ್‌ಬರೇಲಿ ಲೋಕಸಭಾ ಕ್ಷೇತ್ರದಿಂದ ಈ ವರ್ಷದ ಚುನಾವಣೆಯನ್ನು ರದ್ದುಗೊಳಿಸುವಂತೆ ಮನವಿ ಮಾಡಲಾಗಿದೆ. ಕರ್ನಾಟಕ ಬಿಜೆಪಿ ಕಾರ್ಯಕರ್ತ ಎಸ್. ವಿಘ್ನೇಶ್ ಶಿಶಿರ್ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿತು.

ದ್ವಿಪೌರತ್ವಕ್ಕೆ ಭಾರತದಲ್ಲಿ ಅವಕಾಶವಿದೆಯೇ?

ದ್ವಿಪೌರತ್ವವೆಂದರೆ ಒಬ್ಬ ವ್ಯಕ್ತಿ ಏಕಕಾಲದಲ್ಲಿ ಎರಡು ದೇಶಗಳ ಪೌರತ್ವ ಹೊಂದಿರುವುದು ಎಂದರ್ಥ. ಅಮೆರಿಕಾ, ಫಿನ್‌ಲ್ಯಾಂಡ್, ಅಲ್ಬೇನಿಯಾ, ಇಸ್ರೇಲ್ ಮತ್ತು ಪಾಕಿಸ್ತಾನದಂತಹ ಅನೇಕ ದೇಶಗಳು ದ್ವಿಪೌರತ್ವವನ್ನು ಅನುಮತಿಸುತ್ತವೆ. ಭಾರತವು ತನ್ನ ಸಂವಿಧಾನದ ಅಡಿಯಲ್ಲಿ ದ್ವಿಪೌರತ್ವವನ್ನು ಅನುಮತಿಸುವುದಿಲ್ಲ. ಇದರರ್ಥ ಒಬ್ಬ ಭಾರತೀಯ ನಾಗರಿಕನು ಏಕಕಾಲದಲ್ಲಿ ಬೇರೆ ಯಾವುದೇ ದೇಶದ ಪೌರತ್ವವನ್ನು ಹೊಂದಲು ಸಾಧ್ಯವಿಲ್ಲ. ಭಾರತದ ಸಂವಿಧಾನದ ಅಡಿಯಲ್ಲಿ ಇಡೀ ದೇಶಕ್ಕೆ ಏಕ ಪೌರತ್ವದ ವ್ಯವಸ್ಥೆ ಇದೆ. ಭಾರತದ ಸಂವಿಧಾನದಲ್ಲಿ ದ್ವಿಪೌರತ್ವಕ್ಕೆ ಯಾವುದೇ ಅವಕಾಶವಿಲ್ಲ. ಭಾರತೀಯ ಪ್ರಜೆಯು ಇನ್ನೊಂದು ದೇಶದ ಪೌರತ್ವವನ್ನು ಪಡೆಯಲು ಬಯಸಿದರೆ, ಅವನು ತನ್ನ ಭಾರತೀಯ ಪಾಸ್‌ಪೋರ್ಟ್ ಅನ್ನು ಒಪ್ಪಿಸಬೇಕು ಮತ್ತು ಭಾರತೀಯ ಪೌರತ್ವವನ್ನು ತ್ಯಜಿಸಬೇಕಾಗುತ್ತದೆ.

ಭಾರತೀಯ ರಾಷ್ಟ್ರೀಯ ಲೋಕದಳದ ಮುಖ್ಯಸ್ಥ

ಓಂ ಪ್ರಕಾಶ ಚೌಟಾಲಾ ನಿಧನ

ಚಂಡೀಗಢ: ನಾಲ್ಕು ಬಾರಿ ಹರಿಯಾಣ ಮುಖ್ಯಮಂತ್ರಿಯಾಗಿದ್ದ ಹಾಗೂ ಭಾರತೀಯ ರಾಷ್ಟ್ರೀಯ ಲೋಕದಳ (ಐಎನ್‌ಎಲ್‌ಡಿ) ಮುಖ್ಯಸ್ಥ ಓಂ ಪ್ರಕಾಶ್ ಚೌಟಾಲಾ (89) ಶುಕ್ರವಾರದಂದು ಗುರುಗ್ರಾಮದ ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ನಿಧನರಾದರು. ಓಂ ಪ್ರಕಾಶ್ ಚೌಟಾಲಾರವರು ಮಕ್ಕಳಾದ

ಅಭಯ್ ಸಿಂಗ್ ಚೌಟಾಲಾ ಮತ್ತು ಅಜಯ್ ಸಿಂಗ್ ಚೌಟಾಲಾ ಅವರನ್ನು ಅಗಲಿದ್ದು, ಅವರು ಮಾಜಿ ಉಪ-ಪ್ರಧಾನಿ ದೇವಿಲಾಲ್ ಅವರ ಪುತ್ರ.

ಚೌಟಾಲಾ ಅವರು ಹರಿಯಾಣದ ಗುರುಗ್ರಾಮದ ಮೇದಾಂತ ಆಸ್ಪತ್ರೆಯಲ್ಲಿ ಶುಕ್ರವಾರ ಮಧ್ಯಾಹ್ನ 12 ಗಂಟೆಯ ಸುಮಾರಿಗೆ ಕೊನೆಯುಸಿರೆಳೆದರು. ಉಸಿರಾಟದ ತೊಂದರೆ ಇದ್ದ ಕಾರಣ, ಕಳೆದ ಮೂರು-ನಾಲ್ಕು ವರ್ಷಗಳಿಂದ ಮೇದಾಂತದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಶುಕ್ರವಾರ ಅವರ ಆರೋಗ್ಯವು ಇದ್ದಕ್ಕಿದ್ದಂತೆ ಹದಗೆಟ್ಟಾಗ ಅವರನ್ನು ಮೇದಾಂತದ ಎಮರ್ಜೆನ್ಸಿ ವಾರ್ಡ್‌ಗೆ ದಾಖಲಿಸಲಾಗಿತ್ತು, ಆದರೆ ಅವರನ್ನು ಉಳಿಸಲು ವೈದ್ಯರಿಗೆ ಸಾಧ್ಯವಾಗಲಿಲ್ಲ. ಓಂ ಪ್ರಕಾಶ್ ಚೌಟಾಲಾ ಅವರು ಜನವರಿ 1, 1935ರಂದು ಹರಿಯಾಣದ ಸಿರ್ಸಾದ ಚೌಟಾಲಾ ಗ್ರಾಮದಲ್ಲಿ ಜನಿಸಿದರು. ನಾಲ್ಕು ಬಾರಿ ಹರಿಯಾಣದ ಮುಖ್ಯಮಂತ್ರಿಯಾದ ಹೆಗ್ಗಳಿಕೆ ಅವರದ್ದಾಗಿದೆ. ಆದರೆ 10 ವರ್ಷಗಳ ಪೈಕಿ ಒಂಬತ್ತೂವರೆ ವರ್ಷ ಜೈಲು ಶಿಕ್ಷೆ ಪೂರೈಸಿದವರಿಗೆ ಆರು ತಿಂಗಳ ವಿಶೇಷ ವಿನಾಯಿತಿ ನೀಡುವ ಆದೇಶವನ್ನು ದೆಹಲಿ ಸರ್ಕಾರ 2021ರಲ್ಲಿ ಅಂಗೀಕರಿಸಿದ ನಂತರ ಚೌಟಾಲಾ ಅವರನ್ನು ಜೈಲಿನಿಂದ ಅವಧಿಪೂರ್ವ ಬಿಡುಗಡೆ ಮಾಡಲಾಗಿತ್ತು. ಚೌಟಾಲಾ ಅದಾಗಲೇ ಒಂಬತ್ತು ವರ್ಷ ಒಂಬತ್ತು ತಿಂಗಳು ಶಿಕ್ಷೆಯನ್ನು ಅನುಭವಿಸಿದ್ದರಿಂದ ಬಿಡುಗಡೆಗೆ ಅರ್ಹರಾಗಿದ್ದರು.

ಚೌಟಾಲಾ ಅವರ ಮಗ ಅಭಯ್ ಸಿಂಗ್ ಚೌಟಾಲಾ ಅವರು ಹರಿಯಾಣದ ಎಲ್ಲೆನಾಬಾದ್ ಕ್ಷೇತ್ರದ ಮಾಜಿ ಶಾಸಕರಾಗಿದ್ದಾರೆ ಮತ್ತು ಅಕ್ಟೋಬರ್ 2014ರಿಂದ ಮಾರ್ಚ್ 2019 ರವರೆಗೆ ಹರಿಯಾಣ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು. ಚೌಟಾಲಾ ಅವರ ಮೊಮ್ಮಗ ದುಶ್ಯಂತ್ ಚೌಟಾಲಾರವರು ಹರಿಯಾಣದ ಹಿಂದಿನ ಬಿಜೆಪಿ ನೇತೃತ್ವದಲ್ಲಿ ಉಪಮುಖ್ಯಮಂತ್ರಿ ಯಾಗಿದ್ದರು.

ಹಗರಣದಲ್ಲಿ ದೀರ್ಘ ಶಿಕ್ಷೆ

ಶಿಕ್ಷಕರ ನೇಮಕಾತಿ ಹಗರಣದಲ್ಲಿ ತಪ್ಪಿತಸ್ಥರೆಂದು ಸಾಬೀತಾದ ನಂತರ ಚೌಟಾಲಾ ಮತ್ತು ಅವರ ಪುತ್ರ ಅಜಯ್ ಚೌಟಾಲಾ ಅವರಿಗೆ 2013ರಲ್ಲಿ ನ್ಯಾಯಾಲಯವು 10 ವರ್ಷಗಳ ಜೈಲುಶಿಕ್ಷೆ ವಿಧಿಸಿತು. ವಿಶೇಷ ಸಿಬಿಐ ನ್ಯಾಯಾಧೀಶ ವಿನೋದ್ ಕುಮಾರ್ ಅವರು 78 ವರ್ಷದ ಚೌಟಾಲಾ ಮತ್ತು ಅವರ 51 ವರ್ಷದ ಮಗನಿಗೆ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದರು. 2000ನೇ ಇಸವಿಯಲ್ಲಿ ರಾಜ್ಯದಲ್ಲಿ 3,206 ಶಿಕ್ಷಕರನ್ನು ಅಕ್ರಮವಾಗಿ ನೇಮಕ ಮಾಡಿದ ಆರೋಪದಲ್ಲಿ ತಂದೆ ಮತ್ತು ಮಗ ಹಾಗೂ ಇತರ 53 ಮಂದಿ ತಪ್ಪಿತಸ್ಥರು ಎಂದು 2013ರ ಜನವರಿ 16ರಂದು ನ್ಯಾಯಾಲಯ ತೀರ್ಪು ನೀಡಿತ್ತು.

ನೆಟ್ಟಾರು ಹತ್ಯೆ: ಆರೋಪಿ ಅರೆಸ್ಟ್

ದೆಹಲಿ: ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿದ್ದ ಪ್ರಮುಖ ಆರೋಪಿಯೊಬ್ಬನನ್ನು ರಾಷ್ಟ್ರೀಯ ತನಿಖಾ ದಳವು ದೆಹಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಿದೆ.

ಬಿಜೆಪಿ ಯುವ ಮೋರ್ಚಾ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಲುಕ್ ಔಟ್ ನೋಟಿಸ್ ಜಾರಿಯಾಗಿದ್ದ ಪ್ರಮುಖ ಆರೋಪಿ, ನಿಷೇಧಿತ ಪಿಎಫ್‌ಐ ಸಂಘಟನೆಯ ರಾಜ್ಯ ಕಾರ್ಯಕಾರಿಣಿ ಸದಸ್ಯನಾಗಿದ್ದ ಕೊಡಾಜೆ ಮೊಹಮ್ಮದ್ ಷರೀಫ್ ಎಂಬಾತನನ್ನು ಎನ್‌ಐಎ ಅಧಿಕಾರಿಗಳು ಬಂಧಿಸಿದ್ದಾರೆ. ಲುಕ್‌ಔಟ್ ನೋಟಿಸ್ ಜಾರಿಯಾಗಿದ್ದ ಆರೋಪಿ ಬಹ್ರೇನ್‌ನಿಂದ ದೆಹಲಿಗೆ ಬರ್ತಿದ್ದಂತೆ ಲಾಕ್ ಎನ್‌ಐಎ ಅಧಿಕಾರಿಗಳು ಲಾಕ್ ಮಾಡಿದ್ದಾರೆ. ಮಿತ್ತೂರಿನ ಫ್ರೀಡಂ ಕಮ್ಯುನಿಟಿ ಹಾಲ್‌ನಲ್ಲಿ ಪಿಎಫ್‌ಐನ ಬಾಹ್ಯ ತಂಡದ ಸದಸ್ಯರಿಗೆ ಶಸ್ತ್ರಾಸ್ತ್ರ ತರಬೇತಿ ನೀಡಿದ್ದ ಎಂಬ ಮಾಹಿತಿ ಇದೆ. ಪಿಎಫ್‌ಐನ ರಾಜ್ಯ ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸಿದ ಬಳಿಕ ಪ್ರವೀಣ್ ನೆಟ್ಟಾರು ಹತ್ಯೆಯ ಆದೇಶ ನೀಡುವ ಜವಾಬ್ದಾರಿಯನ್ನು ಮೊಹಮ್ಮದ್ ಷರೀಫ್ ವಹಿಸಿದ್ದನು. ಮೊಹಮ್ಮದ್ ಸೂಚನೆಯ ಮೇರೆಗೆ ಆರೋಪಿ ಮುಸ್ತಫಾ ಪೈಚಾರ್ ಮತ್ತು ಆತನ ತಂಡ ಪ್ರವೀಣ್ ನೆಟ್ಟಾರು ಅವರನ್ನು ಬರ್ಬರವಾಗಿ ಹತ್ಯೆಗೈದಿತ್ತು ಎಂಬ ಮಾಹಿತಿ ಲಭ್ಯವಾಗಿದೆ. 2022ರ ಜುಲೈ 26ರಂದು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆ ಗ್ರಾಮದಲ್ಲಿ ಬಿಜೆಪಿ ಯುವಮೋರ್ಚಾ ಸದಸ್ಯನ ಹತ್ಯೆ ನಡೆದಿತ್ತು.

ಸಾವಿಗೀಡಾದವರಿಗೆ 2 ಲಕ್ಷ ಪರಿಹಾರ ಘೋಷಣೆ

ಗ್ಯಾಸ್ ಟ್ಯಾಂಕರ್ ದುರಂತ: 11 ಸಾವು

ಜೈಪುರ: ಶುಕ್ರವಾರ ಮುಂಜಾನೆ ರಾಜಸ್ಥಾನದ ಜೈಪುರದಲ್ಲಿ ಸಂಭವಿಸಿದ ಗ್ಯಾಸ್ ಟ್ಯಾಂಕರ್ ದುರಂತದಲ್ಲಿ 11 ಜನರು ಸಾವನ್ನಪ್ಪಿದ್ದಾರೆ. 41 ಜನರು ಗಾಯಗೊಂಡಿದ್ದು, ಅವರಲ್ಲಿ ಹಲವರ ಸ್ಥಿತಿ ಗಂಭೀರವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅಗ್ನಿ ದುರಂತದ ಸಂತ್ರಸ್ತರ ಕುಟುಂಬಗಳಿಗೆ ಸಾಂತ್ವನ ಹೇಳಿದ್ದು, ಮೃತರ ಕುಟುಂಬಗಳಿಗೆ 2 ಲಕ್ಷ ರು. ಹಾಗೂ ಗಾಯಗೊಂಡವರಿಗೆ 50,000 ರು. ಪರಿಹಾರವನ್ನು ಘೋಷಿಸಿದ್ದಾರೆ.

ಶುಕ್ರವಾರ ಬೆಳಿಗ್ಗೆ, ಜೈಪುರ-ಅಜ್ಮೀರ್ ಮಾರ್ಗದಲ್ಲಿ ಎಲ್‌ಪಿಜಿ ಮತ್ತು ಇತರ ವಾಹನಗಳನ್ನು ಸಾಗಿಸುತ್ತಿದ್ದ ಟ್ಯಾಂಕರ್‌ಗೆ ರಾಸಾಯನಿಕಗಳನ್ನು ತುಂಬಿದ ಟ್ರಕ್ ಡಿಕ್ಕಿ ಹೊಡೆದ ಪರಿಣಾಮವಾಗಿ ಬೆಂಕಿ ಕಾಣಿಸಿಕೊಂಡಿದೆ. ಗಾಯಗೊಂಡವರಲ್ಲಿಶೇ.60ಕ್ಕೂ ಹೆಚ್ಚು ಸುಟ್ಟ ಗಾಯಗಳಿಂದ ಬಳಲುತ್ತಿದ್ದಾರೆ. ಪ್ರಸ್ತುತ, 28 ರೋಗಿಗಳು ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಆರು ಮಂದಿ ವೆಂಟಿಲೇಟರ್‌ಗಳಲ್ಲಿದ್ದಾರೆ. ಘಟನೆಯ ನಂತರ, ರಾಜಸ್ಥಾನ ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ ಅವರು ಬೆಂಕಿ ದುರ್ಘಟನೆ ಸ್ಥಳಕ್ಕೆ ಭೇಟಿ ನೀಡಿ, ಗಾಯಗೊಂಡವರಿಗೆ ಚಿಕಿತ್ಸೆ ನೀಡಲು ಅಗತ್ಯ ವ್ಯವಸ್ಥೆಗಳೊಂದಿಗೆ ಸಹಾಯವಾಣಿಯನ್ನು ಸ್ಥಾಪಿಸುವುದಾಗಿ ಘೋಷಿಸಿದರು.



ಟ್ವೀಟ್ ಮೂಲಕ ಮೋದಿ ಸಂತಾಪ

‘ರಾಜಸ್ಥಾನದ ಜೈಪುರ-ಅಜ್ಮೀರ್ ಹೆದ್ದಾರಿಯಲ್ಲಿ ಸಂಭವಿಸಿದ ಅಪಘಾತದಲ್ಲಿ ಪ್ರಾಣಹಾನಿಯಿಂದ ತೀವ್ರ ದುಃಖವಾಗಿದೆ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ನನ್ನ ಸಂತಾಪಗಳು, ಗಾಯಾಳುಗಳು ಶೀಘ್ರದಲ್ಲೇ ಚೇತರಿಸಿಕೊಳ್ಳಲಿ. ಸ್ಥಳೀಯ ಆಡಳಿತ ಸಂತ್ರಸ್ತರಿಗೆ ಸಹಾಯ ಮಾಡಲಿದೆ’ ಎಂದು ಪ್ರಧಾನಿ ಕಚೇರಿಯಿಂದ ಟ್ವೀಟ್ ಮೂಲಕ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಲಾಗಿದೆ.

ಷೇರುಪೇಟೆ ಕುಸಿತ ಸೆನ್ಸೆಕ್ಸ್ 1,176 ಅಂಕ ಪತನ

ಮುಂಬಯಿ: ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರ 1,176 ಅಂಕ ಕಳೆದುಕೊಂಡು 78,041ಕ್ಕೆ ಕುಸಿಯಿತು. ನಿಫ್ಟಿ 364 ಅಂಕ ನಷ್ಟದಲ್ಲಿ 23,587ಕ್ಕೆ ದಿನದ ವಹಿವಾಟನ್ನು ಮುಕ್ತಾಯಗೊಳಿಸಿತು. ಹೂಡಿಕೆದಾರರಿಗೆ 8.85 ಲಕ್ಷ ಕೋಟಿ ರು.ಗಳ

ಭಾರಿ ನಷ್ಟ ಸಂಭವಿಸಿತು. ವಿದೇಶಿ ಸಾಂಸ್ಥಿಕ ಹೂಡಿಕೆ ದಾರರು ಕಳೆದ ಮೂರು ದಿನಗಳಲ್ಲಿ 8,000 ಕೋಟಿ ರು. ಗೂ ಹೆಚ್ಚು ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಕಳೆದ ಐದು ದಿನಗಳಲ್ಲಿ ಸೆನ್ಸೆಕ್ಸ್ 4,000 ಅಂಕಗಳನ್ನು ಕಳೆದುಕೊಂಡಿದೆ. ನಿಫ್ಟಿ 5% ಇಳಿದಿದೆ. ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತಗೊಳಿಸಿದ ಬಳಿಕ ನೀಡಿದ ಸಂದೇಶದಿಂದ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ನಿರಂತರವಾಗಿ ಷೇರುಗಳನ್ನು ಮಾರಾಟ ಮಾಡುತ್ತಿರುವುದರಿಂದ ಸೂಚ್ಯಂಕಗಳು ಕುಸಿತಕ್ಕೀಡಾಗಿದೆ. ಮುಂದಿನ ವರ್ಷ ಕೇವಲ ಎರಡು ಸಲ ಮಾತ್ರ ಬಡ್ಡಿ ದರ ಕಡಿತಗೊಳಿಸುವುದಾಗಿ ಫೆಡರಲ್ ರಿಸರ್ವ್ ಅಧ್ಯಕ್ಷರು ಸಿಗ್ನಲ್ ನೀಡಿರುವ ಪರಿಣಾಮ ಜಾಗತಿಕ ಮಟ್ಟದಲ್ಲಿ ಷೇರು ಸೂಚ್ಯಂಕಗಳು ಕುಸಿಯಿತು. ಅಮೆರಿಕದ ಫೆಡರಲ್ ರಿಸರ್ವ್ ಅಧ್ಯಕ್ಷ ಜೆರೋಮ್ ಪೊವೆಲ್ ಅವರು 2025ರಲ್ಲಿ ಹಣದುಬ್ಬರ ಹೆಚ್ಚಳವಾಗುವ ಸಾಧ್ಯತೆ ಇರುವುದರಿಂದ ಬಡ್ಡಿ ದರವನ್ನು ನಿರೀಕ್ಷಿತ ಮಟ್ಟದಲ್ಲಿ ಇಳಿಕೆ ಮಾಡಲು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ, ಇದು ಜಾಗತಿಕ ಷೇರು ಮಾರುಕಟ್ಟೆಯನ್ನು ನಿರುತ್ಸಾಹಗೊಳಿಸಿತು.

ಎಂಎಸ್‌ಪಿ: ಪಂಜಾಬ್ ಸಿಎಂ ಭಗವಂತ್ ಮಾನ್ ಹೇಳಿಕೆ

ಕೇಂದ್ರ ಸರಕಾರ ಮಾತುಕತೆಗೆ ಮುಂದಾಗಲಿ

ಚಂಡೀಗಢ: ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯ (ಎಂಎಸ್‌ಪಿ) ಕಾನೂನು ಖಾತರಿ ಸೇರಿದಂತೆ ತಮ್ಮ ಬೇಡಿಕೆಗಳಿಗಾಗಿ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿರುವ ರೈತರೊಂದಿಗೆ ತನ್ನ ಹಠಮಾರಿ ಧೋರಣೆಯನ್ನು ಬಿಟ್ಟು ಮಾತುಕತೆ ನಡೆಸುವಂತೆ

ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಕೇಂದ್ರ ಸರಕಾರಕ್ಕೆ ಒತ್ತಾಯಿಸಿದ್ದಾರೆ. ರೈತರೊಂದಿಗೆ ಮಾತನಾಡುವುದು ಕೇಂದ್ರದ ಕರ್ತವ್ಯ ಹಾಗೂ ಯಾವುದೇ ಸಮಸ್ಯೆಯನ್ನು ಮಾತುಕತೆಯ ಮೂಲಕ ಮಾತ್ರ ಪರಿಹರಿಸಬಹುದು ಎಂದು ಅವರು ಹೇಳಿದರು.

ರೈತರೊಂದಿಗೆ ಮಾತನಾಡುವುದು ಕೇಂದ್ರ ಸರ್ಕಾರದ ಕರ್ತವ್ಯ. ಯಾವುದೇ ಸಮಸ್ಯೆಯನ್ನು ಮಾತುಕತೆಯ ಮೂಲಕ ಮಾತ್ರ ಪರಿಹರಿಸಬಹುದು. ಕೇಂದ್ರ ಸರ್ಕಾರ ತನ್ನ ಮೊಂಡುತನವನ್ನು ಬಿಡಬೇಕು ಎಂದು ಮಾನ್ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಮತ್ತು ಕಿಸಾನ್ ಮಜ್ದೂರ್ ಮೋರ್ಚಾ ಬ್ಯಾನರ್ ಅಡಿಯಲ್ಲಿ ರೈತರು ಫೆಬ್ರವರಿ 13ರಿಂದ ಪಂಜಾಬ್ ಮತ್ತು ಹರಿಯಾಣ ನಡುವಿನ ಶಂಭು ಮತ್ತು ಖನೌರಿ ಗಡಿ ಸ್ಥಳಗಳಲ್ಲಿ ಕ್ಯಾಂಪ್ ಹೂಡಿದ್ದಾರೆ. ರೈತರ ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರಕ್ಕೆ ಒತ್ತಾಯಿಸಲು ಪಂಜಾಬ್ ರೈತ ಮುಖಂಡ ಜಗಜಿತ್ ಸಿಂಗ್ ದಲ್ಲೆವಾಲ್ ನವೆಂಬರ್ 26ರಿಂದ ಪಂಜಾಬ್ ಮತ್ತು ಹರಿಯಾಣ ನಡುವಿನ ಖನೌರಿ ಗಡಿಯಲ್ಲಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ.

ಡಿಸೆಂಬರ್ 6 ಮತ್ತು 14ರ ನಡುವೆ 101 ರೈತರ ಜಾಥಾ (ಗುಂಪು) ಮೂರು ಬಾರಿ ಕಾಲ್ನಡಿಗೆಯಲ್ಲಿ ದೆಹಲಿಗೆ ಮೆರವಣಿಗೆ ಮಾಡಲು ಪ್ರಯತ್ನಿಸಿದರೂ, ಹರಿಯಾಣದಲ್ಲಿ ಪೊಲೀಸರು ಅವರನ್ನು ತಡೆದಿದ್ದಾರೆ. ಇದಕ್ಕೂ ಮುನ್ನ ಬುಧವಾರ, ಹರಿಯಾಣ ಮುಖ್ಯಮಂತ್ರಿ ಮತ್ತು ಬಿಜೆಪಿ ಮುಖಂಡ ನಯಾಬ್ ಸಿಂಗ್ ಸೈನಿ, ಪಂಜಾಬ್‌ನ ಎಎಪಿ ಸರ್ಕಾರವು ರಾಜ್ಯದ ರೈತರೊಂದಿಗೆ ಮಾತುಕತೆ ನಡೆಸಿ, ಅವರ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಹೇಳಿದ್ದರು.

ಪಂಜಾಬ್ ಸರ್ಕಾರವು ರೈತರಿಂದ ಎಂಎಸ್‌ಪಿ ದರದಲ್ಲಿ ಬೆಳೆ ಖರೀದಿಸುವುದನ್ನು ಆರಂಭಿಸಬೇಕು. ಈ ವಿಷಯದಲ್ಲಿ ಅವರಿಗೆ ಯಾವುದೇ ತೊಂದರೆ ಆಗಬಾರದು. ಪಂಜಾಬ್ ರೈತರು ಈಗ ಸಮಸ್ಯೆಯಲ್ಲಿರುವುದರಿಂದ ಪಂಜಾಬ್ ಸರ್ಕಾರವು ಮುಂದೆ ಬಂದು ರೈತರಿಂದ ಎಲ್ಲಾ ಬೆಳೆಗಳನ್ನು ಎಂಎಸ್‌ಪಿ ದರದಲ್ಲಿ ಖರೀದಿಸುವುದಾಗಿ ಘೋಷಿಸಬೇಕು ಎಂದು ಸೈನಿ ಹೇಳಿದರು.

ಬಿಪಿನ್ ರಾವತ್ ಸಾವು: ರಹಸ್ಯ ಬಯಲು

ದೆಹಲಿ: ದೇಶದ ಮೊದಲ ರಕ್ಷಣಾ ಸಿಬ್ಬಂದಿ ಜನರಲ್ ಬಿಪಿನ್ ರಾವತ್‌ರವರು ಮೃತಪಟ್ಟು ಮೂರು ವರ್ಷಗಳು ಕಳೆದಿದೆ. 2021ರ ಡಿಸೆಂಬರ್ 8ರಂದು ಹೆಲಿಕಾಪ್ಟರ್ ಪತನಗೊಂಡು ಅವರ ಪತ್ನಿಯೂ ಸೇರಿ ಒಟ್ಟು 13 ಮಂದಿ ಮೃತಪಟ್ಟಿದ್ದರು.

ನಂತರ ಅಪಘಾತದ ಹಿಂದಿನ ಕಾರಣವನ್ನು ತನಿಖೆ ಮಾಡಲು ಸಮಿತಿಯೊಂದನ್ನು ರಚಿಸಲಾಗಿತ್ತು. ಇದೀಗ ಸಮಿತಿಯ ವರದಿ ಬಂದಿದ್ದು, ಅಪಘಾತದ ಹಿಂದಿನ ಕಾರಣ ಮಾನವ ದೋಷ ಎಂದು ಹೇಳಿದೆ.

ರಾವತ್ ಅವರು ಪ್ರಯಾಣ ಮಾಡುತ್ತಿದ್ದ ಒ- 17 ಹೆಲಿಕಾಪ್ಟರ್ ಅಪಘಾತಕ್ಕೆ ಮಾನವ ದೋಷ ಕಾರಣಾಗಿದೆ ಎಂದು ವರದಿ ಹೇಳಿದೆ. ಅತ್ಯಂತ ಸುರಕ್ಷಿತ ಹಾಗೂ ವಿಶ್ವಾಸಾರ್ಹವೆಂದು ಪರಿಗಣಿಸಲಾಗಿದ್ದ ರಷ್ಯಾ ಮೂಲದ ಹೆಲಿಕಾಪ್ಟರ್ ತಮಿಳುನಾಡಿನ ಕೂನೂರು ಬಳಿ ಅಪಘಾತಕ್ಕೀಡಾಗಿತ್ತು. ಹೆಲಿಕಾಪ್ಟರ್ ಸೂಲೂರು ವಾಯುನೆಲೆಯಿಂದ ಬೆಳಗ್ಗೆ 11.48ಕ್ಕೆ ಹೊರಟು ಮಧ್ಯಾಹ್ನ 12.15ಕ್ಕೆ ವೆಲ್ಲಿಂಗ್ಟನ್ ಗಾಲ್ಫ್ ಕೋರ್ಸ್‌ನಲ್ಲಿರುವ ಹೆಲಿಪ್ಯಾಡ್‌ನಲ್ಲಿ ಇಳಿಯಬೇಕಿತ್ತು. ಸೂಲೂರಿನ ಏರ್ ಟ್ರಾಫಿಕ್ ಕಂಟ್ರೋಲ್, ಹೆಲಿಕಾಪ್ಟರ್ ಟೇಕ್ ಆಫ್ ಆದ 20 ನಿಮಿಷಗಳ ನಂತರ ಮಧ್ಯಾಹ್ನ 12.08ಕ್ಕೆ ಸಂಪರ್ಕ ಕಳೆದುಕೊಂಡಿತ್ತು.

ವಿಮೆಗಾಗಿ 24 ಅಪಘಾತ ಎಸಗಿದ ಚಾಲಕನ ಬಂಧನ

ಅಹ್ಮದಾಬಾದ್: ಗುಜರಾತ್ ನಲ್ಲಿ ಬಹುದೊಡ್ಡ ವಿಮಾ ಹಗರಣವೊಂದು ಬೆಳಕಿಗೆ ಬಂದಿದ್ದು, ಬರೊಬ್ಬರಿ 24 ಅಪಘಾತ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಚಾಲಕನನ್ನು ಪೊಲೀಸರು ಬಂಧಿಸಿದ್ದಾರೆ.

ಹೌದು.. ಗುಜರಾತ್ ನ ಪಂಚಮಹಲ್, ದಾಹೋದ್ ಮತ್ತು ಮಹಿಸಾಗರ್ ಜಿಲ್ಲೆಗಳಲ್ಲಿ ನಡೆದಿದ್ದ ವಿವಿಧ ವಾಹನ ಅಪಘಾತ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಪ್ರಮುಖ ಆರೋಪಿ ಅಸ್ಲಂ ಮೊಹಮ್ಮದ್ ಚುಂಚಲನಎಂಬಾತನನ್ನು ಪೊಲೀಸರು ಬಂಧಿಸಿದ್ದು, ಆತನ ಬಂಧನದ ಮೂಲಕ ಬಹುದೊಡ್ಡ ವಿಮಾ ಹಗರಣವೊಂದು ಬಯಲಿಗೆ ಬಂದಿದೆ.

ಗೋಧ್ರಾ ಪೊಲೀಸ್ ಠಾಣೆಯಲ್ಲಿ ಅಪಘಾತ ಪ್ರಕರಣವೊಂದರಲ್ಲಿ ಪೊಲೀಸರು ಚಾಲಕ ಅಸ್ಲಂ ಮೊಹಮ್ಮದ್ ಚುಂಚಲಾನನ್ನು ವಿಚಾರಣೆಗೊಳಪಡಿಸಿದ್ದರು. ಈತನ ದಾಖಲೆ ಪರಿಶೀಲನೆ ನಡೆಸಿದಾಗ ಈತ ಹಾಲಿ ಪ್ರಕರಣದಲ್ಲಿ ಮಾತ್ರವಲ್ಲದೇ ಪಂಚಮಹಲ್, ದಾಹೋದ್ ಮತ್ತು ಮಹಿಸಾಗರ್ ಜಿಲ್ಲೆಗಳಲ್ಲಿ ನಡೆದಿದ್ದ ವಿವಿಧ ವಾಹನ ಅಪಘಾತ ಪ್ರಕರಣಗಳಲ್ಲೂ ಭಾಗಿಯಾಗಿದ್ದ ಕುರಿತು ಪೊಲೀಸರಿಗೆ ಮಾಹಿತಿ ಲಭ್ಯವಾಗಿದೆ.

ಸಂವಿಧಾನದ ಮೇಲೆ ದಾಳಿ ಮಾಡಿದವರಿಂದ ಈಗ ನಾಟಕ | ಅಂಬೇಡ್ಕರ್‌ಗೆ ಕಾಂಗ್ರೆಸ್‌ನಿಂದ ಅಪಮಾನ

ಕಾಂಗ್ರೆಸ್ ವಿರುದ್ಧ ಸಂಸದ ತೇಜಸ್ವಿ ಸೂರ್ಯ ವಾಗ್ದಾಳಿ

ದೆಹಲಿ: ಲೋಕಸಭೆಯಲ್ಲಿ ಸಂವಿಧಾನದ 75ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಸಂವಿಧಾನದ ಬಗ್ಗೆ ಇತ್ತೀಚೆಗೆ ವಿಶೇಷ ಚರ್ಚೆ ನಡೆಯಿತು. ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳ ನಡುವೆ ಭರ್ಜರಿ ವಾಕ್ಸಮರವೇ ನಡೆಯಿತು. ಈ ವೇಳೆ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಕೂಡ ಮಾತನಾಡಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ಇಷ್ಟು ದಿನ ಸಂವಿಧಾನದ ಮೇಲೆ ನಿರಂತರ ದಾಳಿ ಮಾಡಿದವರು ಈಗ ಸಂವಿಧಾನದ ಚಾಂಪಿಯನ್ಸ್ ಎಂದು ನಾಟಕವಾಡುತ್ತಿದ್ದಾರೆ. ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿ, ಮೂಲಭೂತ ಹಕ್ಕುಗಳನ್ನು ರದ್ದು ಮಾಡಿದವರಿಂದ ನಾವು ಸಂವಿಧಾನದ ಬಗ್ಗೆ ಭಾಷಣ ಕೇಳುವಂತಾಗಿದೆ ಎಂದೂ ಹೇಳಿದರು. ಅದಲ್ಲದೇ ಸಂವಿಧಾನಕ್ಕೆ ಸಮಾಜವಾದ, ಜಾತ್ಯತೀತತೆ ಪದಗಳನ್ನು ಸೇರಿಸಿ, ಅದರ ವಿರುದ್ಧ ನಡೆಯುತ್ತಿರುವ ಕಾಂಗ್ರೆಸ್ ನಡೆಗೆ ತೇಜಸ್ವಿ ಸೂರ್ಯ ಆಕ್ಷೇಪ ಕೂಡ ವ್ಯಕ್ತಪಡಿಸಿದರು. ನೆಹರೂ ಪ್ರಧಾನಮಂತ್ರಿ ಆಗಿದ ದಿನಗಳಿಂದ ಹಿಡಿದು ಕಾಂಗ್ರೆಸ್ ಆಡಳಿತದ ಕೇಂದ್ರ ಸರಕಾರ ಆಡಳಿತ ನಡೆಸಿದ ಸಂದರ್ಭಗಳಲ್ಲೆಲ್ಲಾ ನಮ್ಮ ದೇಶವು ನಿರಂತರವಾಗಿ ಹಿನ್ನಡೆಯನ್ನು ಕಂಡಿದೆ. ನಮ್ಮ ದೇಶಕ್ಕೆ ಸೇರಬೇಕಾದ ಹಲವು ಭೌಗೋಳಿಕ ಭಾಗಗಳನ್ನು ಆ ಸಂದರ್ಭಗಳಲ್ಲಿ ನಾವು ಕಳೆದುಕೊಳ್ಳಬೇಕಾಯಿತು. ಇವೆಲ್ಲವೂ ನಮ್ಮ ಸಂವಿಧಾನದ ಮೇಲೆ ಕಾಂಗ್ರೆಸ್ ಪಕ್ಷ ಮಾಡಿದ ಸವಾರಿ ಎಂದೇ ಹೇಳಬೇಕಾಗಿದೆ. ಅಂಬೇಡ್ಕರ್‌ರವರನ್ನು ಈ ರೀತಿ ಹಲವು ಸಲ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕಾಂಗ್ರೆಸ್ ಪಕ್ಷವು ಹೀಯಾಳಿಸಿದೆ ಎಂದೂ ಅವರು ಹೇಳಿದರು. ಕಮ್ಯೂನಿಸ್ಟ್ ಪಕ್ಷಗಳು ಕೂಡ ಅಂಬೇಡ್ಕರ್‌ರವರಿಗೆ ಹಲವಾರು ಬಾರಿ ಅಪಮಾನ ಮಾಡಿ ನಮ್ಮ ದೇಶವನ್ನು ಹಿಂದಕ್ಕೆ ಕೊಂಡೊಯ್ದಿವೆ ಎಂದೂ ತೇಜಸ್ವಿ ಸೂರ್ಯ ಒತ್ತಿ ಹೇಳಿದರು. ಕಾಂಗ್ರೆಸ್ ಸರಕಾರವು ಸಂವಿಧಾನವನ್ನು ಬಹಳಷ್ಟು ಸಲ ದುರುಪಯೋಗ ಪಡಿಸಿದೆ. ಹಲವು ಬಾರಿ ವಿರೋಧ ಪಕ್ಷಗಳ ಸರಕಾರವನ್ನು ಯಾವುದೇ ಕಾರಣವಿಲ್ಲದೆ ಉರುಳಿಸಿ ಖುಷಿಪಟ್ಟಿರುವುದು ಅದಕ್ಕೆ ನಿದರ್ಶನ ಎಂದರು.

ಬಿಜೆಪಿಯಿಂದ ಪಾರದರ್ಶಕ ಆಡಳಿತ

ಮೋದಿ ನೇತೃತ್ವದ ಸರಕಾರ ಅಸ್ತಿತ್ವಕ್ಕೆ ಬಂದಾಗಿನಿಂದಾಗಿ ಭಾರತದ ಆರ್ಥಿಕ ಶಕ್ತಿ ಹೆಚ್ಚಾಗಿದೆ. ಜಿಎಸ್‌ಟಿ ಜಾರಿಗೆ ಬಂದ ಬಳಿಕ ಎಲ್ಲಾ ಕ್ಷೇತ್ರಗಳಲ್ಲೂ ಅದರಲ್ಲೂ ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಪಾರದರ್ಶಕತೆ ಕಾಣಿಸಿಕೊಂಡಿದೆ. ಬಿಜೆಪಿ ಸರಕಾರವು ಮೋದಿ ನೇತೃತ್ವದಲ್ಲಿ ನಮ್ಮ ದೇಶದ ಸಂವಿಧಾನದ ಎಲ್ಲಾ ಆಶಯಗಳನ್ನು ಎತ್ತಿ ಹಿಡಿಯುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದೆ ಎಂದೂ ತೇಜಸ್ವಿ ಸೂರ್ಯ ಹೇಳಿದರು.

ಸಮಾಚಾರ ಸಣ್ಣದಲ್ಲ

ಜಾರ್ಖಂಡ್ ಎದುರು

ಬೆಂಗಳೂರು: ಕೌಶ್ಟನ್ ಖುರೇಶಿ (82;76ಎ) ಅವರ ಬ್ಯಾಟಿಂಗ್ ಮತ್ತು ಸಾಹಿಲ್ ರಾಜ್ (36ಕ್ಕೆ 4) ಅವರ ಬೌಲಿಂಗ್ ದಾಳಿಯ ನೆರವಿನಿಂದ ಜಾರ್ಖಂಡ್ ತಂಡವು ಬಿಸಿಸಿಐ ಪುರುಷರ 23 ವರ್ಷದೊಳಗಿನ ಎ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 20 ರನ್ ಗಳಿಂದ ಕರ್ನಾಟಕ ತಂಡವನ್ನು ಮಣಿಸಿತು.

ರಾಯಪುರದ ಶಾಹೀದ್ ವೀರ್ ನಾರಾಯಣ್ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಜಾರ್ಖಂಡ್ ತಂಡವು ಕೌಶ್ಟನ್ ಮತ್ತು ರಾಜನ್ ದೀಪ್ (54;53ಎ) ಅವರ ಬ್ಯಾಟಿಂಗ್ ಬಲದಿಂದ 50 ಓವರ್‌ಗಳಲ್ಲಿ 9 ವಿಕೆಟ್‌ಗೆ 230 ರನ್ ಕಲೆ ಹಾಕಿತು. ಕರ್ನಾಟಕದ ಮನ್ವಂತ್ ಕುಮಾರ್ ನಾಲ್ಕು ವಿಕೆಟ್ ಪಡೆದರೆ, ಯಶೋವರ್ಧನ್ ಪರಂತಾಪ್ ಎರಡು ವಿಕೆಟ್ ಗಳಿಸಿದರು. ಗುರಿಯನ್ನು ಬೆನ್ನಟ್ಟಿದ ಕರ್ನಾಟಕ ತಂಡವು 46.3 ಓವರ್‌ಗಳಲ್ಲಿ 210 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಕಾರ್ತಿಕೇಯ ಕೆ.ಪಿ (58;78ಎ) ಹೊರತು ಪಡಿಸಿ ಉಳಿದ ಬ್ಯಾಟರ್‌ಗಳು ಹೆಚ್ಚುಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ.

ಸಂಕ್ಷಿಪ್ತ ಸ್ಕೋರ್: ಜಾರ್ಖಂಡ್: 50 ಓವರ್‌ಗಳಲ್ಲಿ 9 ವಿಕೆಟ್‌ಗೆ 230 (ರಾಜನ್ ದೀಪ್ 54, ಕೌಶ್ಟನ್ ಖುರೇಶಿ 82; ಮನ್ವಂತ್ ಕುಮಾರ್ 51ಕ್ಕೆ 4, ಯಶೋವರ್ಧನ್ ಪರಂತಾಪ್ 56ಕ್ಕೆ 2).
ಕರ್ನಾಟಕ: 46.3 ಓವರ್‌ಗಳಲ್ಲಿ 210 (ಹರ್ಷಿಲ್ ಧರ್ಮನಿ 30, ಕಾರ್ತಿಕೇಯ ಕೆ.ಪಿ 58, ಯಶೋವರ್ಧನ್ ಪರಂತಾಪ್ 24, ಮನ್ವಂತ್ ಮಾರ್ 24; ಹರ್ಷ್ ರಾಜ್ 28ಕ್ಕೆ 2, ಸಾಹಿಲ್ ರಾಜ್ 36ಕ್ಕೆ 4).
ಫಲಿತಾಂಶ: ಜಾರ್ಖಂಡ್‌ಗೆ 20 ರನ್‌ಗಳ ಜಯ

ಭರ್ಜರಿ ಆಟ ಪ್ರದರ್ಶಿಸಿದ ಭಾರತದ ವನಿತೆಯರು | 2-1 ರಿಂದ ವೆಸ್ಟ್ ವಿಂಡೀಸ್ ವಿರುದ್ಧದ ಸರಣಿ ವಶ | 60 ರನ್‌ಗಳ ಗೆಲುವು

ವೆಸ್ಟ್ ಇಂಡೀಸ್ ವಿರುದ್ಧದ ಸರಣಿ ವಶ

ಸಂಕ್ಷಿಪ್ತ ಸ್ಕೋರು

ಭಾರತ: 20 ಓವರುಗಳಲ್ಲಿ 4 ವಿಕೆಟ್‌ಗೆ 217 (ಸ್ಮೃತಿ ಮಂದಾನ 77, ಜೆಮಿಮಾ ರೋಡ್ರಿಗಸ್ 39, ರಾಘವಿ ಬಿಷ್ಟ್ ಔಟಾಗದೇ 39, ರಿಚಾ ಘೋಷ್ 51)
ವೆಸ್ಟ್ ಇಂಡೀಸ್: 20 ಓವರುಗಳಲ್ಲಿ 9 ವಿಕೆಟ್‌ಗೆ 157 (ಡಿಯಾಂಡ್ರ ಡಾಟಿನ್ 25, ಚಿನೆಲಿ ಹೆನ್ರಿ 43; ರಾಧಾ ಯಾದವ್ 29ಕ್ಕೆ4).

ನವಿ ಮುಂಬೈ: ಅತ್ಯುತ್ತಮ ಲಯದಲ್ಲಿರುವ ಹಂಗಾಮಿ ನಾಯಕಿ ಸ್ಮೃತಿ ಮಂದಾನ (77, 47ಎ) ಅರ್ಧ ಶತಕ ಗಳಿಸಿದ ಮೇಲೆ ರಿಚಾ ಘೋಷ್ (54, 21ಎ) ವೇಗದ ಅರ್ಧ ಶತಕದ ವಿಶ್ವದಾಖಲೆ ಸರಿಗಟ್ಟಿದರು. ನಂತರ ಬೌಲರ್‌ಗಳು ಸಾಂಘಿಕ ಪ್ರದರ್ಶನ ನೀಡಿದರು. ಇದರಿಂದ ಭಾರತ ತಂಡ ಗುರುವಾರ ನಡೆದ ಮಹಿಳಾ ಟಿ20 ಸರಣಿಯ ಮೂರನೇ ಹಾಗೂ ಅಂತಿಮ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ತಂಡವನ್ನು 60 ರನ್‌ಗಳಿಂದ ಸೋಲಿಸಿತು.

ಆ ಮೂಲಕ ಸರಣಿಯನ್ನು 2-1 ರಿಂದ ಗೆದ್ದುಕೊಂಡಿತು. ಮೊದಲ ಪಂದ್ಯದಲ್ಲಿ ಭಾರತ ಜಯಗಳಿಸಿತ್ತು. ಎರಡನೇ ಪಂದ್ಯದಲ್ಲಿ ಪ್ರವಾಸಿ ತಂಡ ಗೆದ್ದು ಸರಣಿ ಸಮನಾಗಿತ್ತು.

ಡಾ.ಡಿ.ವೈ. ಪಾಟೀಲ ಕ್ರೀಡಾ ಅಕಾಡೆಮಿ ಮೈದಾನದಲ್ಲಿ ಮೊದಲು ಆಡಿದ ಭಾರತ 20 ಓವರುಗಳಲ್ಲಿ 4 ವಿಕೆಟ್‌ಗೆ 217 ರನ್‌ಗಳ ಭರ್ಜರಿ ಮೊತ್ತ ಗಳಿಸಿತು. ಇದು ಟಿ20 ಪಂದ್ಯಗಳಲ್ಲಿ ಭಾರತ ದಾಖಲಿಸಿದ ಅತ್ಯಧಿಕ ಮೊತ್ತವೆನಿಸಿತು. ಈ ವರ್ಷದ ಆರಂಭದಲ್ಲಿ ಏಷ್ಯಾಕಪ್ ಟೂರ್ನಿಯಲ್ಲಿ ಯುಎಇ ವಿರುದ್ಧ ಗಳಿಸಿದ 5 ವಿಕೆಟ್‌ಗೆ 201 ರನ್‌ಗಳು ಹಿಂದಿನ ಗರಿಷ್ಠ ಎನಿಸಿತ್ತು. ಇದಕ್ಕೆ ಉತ್ತರವಾಗಿ, ವೆಸ್ಟ್ ಇಂಡೀಸ್ ಆರಂಭದಿಂದಲೇ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡು ಅಂತಿಮವಾಗಿ 9 ವಿಕೆಟ್‌ಗೆ 157 ರನ್ ಗಳಿಸಲಷ್ಟೇ ಶಕ್ತವಾಯಿತು. ಎಡಗೈ ಸ್ಪಿನ್ನರ್ ರಾಧಾ ಯಾದವ್ ಕೊನೆಯ ನಾಲ್ಕು ವಿಕೆಟ್ ಪಡೆದರು.

ಮೊದಲು ಬ್ಯಾಟಿಂಗ್‌ಗೆ ಕಳಿಸಲ್ಪಟ್ಟ ಭಾರತ ತಂಡವನ್ನು ಆರಂಭ ಆಟಗಾರ್ತಿ ಮಂದಾನ ಎರಡು ಉತ್ತಮ ಜೊತೆಯಾಟಗಳ ಮೂಲಕ ದೊಡ್ಡ ಮೊತ್ತ ಗಳಿಸಲು ಬುನಾದಿ ಹಾಕಿಕೊಟ್ಟರು. ಅವರ ಆಟದಲ್ಲಿ ಒಂದು ಸಿಕ್ಸರ್, 13 ಬೌಂಡರಿಗಳಿದ್ದವು. ಇದು ಅವರಿಗೆ ಸತತ ಮೂರನೇ ಅರ್ಧ ಶತಕ. ಈ ವರ್ಷ ಈ ಮಾದರಿಯಲ್ಲಿ ಎಂಟನೇ ಅರ್ಧ ಶತಕ.

ಎರಡನೇ ವಿಕೆಟ್‌ಗೆ ಅವರು ಜೆಮಿಮಾ ರೋಡ್ರಿಗಸ್ (39) ಜೊತೆ ಕೇವಲ 55 ಎಸೆತಗಳಲ್ಲಿ 98 ರನ್ ಸೇರಿಸಿದರು. ನಂತರ ರಾಘವಿ ಬಿಷ್ಟ್ (ಅಜೇಯ 39) ಜೊತೆ ಮೂರನೇ ವಿಕೆಟ್‌ಗೆ 44 ರನ್ ಸೇರಿಸಿದರು. ರಾಘವಿ ಮತ್ತು ರಿಚಾ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ಲಗುಬಗನೇ 70 ರನ್ ಪೇರಿಸಿದರು.

ಸ್ಮೃತಿ ನಿರ್ಗಮನ ಬಳಿಕ ಕ್ರೀಸಿಗಿಳಿದ ರಿಚಾ ಘೋಷ್ ಮಿಂಚಿನ ಆಟವಾಡಿ ಬರೇ 21 ಎಸೆತಗಳಲ್ಲಿ 3 ಬೌಂಡರಿ, 5 ಸಿಕ್ಸರ್‌ಗಳಿದ್ದ 54 ರನ್ ಸಿಡಿಸಿದರು. ಆ ಹಾದಿಯಲ್ಲಿ ಮಹಿಳಾ ಟಿ20 ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ನ್ಯೂಜಿಲೆಂಡ್‌ನ ಸೋಫಿ ಡಿವೈನ್ ಮತ್ತು ಆಸ್ಟ್ರೇಲಿಯಾದ ಫೋಬಿ ಲಿಚ್ಫೀಲ್ಡ್ಸ್ ಹೆಸರಿನಲ್ಲಿದ್ದ ಅತಿ ವೇಗದ ಅರ್ಧ ಶತಕದ ದಾಖಲೆ (18 ಎಸೆತ) ಸರಿಗಟ್ಟಿದರು.

ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿ | ತಂಡಕ್ಕೆ ಹೊಸದಾಗಿ 19 ವರ್ಷದ ಸ್ಯಾಮ್ ಕಾನ್ಸ್ಟಸ್

ಮುಂದಿನ ಪಂದ್ಯಕ್ಕೆ ಆಸೀಸ್ ತಂಡ ಪ್ರಕಟ

ಮೆಲ್ಬರ್ನ್: ಪ್ರವಾಸಿ ಭಾರತ ವಿರುದ್ಧ ನಡೆಯುತ್ತಿರುವ ಐದು ಪಂದ್ಯಗಳ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯ ಅಂತಿಮ ಎರಡು ಪಂದ್ಯಗಳಿಗೆ ಆತಿಥೇಯ ಆಸ್ಟ್ರೇಲಿಯಾ ತಂಡವನ್ನು ಪ್ರಕಟಿಸಲಾಗಿದೆ.



19 ವರ್ಷದ ಯುವ ಬ್ಯಾಟರ್ ಸ್ಯಾಮ್ ಕಾನ್ಸ್ಟಸ್ ಅವರನ್ನು ತಂಡಕ್ಕೆ ಸೇರ್ಪಡೆಗೊಳಿಸಲಾಗಿದ್ದು, ಚೊಚ್ಚಲ ಪಂದ್ಯ ಆಡಲು ತುದಿಗಾಲಲ್ಲಿ ನಿಂತಿದ್ದಾರೆ.

ಆ ಮೂಲಕ ಸ್ಯಾಮ್ ಕಾನ್ಸ್ಟಸ್, 70ಕ್ಕೂ ಹೆಚ್ಚು ವರ್ಷಗಳಲ್ಲಿ ಆಸ್ಟ್ರೇಲಿಯಾದ ಪರ ಟೆಸ್ಟ್ ಕ್ರಿಕೆಟ್‌ನಲ್ಲಿ ಪದಾರ್ಪಣೆ ಮಾಡಿದ ಅತಿ ಕಿರಿಯ ಆಟಗಾರ ಎನಿಸಿಕೊಳ್ಳಲಿದ್ದಾರೆ.

ಇದೇ ಸರಣಿಯಲ್ಲಿ ಪದಾರ್ಪಣೆ ಮಾಡಿದ್ದ ನೇಥನ್ ಮೆಕ್‌ಸ್ವೀನಿ ಪ್ರಭಾವಿ ಎನಿಸಿಕೊಳ್ಳುವಲ್ಲಿ ವಿಫಲರಾಗಿದ್ದು, ಸ್ಯಾಮ್‌ಗೆ ತಮ್ಮ ಸ್ಥಾನ ಬಿಟ್ಟುಕೊಟ್ಟಿದ್ದಾರೆ.

ಮೊದಲ ಮೂರು ಪಂದ್ಯಗಳಲ್ಲಿ ಮೆಕ್‌ಸ್ವೀನಿ ಕ್ರಮವಾಗಿ 10, 0, 39, 10★ , 9 ಮತ್ತು 4 ರನ್ ಗಳಿಸಿ ವೈಫಲ್ಯ ಅನುಭವಿಸಿದ್ದಾರೆ.

ಗಾಯದಿಂದ ಬಳಲುತ್ತಿರುವ ಜೋಶ್ ಹ್ಯಾಜಲ್ವುಡ್ ಸಹ ಸರಣಿಯ ಉಳಿದೆರಡು ಪಂದ್ಯಗಳಿಂದ ಹೊರಬಿದ್ದಿದ್ದಾರೆ. ಅವರ ಸ್ಥಾನಕ್ಕೆ ಜೇ ರಿಚರ್ಡ್ಸನ್ ಆಯ್ಕೆಯಾಗಿದ್ದಾರೆ.

ವೇಗದ ಬೌಲರ್ ಸೀನ್ ಅಬಾಟ್ ಮತ್ತು ತಸ್ಮಾನಿಯಾ ಮೂಲದ ಆಲ್ರೌಂಡರ್ ಬ್ಯೂ ವೆಬ್‌ಸ್ಟರ್ ಅವರನ್ನು 15ರ ಬಳಗದಲ್ಲಿ ಸೇರ್ಪಡೆಗೊಳಿಸಲಾಗಿದೆ. ಈ ಪೈಕಿ ವೆಬ್‌ಸ್ಟರ್ ಇನ್ನಷ್ಟೇ ಪದಾರ್ಪಣೆ ಮಾಡಬೇಕಿದೆ.

ಭಾರತ ಹಾಗೂ ಆಸ್ಟ್ರೇಲಿಯಾ 1-1ರಲ್ಲಿ ಸಮಬಲ ಸಾಧಿಸಿದೆ. ಪರ್ತ್‌ನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಭಾರತ 295 ರನ್ ಅಂತರದ ಗೆಲುವು ದಾಖಲಿಸಿದ್ದರೆ ಅಡಿಲೇಡ್‌ನಲ್ಲಿ ನಡೆದ ಹಗಲು-ರಾತ್ರಿ ಪಿಂಕ್ ಬಾಲ್ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ 10 ವಿಕೆಟ್ ಅಂತರದ ಗೆಲುವು ದಾಖಲಿಸಿತ್ತು. ಬ್ರಿಸ್ಬೇನ್‌ನಲ್ಲಿ ನಡೆದ ಮೂರನೇ ಪಂದ್ಯ ಡ್ರಾದಲ್ಲಿ ಅಂತ್ಯಗೊಂಡಿತ್ತು.

ಮೆಲ್ಬರ್ನ್‌ನಲ್ಲಿ ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯ (ಡಿ.26ರಿಂದ 30ರವರೆಗೆ) ಮತ್ತು ಕೊನೆಯ ಪಂದ್ಯ ಸಿಡ್ನಿಯಲ್ಲಿ (ಜ.3ರಿಂದ 7ರವರೆಗೆ) ನಡೆಯಲಿದೆ.

ಅಂತಿಮ ಎರಡು ಪಂದ್ಯಗಳಲ್ಲಿ ಆಸ್ಟ್ರೇಲಿಯಾ ತಂಡ ಇಂತಿದೆ: ಪ್ಯಾಟ್ ಕಮಿನ್ಸ್ (ನಾಯಕ), ಸೀನ್ ಅಬಾಟ್, ಸ್ಕಾಟ್ ಬೋಲ್ಯಾಂಡ್, ಅಲೆಕ್ಸ್ ಕ್ಯಾರಿ, ಟ್ರಾವಿಸ್ ಹೆಡ್ ಜೋಶ್ ಇಂಗ್ಲಿಸ್, ಉಸ್ಮಾನ್ ಖ್ವಾಜಾ, ಸ್ಯಾಮ್ ಕಾನ್ಸ್ಟಸ್, ಮಾರ್ನಸ್ ಲಾಬುಷೇನ್, ನೇಥನ್ ಲಯನ್, ಮಿಚೆಲ್ ಮಾರ್ಷ್, ಜೇ ರಿಚರ್ಡ್ಸನ್, ಸ್ಟೀವ್ ಸ್ಮಿತ್, ಮಿಚೆಲ್ ಸ್ಟಾರ್ಕ್ ಮತ್ತು ಬ್ಯೂ ವೆಬ್‌ಸ್ಟರ್.

ಜ12ಕ್ಕೆ ಮುಂಬೈನಲ್ಲಿ ಬಿಸಿಸಿಐ ಸಭೆ

ದೆಹಲಿ: ಜಯ್ ಶಾ ಮತ್ತು ಆಶಿಶ್ ಶೆಲಾರ್ ಅವರಿಂದ ಈ ತಿಂಗಳ ಆರಂಭದಲ್ಲಿ ತೆರವಾದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿ ಮತ್ತು ಖಜಾಂಚಿ ಸ್ಥಾನಗಳನ್ನು ತುಂಬಲು ಜನವರಿ 12 ರಂದು ಮುಂಬೈನಲ್ಲಿ ಮಂಡಳಿಯ ವಿಶೇಷ ಸಾಮಾನ್ಯ ಸಭೆ (ಎಸ್‌ಜಿಎಂ) ಕರೆಯಲಾಗಿದೆ. ಬಿಸಿಸಿಐ ನಿಯಮಾವಳಿಗಳ ಪ್ರಕಾರ 45 ದಿನಗಳ ಒಳಗೆ ವಿಶೇಷ ಸಾಮಾನ್ಯ ಸಭೆ ಕರೆದು ತೆರವಾದ ಹುದ್ದೆ ಭರ್ತಿ ಮಾಡಿಕೊಳ್ಳಬೇಕಿದೆ. ಈಗಿನ ಸಭೆ ಗಡುವಿಗಿಂತ ಮೊದಲೇ, 43 ದಿನಗಳ ಒಳಗೆ ನಡೆಯುತ್ತಿದೆ. ಮಂಡಳಿಯ ಅಪೆಕ್ಸ್ ಕೌನ್ಸಿಲ್ ಸಭೆ ಗುರುವಾರ ನಡೆದಿದ್ದು, ವಿಶೇಷ ಸಾಮಾನ್ಯ ಸಭೆಯ ದಿನಾಂಕದ ಅಧಿಸೂಚನೆಯನ್ನು ರಾಜ್ಯ ಘಟಕಗಳಿಗೆ ಕಳುಹಿಸಲಾಗಿದೆ. ಈ ಸಭೆ ಬಿಸಿಸಿಐ ಕೇಂದ್ರ ಕಚೇರಿಯಲ್ಲಿ ಜನವರಿ 12ರಂದು ನಡೆಯಲಿದೆ ಎಂದು ರಾಜ್ಯ ಘಟಕದ ಅಧ್ಯಕ್ಷರೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಭಾರತದ ಮಾಜಿ ಮುಖ್ಯ ಚುನಾವಣಾ ಆಯುಕ್ತರಾದ ಅಚಲ್ ಕುಮಾರ್ ಜ್ಯೋತಿ ಅವರನ್ನು ವಿಶೇಷ ಸಾಮಾನ್ಯ ಸಭೆಯಲ್ಲಿ ಬಿಸಿಸಿಐ ಚುನಾವಣೆ ನಡೆಸಲು ಚುನಾವಣಾ ಅಧಿಕಾರಿಯಾಗಿ ನೇಮಕಗೊಳಿಸಲು ಸಮ್ಮತಿ ನೀಡುವಂತೆ ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಕೋರಲಾಗಿದೆ.

ಸ್ವಾಭಿಮಾನಕ್ಕೆ ಧಕ್ಕೆ ಅಶ್ವಿನ್ ನಿವೃತ್ತಿಗೆ ಕಾರಣ

ಚೆನ್ನೈ: ಮಗನ ಹಠಾತ್ ನಿವೃತ್ತಿ ನಿರ್ಧಾರ ತಮ್ಮನ್ನೂ ಅಚ್ಚರಿಗೆ ಕೆಡವಿತು. ಆದರೆ ಅವರ ಆ ನಿರ್ಧಾರದ ಹಿಂದೆ ಸ್ವಾಭಿಮಾನಕ್ಕೆ ಕುಂದುಂಟಾಗುವ ಪ್ರಸಂಗ ಒಳಗೊಂಡಿರುವ ಸಾಧ್ಯತೆಯೂ ಇದೆ ಎಂಬ ಸ್ಫೋಟಕ ಸುಳಿವನ್ನು ತಂದೆ ರವಿಚಂದ್ರನ್ ನೀಡಿದ್ದಾರೆ.

ಕೊನೆಯ ಗಳಿಗೆಯಲ್ಲಿ ನನಗೆ ಈ ಬಗ್ಗೆ (ನಿವೃತ್ತಿ) ಗೊತ್ತಾಯಿತು. ಅವರು ಈ ರೀತಿ ನಿರ್ಧಾರಕ್ಕೆ ಬರಲು ಹಲವು ಕಾರಣಗಳಿರಬಹುದು. ಅದು ಅಶ್ವಿನ್‌ಗೇ ಗೊತ್ತು. ಸ್ವಾಭಿಮಾನಕ್ಕೆ ಪೆಟ್ಟು ಬಿದ್ದಿರಲೂಬಹುದು ಎಂದು ರವಿಚಂದ್ರನ್ ಅವರು ಸಿಎನ್‌ಎನ್ ನ್ಯೂಸ್ 18 ವಾಹಿನಿಗೆ ತಿಳಿಸಿದ್ದಾರೆ.



ಪರ್ತ್‌ನಲ್ಲಿ ನಡೆದ ಮೊದಲ ಟೆಸ್ಟ್‌ಗೆ 537 ವಿಕೆಟ್‌ಗಳನ್ನು ಪಡೆದಿರುವ ಆಫ್ ಸ್ಪಿನ್ನರ್ ಅಶ್ವಿನ್ ಅವರನ್ನು ಕೂರಿಸಿ ವಾಷಿಂಗ್ಟನ್ ಸುಂದರ್ ಅವರನ್ನು ಆಡಿಸಲಾಗಿತ್ತು. ನಂತರ ಆಡಿಲೇಡ್ನ ಪಿಂಕ್ಬಾಲ್ ಟೆಸ್ಟ್‌ನಲ್ಲಿ ಹಿರಿಯ ಬೌಲರ್‌ಗೆ ಅವಕಾಶ ನೀಡಲಾಗಿತ್ತು. ಆದರೆ ಬ್ರಿಸ್ಬೇನ್‌ನಲ್ಲಿ ನಡೆದ ಮೂರನೇ ಟೆಸ್ಟ್‌ನಲ್ಲಿ ಅವರಿಗೆ ಮತ್ತೆ ಬೆಂಚ್ ಗತಿಯಾಗಿತ್ತು.

ಸ್ವಾಭಿಮಾನಕ್ಕೆ ಧಕ್ಕೆಯಾಗುತ್ತಿರುವ ಕಾರಣ ಅಶ್ವಿನ್ ನಿವೃತ್ತಿ ಹೇಳಬಹುದು ಎಂದು ಕುಟುಂಬವು ಕೆಲಸಮಯದಿಂದ ನಿರೀಕ್ಷಿಸಿತ್ತು ಎಂದು ರವಿಚಂದ್ರನ್ ಹೇಳಿದರೂ, ಅದರ ನಿರ್ದಿಷ್ಟ ಸ್ವರೂಪ ಬಿಡಿಸಿ ಹೇಳಲಿಲ್ಲ.

ಅಶ್ವಿನ್ ಸ್ಪಷ್ಟನೆ: ನನ್ನ ತಂದೆ ಮಾಧ್ಯಮಗಳ ಮುಂದೆ ಮಾತನಾಡಲು ಅನುಭವ ಹೊಂದಿಲ್ಲ. ಅವರ ಪ್ರತಿಕ್ರಿಯೆಯನ್ನು ಗಂಭೀರವಾಗಿ ತೆಗೆದುಕೊಳ್ಳಬಾರದು ಎಂದು ಹೇಳುವ ಮೂಲಕ ಅಶ್ವಿನ್, ತಂದೆಯ ಹೇಳಿಕೆ ವಿವಾದಕ್ಕೆ ತಿರುಗದಂತೆ ತಿಳಿಗೊಳಿಸುವ ಪ್ರಯತ್ನ ನಡೆಸಿದ್ದಾರೆ.

ನೀವೆಲ್ಲ ಅವರನ್ನು ಕ್ಷಮಿಸಿ. ಅವರನ್ನು ಅವರ ಪಾಡಿಗೆ ಇರಲು ಬಿಡಿ ಎಂದು ವಿನಂತಿಸುವೆ ಎಂದು ಅಶ್ವಿನ್ ಎಕ್ಸ್‌ನಲ್ಲಿ ಬರೆದಿದ್ದಾರೆ.

ವಿಟಾಕೀಸ್

ಶಿವಣ್ಣನಿಗೆ ಮಹಾರಾಜ ನಿರ್ದೇಶನ

ಹ್ಯಾಟ್ರಿಕ್ ಹೀರೊ ಶಿವರಾಜ್‌ಕುಮಾರ್ ಕನ್ನಡ ಮಾತ್ರವಲ್ಲ ಪರಭಾಷಾ ಚಿತ್ರಗಳಲ್ಲಿಯೂ ಬಲು ಬೇಡಿಕೆ ಪಡೆದಿದ್ದಾರೆ. ಶಿವಣ್ಣನಿಗೆ ಅಲ್ಲಿಯೂ ಅಪಾರ ಅಭಿಮಾನಿಗಳಿದ್ದಾರೆ. ಹಾಗಾಗಿ ಪರಭಾಷೆಯ ಸ್ಟಾರ್ ನಿರ್ದೇಶಕರೂ ಕೂಡ ಶಿವಣ್ಣ ಅವರಿಗಾಗಿ ಒಂದಾದರೂ ಸಿನಿಮಾ ನಿರ್ದೇಶನ ಮಾಡಬೇಕು ಎಂದು ಕಾದುಕುಳಿತ್ತಿದ್ದಾರೆ. ದೊಡ್ಡ ಪ್ರೊಡಕ್ಷನ್ ಸಂಸ್ಥೆಗಳು ಶಿವಣ್ಣ ಅಭಿನಯದ ಸಿನಿಮಾಕ್ಕೆ ಬಂಡವಾಳ ಹೂಡಲು ಉತ್ಸುಕರಾಗಿದ್ದಾರೆ. ಅಂತೆಯೇ ಈಗ ಮುಂಬೈ ಮೂಲದ ಖ್ಯಾತ ಆಡ್-ಒನ್ ನಿರ್ಮಾಣ ಸಂಸ್ಥೆ ಶಿವರಾಜ್ ಕುಮಾರ್ ನಾಯಕನಾಗಿ ನಟಿಸಲಿರುವ ಹೊಸ ಚಿತ್ರಕ್ಕೆ ಬಂಡವಾಳ ಹೂಡುತ್ತಿದೆ. ಎಂಬಿ ಎಂಬ ಶೀರ್ಷಿಕೆಯಲ್ಲಿ ಸಿನಿಮಾ ನಿರ್ಮಾಣ ವಾಗಲಿದ್ದು, ಮನೋಜ್ ಬನೋಡೆ ಹಾಗೂ ಖೇಮ್ ಚಂದ್ ಖಿಡ್ಗಿ ಒಟ್ಟಾಗಿ ಚಿತ್ರ ನಿರ್ಮಾಣ ಮಾಡಲಿದ್ದಾರೆ. ತಮಿಳಿನ ವಲ್ಲರಸು ಚಿತ್ರವನ್ನು ನಿರ್ದೇಶಿಸಿ ಪ್ರಸಿದ್ಧಿ ಪಡೆದಿರುವ ಎನ್. ಮಹಾರಾಜನ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಆ ಮೂಲಕ ಕನ್ನಡ ಚಿತ್ರರಂಗಕ್ಕೂ ಪರಿಚಿತರಾಗುತ್ತಿದ್ದಾರೆ. ಶಿವರಾಜ್ ಕುಮಾರ್ ಅವರು ನಾಯಕರಾಗಿ ನಟಿಸುತ್ತಿರುವ ಈ ಚಿತ್ರ ಕನ್ನಡ ಸೇರಿದಂತೆ ಆರು ಭಾಷೆಗಳಲ್ಲಿ ನಿರ್ಮಾಣವಾಗಲಿದೆ. ಶಿವಣ್ಣ ಅಭಿನಯದ ಈ ಚಿತ್ರವನ್ನು ನಿರ್ಮಿಸುತ್ತಿರುವುದಕ್ಕೆ ಬಹಳ ಖುಷಿ ಇದೆ ಎನ್ನುತ್ತಾರೆ ನಿರ್ಮಾಪಕರು. ಮುಂದಿನ ವರ್ಷದ ಸೆಪ್ಟೆಂಬರ್‌ನಲ್ಲಿ ಚಿತ್ರ ಸೆಟ್ಟೇರಲಿದೆ.

ಫಾರೆಸ್ಟ್‌ನಲ್ಲಿ ಪೈಸಾ ಪೈಸಾ..

ಅಡ್ವೆಂಚರ್ಸ್ ಕಾಮಿಡಿ ಕಥಾಹಂದರದ ಫಾರೆಸ್ಟ್ ಹೊಸ ವರ್ಷಕ್ಕೆ ತೆರೆಗೆ ಬರಲಿದೆ. ಟೀಸರ್‌ನಲ್ಲಿ ಮನಗೆದ್ದಿದ್ದ ಫಾರೆಸ್ಟ್ ಚಿತ್ರದ ಹಾಡು ಬಿಡುಗಡೆಯಾಗಿದೆ. ಬಹದ್ದೂರ್ ಚೇತನ್ ಕುಮಾರ್ ಬರೆದಿರುವ ಪೈಸಾ ಪೈಸಾ ಪೈಸಾ.. ಎಂಬ ಹಾಡು ಇದಾಗಿದ್ದು, ಚಂದನ್ ಶೆಟ್ಟಿ ಕಂಠಸಿರಿಯಲ್ಲಿ ಮೂಡಿಬಂದಿದೆ. ಧರ್ಮವಿಶ್ ಸಂಗೀತ ಸಂಯೋಜಿಸಿದ್ದಾರೆ. ಅಜಯ್ ಶಿವಶಂಕರ್ ನೃತ್ಯ ಸಂಯೋಜಿಸಿರುವ ಈ ಹಾಡಿನಲ್ಲಿ ಚಿಕ್ಕಣ್ಣ, ಗುರುನಂದನ್, ಅನೀಶ್ ತೇಜೇಶ್ವರ್, ರಂಗಾಯಣ ರಘು, ಶರಣ್ಯ ಶೆಟ್ಟಿ ಹಾಗೂ ಅರ್ಚನಾ ಕೊಟ್ಟಿಗೆ ಹೆಜ್ಜೆ ಹಾಕಿದ್ದಾರೆ. ರ್‍ಯಾಪ್ ಶೈಲಿಯಲ್ಲಿರುವ ಈ ಹಾಡು ಸಂಗೀತ ಪ್ರಿಯರ ಮನಗೆದ್ದಿದೆ. ಕಾಡಿನಲ್ಲೇ ನಡೆಯುವ ಅಡ್ವೆಂಚರಸ್ ಕಾಮಿಡಿ ಕಥೆಯ ಈ ಚಿತ್ರವನ್ನು ಚಂದ್ರಮೋಹನ್ ನಿರ್ದೇಶಿಸಿದ್ದಾರೆ. ಎನ್.ಎಂ.ಕೆ ಸಿನಿಮಾಸ್ ಬ್ಯಾನರ್‌ನಲ್ಲಿ ಎನ್.ಎಂ.ಕಾಂತರಾಜ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಚಿಕ್ಕಣ್ಣ, ಅನೀಶ್ ತೇಜೇಶ್ವರ್, ಗುರುನಂದನ್, ರಂಗಾಯಣ ರಘು ಪ್ರಮುಖಪಾತ್ರದಲ್ಲಿ ನಟಿಸಿರುವ ಈ ಮಲ್ಟಿಸ್ಟಾರರ್ ಸಿನಿಮಾದ ತಾರಾಬಳಗದಲ್ಲಿ ಶರಣ್ಯ ಶೆಟ್ಟಿ, ಅರ್ಚನಾ ಕೊಟ್ಟಿಗೆ, ಅವಿನಾಶ್, ಪ್ರಕಾಶ್ ತುಮ್ಮಿನಾಡು, ದೀಪಕ್ ರೈ ಪಾಣಾಜೆ, ಸೂರಜ್ ಪಾಪ್ಸ್, ಸುನೀಲ್ ಕುಮಾರ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಸತ್ಯಶೌರ್ಯ ಸಾಗರ್ ಹಾಗೂ ಚಂದ್ರಮೋಹನ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ರಚಿಸಿದ್ದಾರೆ. ಸತ್ಯಶೌರ್ಯ ಸಾಗರ್ ಅವರೆ ಸಂಭಾಷಣೆಯನ್ನೂ ಬರೆದಿದ್ದಾರೆ. ಧರ್ಮವಿಶ್ ಸಂಗೀತ ನಿರ್ದೇಶನ, ಆನಂದ್‌ರಾಜಾ ವಿಕ್ರಮ್ ಹಿನ್ನೆಲೆ ಸಂಗೀತ, ರವಿಕುಮಾರ್ ಛಾಯಾಗ್ರಹಣ, ಅರ್ಜುನ್ ಕಿಟ್ಟು ಸಂಕಲನ, ಅಮರ್ ಕಲಾ ನಿರ್ದೇಶನ ಹಾಗೂ ರವಿವರ್ಮ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಫಾರೆಸ್ಟ್ ಜನವರಿ 24ರಂದು ತೆರೆಗೆ ಬರಲಿದೆ.



ಕಲ್ಕಿಯ ಸತ್ಯಯುಗ

ಬಹುನಿರೀಕ್ಷಿತ ಯುಐ ಅದ್ಧೂರಿಯಾಗಿ ತೆರೆಗೆ ಬಂದಿದೆ. ಉಪ್ಪಿಯ ಹೊಸ ಅವತಾರ ನೋಡಿ ಪ್ರೇಕ್ಷಕರು ಬಹುಪರಾಕ್ ಎಂದಿದ್ದಾರೆ. ಯುಐ ಶೀರ್ಷಿಕೆಯಲ್ಲಿಯೇ ಕ್ಯೂರಿಯಾಸಿಟಿ ಮೂಡಿಸಿತ್ತು. ಅಂತೆಯೇ ಸಿನಿಮಾದ ಕಥೆ ಕೂಡ ಕುತೂಹಲದಲ್ಲಿ ಸಾಗುವಂತೆ ಮಾಡುತ್ತದೆ. ಕಲ್ಕಿಯ ಅವತಾರದ ಸುತ್ತ ಚಿತ್ರ ಸಾಗುತ್ತದೆ. ಹಾಗಂತ ಇಲ್ಲಿ ಲಾಜಿಕ್ ಇಲ್ಲ, ಈ ಪಾತ್ರದಲ್ಲಿಯೂ ಉಪ್ಪಿ ಮ್ಯಾಜಿಕ್ ಮಾಡಿದ್ದಾರೆ. ಪ್ರಸ್ತುತ ಕಾಲಘಟ್ಟದಲ್ಲಿ ಆವರಿಸಿರುವ ಸಮಸ್ಯೆಗಳೇ ಸಿನಿಮಾದ ಕಥಾವಸ್ತು, ಅದನ್ನು ಇಲ್ಲಿ ನೈಜತೆಗೆ ಹತ್ತಿರವಾಗುವಂತೆ ಕಟ್ಟಿಕೊಡಲಾಗಿದೆ. ಧರ್ಮ, ಜಾತಿಯ ಸಂಕೋಲೆಯಲ್ಲಿ ಸಿಕ್ಕು ನರಳುತ್ತಿರುವ ಬಡಜನರು. ತಮ್ಮನ್ನು ಶೋಷಿಲಾಗುತ್ತಿದೆ ಎಂದು ಗೊತ್ತಿದ್ದರೂ ಅರಿಯದ ಮೂರ್ಖರು. ಸತ್ಯ ಹೇಳಿದವರನ್ನು ಹೇಗೆ ತುಳಿಯುತ್ತಿದ್ದಾರೆ, ಹಿಂದೆ ಸಮಾಜ ಸುಧಾರಕರು ಸರಿ ಮಾಡಲಾಗದ ಪರಿಹರಿಸಲಾಗದ ನಮ್ಮ ಸಮಾಜವನ್ನು ಇಂದು ಹೇಗೆ ಸರಿ ಮಾಡಬಹುದು. ಆ ಹಾದಿಯಲ್ಲಿ ಎಚ್ಚರ ತಪ್ಪಿದರೆ ಪರಿಸ್ಥಿತಿ ಏನಾಗಬಹುದು ಎಂಬುದನ್ನು ಚಿತ್ರದಲ್ಲಿ ಸತ್ಯಕ್ಕೆ ಹತ್ತಿರಾಗುವಂತೆ ಹೇಳಲಾಗಿದೆ. ಇಲ್ಲಿ ಬೂಟಾಟಿಕೆಗಿಂತ ರಿಯಾಲಿಟಿಗೆ ಹೆಚ್ಚು ಒತ್ತು ನೀಡಲಾಗಿದೆ.

ಯುಐ ಅಂದಾಕ್ಷಣ ಟೈಟಲ್‌ನ ಅರ್ಥ ಏನು ಎಂದುಕೊಂಡಿದ್ದರು. ಸಿನಿಮಾ ನೋಡಿದ ಮೇಲೆ ಅದು ಯೂನಿವರ್ಸಲ್ ಇಂಟಲಿಜೆನ್ಸ್ ಎಂಬುದು ಮನದಟ್ಟಾಗಿದೆ. ಅಂತೆಯೇ ಇಲ್ಲಿ ಯೂನಿವರ್ಸಲ್ ಇಂಟಲಿಜೆನ್ಸ್ ವಿಚಾರವೂ ಇದೆ. ಅದು ಸಿನಿಮಾ ಅರ್ಥವಾದರಷ್ಟೇ ತಿಳಿಯುತ್ತದೆ. ಧಿಕ್ಕಾರಕ್ಕಿಂತ.. ಅಧಿಕಾರವೇ ಮುಖ್ಯ... ಎಂಬ ಡೈಲಾಗ್ ಅರ್ಥ ಆದರೆ ಬಹುತೇಕ ಸಿನಿಮಾ ಮನದಟ್ಟಾದಂತೆ. ಸಾಮಾನ್ಯವಾಗಿ ಉಪ್ಪಿ ಸಿನಿಮಾ ಎಂದ ಮೇಲೆ ಅಲ್ಲಿ ಬುದ್ಧಿವಂತರಿಗೆ ಮಾತ್ರ, ಎಂಬ ಬರಹ ಇದ್ದೇ ಇರುತ್ತದೆ. ಆದರೆ ಯುಐನಲ್ಲಿ ಅದಕ್ಕೆ ತದ್ವಿರುದ್ಧ. ಚಿತ್ರ ಆರಂಭವಾಗುತ್ತಿದ್ದಂತೆ, ಈ ಸಿನಿಮಾ ಬುದ್ಧಿವಂತರಿಗಲ್ಲ ಎಂಬ ಬರಹ ಅಚ್ಚರಿ ಮೂಡಿಸುತ್ತದೆ. ಆದರೆ ಚುರುಕು ಬುದ್ಧಿ ಇದ್ದರಷ್ಟೇ ಯುಐ ಬಲು ಬೇಗ ಅರ್ಥವಾಗುತ್ತದೆ.

ಉಪೇಂದ್ರ ನಿರ್ದೇಶನದ ಸಿನಿಮಾಗಳು ಎಂದರೆ ಅಲ್ಲಿ ವಿಶೇಷ ಇದ್ದೇ ಇರುತ್ತದೆ. ಯುಐನಲ್ಲಿಯೂ

ಚಿತ್ರ: ಯುಐ
ನಿರ್ದೇಶನ : ಉಪೇಂದ್ರ
ನಿರ್ಮಾಣ : ಕೆ.ಪಿ.ಶ್ರೀಕಾಂತ್, ಜಿ. ಮನೋಹರನ್
ತಾರಾಗಣ : ಉಪೇಂದ್ರ, ರವಿಶಂಕರ್, ಅಚ್ಯುತ್ ಕುಮಾರ್, ಸಾಧುಕೋಕಿಲ ರೀಷ್ಮಾ, ನಿಧಿ ಮುಂತಾದವರು
ರೇಟಿಂಗ್ : ★★★½

ಕೂಡ ಬಲು ಸ್ಪೆಷಲ್ ಆಗಿದೆ. ದೇಶದ ನೈಜ ಸಮಸ್ಯೆಗಳು ಅರಿತವರಿಗೆ ಮಾತ್ರ ಈ ಸಿನಿಮಾ ರುಚಿಸುತ್ತದೆ. ಅರ್ಥವಾಗುತ್ತದೆ. ಉಪ್ಪಿ ಡಬಲ್ ಶೇಡ್‌ನಲ್ಲಿ ಮಿಂಚಿದ್ದು ಅದ್ಭುತವಾಗಿ ನಟಿಸಿದ್ದಾರೆ, ತೆರೆಯಲ್ಲಿ ಉಪ್ಪಿ ನೋಡಿದರೆ ಉಪ್ಪಿಗೆ ಉಪ್ಪಿಯೇ ಸೈ ಎನ್ನಬಹುದು. ಉಪ್ಪಿಯ ಡಿಫರೆಂಟ್ ಗೆಟಪ್ ಇಷ್ಟವಾಗುತ್ತದೆ. ರವಿಶಂಕರ್ ಅವರ ಪಾತ್ರ ಚಿತ್ರದುದ್ದಕ್ಕೂ ಸಾಗುತ್ತಾ ಮನಗೆಲ್ಲುತ್ತದೆ. ಅಚ್ಯುತ ಕುಮಾರ್ ತಮ್ಮ ಪಾತ್ರಕ್ಕೆ ಜೀವತುಂಬಿ ನಟಿಸಿದ್ದಾರೆ. ಗರು ಪ್ರಸಾದ್ ಸಾದಾ ಸೀದ ಅಭಿನಯದ ಮೂಲಕ ಮನಗೆದ್ದಿದ್ದಾರೆ.

ಸಾಧುಕೋಕಿಲ ಪಾತ್ರಕ್ಕೆ ಇನ್ನೊಂದಷ್ಟು ಸ್ಪೇಸ್ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು ಎನ್ನಿಸುತ್ತದೆ. ರೀಷ್ಮಾ ನಾಣಯ್ಯ ಮುದ್ದಾಗಿ ಕಂಗೊಳಿಸಿದರೂ ಅವರ ಪಾತ್ರ ಕಥೆಗೇನೂ ಪೂರಕವಾಗಿಲ್ಲ ಎನ್ನಿಸುತ್ತದೆ. ಇನ್ನು ನಿಧಿ ಸುಬ್ಬಯ್ಯ ಹಾಗೇ ಬಂದು ಮಾಯವಾಗುತ್ತಾರೆ. ಯುಐ ಲೋಕದಲ್ಲಿ ಅಜನೀಶ್ ಲೋಕನಾಥ್ ಸಂಗೀತ ಮೋಡಿ ಮಾಡುತ್ತದೆ. ಚಿತ್ರಕ್ಕೆ ಹೊಸ ಶಕ್ತಿ ತುಂಬಿದೆ. ವೇಣುಗೋಪಾಲ್ ಛಾಯಾಗ್ರಹಣಕ್ಕೂ ಫುಲ್ ಮಾರ್ಕ್ಸ್ ನೀಡಬಹುದು. ಸಮಸ್ಯೆಗಳಿಗೆ ಸಂಬಂಧಿಸಿದಂತೆ ಏನು ಹೇಳಬೇಕು, ಎಷ್ಟು ಹೇಳ ಬೇಕು ಎಂಬುದನ್ನು ಉಪ್ಪಿ ಮನಕ್ಕೆ ನಾಟುವಂತೆ ಹೇಳಿದ್ದಾರೆ. ಒಟ್ಟಾರೆ ಯುಐ ಎಲ್ಲರೂ ನೋಡಲೇಬೇಕಾದ ಸಿನಿಮಾವಾಗಿದೆ.

ಕೆಡಿಯಲ್ಲಿ ನೂರಾ ಫತೇಹಿ

ಬಾಲಿವುಡ್ ಬ್ಯೂಟಿ ನೂರಾ ಫತೇಹಿ ಭರ್ಜರಿ ಬೇಡಿಕೆ ಪಡೆದಿದ್ದಾರೆ. ಹಿಂದಿ ಮಾತ್ರವಲ್ಲ, ತೆಲುಗು, ತಮಿಳು ಸಿನಿಮಾದ ಹಾಡುಗಳಲ್ಲಿಯೂ ಹೆಜ್ಜೆ ಹಾಕುವ ಮೂಲಕ ಸಖತ್ ಫೇಮಸ್ ಆಗಿದ್ದಾರೆ. ನೂರಾ ಹೆಜ್ಜೆ ಹಾಕಿದ ಹಾಡುಗಳು ಎಂದರೆ ಅದರಲ್ಲಿ ವಿಶೇಷತೆ ಇದ್ದೇ ಇರುತ್ತದೆ. ಈಗ ನೂರಾ ಕನ್ನಡ ಚಿತ್ರರಂಗಕ್ಕೂ ಎಂಟ್ರಿಕೊಟ್ಟಿದ್ದು, ಧ್ರುವ ಸರ್ಜಾ ಅಭಿನಯದ ಕೆಡಿ ಚಿತ್ರದಲ್ಲಿ ಹಾಡೊಂದಕ್ಕೆ ಭರ್ಜರಿಯಾಗಿ ಹೆಜ್ಜೆ ಹಾಕಿದ್ದಾರೆ. ಹಾಗಾಗಿ ಈ ಹಾಡು ನೋಡಲು ಸಿನಿಪ್ರಿಯರು ಕಾತರರಾಗಿದ್ದಾರೆ. ಈ ಹಾಡಿಗಾಗಿಯೇ ಅದ್ದೂರಿ ಸೆಟ್ ಹಾಕಿ ಚಿತ್ರೀಕರಿಸಲಾಗಿದೆ.

ಕೆಡಿ ಚಂದನವನದಲ್ಲಿ ಬಲು ನಿರೀಕ್ಷೆ ಮೂಡಿಸಿದ್ದು ಯುಗಾದಿ ಹಬ್ಬದ ಹೊತ್ತಿಗೆ ತೆರೆಗೆ ಬರಲಿದೆ. ಎಪ್ಪತ್ತರ ಕಾಲಘಟ್ಟದ ನೈಜ ಕಥೆ ಚಿತ್ರದಲ್ಲಿದ್ದು ಗ್ಯಾಂಗ್‌ಸ್ಟರ್ ಸುತ್ತ ಚಿತ್ರದ ಸ್ಟೋರಿ ಸಾಗುತ್ತದೆ. ಕೆಡಿ, ಜೋಗಿ ಪ್ರೇಮ್ ನಿರ್ದೇಶನದ ಸಿನಿಮಾ ಎಂಬುದು ಕುತೂಹಲ ಕೆರಳಿಸಿದೆ. ರವಿಚಂದ್ರನ್, ರಮೇಶ್ ಅರವಿಂದ್ ಕೂಡ ಚಿತ್ರದಲ್ಲಿ ನಟಿಸಿದ್ದು, ವಿಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಬಾಲಿವುಡ್ ಖಳನಾಯಕ್ ಸಂಜಯ್ ದತ್ ಧಾಕದೇವ್ ಪಾತ್ರದಲ್ಲಿ ನಟಿಸಿದ್ದು, ಖಳನಾಗಿ ಅಬ್ಬರಿಸಿದ್ದಾರೆ. ಶಿಲ್ಪಾ ಶೆಟ್ಟಿ ಕೂಡ ವಿಶೇಷ ಪಾತ್ರದಲ್ಲಿ ಮಿಂಚಿದ್ದಾರೆ. ಕೆಡಿ ಚಿತ್ರದ ಹಾಡುಗಳ ಹಕ್ಕು ದಾಖಲೆ ಬೆಲೆಗೆ ಮಾರಾಟವಾಗಿದೆ. ಹಾಗಾಗಿ ಹಾಡುಗಳ ಬಗ್ಗೆಯೂ ಕುತೂಹಲ ಮೂಡಿಸಿದೆ. ಕೆಡಿ ಚಿತ್ರ ಮೊದಲ ಹಾಡು ಇದೇ 24ರಂದು ರಿಲೀಸ್ ಆಗಲಿದೆ.